
ಬೀಜದ ಹಕ್ಕು!



ಎನಗಾರು ದಿಕ್ಕು!?



ಸಂಪಾದಕ : ಪಾಂಡುರಂಗ ಹೆಗಡೆ
ಕಲೆ, ವಿನ್ಯಾಸ : ಸತೀಶ್ ಯಲ್ಲಾಪುರ

:ಪ್ರಕಟಣೆ:

'ವಿಸ್ತಾರ್' ಮೊದಲನೆಯ ಕ್ರಾಸ್, ಡಕೋಷ್ಟ ಚೌಕ, ಬೆಂಗಳೂರು- 560 084 ರವರಿಂದ

ಪರಿಸರ ಸಂರಕ್ಷಣ ಕೇಂದ್ರ, ಶಿರಸಿ
ನವಧಾನ್ಯ, ದೆಹಲಿ

ಇವರ ಪರವಾಗಿ ಪ್ರಕಟಣೆಗೊಂಡಿದೆ.

ಒಂದು ಮಾತು

ಪ್ರಿಯ ರೈತ ಬಾಂಧವರೆ,

ನಾವೀಗ ಜಾಗೃತರಾಗಬೇಕಿದೆ. ವಿಳಂಬಿಸಿದರೆ ಅಪಾಯ ತಪ್ಪಿದ್ದಲ್ಲ. ವೈಜ್ಞಾನಿಕ ಪ್ರಗತಿಯ ಜಾಡಿನಲ್ಲಿ ನಡೆದು ಪಾರಂಪರಿಕ ಕೃಷಿ ಅಲಕ್ಷಿಸಿ, ನಿಸರ್ಗ ನಾಶನದ ಮೂಲಕ ನಮ್ಮ ನಾಶಕ್ಕೆ ಎಡೆ ಮಾಡಿಕೊಡುತ್ತಿದ್ದೇವೆ.

* ಒಂದು ಕಾಲದಲ್ಲಿ ಭಾರತ ೪೦ ಸಾವಿರ ವಿವಿಧ ಭತ್ತದ ಮೂಲತಳಿ ಹೊಂದಿತ್ತು. ಇಂದು ಕೇವಲ ನೂರಾರು ಉಳಿದಿವೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ ಮಾಡಿ ಅಧಿಕ ಇಳುವರಿ ತಳಿ ಬೆಳೆಯಲು ಹೋಗಿ ಭೂಮಿ ಬರಡಾಗಿಸಿದ್ದೇವೆ.

* ಕೃಷಿ ಅರಣ್ಯ ಆಧಾರಿತ. ಅರಣ್ಯ ಗಣನೀಯ ಪ್ರಮಾಣದಲ್ಲಿ ನಾಶವಾಗಿದೆ. ಅರಣ್ಯ ಮೂಲದ ಗೊಬ್ಬರ, ನೈಸರ್ಗಿಕ ಕ್ರಿಮಿನಾಶಕವಾಗಬಲ್ಲ ಸಸ್ಯಗಳು ಔಷಧೀಯ ಸಸ್ಯಗಳು, ವಿಶಿಷ್ಟ ಹಣ್ಣು ತರಕಾರಿಗಳು ಹಾಗೂ ಕೃಷಿಗೆ ಮಹತ್ವದ ಸಲಕರಣೆಯಾಗುವ ಗಿಡಗಳು ನಾಶವಾಗುತ್ತಿವೆ.

* ಅಧಿಕ ಇಳುವರಿಯ ಸೋಗಿನ 'ಹೈಬ್ರೀಡ್ ತಳಿ ಬೀಜ'ಗಳ ಹಿನ್ನೆಲೆ ಏನು? ರೈತ ಇದರಿಂದ ಪಡುತ್ತಿರುವ ತೊಂದರೆಗಳೇನು?

* ಭಾರತಕ್ಕೆ 'ಹೊಸತಳಿ' (ಸಸ್ಯ ಹಾಗೂ ಪ್ರಾಣಿ) ಎಷ್ಟರ ಮಟ್ಟಿಗೆ ಲಾಭ ತಂದಿದೆ?


* ನಮ್ಮಲ್ಲಿನ ಬಯಲು ಸೀಮೆಯ ಬೆಳೆಗಳಾದ ಜೋಳ, ನವಣೆ, ಗೋಧಿ ಇತ್ಯಾದಿ ಬೆಳೆಗಳಲ್ಲಿ ವಿವಿಧ ಜಾತಿಯ ಜವಾರಿ ತಳಿಗಳನ್ನು ರೈತರು ಕಾಪಾಡಿಕೊಂಡು ಬಂದಿದ್ದಾರೆ.

* ನಾವು ಮಾಡುತ್ತಿರುವ ಕೃಷಿಗೂ, ಅಂತರರಾಷ್ಟ್ರೀಯ ಕಂಪನಿಗಳಿಗೂ ಯಾವ ತರಹದ ಸಂಬಂಧವಿದೆ?

* ಆಧುನಿಕ ಬೇಸಾಯ ಪದ್ಧತಿ ಹಾಗೂ ಹೈಬ್ರೀಡ್ ತಳಿಗಳ ಬೇಸಾಯದ ಪ್ರಚಾರದಿಂದಾಗಿ ರೈತರ ಜವಾರಿ ತಳಿಗಳು ನಾಶವಾಗುತ್ತಿವೆ. ಇದಕ್ಕೂ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕೂ ಇರುವ ಹತ್ತಿರದ ನಂಟನ್ನು ನಾವು ಅರಿತುಕೊಳ್ಳಬೇಕಾಗಿದೆ.


* ನಮ್ಮ ಪಾರಂಪರಿಕ ಕೃಷಿ ಮತ್ತೆ ಬೆಳೆಸುವ, ಹಳೆ ತಳಿಗಳನ್ನು ರಕ್ಷಿಸುವ ಅಗತ್ಯತೆ ಏನು?

ಇವುಗಳಿಗೆ ಉತ್ತರ ರೂಪವಾಗಿ ಒಂದಿಷ್ಟು ಮಾಹಿತಿ ಮುಂದಿನ ಪುಟದಲ್ಲಿದೆ.



ಹೊಸತಳಿಗಳೆಂದರೆ ಹೊಸ ಸಮಸ್ಯೆಗಳೆಂದು ಅನುಭವವೇದ್ಯ. ಮೊದ ಮೊದಲು ಉತ್ತಮ ಫಲಿತಾಂಶ. ಬರಬರುತ್ತ ಹೊಸ ಹೊಸ ರೋಗಗಳು. ಹೊಸ ಹೊಸ ರಾಸಾಯನಿಕ ರೋಗ ನಿವಾರಕಗಳು. ಬೆಳೆ ರಕ್ಷಣೆಗೆ ಇವನ್ನು ಬಳಕೆ ಮಾಡಹೋಗಿ ಭೂಮಿ ಬರಡಾಗಿದೆ. ಉಪಯುಕ್ತ ಕೀಟ-ಪ್ರಾಣಿಗಳೂ ಕೀಟ ನಾಶಕದಿಂದ ನಾಶವಾಗಿವೆ. ಎರೆಹುಳು, ಕಪ್ಪೆ, ಹಾವು ಇದನ್ನೇ ಗಮನಿಸಿ. ಕೀಟನಾಶಕದ ಅಂಶ ಭತ್ತದ ಹುಲ್ಲಿನ ಮೇಲೆ ಗಾಢ ದುಷ್ಪರಿಣಾಮ ಬೀರಿ ದನಕರುಗಳಿಗೆ ಅಪಾಯವನ್ನುಂಟುಮಾಡಿದೆ. ಅದರಿಂದ ಪಡೆಯುವ ಹಾಲು ವಿಷಪೂರಿತವಾಗಿದೆ.

✧ ಹೊಸತಳಿ ಮೇವಿಗೂ ಸರಿಬಾರದು. ಅದೇ ಹಳೇ ತಳಿಯ ಭತ್ತದ ಹುಲ್ಲು ಮೂರುವರೆ ಅಡಿಯಿಂದ ಐದೂವರೆ ಅಡಿಗೂ ಹೆಚ್ಚು ಎತ್ತರ ಬೆಳೆದು ಪೌಷ್ಟಿಕ ಮೇವಿನ ಗುಣ ಹೊಂದಿರುತ್ತದೆ.





✧ ಹಳೆಯ ತಳಿಗಳಿಗೆ ನಿಸರ್ಗದತ್ತ ರೋಗನಿರೋಧಕ ಶಕ್ತಿ ಹೆಚ್ಚಿದೆ.

✧ ಕಳೆ ಬೆಳೆದರೂ ಅದನ್ನು ಮೀರಿ ಸೊಕ್ಕಿ ಬೆಳೆಯುವುದು.

✧ ಹಳೆಯ ತಳಿಯ ಅಕ್ಕಿ ಊಟಕ್ಕೂ ರುಚಿಕರ!



✧ ನೆಲ್ಲಿ, ಕಾಸರಕ, ಅಣಲೆ, ತಾರೆಕಾಯಿ, ಕವಲು, ಗೋಮೂತ್ರ ಸುಲಭದಲ್ಲಿ ಲಭ್ಯವಾಗಬಲ್ಲ ಉತ್ತಮ ಕ್ರಿಮಿನಾಶಕಗಳು.




* ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಅರಣ್ಯ ನಾಶವಾಗಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.

* ಹಸಿರು ಬಾಳಿನ ಉಸಿರು. ಕೃಷಿಗೆ ಅವಶ್ಯವುಳ್ಳ ನೀರಿನ ತೊರೆಗಳು ಬತ್ತಿವೆ. ನಾರಿನ ಗಿಡಗಳು, ಬೈನೆ ಮರ, ರೊಮ್ಮನ ಸೊಪ್ಪು, ಕಾಸರಕ ಮುಂತಾದ ಮಹತ್ವದ ಮರಗಳು ನಾಶವಾಗಿವೆ.



* ಅರಣ್ಯಾಭಿವೃದ್ಧಿ ಹೆಸರಿನಲ್ಲಿ ಸರಕಾರ ಪ್ಲಾಂಟೇಶನ್ ಮಾಡುತ್ತದೆ. ಅರಣ್ಯೀಕರಣದ ಉದ್ದೇಶಕ್ಕಿಂತ ಕೈಗಾರಿಕೀಕರಣದ ಉದ್ದೇಶ ಎದ್ದುತೋರುತ್ತದೆ.

* ಹಸಿರಿನಿಂದ ತುಂಬಿದ ಬೆಟ್ಟವಿರಬೇಕಾದಲ್ಲಿ ಬೋಳುಬೋಳು. ಅದರಂಚಿನ ತೋಟ ನಮ್ಮವು. ತಂಪಿಲ್ಲ. ರಾಸಾಯನಿಕ ಗೊಬ್ಬರಗಳ, ಕ್ರಿಮಿನಾಶಕಗಳ ಬಳಕೆ ಹೆಚ್ಚು. ಕೊಳೆರೋಗ ಕಡಿಮೆ ಆಗಿಲ್ಲ. ಫಸಲಿನ ಪ್ರಮಾಣ ಹೆಚ್ಚಿಲ್ಲ. ಅಡಿಕೆಯ ಉಪಬೆಳೆ ಮೆಣಸು ಸುಟ್ಟು ಹಳದಿಯಾಗಿ ಉದುರುತ್ತಿವೆ. ಬಾಳೆ ಕಟ್ಟೆಗೆ ಬಲಿಯಾಗಿದೆ.




* ನಿಸರ್ಗದತ್ತವಾಗಿ ಭೂಮಿ ಹೊಂದಬೇಕಾದ ಸತ್ವವನ್ನು ಬಿಟ್ಟು, ಕೃತಕ ಸತ್ವ ನೀಡುತ್ತಿದ್ದೇವೆ. ಭೂಮಿತಾಯಿ ಬರಡಾಗುತ್ತಿದ್ದಾಳೆ.

* ನಿಸರ್ಗವೇ ಉತ್ತಮ ಗೊಬ್ಬರದ ಮೂಲಗಳನ್ನು ತೋರಿಸಿದೆ. ಕ್ರಿಮಿನಾಶಕಗಳನ್ನು ತೋರಿಸಿದೆ. ಇದಕ್ಕೆ ಹೊಂದುವಂತಹ ತಳಿಗಳನ್ನು ಸಾವಿರಾರು ವರ್ಷದಿಂದ ರೈತ ಬೆಳೆಯುತ್ತಿದ್ದಾನೆ. ವೃಥಾ ಅಧಿಕ ಇಳುವರಿಯ ದುರಾಸೆಗೆ ಬಲಿಯಾಗುವುದೇ?



ತೆರಕಿನ ಸೊಬ್ಬರ




ನಿಸರ್ಗದತ್ತ ಕೆಲವು ಕ್ರಿಮಿನಾಶಕ

- ನಮ್ಮ ಬಯಲುಸೀಮೆಪ್ರದೇಶದ ಕೃಷಿಯ ಪರಿಸ್ಥಿತಿಯೂ ಇದೇ ರೀತಿಯದಾಗಿದೆ. ಜೋಳ, ನವಣೆ, ಗೋಧಿ ಮೊದಲಾದ ಬೆಳೆಗಳ ಜವಾರಿ ತಳಿಗಳು ಮಾಯವಾಗಿವೆ. ಜೋಳದ ಕೃಷಿಯನ್ನೇ ನಾವು ಗಮನಿಸಿದಾಗ, ಮಾಣದಂಡಗಿ, ಜವಾರಿ ತಳಿಗಳು ಈಗ ನಶಿಸಿವೆ. ಅಂತೆಯೇ ಮುಂಗಾರಿ ಮಳೆಯ ಮುಂಗಾರಿಜೋಳ ಈಗ ಇಲ್ಲವೇ ಇಲ್ಲ. ನಂದ್ಯಾಲ ತಳಿಬೀಜ ವಿರಳವಾಗಿವೆ.

- ಜವಾರಿ ತಳಿಗಳ ದಂಟುಗಳು ಹೆಚ್ಚು ಎತ್ತರವೂ ಪೌಷ್ಟಿಕವೂ ಆದ ಉತ್ತಮ ಮೇವಾಗಿದ್ದವು. ಇವುಗಳ ಎದುರು ಹೈಬ್ರೀಡ್ ತಳಿ ದಂಡು ಮೇವೇ ಅಲ್ಲ!

- ಜವಾರಿ ತಳಿಗಳ ರುಚಿಗೆ ಎರಡು ಮಾತಿಲ್ಲ. ಮುಂಗಾರಿಜೋಳ ಈಗಿಲ್ಲ; ಅದರ ರುಚಿಯ ಸಿಹಿ ನೆನಪೊಂದೇ ಉಳಿದಿದೆ.



ಈ ಹೈಬ್ರಿಡ್ ತಳಿ ಬೆಳ್ಸಾಕೆ ಕುರ್ಲಾ ಮ್ಯಾತ್ನಾಗಿಂದ 'ಮೇಲಿಲೆ' ಬರ ಬಂದ್ಬೆಟ್ಟಿ, ದನಗ್ಳೋಳ್ ತಿನ್ನಾಂಗ್ಲಾ ಇಲ್ಲಲಾ!



- ಇವುಗಳು ವಿನಾಶದ ಅಂಚಿಗೆ ಹೋಗಲು ನಾವೇ ಕಾರಣ. ಆಧುನಿಕ ಬೇಸಾಯ ಪದ್ಧತಿಗೆ ಜೋತುಬಿದ್ದು ರಾಸಾಯನಿಕ ಗೊಬ್ಬರಗಳ ಬಳಕೆ ಅನಿವಾರ್ಯ ಎನಿಸುವಷ್ಟು ಬಳಸುತ್ತ ಭೂಮಿಯನ್ನು ಸತ್ವಹೀನ ಮಾಡಿದ್ದೇವೆ.



ಜಬ್ಬಾರಿ ಜ್ವೋಳದ ಕ್ವೊಟ್ಟಿ ಳಗಿತ್ತವ್ರೆ ಗಟ್ಟಿನ ತಿಂತಿದ್ರಿ.. ಹೈಬ್ರಿಡ್ ಜ್ವೋಳದ ಕ್ವೊಟ್ಟಿ ನ್ವೋದ್ರಿ.. ಅದ್ಕೆ ರಾಗ ಎಳೀಲತ್ಕೆ ಕುತ್ತೀತಿ.




- ಬಯಲು ಸೀಮೆಯ ಒಣ ಬೇಸಾಯದ ಬೆಳೆಗಳೂ ಇದೇ ಜಾಡಿನಲ್ಲಿ ಸಾಗಿವೆ. ಸೂರ್ಯಕಾಂತಿ, ಶೇಂಗಾ, ತೊಗರಿ ಮೊದಲಾದ ಬೆಳೆಗಳ ಭೂಮಿಯು ಪೂರ್ಣ ರಾಸಾಯನಿಕಮಯವಾಗಿದ್ದರೆ, ರಾಸಾಯನಿಕ ಔಷಧಿಗಳ ಸಿಂಪಡಣೆ ಇಲ್ಲದೇ ಬೆಳೆ ಉಳಿಯದು ಎಂಬ ಸ್ಥಿತಿ ಉಂಟಾಗಿದೆ.
- ಹೈಬ್ರೀಡ್ ತಳಿಗಳ ಪ್ರವೇಶ, ರಾಸಾಯನಿಕ ಗೊಬ್ಬರಗಳ ಪ್ರವೇಶ, ಔಷಧವೆಂಬ ವಿಷಗಳ ಆಗಮನವೇ ಈ ಎಲ್ಲ ಅನಾಹುತಕ್ಕೆ ಕಾರಣವಾಗಿವೆ.

ದಿನ್ಕಾ ಕೆಳಸ್ಯಾಂಗ ಈ ಜ್ಯಾಳಿಗಾ ಹ್ಯುಡೆಯ್ಯೋದು ನಿಂತ್ಹೋಗ್ತೈತಿ, ಬೆಳೆ ಹೆಚ್ಚಿಲ್ಲ..ಶಿಬ್ರಾ!



ನಮ್ಮ ಭೂಮಿಯ ಶಕ್ತಿ ಕ್ಯಾಳ್ಕಾಗೇತಿ.. ಬಿಂದ್ ಹ್ಯೂಸ್ ಬಳಕ್ಕೆ ಬೂಸ್ಟು ತಗಿಸ್ಲು ಹ್ಯೂಸಾಮಣಿಷಾ ತೆಂಡು ತುಂಬು!


- ಬಹುರಾಷ್ಟ್ರೀಯ ಕಂಪನಿಯ ಹೈಬ್ರೀಡ್ ತಳಿಗಳ ಮೇಲಿನ ಅವಲಂಬನೆಯ ಹಿಂದೆ ಆ ಕಂಪನಿಗಳ ಉದ್ಧಾರ ಅಡಗಿದೆ. ಇವು ಹೈಬ್ರೀಡ್ ತಳಿಗಳನ್ನು ಮಾರುಕಟ್ಟೆಗೆ ಬಿಟ್ಟು ಅಧಿಕ ಇಳುವರಿಯ ಆಮಿಷೆ ತೋರಿಸಿ, ನಂತರ ಅಧಿಕ ಇಳುವರಿಯ ಉಳಿವಿಗೆ ರಾಸಾಯನಿಕಗಳ ಬಳಕೆಯ ಅವಶ್ಯಕತೆಯನ್ನು ತಂದೊಡ್ಡಿ ಭೂಸತ್ವವನ್ನು ಹಾಳುಮಾಡಿಕೊಳ್ಳುವ ಕೃಷಿಪಾಠ ಹೇಳಿಕೊಡುತ್ತಿವೆ.
- ಬಹುರಾಷ್ಟ್ರೀಯ ಕಂಪನಿಯ ಹೈಬ್ರೀಡ್ ತಳಿಗಳ ಮೇಲಿನ ಅವಲಂಬನೆ ಹೆಚ್ಚುವಂತೆ ಮಾಡಿ, ಸಂಪೂರ್ಣ ಕೃಷಿಕನ ಆರ್ಥಿಕ ಶಕ್ತಿ ಕುಗ್ಗಿಸುವ, ಮಾರುಕಟ್ಟೆ ತಮ್ಮ ಕೈವಶ ಮಾಡಿಕೊಳ್ಳುವ ಹೂಟ ಅವುಗಳದ್ದು!



ರೈತ ಶತ್ರು 'ಡಂಕೆಲ್'

'ಕೃಷಿಕನಿಗೆ ಗೊತ್ತಿರುವ ಎಲ್ಲ ರೋಗಗಳನ್ನೂ ಮೀರಿ ನಿಲ್ಲುವ ರೈತನ ರಕ್ತ ಬಿವರು ಹೀರುವ ಶ್ರೀಮಂತ ರಾಷ್ಟ್ರಗಳು ಅಂಟಿಸುತ್ತಿರುವ ಹೊಸರೋಗ ಈ 'ಪೇಟೆಂಟ್' ನೀತಿ.

"ಸುಬ್ಬಣ್ಣ ಟೊಮೇಟೋ ಬೆಳೆಯುವ ರೈತ. 'ಹೈಬ್ರೀಡ್'ತಳಿ ಬೀಜ' ಖರೀದಿಸಿದ್ದಾನೆ. ದೊಡ್ಡ ದೊಡ್ಡ ಟೊಮೇಟೋ, ಬಹಳ ಫಸಲು ಎಲ್ಲ ಬಂತು. ಮಾರನೇ ವರ್ಷ ತಾನು ಬೆಳೆದ ಟೊಮೇಟೋದಿಂದ ಸಂಗ್ರಹಿಸಿದ ಬೀಜ ಬಿತ್ತಲು ಮುಂದಾದ. ಆದರೆ ಈ ಮೊದಲು ಅವನಿಗೆ ಹೈಬ್ರೀಡ್ ತಳಿಬೀಜ ನೀಡಿದ್ದ ಶ್ರೀಮಂತ ರಾಷ್ಟ್ರದ ಬೀಜದ ಕಂಪೆನಿ ಅವನಿಗೆ ಬೀಜ ಬಿತ್ತಲು ಬಿಡುವುದಿಲ್ಲ. ಬೀಜದ ಮೇಲೆ ತನಗೆ ಸಂಪೂರ್ಣ ಹಕ್ಕಿದೆ. ಬೀಜ ಬೇಕಿದ್ದರೆ ಕಂಪನಿಗೆ ಸುಬ್ಬಣ್ಣ ಹೆಚ್ಚು ಹಣತೆತ್ತು ಮತ್ತೆ ಖರೀದಿಸಬೇಕು ಎನ್ನುತ್ತದೆ. ಸುಬ್ಬಣ್ಣ ತಾನು ಬೆಳೆದ ಟೊಮೇಟೋವಿನ ಬೀಜದ ಮೇಲಿನ ಹಕ್ಕು ಅವನಿಗೆ ಗೊತ್ತಿರದಂತೆ ಕಳೆದುಕೊಂಡಿರುತ್ತಾನೆ".





ಬಹುರಾಷ್ಟ್ರೀಯ ಕಂಪೆನಿಗಳು ನಮ್ಮಂಥ ಬಡ ರಾಷ್ಟ್ರಗಳ ಕೃಷಿ ಕ್ಷೇತ್ರಕ್ಕೆ ಲಗ್ಗೆ ಇಟ್ಟು ಇಲ್ಲಿನ ಫಸಲುಗಳಲ್ಲಿನ ವಿಶೇಷ ಗುಣಗಳನ್ನು ಸಂಗ್ರಹಿಸಿ ಪ್ರಯೋಗ ನಡೆಸಿ ಹೊಸತಳಿ ಸೃಷ್ಟಿ ಮಾಡಿ ಪೇಟೆಂಟ್ (ಹಕ್ಕು) ಮಾಡಿಕೊಂಡು ನಮ್ಮ ಆರ್ಥಿಕ ಶಕ್ತಿ ಹೀರುವುದು. ಇಷ್ಟೇ ಅಲ್ಲ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಮಾರಾಟದಿಂದ ಅಧಿಕ ಲಾಭ ಗಳಿಸುವುದರೊಂದಿಗೆ ನಮ್ಮ ರೈತ ಆಧುನಿಕ ಕೃಷಿಗೆ ಅವರನ್ನೇ ಅವಲಂಬಿಸುವಂತೆ ಮಾಡಿದೆ. ಭೋಪಾಲ್‌ನ 'ಯೂನಿಯನ್ ಕಾರ್ಬೈಡ್' ಎಂಬ ಕ್ರಿಮಿನಾಶಕ ತಯಾರಿಕೆಯ ಕಾರ್ಖಾನೆ ನೆನೆಪಿಸಿಕೊಳ್ಳಿ. ಕೆಲ ವರ್ಷಗಳ ಕೆಳಗೆ ಈ ಕಾರ್ಖಾನೆಯಲ್ಲಿ ಆದ ಅನಾಹುತವನ್ನು ನಾವು ಶತ ಶತಮಾನ ಅನುಭವಿಸುವಂತಾಗಿದೆ.


ಇಲ್ಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ. ಶ್ರೀಮಂತ ರಾಷ್ಟ್ರದ ಕಂಪೆನಿಗಳು ಬಡ ರಾಷ್ಟ್ರದ ರೈತನ ವ್ಯವಸಾಯ ಸ್ವಾತಂತ್ರ್ಯವನ್ನು ಹಂತ ಹಂತವಾಗಿ ಕಸಿಯುತ್ತಿವೆ ಎಂಬುದು.


ಇವೆಲ್ಲ ವಿಚಾರಗಳು ಜಿನೀವಾದ ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟಾರಿಫ್ ಮಹಾನಿರ್ದೇಶಕ ಆರ್ಥರ್ ಡಂಕೆಲ್‌ನೆಂಬವನ ಪ್ರಸ್ತಾವನೆಯ ಕರಾಳ ಛಾಯೆಗಳು. ಈ ಪ್ರಸ್ತಾವನೆಗೆ ಭಾರತ ಸಹಿ ಹಾಕಿದ್ದರಿಂದ ರೈತರ ಮೇಲಿನ ಮತ್ತು ಅವರ ಬೀಜದ ಹಕ್ಕಿನ ಮೇಲೆ ಬಹಳ ದೊಡ್ಡ ದುಷ್ಪರಿಣಾಮ ಉಂಟಾಗಿದೆ. ಏಕಂದರೆ ಈ ಡಂಕೆಲ್ ಪ್ರಸ್ತಾವನೆ, ಹಕ್ಕುಗಳನ್ನು ಪಡೆದು ಭಾರತದ ಬಡ ರೈತ ತನ್ನ ಫಸಲಿನಲ್ಲಿ ಮರುವರ್ಷ ಬಿತ್ತನೆಗಾಗಿ ಕಾದಿಡುತ್ತಿದ್ದ ಬೀಜವನ್ನು ಉಪಯೋಗಿಸದಂತೆ ಒತ್ತಡ ತರಲಿದೆ!

ತಾನು ಬೆಳೆದ ಬೀಜವನ್ನು ಬಿತ್ತದ ಪರಿಸ್ಥಿತಿಯಲ್ಲಿ ರೈತನ ವಿನಾಶ ಖಂಡಿತ. ವಿನಾಶ ತಡೆಯಲು ಜಾಗೃತಿ ಅವಶ್ಯ.



ನಾಗಪ್ಪನ ಹೊಲದಿಂದ
ಜಡ್ಡನ ಮಡ್ಡು ಹಳೆತಳಿ
ಭತ್ತದ ಅಪಹರಣ!


ಬಡಿ ಕೃಷ್ಣೀಯ ಕೌಂಸಿಲ
ಪ್ರಯೋಗಾಲಯ
ರೋಗ ನಿರೋಧಕ ಶಕ್ತಿ ಹೆಚ್ಚುಳ್ಳ
ತಳಿ ಇದು.. ನಮ್ಮ ಭತ್ತಕ್ಕೆ
ಇದನ್ನು ಸಂಯೋಗಗೊಳಿಸಿ
ಹೊಸ ತಳಿ ತಯಾರಿಸಿ!


ನಂತರ
ತಗೊಳ್ಳಿ.. ಹೊಸ ತಳಿ
ಬೀಜಗಳು!
ಇದರ ಮೇಲೆ ನಮ್ಮ
'ಪೇಟೆಂಟ್ (ಹಕ್ಕು) ಇದೆ!



ನಾಗಶ್ಟ ನೀನು ಜಡ್ಡನಮಜ್ಜು
ಬೀಜ ಬಿತ್ತಬಾರದು.. ಅದರ ವಿಶಿಶ್ಟ
ಗುಣದ ಮೇಲೆ ನಮ್ಮ 'ಪೇಟೆಂಟ್'
ಇದೆ. ಹಕ್ಕು ಹೊಂದಿದ್ದೇವೆ.



ನೀನು ಹೆಚ್ಚುವರಿ
ನೀಡಿ ನಮ್ಮ
ಹೈಬ್ರಿಡ್-ಬೀಜ
ಖರೀದಿಸು






ಹಳೆತಳಿ ಬೆಳೆದರೆ
ನೀನು ಋಣಕೊಶ್ಟಿಕು..
.. ಇಲ್ಲಾ ನಿಮ್ಮ
ಸರಕಾರದಿಂದ
ವಸೂಲು ಮಾಡ್ತೇವೆ!



ಬೀಜದ ಕಥೆ!



ನಿಮ್ಮ ಹೊಸ ತಳಿ
ಬೀಜ ಕೊಡಿ




ಸಿದ್ದಪ್ಪ, ಹೊಸ ಬೀಜ ಖರೀದಿ
ತಂದಿದ್ದೇನೆ.. ಮುಂದಿನ ಸಲ ನಾನೇ
ನಿನಗೆ ಬೀಜಗಳನ್ನು ಕೊಡ್ತೀನಿ!
ವಿದೇಶೀ ತಳಿ!!



ರಾಮಣ್ಣೋರೆ, ನಿಮ್ಗೆ ವಿಷಯ ಗೊತ್ತಿಲ್ಲ,
ಈ ವಿದೇಶೀ ಕಂಪೆನಿ ಬೀಜ ನನ್ನ ಬಳಿ
ಇದೆ. ಕಳೆದ ಬಾರಿ ತಂದು ಬೆಳೆದದ್ದು,
ಈ ವರ್ಷ ಈ ಬೀಜ ನಾನು ಬೆಳೆಯಲು
ಬರದೆನ್ನುತ್ತಾರೆ ಅವರು..ಹೆಚ್ಚು
ಹಣ ಕೊಟ್ಟು ಅವರ ಬಳಿಯೇ
ಖರೀದಿಸಬೇಕಂತೆ!

ಬೀಜ ಸತ್ಯಾಗ್ರಹ ಪ್ರಸರಣ

– ಒಂದು ಚಿಕ್ಕ ನೋಟ –




'ವಿಸ್ತಾರ' ಸಂಸ್ಥೆಯ ಇತರೇ ಕನ್ನಡ ಪ್ರಕಟಣೆಗಳು

- ದಲಿತ ಚಳುವಳಿ - ಒಂದು ಚಿಂತನೆ
- ಹಿಂದೂತ್ವ - ಉದ್ಭವಿಸುತ್ತಿರುವ ಫ್ಯಾಸಿಸಂ
- ಕರ್ನಾಟಕ ಪಂಚಾಯತ್ ರಾಜ್ಯ ಅಧಿನಿಯಮ-1993 —ಕಿರು ಪರಿಚಯ

ENGLISH PUBLICATIONS

- Challenges Facing Indian Democracy - 1991
- The Future of Socialism and Socialsm of the Future - S. Kappen-1992
- Understanding Communalism - Collection of Essays by Michael Tharakan, M. Muralidharan & S. Kappen-1993
- Resistance and Hope - Stories and Documents of People's Struggles-1993
- Nadugadhik (A play) - K.J. Baby

ಜಂಟಿಯೋ? ಒಂಟಿಯೋ?





ಅರಣ್ಯ ಇಲಾಖಾ ಜಂಟಿ ಅರಣ್ಯಯೋಜನೆ ಬಗ್ಗೆ ಒಂದು ವಿಮರ್ಶಾತ್ಮಕ ಚಿತ್ರಣ ಒಳಪುಟಗಳಲ್ಲಿ

ಸಂಪಾದಕ : ಪಾಂಡುರಂಗ ಹೆಗಡೆ
ಚಿತ್ರ : ಸುರೇಶ ಯಲ್ಲಾಪುರ

ಪರಿಸರ ಸಂರಕ್ಷಣಾ ಕೇಂದ್ರ, ಸಿರಸಿ
ಮಾರ್ಚ್ 1996

ಮನುಷ್ಯ ಮತ್ತು ಕಾಡಿನ ನಂಟು
ಬಹಳ ಪ್ರಾಚೀನವಾದದ್ದು.






ನನ್ನೆ ಮಗುವಿಗೆ
ಹೆಮ್ಮೆನವಿದೆ



ಅವಶ್ಯಕತೆಗಿಂತ
ಹೆಚ್ಚು ಕಡಿದೆ
ಕಾಡು ಬರಿದು
ಮ್ಯಾದೆನು..




ನಮ್ಮ ಅರಣ್ಯ ಹೆಂಚಾಯತಿ ಮ್ಯಾಡಿದ ಸ್ಕೀಮ್ಗೆ
ನಿಯಮ್ಯುವಳಿಗಳನು ಸಾರ ಎಲ್ಲರ್ಮು ನಡೆಯಬೇಕು!
ಅರಣ್ಯ ರಕ್ಷಣೆ ಪವಿತ್ರ ಕೆರ್ತವ್ಯ!

ಶತಮಾನಗಳಿಂದ, ಬೀಚಲೆ,
ಸಾಗರವಾನಿ ಮುಂತಾದ
ಬೆಳಿಬಾಳುವ ಮರಿಗಳು
ಮಾತ್ರ ನಮ್ಮ ಸ್ವತ್ತು.
ಉಳಿದೆಲ್ಲವೂ ಹುಳ್ಳಗರ
ಹುಳ್ಳನೆ ಒಳತೆಟ್ಟಿದೆ.
ಇದು ರಾಜರ ನಿಧಾರ!



ಇವೆಲ್ಲ ಹಿಂದಿನ ಕಥೆ!

ಭಾರತದ ಸಿಂಬ್ಯಾರಿ ಪದಾರ್ಥಗಳನ್ನ ವಿದೇಶ ಮುದ್ರೆ ತೆಟ್ಟಿಯುಲ್ಲಿ ಬಾಂಲೀ ಮೇಡಿಕೆ ಇಟ್ಟೊಂಬ ವಿಷಯ ಇತಿಹಾಸದಿಂದ ತಿಳಿಯುತ್ತದೆ!




ಭಾರತದಿಂದ ತಂದದ್ದು..
ದರ ತೆಡಿಯೆ ಬೃಗದು!

ಪ್ರೀತಿಬಾಲಿ ಇವರಿಂದ ಕ್ಯೊಳ್ಳುವುದಕ್ಕಿಂತ
ನಾವೇ ನೇರ ಭಾರತಕ್ಕೆ ಪ್ಯೋದರೇ
ಲಾಭವಾಯಿತೆ


ಪ್ಯೋತೋಗಳನ್ನೆರಿಸಿ, ತಂಬ್ಬಿರಿಸಿ, ಪ್ರೇಂಬರಿಸಿ
ಎಲ್ಲ ಜೀಪ್ ಯ್ಯೋಡಿಸಿ ಬಂದುಬಿಡೋ!

ಬೃದರೆ ಮುಂದೆ ಬೃದದ್ದು ಬೇರೆಯೇ!




ರಾಜರೇ, ಈಗ ತಿಳಿಯುತ್ತೆ.. ಇವರು
ಬೆರಳು ಕ್ಯೊಟ್ಟರೆ ಕೈ ನುಂಗುವ
ಜಾತಿಗೆ ಸೇರಿದವರೆಂದು!


ప్రజలందరూ,
నేమ్మళ్లూన అధికారంచన్నాక
తిమ్మిర్లెక్కించి శ్మొంతిరూ



ఇంతవరకూ
తేన్నాగిదే.→









తుంబా శ్రేయుంతిప్యాద ప్యేతిధ్వేయుయ అరణ్యవన్ను
శ్యాయ్యూతి ఒతేతనదింద చాలోడిసిద్దేలా..
అదు శాయ్దిబెట అరణ్య.. శ్రీధళతేయ శ్మొత్తు.




←జనసంఖ్యాదశేరు అరణ్య








ಭಾರತದ ತಾಡು-ನಾಡು ಬದಿಪ್ಪಾಯಿತು



1861 'ರೈತಕೂಟ' ಎಂಬ ಸಂಘಟನೆ
ಕಾಡಿನ ಮೇಲಿನ ಹಕ್ಕಿಗಾಗಿ ಹೋರಾಟ
ಮಾಡಿತು. 1924ರಲ್ಲಿ ಮಣಿದ ಅಧಿಕಾರ
ಕೆಲವು ಪವಲತ್ತು ನೀಡಿತು!









ಭಾರತೀಯರ ಈ ಶಕ್ತಿಶಾಲಿಯನೆ ನೆರವೇರಿಸಿತೇ? ಅರಿಕ್ಸದ ಯೋಜನೆ ಅಧಿಕಾರಿ ಹುಲ್ಲು ಅಧಿಕಾರಿ ಕೈಗೆ ಬಂತೇ?


1947ರಲ್ಲಿ ಸ್ವಾತಂತ್ರ್ಯ ಬಂದಿತು. ಭಾರತ ಕಾವೇರಿನ ಯೋಜನೆ ಹುಲ್ಲು ಮಾತ್ರ ಜನಂಗೆ ನೆರವೇ ಇಲ್ಲ! ಯಾರೆ?



ತಡೀಲಿ.. ಈಗತ್ತಾನೇ ಸ್ವಾತಂತ್ರ್ಯ ಬಂದಿದೆ.. ಅಧಿಕಾರಿ ನಡೆಸ್ಯೋದು ತಿಳೀಬೇಕು.. ಪ್ರಜೆಗಳಿಗೆ ಹೆಜ್ಜೆ ಗುರುತಿದೆ.. ಅನುಶೀಲಿಸಿ ನೋಡ್ತೇವೆ!



ಪ್ರಚಾರಕ್ಕಿಂಗ್ಲೂ ನಮ್ಮ ಭಕ್ತಿಳತೆಗ್ಲೂ
ಯ್ವ ತ್ನಾಸಿವೇ ಇಲ್ಲ!




ಸಾಮ್ಯುಡಿಲೆ ಬಳಕೆಗೆ ಒಳಪಟ್ಟಿದ್ದ ಸಾಮು ಕಡಿಮೆಯಾದರಿಂದ
ಜನರಿಂದ ದ್ಯೂರವ್ಯಾಗುತ್ತ ಅಧಿಕಾರಿ ಸಾಹಯ ದಬ್ಬಾಳಿಕೆಗೆ ಒಳಪಟ್ಟಿದೆ!

ಈ ಭಾಷಣ ಹಿರಿಕಾರಿಗಳಾದರೂ ನಮ್ಮ ಸಾಡಿನ ರಕ್ಷಣೆಗೆ, ಮೋಕ್ಷಕ್ಕೆ-
ಗಳನ್ನು ಯತ್ನಿಸ್ತಿಯಾಗಬೇಕೇ?





ಹೀಗೆ ಇದ್ದದ್ದು



ಹೀಗೆ ಮಾಡಲ್ಪಟ್ಟಿದೆ


ವೈವಿಧ್ಯಮಯ ಕಾಡಿನ್ನು ಬಂದು ಮಾಡಿ 'ಮ್ಯಾಂಚೋಚಿನ್' ತಿರ್ಥಿತಯಿಂದ

ವೈವಿಧ್ಯಮಯ ಕಾಡಿನ್ನು ಬಂದು ಮಾಡಿ 'ಮ್ಯಾಂಚೋಚಿನ್' ತಿರ್ಥಿತಯಿಂದ ಒಂದೇ ವಿಧದ ಸಸ್ಯಗಳನ್ನು ಬೆಳೆದಿರುವ. ಉದಾ: ಸೀಲಗಿಡ, ಸಾಗುವಾನಿ, ಅಕೇಸಿಯಾ ಇತ್ಯಾದಿ.


ವೈವಿಧ್ಯತೆ ರಹಿತ ಇಂಥ ಕಾಡುಗಳ ನಿರ್ಮಾಣದಿಂದ ಪರಿಸರ ಮಲಿನವಾಯಿತು, ಅಂತರ್ಜಲ ಬತ್ತಿತು!

ಇದರಿಂದ ಏನು ಲಾಭ ಯಾರಿಗೆ?

వలివిధిది సుస్వేచ్ఛాలనేయ లాభ దిల్చినాయితో ఎనిడి డొళ్ళగల్లు.




నమ్మింథి శిశిబుద్ధారింగే ఇన్ను బ్యూంబి
బిదిరు ఇల్పంతో.. ఎల్లా తొరబ్యునేగళిగే శిళిస్తిరింతో!



క్యారియరిగె టిన్నిగె 14రూ. దర
నమ్మింథ గుడి క్యారియరిగె
టిన్నిగె 1400 రూ. దర..
ఇదేంథ సాన్యయ?

శిడిన చివిధితే సాకబాదంతో బ్రూ చగ్గోళ్ళు త్యోందరే జిబ్బాయ్లు!



ఇల్లి వను ఛడ్డార సిగుత్తే అంత జీనే డ్యోంచి తెళితిరుటే,
వనుళ్ళ బ్యాకిదే ఇన్ను గతి!



ಇವೆಲ್ಲ ಬೂದಿಕ್ಕೆ!
ಮೃಗ ಬೇಟೆ ನಿಷಿದ್ಧ..
ಬೆಳೆ ರಕ್ಷಿಸಲು ಕಿಚ್ಚು ಬಿಡುತ್ತಿದೆ..
ಕಾಡಿಲ್ಲದ್ದೇ ಪ್ರಾಣಿಗಳೆಲ್ಲಾ
ಹಾವಳಿ ನಡೆಸುತ್ತವೆ!
ಏನು ಮಾಡಬೇಕೋ ತಿಳಿಯದು!

ಕೈತರಿ ಹಾರಿಸಿದ್ದಿಲ

ಈ ರೀತಿಯಲ್ಲಾಗಿದೆ!

ಕಾಡಿನ ವಿವಿಧತೆಯು ನಾಶವೇ ಹುಲ್ಲುಗರಿ ಎಲ್ಲ ಸಮಸ್ಯೆಗಳಿಗೆ ಕಾರಣ!

ಬೇಸಗೆಯ ಧಗಾಯು ತಂದುಕೊಡುವ ವಶಿರ್ಯಾಹಿದ ಕಾಡುಗಳ ನಿರ್ಮೂಲಕ್ಕೆ ಹಿಂಸ್ರ ಪ್ರಾಣಿಸ್ಥಿತಿ ನೀಡಿದ್ದಂದು, ಜಲ ವಿದ್ಯುತ್ ಯೋಜನೆಗಳಿಂದ ಹೀಗೆ ವಿವಿಧ ಒತ್ತಡಿಗಳಿಂದ ಕಾಡು ಬರಿದಾಯುತ್ತಿದೆ ವನಸಿರಿ ಇದೆಯಂದು ಮಾತಿದೆ ಕಾಡಿನ ಕೂನ್ನವೆಂದೇ ಹೇಳಬಹುದು.

ಮಳೆ, ಬೆಳೆ ವಲ್ಲ ಕಾಡಿನ್ನು ಅವಲಂಬಿಸಿದೆ. ಕುಡಿಯುವುದಕ್ಕೆ ಎಲ್ಲ ಪ್ರಾಥಮಿಕ ಅವಶ್ಯಕತೆಗಳಿಗೆ ಕಾಡೇ ಮೂಲ. ಕಾಡಿನ ಇಲಾಖೆ ಕಾಡು ಬೆಳೆಸುವ ಪ್ರಾಮುಖ್ಯತೆ ಕ್ರಿಯೆಯನ್ನು ಮಾಡುವಲ್ಲಿ ಸೋತಿದೆ.


ಈಗ ನಮ್ಮ ಮುಂದು ಭವಿಷ್ಯದ ಅರಣ್ಯ ಕ್ರಿಯೋಜನೆ ಅಭಿವೃದ್ಧಿಪಡಿಸಲು ಪ್ರಾಜೆಕ್ಟುಗಳು ಮುಂದೆ ಬಂದಿದ್ದಾರೆ. ನಮ್ಮಲ್ಲಿದ್ದ ಭವಿಷ್ಯ ಅವರಲ್ಲೇಲೆ ಎಂಬ ಪ್ರಶ್ನೆ ಬಹಳಷ್ಟು ಮುಖ್ಯವಾದುದು ಕಿಡಿಜವಬ್ಬೇ!



ಜನರ ಟೀಕೆ, ಆಕ್ಷೇಪಣೆಯಿಂದ ಪ್ರಾಜೆಕ್ಟುಗಳು "ಯೋಜನೆ" ಜನರ ಕಿಡಿಭಾಗಿತ್ವ -ಮ್ಮೊಂದಿಗೆ ಅಂತೆ ಮ್ಮಾಡಿ ಆ ಬೇಲೆ!

- ಒಳ್ಳೆಯ ಮಳೆಯು ಕಾಡು ಈ ವಿಷಯವು ಭೂಟಿಟ.
- ಪ್ರಬಿನ್ನನೆ ಡಿಜೆ ಕುಡಿಯಾಗಲು, ಮಳೆಕಾಣಲು ಈ ಕಾಡು ಅಗತ್ಯ.
- ಈ ಲಾಭವನ್ನು ಗಮನದಲ್ಲಿರಿಸಿಕ್ಕೊಂಡೇ ಪ್ರಬಿನ್ನನ "ಓವರ್‌ಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್ಸ್ (ODA) ವಿಷಯವು ಭೂಟಿಟ ಅಭಿವೃದ್ಧಿಪಡಿಸಲೆ ಮುಂದಾಗಿದೆ.
- ಭವಿಷ್ಯ ಈ ಓ.ಡಿ.ಎ ಗೆ ನಮ್ಮ ಅರಣ್ಯ ಇಲಾಖೆಯ ಅರಣ್ಯೇತರ ಮೇಧಾವಿತನವು ವಿಶ್ವಾಸವಿಲ್ಲ. ಹಾಗಾಗಿ ಜನರ ಸಹಭಾಗಿತ್ವವಿದ್ದರೆ ಕಾಡು ಬೆಳೆಸಲು ಹೇಳಿತ್ತು.
- ಜನರ ಸಹಭಾಗಿತ್ವವಿದ್ದ ಈ "ಜಂಟಿ ಅರಣ್ಯ ಯೋಜನೆ" ಹೇಗಿದೆ?

ಜಂಟಿ ಯೋಜನೆ



• ನಿಮ್ಮ ಅರಿಕ್ಷ ಇಲಾಖೆ ಈಬ್ಬ
ಒಂದು ಹಾಸ್ಯಾಸ್ಪದ ಯೋಜನೆ
ತಯ್ಯಾರಿಸಿದೆ!


ಕಡಿಬ್ಬಾಹ್, ಇವರ ಹೆಂಡ್ತಿ ಛಾಡ್ತಿ
ಕ್ಷೇಪಣಿದಿಲ್ಲಿ ಹೊಸ್ತಾದಸೆ!



ಇಲ್ಲಿ ಬಿಸ್ಕೋಲ್ಲಾ ಅಂದ್ರೆ ಓಗ್ತೀತ್ತಾ?
ಇದು ಜಂಟೀ ಯೋಜನೆ!


- ಶ್ರೀ ತ ಅರಣ್ಯ ಸಿಬ್ಬಂದಿಯು ಕೆತನೇ ಕಾರ್ಯದರ್ಶಿ
- ಅಧಿಕಾರಿಗಳಲ್ಲಿ ಇವನಲ್ಲಿ ಕೇಂದ್ರೀಕೃತ






ಶ್ರೀ ಜಾ ಶ್ರೀ ಭುತ್ತಿದಳ್ಳಿ ಜನರ ಕಹಿಭಾವತ್ತಿ ಎಂದರೆ ಹೀಗೆ!


- ಕ್ರಾಯದಿ ಪ್ರೀತಿ ಮನೆಗೂ ಹಿದಿಕ್ಕಿತ್ತೆಚಿದೆ
- ನಾಯಕೀ ಬಾಷೆ ಮಡಿಲಾ ಹಿದಿಕ್ಕಿರಾ ಇಕ್ಕಾದೆ.
- ಕ್ರಾಮ ಅರಣ್ಯ ನಿಯಿತಿಯಲ್ಲಿ 14 ಜನ ಭಯಕ್ಕೆಂಡ ತಾರ್ಕಿತಾತಿ ಹಿದಿಕ್ಕಿತಿರು ತ್ತಿರೆ.





- ಕ್ಯಾರೆನ್ಬೆರೆ (ತಾರ್ಕಿದಿಕ್ಷಾ) ವೆಕಾ ವೆಕೆ ತಾರ್ಕಿತಾತಿ ನಿಯಿತಿ ಹಿದಿಕ್ಕಿರಿ ಬಗ್ಗೆ ಅಭಿಪ್ರಾಹಿಕ್ಕೆಯ್ತುವಳಿ ಕ್ರಾಮ ಮ್ಯಾತಿದಿಲ್ಲ ಅರಣ್ಯಾಧಿಕಾತಿ ರದ್ದು ಹಡಿಹಿಯ ಅಧಿಕಾರ ಹ್ಯೊಂದಿರಿಯತ್ತಾರೆ!
- ಕ್ಯಾರೆನ್ಬೆರೆ ಹ್ಯೊತೆನೆಯಂತೆ ಅವರು ನಡೆಯುತ್ತಾರೆ.

- ಈ ಮ್ಯೊದಿಲು ತೈಹಿಕಾಗಿ ಹ್ಯೊಲ್ಲು, ಹ್ಯೊದೆ ಬಳಕೆಗೆಂದು ಬಿಟ್ಟಿದ್ದ ಭೂಮಿ ಇನ್ನು ಮುಂದೆ ಕ್ರಾಮ ಅರಣ್ಯ ನಿಯಿತಿಗೆ ಸೇರಿಲವೆ. ಅಂದರೆ ತೆರಿತಾರದ ವಸಕ್ಕೆ ಸೇರಿಲವೆ.
- ಈ ಭೂಮಿಯಲ್ಲಿ ಉತ್ಪನ್ನಗಳನ್ನು ನಿಯಿತಿಯ ರಿಕ್ಕಿಸ್ಸುಳಿಹಿಡಿಯಲು ತಾರಣ ಈ ಮ್ಯೊದಲು ಶಿಮುತ್ತಿದ್ದ ಹೆಲಬ್ಯಗಳಿಂದ ಕ್ರೆತಿ ವಂಚಿತ ನಾಗುತ್ತಾನೆ.




ఇల్లు స్కూలు మ్యాపులేదిల్లు..
నీకు నీళ్ళు నేతబోతలే..
ODA చ్చిందోతనోళ్ళా!


కొత్తిగా ముత్తైవుద జాగే ఎల్లా?




ಮೈಮೇಲೆ ಸೇಮಿಶ್ಯಾತಿ
ಕ್ಯಾನ್ಸರ್‌ರಿಂದ ಬಚ್ಚಿ
ಸಲಹಿಲು

ಬೈಡಿಸಿಗಳ
ಖರೀದಿಗೆ


ಹೈಟಿ ತಿಪ್ಪಡಿಗಳ
ನಿರ್ಮಾಣಕ್ಕೆ.

ಇಂಥಾ ಅರಿಣ್ಣ
ಯೋಜನೆಗೆ ?!

ಥರ್ಮಲ್‌ದ ಇಂಥ ಯೋಜನೆಗಳಿಲ್ಲಿ
ಬಡ ತೋಕೆ ಹಣವನ್ನು ಹೀಗೇ
ಖರ್ಚು ಮಾಡುವುದು.. ಅಚ್ಚೋ!




ನಾವು ಕೊಡುವ ಗಿಡದ ಬೆಳವಣಿಗೆ ಚೆನ್ನ..
ನಿಮ್ಮ ಅರಣ್ಯ ಇಲಾಖೆಗೆ ಲಾಭವೂ ಚೆನ್ನ...
ನಮ್ಮಿತ ಅರಣ್ಯಾದಲ್ಲಿ ಇವನ್ನು ನೆಟ್ಟು, ರಕ್ಷಿಸಿ!



ಯೆನ್ನೋ ನಾವೇ ಹುಡಿದು ಕೊಳ್ಳ ತಿಳ್ಕರು
ಇವತ್ತು ಯತ್ತೆ ಕ್ಯೊಳ್ಳ ಕ್ಯೊಡೆದು ಕ್ಯೊಂಡು
ಕ್ಯೋಗ್ತಿದ್ದಾರೆ.. ಅಂದ್ರೆ ಅರಣ್ಯ ಇಲ್ಲಾವೆ
ಇವಿಕ್ಯೊಂಬಿನೆ ಕ್ಯಾಯಲಾಗಿದೆ!

ಅರಣ್ಯ ಬೆಳೆಸಿಲು, ರಕ್ಷಿಸಿಲು ಜನರು ಬೇಕು.. ತಿಳ್ಳ ಕಾಡಾಕೆದ್ದಾರರನ್ನು ಶಕ್ತಿಯುಯ್ಯುವ ಅಧಿಕಾರಿಯಲ್ಲ. ದಿಕ್ಕೆತೆಯಿಲ್ಲದ ಭಕ್ತಿಳತ ತಿಳ್ಳ ಕಾಡಾಕೆದ್ದಾರರನ್ನು ಪ್ರೋತ್ಸಾಹಿಸುವ ಕೆಲಸ ಇನ್ನೆತೆಯಾಗ್ಬೆ ಮಾಡಿ.. ನಾಳೆ ಈ ಯೋಜನೆ ಎಂಥಲಕ್ಕೊಂಡಿಲ್ಲ ಇಲ್ಲಾವೆ ಏನು ಹೇಳಬಹುದು.




- ಯೋಜನೆ ವಿಫಲಮ್ಮಂಡಿಲ್ಲ ಇರಾವೆ ಜನರು ಕಾಳಜಿ ವಹಿಸಿಕಿಲ್ಲು.. ಜನರೇ ಈ ವೈಫಲ್ಯಕ್ಕೆ ಕಾರಣ ಎಂಬ ಭಾವನೆ ಹೊಂದಿಬಹುದು.

- ಹಾಗಾಗಿ ಜನತೆ ಮೊದಲೇ ವಹಿಬೆತ್ತು 'ಜಂಟೀ ಅರಣ್ಯ ಯೋಜನೆ' ಯಲ್ಲಿ ಅಧಿಕಾರ್ಯಾಗಿ ಕಿರಿಭಾಗಿತ್ವ ಮತ್ತು ಅಧಿಕಾರಕ್ಕಾಗಿ ಬಗ್ರಹ ಪಡಿಸಿಕೆಬೇಕಾಗಿದೆ.

ಜನತೆಯ ಅರಣ್ಯ ಹೇಗಿರಬೇಕು?

ಕಲ್ಪಿಸಿಕೊಳ್ಳಿ, ನಿಮ್ಮದೇ ಹಳ್ಳಿಯ ಕಾಡು. ಅದರ ಹಂಪೂರ್ಣ ಜವಾಬ್ದಾರಿ, ಅಧಿಕಾರ ನಿಮ್ಮದು. ಭವಿಷ್ಯದ ಬಗ್ಗೆ ನೀವೆಲ್ಲ ಎಷ್ಟು ಕಾಳಜಿ ವಹಿಸಿತ್ತೊಡಗುತ್ತೀರಿ. ಅದರ ರಕ್ಷಣೆ, ಬೆಳವಣಿಗೆ ಬಗ್ಗೆ ಯೋಜನೆ ರೂಪಿಸಿತ್ತೊಡಗುತ್ತೀರಿ...






ರೈಮಣ್ಣಾ! ನನು ರೆನಮೋ ಕ್ಯಾಸ್ತ್ರೀಯೋ
ಇದು ಹಿರಿತಾರಿ ಬೆಟ್ಟ.. ಇಲ್ಲೇನು ಕೆಲಸ ನಿನಗೆ!!


ಭ್ರಮು ನಿರಸೆನ ಭಗೋಯ
ಕಾಡ್ಗನತೆ ಇದೆ!
ಕಾಡಿನಿಂದ ಜನರನ್ನು ಹಿರಿಕಾರಿ
ಅಳ್ಳುಂದು ದ್ಯೂರಿ ಮ್ಯಾಡಿದೆ!

ಕಾಡಿನ ಯೋಳಿಗ್ನೆ, ರೆಟ್ಲಿಗ್ನೆ, ಯುತಿಯುಳ್ರೆ ಎಣೆಯೋಗರಳ
ಹಿಕ್ಕಿಗಾದಿ ಜನತೆ ಒಂದ್ಯಾದ ಹ್ಯೋರಾಡಬೇಕಿದೆ!

1924ರ ಜ್ಞಾಂಬೆ ಫಾರೆಸ್ಟ್ ಮಿಸ್ಟನ್ಸ್ಟಿಲ್ ರೂಲ್ಸ್ ಇಂಡಿಯನ್ ಫಾರೆಸ್ಟ್ ಸ್ಟಲೆಟನ ಶೆಲಂ 27ರ ಪ್ರಕಾರ 1924ರಲ್ಲಿ ಕುಮಟಾ ತಾಲ್ಲೂಕಿನಲ್ಲಿ ಹಳ ತಾತಿನೆಳ್ಳಿ ಹಿಳ್ಳಗರು 'ಅರಣ್ಯ ಪಂಚಾಯತ್' ರಚನೆಕೊಂಡರು. ಮುತ್ತಲನೆ 225 ಎಕರೆ ಪ್ರದೇಶ ಇದರ ಅಧಿಕಾರಕ್ಕೊಳಪಟ್ಟಿತ್ತು. ಅಂದಿನಿಂದ ಇಂದಿನವರೆಗೆ ಇಲ್ಲಿನ ಜನ ಅರಣ್ಯ ರಕ್ಷಣೆ, ಹ್ಯೋಟಿಗ್ನೆ, ಅರಣ್ಯ ಸಂವರ್ಧನೆ ಕೆಲಸಾದ ಕೊಯಿಕೆ ಮ್ಯಾಡಿಕ್ಕೊಳ್ಳುತ್ತ ಬಂದಿದ್ದಾರೆ. ಇಂಥಸ್ಟೇ ಪ್ರಪಂಚದ ಮೂರೂರು, ಶಿವಮೊಗ್ಗೆಯ ಹ್ಯೊಮ್ಮೂರಿನಲ್ಲು ಇವೆ.




ಬರೇ ಹಿಳ ತಾತಿನೆಳ್ಳಷ್ಟೇ ಅಲ್ಲ, ಒಟ್ಟೂ ನಮ್ಮ
ಜಿಲ್ಲೆಯಲ್ಲೇ 136 ಇಂಥ ಅರಣ್ಯ ಪಂಚಾಯ್ತಿಗಳಿವೆ. ತಾಯ್ದಿ ಇದೆಲ್ಲಾದ ಹಾಗೆ ಎಲ್ಲಾ ಮುಚ್ಚಿ ಹ್ಯೋಯ್ತು!




- త్రీతి ముందు చిన్నోళ్ళకొచ్చే జుస్సాదణో.
- నిమ్మూబది ఎల్ల బగ్గాదబరిమ్మూ అచితారే చిదే.
- తొన్న ట్యూషన్ క్రియాళ్ళ కాడినోళ్ళు య్యుచుదే అచ్చుబడ్డారే నడేదల్లు నింబ్కియ్యోయే చిత్తారిణో నడేసి తిల్కొన రేగిస్కొళ్ళ-త్రుదో.

ఇదు త్రీబాత్రీభుత్తే వ్యవశ్థెయ తొంయ్యాద త్రేగన్నడి



1960 ರಲ್ಲಿ ಸ್ವಾತಂತ್ರ್ಯ ಹೊಂದಿ ಅರಬ್ ಕಾಯ್ದೆ ಜಾರಿ.. ಹೊಸ ಭಾಷ್ಯ



ಅರಣ್ಯ ಹಂಚಿಕಾಯಿಗಳು
ಅರಣ್ಯವನ್ನು ಸಂರಕ್ಷಿಸಿ
ಸ್ಥೋಡಿಕೊಳ್ಳಲ್ಲ.. ಕಾರಣ
ಪರಿಸರವೇ ಕೈ ಸ್ವಾಂತರಿಸಿಬಿಟ್ಟಿದೆ!


ಹಳ್ಳಿಗರಿಂದ
ಕಾಡು ಕೆಸಿಯುವ
ಕೆಲಸಕ್ಕಿ ತ್ಯೋಡಿದೆ
ಕೆರಕಾರ!

ಹಳಕಾಲದ ಅರಣ್ಯ ಹಂಚಿಕಾಯ್ದೆ ಈ
ಭಾರತದ ವಿರುದ್ಧ ನ್ಯಾಯಾಲಯಕ್ಕೆ
ಹೊಸ ದಸ್ತಾವೆಗಳ ತಾಲ ಹೊಸ್ಕೊಂಡಿ
ತನ್ನ ಅಸ್ತಿತ್ವ ಬಲಪಡಿಸಿಕೊಂಡಿದೆ!

* ಇದೇ ರೀತಿ ಹೊಟ್ಟಾದಿ ಮುಂತಾದ ಕಾನೂನುಗಳನ್ನು ಹೊಸ್ಕೊಂಡಿದ್ದು ಜನರ ಕಾನೂನು ಅರಬ್ ಹಂಚಿಕಾಯ್ದೆಗಳಾಗಿವೆ.


ಕಾಲ ಮಿಂಚಿಲ್ಲ

ಓ.ಡಿ.ಎ. ನೆರವಿನೊಂದಿಗೆ ಹೆಕ್ಟೇಮಿಷ್ಟಿದ ಅರಣ್ಯ ಅಭಿವೃದ್ಧಿಗೆ "ಜಂಟಿ ಅರಣ್ಯಯೋಜನೆ" ಮೂಲಕ ಜನತೆಯೊಂದಿಗೆ ಕೈಜೋಡಿಸಿ ಬಂದಿರುವ ಅರಣ್ಯ ಇಲಾಖೆ ತಾತ್ಕಾ ಬದಲಾವಣೆಯೊಂದಿಗೆ ನಿಜವಾದ ಅರ್ಥದ ಜನರ ಸಹಭಾಗಿತ್ವ ಗಮನಿಂತೆ ಮಾಡಿದಲ್ಲಿ ಮಾತ್ರ ಈ ಕಾರ್ಯಕ್ರಮ ಯಶಸ್ವಿಯಾಗಬಲ್ಲದು.



ಅಥವಾ ಇದೂ ಪ್ರಚಲಿತದಲ್ಲಿ
ಸಂಚು ತಾಲು ಇರಲಿ.

ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯ್ಲು



ಪರಿಸರ ಸಂರಕ್ಷಣಾ ಕೇಂದ್ರ

ಹುಲೇಮಳಗಿ ಕಟ್ಟಡ, ಚೌಕೀಮಠ ಶಿರಸಿ (ಉ.ಕ.)-581401

ಮೊದಲ ಮಾತು

ಕರ್ನಾಟಕ ಪಶ್ಚಿಮ ಘಟ್ಟವನ್ನು ಜೀವವೈವಿಧ್ಯದ ಖಜಾನೆ ಎನ್ನುತ್ತೇವೆ. ಕಾಡಿನ ಶ್ರೇಷ್ಠತೆಯ ಮಾತು ಬಂದಾಗೆಲ್ಲ ಸ್ವಾಭಾವಿಕವಾಗಿ ಇಲ್ಲಿನ ಹೆಮ್ಮರಗಳಿಗೆ ಚೌಬೀನೆಯ ಮೌಲ್ಯಕಟ್ಟಿ ಲಕ್ಷ ಕೋಟಿಗಳೇ ಪ್ರಧಾನವಾಗಿ ವಿಜೃಂಭಿಸುತ್ತವೆ. ಕಾಡನ್ನು ಇಂದಿಗೂ ನಾವು ಬ್ರಿಟೀಶರಂತೆ ಆದಾಯದ ಮಾನದಂಡವಿಟ್ಟು ಮಾತ್ರ ನೋಡುವದು ಸರಿಯಲ್ಲ. ಇದು ನೀಡುವ ಉತ್ಪನ್ನಗಳಲ್ಲಿ ಕೇವಲ ನಾಟಾವೊಂದೇ ಪ್ರಧಾನವಲ್ಲ. ಇಲ್ಲಿನ ನಿವಾಸಿಗಳ ದೈನಂದಿನ ಬದುಕಿನಲ್ಲಿ ಕಾಡು, ನಾಟಾಗಳ ಹೊರತಾಗಿಯೇ ಹೆಚ್ಚು ಮಹತ್ವ ಪಡೆದಿದೆ. ಆಹಾರಕ್ಕಾಗಿ ಪೌಷ್ಟಿಕ ಸೊಪ್ಪು, ಗಡ್ಡೆ, ತರಕಾರಿಗಳನ್ನು, ರೋಗರುಜಿನೆಗಳ ನಿಯಂತ್ರಣಕ್ಕಾಗಿ ಗಿಡಮೂಲಿಕೆಗಳನ್ನು ನೀಡುವ ಇದೇ ಕಾಡು ಬಡವರ ಕೈಗೆ ಕಾಸು ಸಂಪಾದನೆಗಾಗಿ ಹಣ್ಣು ಹಂಪಲುಗಳನ್ನು ನೀಡುತ್ತಿದೆ. ಇಲ್ಲಿನ ನಿವಾಸಿಗಳು ಈ ಎಲ್ಲ ಬೇಡಿಕೆಗಳನ್ನು ಕಾಡಿನಿಂದ ನಿರಂತರವಾಗಿ ಪಡೆಯುತ್ತಾರೆ. ಅವರ ಬದುಕಿನ ಸುತ್ತ ಸೋಜಿಗದತ್ತ ಕಣ್ಣು ಹಾಕದೇ ನಾವು ಕಾಡಿನ ಸಂರಕ್ಷಣೆ ಎಂದರೆ ನಾಟಾ ನೀಡುವ ಮರಗಳ ಸಂರಕ್ಷಣೆಗಾಗಿ ಪರಿವರ್ತಿಸಿ ಬೆಳೆಸುವ ಕ್ರಿಯೆಗಳಲ್ಲಿ ಏಕ ಜಾತಿಗೆ ಆದ್ಯತೆ ನೀಡುತ್ತ ಹಲವು ಬಾರಿ ಎಡವಿದ್ದೇವೆ. ಬೆಳೆಸುವಿಕೆಯಲ್ಲಿ ವೈವಿದ್ಯತೆಯನ್ನು ಮೂಲೆಗೆ ತಳ್ಳಿದ್ದೇವೆ. ಇಂದು ಕಾಡಿನ ನಾಶ ನಮ್ಮ ಜನಾಂಗವನ್ನು ಪೌಷ್ಟಿಕಾಂಶಗಳಿಂದ ಬಳಲುವಂತೆ ಮಾಡಿದೆ. ಅನಾರೋಗ್ಯಕ್ಕೆ ಔಷಧ ಸಿಗದಂತಹ ಸ್ಥಿತಿ ತಂದಿದೆ. ಒಂದಾನೊಂದುಕಾಲದಲ್ಲಿ ನೆಮ್ಮದಿಯಿಂದ ಬದುಕಿದವರ ಕಣ್ಣೆದುರೇ ಇವತ್ತು ಕಾಡು ಬರಿದಾಗುತ್ತಿದೆ. ದಿನದ ಅಡುಗೆಗೆ ಬಳಸುತ್ತಿದ್ದ ಸೊಪ್ಪು, ಹಣ್ಣು, ಕಾಯಿಗಳು ಸಿಗುತ್ತಿಲ್ಲ. ಔಷಧ ಮೂಲಿಕೆಯರಸಿ ಬೋಳು ಬಯಲಲ್ಲಿ ಅಲೆವ ಸ್ಥಿತಿ ಬಂದಿದೆ. ಕಾಡೊಳಗೆ ಬೇರೆ ಕೃಷಿ, ಉದ್ಯೋಗದ ಅವಕಾಶವಿಲ್ಲದೇ ಕಿರು ಅರಣ್ಯ ಉತ್ಪನ್ನ ಸಂಗ್ರಹಿಸುವ ಬಡವರು ಬದುಕಿಗಾಗಿ ಗುಳೆ ಹೋಗುವಂತಾಗಿದೆ. ಕಾಡೇ ಬದುಕಾದವರ ಎದೆಯಾಳದ ಮಾತುಗಳಲ್ಲಿ ಅನೂಹ್ಯ ಪರಿಸರದ ದಾಖಲೆಗಳಿವೆ. ಕಾಡಿನ ವೈವಿದ್ಯತೆಯ ಸಂರಕ್ಷಣೆ ಹಾಗೂ ವನವಾಸಿಗರ ಅಭಿವೃದ್ಧಿಯ ದಿಶೆಗೂ ನಿಕಟಸಂಬಂಧಗಳಿವೆ. ಬಳಕೆಯ ಮೇಲೆ ನಾವು ಸ್ವಯಂ ನಿಯಂತ್ರಣ, ಶಿಸ್ತು ರೂಢಿಸಿಕೊಂಡಾಗ ಮಾತ್ರ ಕಾಡನ್ನು ಬೆಳೆಸಿ ಬದುಕನ್ನು ಅರಳಿಸುವ ಕಾರ್ಯ ಸಲೀಸು. ಇದು ಇಂದಿನ ಅನಿವಾರ್ಯತೆ.

ಆದರೆ ಇಂದೇನಾಗಿದೆ? ನೈಸರ್ಗಿಕ ಕಾಡಿನ ನಾಶದ ವೇಗದ ಜೊತೆಗೆ ಇಂದು ಅರಣ್ಯಗಳಲ್ಲಿ ಹಣ್ಣು ಹಂಪಲು, ತೊಗಟೆ, ಗಿಡಗಳೆಂಬ ಕಿರು ಅರಣ್ಯ ಉತ್ಪನ್ನಗಳ ಕೊಯ್ಲು ಅತಿಯಾಗುತ್ತಿದೆ. ಕಾಡು ನಮ್ಮ ಮಿತಿಮೀರಿದ ಹಸ್ತಕ್ಷೇಪವನ್ನು ಸಹಿಸುವ ಕಾಲ ಮುಗಿದಿದೆ. ಇಂದು ಒಂದು ಕಿರು ಅರಣ್ಯ ಉತ್ಪನ್ನ ನೀಡುವ ಸಸ್ಯ ಸಂಕುಲದ ಕಣ್ಮರೆ ಕೇವಲ ಸಸ್ಯದ ಕಣ್ಮರೆಯಲ್ಲ. ಅದರ ಜೊತೆಗೆ ಜನಪದರ ಆಹಾರ , ಅಡಿಗೆ, ಔಷಧಿ, ಕೃಷಿ ಆರೋಗ್ಯದ ಪರಂಪರಾಗತ ಕೊಂಡಿಯ ಶಾಶ್ವತ ನಷ್ಟ ಕೂಡ. ಹಾಗಾಗಿ ಬಳಕೆಯ ಜೊತೆಗೆ ಉಳಿಸುವ ಪಾಠ ಮುಖ್ಯ. ಉಳಿಸುವ ಪಾಠ ಹೇಳಲು ದೂರದ ವಿಜ್ಞಾನಿಗಳು ಬರಬೇಕಾಗಿಲ್ಲ. ನಮ್ಮ ಪರಂಪರೆಯ ಹೆಜ್ಜೆಯಲ್ಲಿ ಇಂತಹ ಸುಸ್ಥಿರ ಕೊಯ್ಲಿನ ಜಾಣ್ಮೆಗಳಿವೆ. ಜಾಗ್ರತಿಯ ಮಾತುಗಳಿವೆ. ಬಳಕೆಯಲ್ಲಿ ಇವನ್ನು ಪಾಲಿಸುವ ಸಂಯಮ ತುರ್ತು ಅಗತ್ಯ. ಕಾಡಿನ ವೈವಿದ್ಯತೆಯ ನಾಶದ ನೋವನ್ನು ಹುಡುಕುತ್ತ ಜನಾಂಗದ ಕಾಡಿನ ಬಳಕೆಯ ಮಜಲುಗಳನ್ನು ಅರಿಯುವ ಒಂದು ಪ್ರಯತ್ನವಾಗಿ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರವು ಕಿರು ಅರಣ್ಯ ಉತ್ಪನ್ನಗಳ ಕುರಿತ ಅಧ್ಯಯನ ನಡೆಸಿದೆ. ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿನ ಉತ್ತರ ಕನ್ನಡ, ಉಡುಪಿ, ದಕ್ಷಿಣಕನ್ನಡ,ಕೊಡಗು, ಚಿಕ್ಕ ಮಗಳೂರು, ಮೈಸೂರು, ಬೆಳಗಾವಿ ಜಿಲ್ಲೆಗಳಲ್ಲಿನ ೧೪ ಪ್ರದೇಶಗಳ ೨೮ ಹಳ್ಳಿಗಳಲ್ಲಿ ಕಿರು ಅರಣ್ಯ ಉತ್ಪನ್ನಗಳ ಕುರಿತ ಅಧ್ಯಯನ ನಡೆಸಲಾಗಿದೆ. ಕಾಡಿನ ಜೊತೆಗೆ ಅನ್ಯೋನ್ಯವಾಗಿ ಬದುಕುತ್ತಿರುವ ೪೮ ಅರಣ್ಯಾವಲಂಬಿ ಸಮುದಾಯಗಳನ್ನು ಸಂಪರ್ಕಿಸಿ ಪಶ್ಚಿಮ ಘಟ್ಟದ ಕಿರು ಅರಣ್ಯ ಉತ್ಪನ್ನಗಳ ಸಸ್ಯ ಜಾತಿ, ಬಳಕೆಯ ವೈವಿದ್ಯತೆ, ಆರ್ಥಿಕ ಲಾಭ, ಗಿಡಮರಗಳ ಮೇಲೆ ಕೊಯ್ಲಿನ ಪರಿಣಾಮಗಳನ್ನು ದಾಖಲಿಸುವ ಕಾರ್ಯಗಳು ನಡೆದಿವೆ. ನಿಸರ್ಗದ ಮೂಲ ನಿಧಿಗೆ ಹಾನಿಯಾಗದಂತೆ ಈ ಉತ್ಪನ್ನಗಳನ್ನು ನಾಜೂಕಾಗಿ ಸಂಗ್ರಹಿಸುವ ವಿಧಾನಗಳನ್ನು ಕಂಡುಕೊಳ್ಳುವದು ಹಾಗೂ ಅರಣ್ಯ ಉತ್ಪನ್ನ ಸಂಗ್ರಾಹಕರನ್ನು ಒಂದುಗೂಡಿಸಿ ಸುಸ್ಥಿರ ಸಂಗ್ರಹಣಾ ವಿಧಾನಗಳನ್ನು ಪ್ರಚಾರಪಡಿಸುವದು ಹಾಗೂ ಸಮಸ್ಯೆಗಳನ್ನು ಅಭ್ಯಸಿಸುವದು ಅಧ್ಯಯನದ ಪ್ರಧಾನ ಅಂಶಗಳಾಗಿವೆ. ಹಳ್ಳಿಗಾಡಿನ ಜನರ, ವನವಾಸಿಗರ ಅರಣ್ಯ ಉತ್ಪನ್ನ ಬಳಕೆಯ ಪಾರಂಪರಿಕ ಜಾಣ್ಮೆಗಳನ್ನು ಗುರುತಿಸಲಾಗಿದೆ. ಜನರ ಸಹಬಾಗಿತ್ವದ ಯಶೋಗಾಥೆಗಳನ್ನು ದಾಖಲಿಸಲಾಗಿದೆ.

ಕರ್ನಾಟಕದ ಪಶ್ಚಿಮ ಘಟ್ಟದ ಹಳ್ಳಿಗರನ್ನು ಖುದ್ದಾಗಿ ಮಾತನಾಡಿಸಿ ಅಪುರೂಪದ ಅಧ್ಯಯನ ನಡೆಸುವಲ್ಲಿ ಪರಿಸರ ಸಂರಕ್ಷಣಾ ಕೇಂದ್ರದೊಂದಿಗೆ ಶ್ರೀ ಬಾಲಚಂದ್ರ ಹೆಗಡೆ ಸಾಯಿಮನೆ ಹಾಗೂ ಶ್ರೀ ನರಸಿಂಹ ಹೆಗಡೆ ಮಾನಿಗದ್ದೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಅಗತ್ಯ ಮಾಹಿತಿ ನೀಡಿ ಹಳ್ಳಿಗರು ಸಹಕರಿಸಿದ್ದಾರೆ. ನಮ್ಮ ಈ ಅಧ್ಯಯನ ವರದಿಯಲ್ಲಿನ ಪ್ರಮುಖ ಅಂಶಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಪ್ರಯತ್ನವಾಗಿ ಪುಸ್ತಕ ತಮ್ಮ ಕೈಗಿಡುತ್ತಿದ್ದೇವೆ. ಅಧ್ಯಯನ ಸಂದೇಶಗಳಿಗೆ ಪೂರಕವಾಗಿ ನೆಚ್ಚಿನ ಕಲಾವಿದ ಶ್ರಿ ಸತೀಶ್ ಯಲ್ಲಾಪುರ ಪರಿಣಾಮಕಾರಿ ಚಿತ್ರಗಳನ್ನು ಬಿಡಿಸಿದ್ದಾರೆ. ಅವರಿಗೂ, ಕರಡು ಪ್ರತಿಯನ್ನು ಪರಿಷ್ಕರಿಸಿ ಸಲಹೆಗಳನ್ನಿತ್ತ ಶ್ರೀ ಶಿವಾನಂದ ಕಳವೆಯವರಿಗೂ ಕೃತಜ್ಞತೆಗಳು. ಇಂದು ಕಾಡಿನ ಕಿರು ಅರಣ್ಯ ಉತ್ಪನ್ನಗಳ ಸಂರಕ್ಷಣೆ ಬಗೆಗೆ ಗಂಭೀರ ಚರ್ಚೆಗಳು ನಡೆಯುತ್ತಿರುವ ಹೊತ್ತಿಗೆ ಈ ಹೊತ್ತಿಗೆಯನ್ನು ನಿಮ್ಮ ಕೈಗೆ ಅರ್ಪಿಸಲು ಸಂತೋಷವಾಗುತ್ತಿದೆ. ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಚಿತ್ರಲೇಖಾ ಮುದ್ರಣಾಲಯದವರಿಗೂ ಪರಿಸರಸಂರಕ್ಷಣಾ ಕೇಂದ್ರದ ಪರವಾಗಿ ಕೃತಜ್ಞತೆಗಳು. ಪುಸ್ತಕ ಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯ್ಲಿನ ಮಾರ್ಗವನ್ನು ತುರ್ತು ಅಗತ್ಯಗಳನ್ನು ಬಿಂಬಿಸಿ ಆ ದಿಶೆಯಲ್ಲಿ ಜನರನ್ನು ಚಿಂತನೆಗೆ ಹಚ್ಚಲು ನೆರವಾದೀತೆಂದು ಆಶಿಸುತ್ತೇವೆ. ತಮ್ಮ ಸಲಹೆ, ಸಹಕಾರಗಳಿಗೆ ಸ್ವಾಗತ.

ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ದಿನಾಂಕ : ೨೦ ಏಪ್ರಿಲ್ ೨೦೦೦

ಕಿರು ಅರಣ್ಯ ಉತ್ಪನ್ನಗಳು ಹಾಗಂದರೇನು ?

ನಾಟಾಗಳನ್ನು ಹೊರತು ಪಡಿಸಿ ಕಾಡಿನಲ್ಲಿ ದೊರಕುವ ಉತ್ಪನ್ನಗಳನ್ನು ಕಿರು ಅರಣ್ಯ ಉತ್ಪನ್ನಗಳೆಂದು ಕರೆಯಲಾಗಿದೆ. ಈ ಉತ್ಪನ್ನಗಳ ಮಹತ್ವವನ್ನು ಗುರುತಿಸಿ ಈಗ ಇವನ್ನು ನಾಟಾ ಹೊರತಾದ ಅರಣ್ಯ ಉತ್ಪನ್ನಗಳೆಂದು ಕರೆಯಲಾಗುತ್ತಿದೆ. ಮುಖ್ಯವಾಗಿ ವಾಣಿಜ್ಯ, ಔಷಧೀಯ ಹಾಗೂ ಗೃಹೋಪಯೋಗಿ ಕಿರು ಅರಣ್ಯದ ಉತ್ಪನ್ನಗಳೆಂದು ಇವನ್ನು ಅಧ್ಯಯನದ ದೃಷ್ಟಿಯಿಂದ ವಿಭಾಗಿಸಲಾಗಿದೆ. ಕೆಲವು ಸಾರಿ ಒಂದೇ ಅರಣ್ಯ ಉತ್ಪನ್ನ ವಾಣಿಜ್ಯ ಹಾಗೂ ಔಷಧೀಯ ಉತ್ಪನ್ನಗಳಾಗಿಯೂ ಉಪಯೋಗವಾಗಬಹುದು.

೧. ವಾಣಿಜ್ಯ ಕಿರು ಅರಣ್ಯ ಉತ್ಪನ್ನಗಳು : ಕಾಡಿನಿಂದ ಸಂಗ್ರಹಿಸಿದ ಉತ್ಪನ್ನಗಳನ್ನು ಹಳ್ಳಿಗರು ವ್ಯಾಪಾರಿಗಳಿಗೆ ಅಥವಾ ಮಾರುಕಟ್ಟೆಯಲ್ಲಿ ಮಾರುವುದನ್ನು ನಾವು ಕಾಣುತ್ತೇವೆ. ಇಲ್ಲಿ ಸಂಗ್ರಾಹಕರ ಪ್ರಮುಖ ಉದ್ದೇಶ ಹಣಗಳಿಸುವುದು. ಇಂತಹ ಅರಣ್ಯ ಉತ್ಪನ್ನ ಸಂಗ್ರಹಿಸಿ ಮಾರುವುದನ್ನೇ ಬದುಕಾಗಿಸಿಕೊಂಡ ಜನಾಂಗಗಳನ್ನು ನಾವು ಪಶ್ಚಿಮಘಟ್ಟದಲ್ಲಿಯೂ ಕಾಣಬಹುದು. ಕಾಡುತ್ಪನ್ನದ ಕೊಯ್ಲು, ಉತ್ಪನ್ನಗಳ ಸ್ಥಳೀಯ ಸಂರಕ್ಷಣೆ, ಮಾರಾಟದ ಪರಿಶ್ರಮದ ಮುಖೇನ ಇವರ ಆರ್ಥಿಕ ಗಳಿಕೆ. ಇದು ಪ್ರಮುಖ ಉದ್ಯೋಗ. ಉಪ್ಪಾಗೆ, ಮುರುಗಲು, ಶೀಗೇಕಾಯಿ, ಅಳಲೇಕಾಯಿ, ಧೂಪ, ದಾಲ್ಚಿನಿ ತೊಗಟೆ ಹಾಗೂ ಮೊಗ್ಗು, ಸುರಗಿ ಹೂವು ಮೊದಲಾದವುಗಳು ಈ ಪಂಕ್ತಿಯಲ್ಲಿ ಬರುತ್ತವೆ.


೨. ಔಷಧೀಯ ಕಿರು ಅರಣ್ಯ ಉತ್ಪನ್ನಗಳು : ನಮ್ಮ ಹಳ್ಳಿಗಾಡಿನಲ್ಲಿ ಕಾಯಿಲೆಗಳಿಗೆ ನಾಟೀ ವೈದ್ಯಕೀಯದ ಬಳಕೆ ಈಗಲೂ ಮಾಮೂಲು. ಕಾಡಿನ ನಾರು, ಬೇರು, ಗಡ್ಡೆ, ತೊಗಟೆ, ಹಣ್ಣು, ಕಾಯಿ, ಚಿಗುರು, ಅಂಟು ಹೀಗೆ ಅರಣ್ಯದ ವೈವಿಧ್ಯಮಯ ಉತ್ಪನ್ನಗಳಲ್ಲಿ ಸಂಜೀವಿನಿಯನ್ನು ಕಂಡು ಇವುಗಳನ್ನು ತಲೆತಲಾಂತರಗಳಿಂದ ಬಳಸಲಾಗುತ್ತಿದೆ. ಇದನ್ನೇ ಇವತ್ತು ಆಧುನಿಕ ವೈದ್ಯಕೀಯ ಲೋಕ ಹೆಚ್ಚಿನ ತಂತ್ರಜ್ಞಾನದ ಮುಖೇನ ಗಿಡಮೂಲಿಕೆಗಳನ್ನೇ ಸಂಸ್ಕರಿಸಿ ಪ್ರಮುಖ ರೋಗಗಳಿಗೆ ಔಷಧ ತಯಾರಿಸುತ್ತಿದೆ. ಈ ಮಧ್ಯೆ ನಮ್ಮ ಹಳ್ಳಿಯ ಜನ ಕಾಡಿನ ಉತ್ಪನ್ನಗಳಿಂದ ಜನ, ಜಾನುವಾರುಗಳ ಔಷಧಕ್ಕಾಗಿ ಸಂಗ್ರಹಿಸುತ್ತಿರುವ ವಸ್ತುಗಳನ್ನು ಔಷಧೀಯ ಕಿರು ಅರಣ್ಯ ಉತ್ಪನ್ನಗಳೆಂದು ಗುರುತಿಸಲಾಗುತ್ತಿದೆ. ಕೊಡಸನ ಬೇರು, ಸೋಮವಾರದ ಗಿಡ, ಹಾಲು ಬಳ್ಳಿ, ಮಧುನಾಶಿ, ಎಕ್ಕೆಗಿಡ, ಬಿಳಿ ಮತ್ತಿ ಮುಂತಾಗಿ ಇಂತಹ ಸಸ್ಯಗಳ ಪಟ್ಟಿ ದೊಡ್ಡದಿದೆ.

೩. ಗೃಹೋಪಯೋಗಿ ಅರಣ್ಯ ಉತ್ಪನ್ನಗಳು: ಕಾಡಿನ ಬದುಕಿನಲ್ಲಿ ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಪ್ರಾಧಾನ್ಯತೆ. ಕೂಗಲ ಬಳ್ಳಿಯ ಕವಳದ ಮರಿಗೆ, ಬೆತ್ತದ ಬುಟ್ಟಿಗಳು, ಕೃಷಿ ಬೇಲಿಗೆ ಬೇಕಾದ ಬಳ್ಳಿಗಳು, ಕೃಷಿರೋಗಕ್ಕೆ ಬಳಸುವ ಗಿಡಮೂಲಿಕೆಗಳು ಹೀಗೆ ಬಳಕೆಯ ಪಟ್ಟಿ ದೊಡ್ಡದು. ಇಲ್ಲಿ ಆಹಾರಕ್ಕಾಗಿ ಹಾಗೂ ಆಹಾರೇತರ ಬಳಕೆಗಾಗಿ ಬಳಸುವ ಉತ್ಪನ್ನಗಳೆಂದು ಪುನಃ ವಿಂಗಡಣೆಯಿದೆ.

ಗೃಹೋಪಯೋಗಿ ಅರಣ್ಯ ಉತ್ಪನ್ನಗಳು

ಆಹಾರ ಉತ್ಪನ್ನಗಳು	ಆಹಾರೇತರ ಉತ್ಪನ್ನಗಳು :
ಕಾಡು ತರಕಾರಿ ಕಾಡಿನ ಹಣ್ಣು ಗಡ್ಡೆ ಗೆಣಸುಗಳು ಉಪ್ಪಿನಕಾಯಿಗೆ ಉಪಯೋಗಿಸುವ ವಸ್ತುಗಳು ಸಂಬಾರ ಪದಾರ್ಥಗಳು ಎಣ್ಣೆ ತೆಗೆಯುವ ವಸ್ತುಗಳು ಮದ್ಯ ತೆಗೆಯುವ ವಸ್ತುಗಳು ಕಷಾಯ ಮತ್ತು ಆರೋಗ್ಯ ವರ್ಧಕ ಪೇಯಗಳು ಆಣಬೆಗಳು ಹಿಟ್ಟು ತಯಾರಿಸಲು ಸಂಗ್ರಹಿಸುವ ಉತ್ಪನ್ನಗಳು ಕಾಡುಪ್ರಾಣಿಗಳು, ಮೀನು ಮುಂತಾದ ಜಲಚರಗಳು	ಕರಕುಶಲ ವಸ್ತುಗಳು ನಾರು, ಬಳ್ಳಿ, ಬೆತ್ತ ಇಂಧನ ಬಣ್ಣಗಳು ಹೊದಿಕೆ ಚಾಪೆ ಹಿಡಿಗಳು ಬೇಲಿ ಕಾಡಿನ ಹೂಗಳು ಧೂಪ, ಧಾರ್ಮಿಕ ಅಂಟು, ವಾರ್ನಿಶ್, ಕಟ್ಟಿಗೆ ಎಣ್ಣೆ ಮೇವು ಜೈವಿಕ ಕ್ರಿಮಿನಾಶಕಗಳು ಕೃಷಿ ಉಪಕರಣಗಳು ಜೈವಿಕ ಗೊಬ್ಬರಗಳು





ನಾಟಾ ಹೊರತಾದ ಅರಣ್ಯ ಉತ್ಪನ್ನಗಳ ಅಧ್ಯಯನ

ಹುಲ್ಲು ಹೊಚ್ಚಿದ ಮನೆ. ವಾಟೆಯ ತಟ್ಟಿಗೆ ಮಣ್ಣು ಮೆತ್ತಿ ಮಾಡಿದ ಗೋಡೆ, ಅಣಲೇಕಾಯಿಯ ಮಶಿಯಿಂದ ಸಾರಿಸಿದ ಕಪ್ಪನೆಯ ನೆಲ. ಬಾಗಿಲ ಸುತ್ತೆಲ್ಲಾ ಶೇಡಿ, ಕೆಮ್ಮಣ್ಣುಗಳಿಂದ ಬಿಡಿಸಿದ ಚಿತ್ರಗಳು, ಜಗುಲಿಯಲ್ಲಿ ಹಾಸಿದ ಎಂಟುಪಟ್ಟಿಯ ಈಚಲ ಚಾಪೆ, ಕೂಗಲಬಳ್ಳಿಯಿಂದ ನೇಯ್ದು ಮಾಡಿದ ಕವಳದ ಬಟ್ಟಲು, ವಾಟೆ ಕತ್ತರಿಸಿ ಮುಚ್ಚಳ ಸಹಿತವಾಗಿ ಮಾಡಿದ ಸುಣ್ಣದ ಡಬ್ಬಿ, ಅಂಗಳದಲ್ಲಿ ಬೆತ್ತವನ್ನು ಸೀಳುತ್ತ ಬುಟ್ಟಿ ನೇಯುತ್ತಿರುವ ಜನರು, ಅಲ್ಲೇ ಪಕ್ಕದಲ್ಲಿ ತೆಳುವಾಗಿ ಕತ್ತರಿಸಿ ಒಣಗಿಸಿದ ವಾಟೆ ಹುಳಿ, ಅಣಲೆಕಾಯಿ, ಅಟ್ಟದಮೇಲೆ ಇಟ್ಟಿರುವ ಬುಟ್ಟಿ, ಕುಕ್ಕೆ, ಹೆಡಿಗೆ, ಚೂಳಿ,ಕಣಜಗಳು, ಒಲೆಯ ಪಕ್ಕದಲ್ಲಿರುವ ಹಿತ್ತಂಡೆ ಹಿಡಿ, ಬೈನೆ ಹರಣಿ, ಬೈನೆ ಬಳ್ಳಿ.....

ಕೇವಲ ೧೫ ವರ್ಷಗಳ ಹಿಂದೆ ಮಲೆನಾಡಿನ ಮೂಲೆಯಲ್ಲಿರುವ ಬಹುಪಾಲು ಅರಣ್ಯಾವಲಂಬಿ ಜನರ ಬದುಕಿನ ನೋಟ ಹೀಗಿತ್ತು.

ಆದರೆ ಈಗ.....?

ಸಿಮೆಂಟು, ಹೆಂಚು ಮನೆಯ ಸ್ವರೂಪ ಬದಲಾಯಿಸಿದರೆ, ಪ್ಲಾಸ್ಟಿಕ್ ಬಕೇಟುಗಳು, ಬೆತ್ತದ ಬುಟ್ಟಿಗಳನ್ನು; ಪೇಟೆ ತರಕಾರಿಗಳು, ಕಾಡಿನ ತರಕಾರಿಗಳನ್ನು, ಕಂಪನಿಯ ಬಣ್ಣಗಳು ಶೇಡಿ ಕೆಮ್ಮಣ್ಣುಗಳ ಚಿತ್ರಗಳನ್ನು ಬದಲಾಯಿಸಿವೆ.



ಕಾಲಕ್ಕೆ ತಕ್ಕಂತೆ ಬದಲಾವಣೆ ಅನಿವಾರ್ಯವಾದರೂ ಇಂಥ ಬದಲಾವಣೆಯೊಂದಿಗೆ ನಮ್ಮ ಪೂರ್ವಜರು ಶತಮಾನಗಳಿಂದ ಗಳಿಸಿದ್ದ ಅಮೂಲ್ಯ ಜ್ಞಾನವನ್ನು ನಮಗರಿವಿಲ್ಲದಂತೆ ಕಳೆದುಕೊಳ್ಳುತ್ತಿದ್ದೇವೆ ಎನ್ನುವುದು ನೆನಪಿಗೆ ಬಂದಾಗ ಕಳವಳವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಶ್ಚಿಮ ಘಟ್ಟಗಳು ಇರುವ ಜಿಲ್ಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ೧೪ ಪ್ರದೇಶದ ೨೮ ಹಳ್ಳಿಗಳ ೪೫ಕ್ಕೂ ಹೆಚ್ಚಿನ ವಿವಿಧ ಅರಣ್ಯಾವಲಂಬಿ ಜಾತಿ/ ಕೋಮಿನ ಜನರನ್ನು ಭೇಟಿಯಾಗಿ, ಕಿರು ಅರಣ್ಯ ಉತ್ಪನ್ನಗಳ ಬಗ್ಗೆ ಅಧ್ಯಯನವನ್ನೊಂದನ್ನು ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ ನಡೆಸಿದೆ. ಪ್ರಮುಖವಾಗಿ,

೧. ಪಶ್ಚಿಮಘಟ್ಟಗಳ ಅರಣ್ಯಗಳಲ್ಲಿನ ಅರಣ್ಯ ಉತ್ಪನ್ನಗಳ ಸ್ಥಿತಿಗಳ ಅಧ್ಯಯನ.

೨. ನಿಸರ್ಗಕ್ಕೆ ಹಾನಿಯಾಗದಂತೆ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ವಿಧಾನಗಳನ್ನು ರೂಪಿಸಿವುದು.

೩. ಅರಣ್ಯ ಉತ್ಪನ್ನ ಸಂಗ್ರಹಕಾರರನ್ನು ಒಂದುಗೂಡಿಸಿ ಸುಸ್ಥಿರ ಸಂಗ್ರಹಣಾ ವಿಧಾನಗಳನ್ನು ಪ್ರಚಾರ ಪಡಿಸುವುದು ಮತ್ತು ಅದರ ಸಮಸ್ಯೆಗಳಿಗೆ ಸ್ಪಂದಿಸುವುದು ಉದ್ದೇಶವಾಗಿತ್ತು.

ಅರಣ್ಯ ಮತ್ತು ಮನುಷ್ಯರ ಸಂಬಂಧ ತುಂಬಾ ಪ್ರಾಚೀನವಾದುದು. ಅನಾದಿ ಕಾಲದಿಂದಲೂ ಇವುಗಳನ್ನು ಉಪಯೋಗಿಸುತ್ತಾ ಬರಲಾಗಿದೆ. ಹಿಂದೊಂದು ಕಾಲವಿತ್ತು: ಮನುಷ್ಯನ ಪ್ರತಿ ಅವಶ್ಯಕತೆಗಳಿಗೂ ಕಾಡು ಮೂಲಾಧಾರವಾಗಿತ್ತು. ಕಾಡಿನಲ್ಲೇ ವಾಸಿಸುತ್ತಿರುವ ಮನುಷ್ಯ ಕಾಡಿನ ವಿವಿಧ ಉಪಯೋಗಗಳನ್ನು ಕಂಡುಕೊಳ್ಳತೊಡಗಿದ. ಆಹಾರಕ್ಕೆ, ಔಷಧಿಗೆ, ಮನೆಬಳಕೆ ಹೀಗೆ ಮನುಷ್ಯನ ಎಲ್ಲ ದೈನಂದಿನ ಅವಶ್ಯಕತೆಗಳನ್ನೂ ಕಾಡು ಪೂರೈಸುತ್ತಿತ್ತು.

ಮೈಸೂರಿನ ಸಮೀಪದ ಜೇನು ಕುರುಬರು, ತೀರ ಇತ್ತೀಚಿನವರೆಗೆ ಅಂದರೆ, ಕೇವಲ ಮೂರು ನಾಲ್ಕು ದಶಕಗಳ ಹಿಂದಿನವರೆಗೆ, ಅರಣ್ಯದಲ್ಲೇ ವಾಸಿಸುತ್ತ ಅಲ್ಲಿಯ ಜೇನು ಮತ್ತು ಗಡ್ಡೆ ಗೆಣಸುಗಳನ್ನು ತಿನ್ನುತ್ತಾ ಬಾಳುತ್ತಿದ್ದರು. ಅಲ್ಲಲ್ಲಿ ಕುಂಬ್ರಿ ಹೊಡೆದು (ದಟ್ಟ ಕಾಡಿನಲ್ಲಿ ಪೊದೆಗಳನ್ನು ಕಡಿದು ಅಲ್ಲಿ ರಾಗಿ ಮೊದಲಾದ ಬೆಳೆಗಳನ್ನು ಬೆಳೆಸುವುದು; ಮುಂದಿನ ವರ್ಷ ಬೇರೆಯದೇ ಪ್ರದೇಶಕ್ಕೆ ಹೋಗಿ ಅಲ್ಲಿ ಪುನಃ ಪೊದೆಗಳನ್ನು ಕಡಿದು...) ಬಾಳುತ್ತಿದ್ದರು. ವರ್ಷದ ಹಲವಾರು ತಿಂಗಳು ಕಾಡಿನಲ್ಲಿ ಸಿಗುವ ಗಡ್ಡೆ ಗೆಣಸುಗಳನ್ನೇ ತಿಂದು ಬದುಕುತ್ತಿದ್ದರು.

ಬೈನೆಯ ತಿರುಳಿನಿಂದ ಸೋಸಿದ ಹಿಟ್ಟನ್ನು ತಿಂಗಳುಗಟ್ಟಲೆ ಆಹಾರವಾಗಿ ಚಿಕ್ಕವರಿರುವಾಗ ಉಪಯೋಗಿಸುತ್ತಿದ್ದನ್ನು ಮಾಗೋಡಿನ ಸಮೀಪದ ಸಿದ್ದಿ ಸಮುದಾಯದ ಮುದುಕ ನರಸ ಸಿದ್ದಿ ನೆನಪಿಸಿಕೊಳ್ಳುತ್ತಾನೆ.

ವೈವಿಧ್ಯಮಯ ಉಪಯೋಗಗಳು

ಆಹಾರಕ್ಕೆ ತರಕಾರಿ, ಗಡ್ಡೆ ಗೆಣಸು; ರುಚಿಗೆ ಕಾಡಿನ ಹಣ್ಣುಗಳು; ಉಪ್ಪಿನ ಕಾಯಿಗಾಗಿ, ಸಂಬಾರ ಪದಾರ್ಥವಾಗಿ,ಖಾದ್ಯ ತೈಲವನ್ನು ತೆಗೆಯಲು, ಮದ್ಯವನ್ನು ತೆಗೆಯಲು, ಎಲ್ಲವೂ ಕಾಡಿನಲ್ಲಿ ಸಿಗುತ್ತವೆ. ಬುಟ್ಟಿ, ಚಾಪೆ, ಕಸಬರಿಗೆ ಹಾಗೂ ಕರಕುಶಲ ವಸ್ತುಗಳನ್ನು ತಯಾರಿಸಲು, ನಾರು, ಬಳ್ಳಿ, ಬಿದಿರು, ಬೆತ್ತ ಮೊದಲಾದವು ಕಾಡಿನಲ್ಲಿ ಸಿಗುತ್ತವೆ. ಮನೆಯ ಹೊದಿಕೆಗೆ, ನೇಗಿಲು ಮೊದಲಾದ ಕೃಷಿ ಸಾಮಗ್ರಿಗಳಿಗೆ, ಪೈರಿಗೆ ರೋಗ ರುಜಿನಗಳು ಬಂದಾಗ ಜೈವಿಕ ಕ್ರಿಮಿನಾಶಕವಾಗಿಯೂ ಸಹ ಉಪಯೋಗವಾಗುತ್ತಿದೆ. ಧೂಪ, ಅಂಟು, ವಾರ್ನಿಶ್, ಕಟ್ಟಿಗೆ, ಎಣ್ಣೆ, ಬಣ್ಣಗಳು, ಇಂಧನಕ್ಕಾಗಿ..... ಹೀಗೆ ಎಲ್ಲದಕ್ಕೂ ಕಾಡು ನಮಗೆ ಬೇಕು.



ಇದಲ್ಲದೆ ಕಾಡಿನ ಉತ್ಪನ್ನಗಳು ಧಾರ್ಮಿಕ ಮಹತ್ವವನ್ನೂ ಪಡೆದಿವೆ. ಹೋಮ ಹವನಗಳಿಗೆ ಅವಶ್ಯಕ ಸಮಿತ್ತುಗಳಾಗಿ, ಅತ್ತಿ, ಆಲ, ಅಶ್ವತ್ಥ, ಖೈರ, ಧೂಪ, ಉತ್ತರಣೆ ಮೊದಲಾದವುಗಳು ಉಪಯೋಗವಾಗುತ್ತಿವೆ. ಕೆಲವೊಂದು ಸಸ್ಯಗಳು ವಿಶಿಷ್ಠ ಉಪಯೋಗಕ್ಕಾಗಿ, ವಿಶೇಷ ಸಂದರ್ಭದಲ್ಲಿ ಉಪಯೋಗವಾಗುತ್ತವೆ. ಉದಾರಣೆಗೆ, ಕೇದಿಗೆ ಮತ್ತು ಲಕ್ಕಿ ಸೊಪ್ಪನ್ನು ದೈನಂದಿನ ಬದುಕಿಗೆ ಸಂಬಂಧಪಟ್ಟ ಎಲ್ಲ ಸ್ಥಳಗಳಲ್ಲಿ ಮೂಡಿಗೆರೆ ಮತ್ತು ಸುತ್ತಮುತ್ತಲಿನ ಜನರು ದೀಪಾವಳಿಯಂದು ಇಡುತ್ತಾರೆ. ಹೀಗೇ, ಶಿರಸಿಯ ಸುತ್ತಮುತ್ತಲಿನ ಹವ್ಯಕರು, ಗೌರಿ ಹೂವನ್ನು ಗಣೇಶ ಚತುರ್ಥಿಯ ಸಂದರ್ಭದಲ್ಲಿ, ಆತ್ತಂಬರ ಸೊಪ್ಪು ಎನ್ನುವ ಬಳ್ಳಿಯ ಎಲೆಯನ್ನು ಭೂಮಿ ಹುಣ್ಣಿಮೆಯ ಸಂದರ್ಭದಲ್ಲಿ, ನೆಲ್ಲಿಯನ್ನು ತುಳಸಿ ಹಬ್ಬದಲ್ಲಿ, ಅಂಕೋಲದ ನಾಡವರು, ಹುಲ್ಲುಮುಂಗ್ರಿ ಹೂವನ್ನು ತುಳಸಿ ಹಬ್ಬದಲ್ಲಿ.... ಹೀಗೆ ಬೇರೆ ಬೇರೆ ಸಮುದಾಯಗಳಿಗೆ, ಪ್ರದೇಶಗಳಿಗೆ ಹಲವಾರು ಧಾರ್ಮಿಕ ಮಹತ್ವದ ಸಸ್ಯಗಳು ಉಪಯೋಗವಲಾಗುತ್ತಿವೆ.

ಒಂಭತ್ತು ಗ್ರಹಗಳಿಗೆ ಒಂದೊಂದು ಗಿಡಗಳಿವೆ. ಸೂರ್ಯ-ಬಿಳಿ ಎಕ್ಕೆ, ಚಂದ್ರ -ಮುತ್ತುಗ,, ಮಂಗಳ-ಖೈರ(ಕದಿರ) , ಬುಧ-ಉತ್ತರಣೆ, ಗುರು-ಅಶ್ವತ್ಥ, ಶುಕ್ರ-ಅತ್ತಿ, ಶನಿ-ಶಮೀಪತ್ರೆ, ರಾಹು-ಗರಿಕೆ, ಕೇತು-ದರ್ಬೆ, ಇವುಗಳ ವನ ನಿರ್ಮಿಸಿ ಪೂಜಿಸುವ ಪದ್ಧತಿ ಪರಂಪರೆಯಿಂದ ಬೆಳೆದು ಬಂದಿದೆ.

ಇನ್ನು ಔಷಧೀಯ ಉಪಯೋಗಗಳಂತೂ ಎಲ್ಲರಿಗೂ ತಿಳಿದೇ ಇದೆ. ಆರಿತಿನದಿಂದ ಹಿಡಿದು ಕೇರಳದ ಕಾಣಿ ಜನರು ಉಪಯೋಗಿಸುತ್ತಿದ್ದ ಜೀವನಿ ಗಿಡದ ವರೆಗೆ ಎಲ್ಲವೂ ಹೊರಜಗತ್ತಿನ ಗಮನವನ್ನು ಸೆಳೆಯುತ್ತಿವೆ.


ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ೩೧೦ಕ್ಕೂ ಹೆಚ್ಚಿನ ಸಂಖ್ಯೆಯ ಕಾಡು ಅರಣ್ಯ ಉತ್ಪನ್ನಗಳನ್ನು ಜನರು ಉಪಯೋಗಿಸುತ್ತಿರುವುದು ನಮ್ಮ ಅಧ್ಯಯನದಿಂದ ಕಂಡು ಬಂದಿವೆ. ಇವು ಬೇರೆ ಬೇರೆ ರೀತಿಯಾಗಿ ಉಪಯೋಗವಾಗುತ್ತಿವೆ. ಈ ಪ್ರದೇಶದಲ್ಲಿ ೪೫ ಅರಣ್ಯ ಉತ್ಪನ್ನಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ೯೦ಕ್ಕೂ ಅಧಿಕ ಉತ್ಪನ್ನಗಳನ್ನು ಆಹಾರಕ್ಕಾಗಿ, ಪಂಗ್ಹೆಪಲಾಗುತ್ತಿದೆ. ಸುಮಾರು ೧೪೦ ಅರಣ್ಯ ಉತ್ಪನ್ನಗಳನ್ನು ಔಷಧಿಯಾಗಿ ಉಪಯೋಗಿಸಲಾಗುತ್ತಿದೆ. ದಾಖಲಾಗದೇ ಇರುವ ಇನ್ನೆಷ್ಟರ ಔಷಧೀಯ ಗುಣಗಳ ಉತ್ಪನ್ನಗಳು ಇನ್ನೆಷ್ಟಿವೆಯೋ?



ಅರಣ್ಯ ಉತ್ಪನ್ನಗಳಿಗೇಕೆ ಮಹತ್ವ ?

ಈ ಅರಣ್ಯ ಉತ್ಪನ್ನಗಳು ಪ್ರಮುಖವಾಗಿ ಎರಡು ಕಾರಣಗಳಿಂದ ನಮಗೆ ಮಹತ್ವದ್ದಾಗಿದೆ. ಮೊದಲನೆಯದಾಗಿ ಪರಿಸರ ಸಂರಕ್ಷಣೆಯಲ್ಲಿ ಅವುಗಳ ಕೊಡುಗೆ ತುಂಬಾ ಪ್ರಾಮುಖ್ಯವಾದದ್ದು ಹಾಗೂ ಕಾಡಿನ ಜನರ ದೈನಂದಿನ ಬದುಕಿನಲ್ಲಿ ಬಳಕೆ.

ಬ್ರಿಟೀಷರ ಕಾಲದಲ್ಲಿ ಸರಕಾರದ ಸ್ವತ್ತಾಗಿ ಪರಿವರ್ತನೆಗೊಂಡು ಕಾಡುಗಳಿಂದ ನಿರಂತರವಾಗಿ ನಾಟಾಗಳನ್ನು ಕಡಿದು ಸರಕಾರದ ಬೊಕ್ಕಸಕ್ಕೆ ಆದಾಯವನ್ನು ಹೆಚ್ಚಿಸಿಕೊಳ್ಳಲಾಗುತ್ತಿತ್ತು. ಆರ್ಥಿಕವಾಗಿ ಅಷ್ಟೇನೂ ಲಾಭದಾಯಕವಾಗದ, ಉತ್ತಮ ಜಾತಿಯ ಮರಗಳು



ಮರ-ಮಟ್ಟು ಸಂಗ್ರಹಣೆ :

೧. ಇಡೀ ಮರಗಳ ಕಡಿತ-ತೀವ್ರ ಕಾಡು ನಾಶ.
೨. ಜೀವ ವೈವಿಧ್ಯತೆಯ ನಾಶವಾಗುತ್ತದೆ.
೩. ಕೆಲವೇ ಕೆಲವು ಜಾತಿಯ ಮರಗಳು ಮಾತ್ರ ಉಪಯೋಗ.
೪. ಪುನರುತ್ಪಾದನೆ ತುಂಬಾ ನಿಧಾನ.
೫. ಕಡಿಮೆ ಜನರಿಗೆ ಉದ್ಯೋಗಾವಕಾಶ.
೬. ಸರಕಾರಕ್ಕೆ, ಇಲಾಖೆಗೆ ಲಾಭ.
೭. ಸಮಾನ್ಯ ಜನರಿಗೆ ಮನೆ ಕಟ್ಟುವದನ್ನು ಬಿಟ್ಟರೆ ಬೇರೆ ಉಪಯೋಗ ಕಡಿಮೆ.
೮. ಭೂ ಸವೆತಗಳು, ಅಂತರ ಜಲ ಕುಸಿತ.


ಕಿರು ಅರಣ್ಯ ಉತ್ಪನ್ನ :

೧. ಕೇವಲ ಹಣ್ಣು, ಎಲೆ ಹೀಗೆ ಕಲವು ಭಾಗಗಳನ್ನು ಮಾತ್ರ ಉಪಯೋಗಿಸಬಹುದು.
೨. ಜೀವ ವೈವಿಧ್ಯತೆಯ ಸಂರಕ್ಷಣೆ
೩. ಬಹುಪಾಲು ಗಿಡ ಮರಗಳು ಒಂದಿಲ್ಲೊಂದು ರೀತಿಯಲ್ಲಿ ಉಪಯೋಗವಾಗುತ್ತವೆ.
೪. ಬೇಗ ಪುನರುತ್ಪಾದಿಸಬಹುದು.
೫. ದೈನಂದಿನ ಉಪಯೋಗ.
೬. ಸಾಮಾನ್ಯ ಜನರಿಗೆ ಹೆಚ್ಚಿನ ಲಾಭ-ಉದ್ಯೋಗಾವಕಾಶ (ಬಡಜನರಿಗೆ/ ಅರಣ್ಯಾವಲಂಬಿತರಿಗೆ)

ಸಿಗದ ಕಾಡು ಗಳನ್ನು ಅವೆಷ್ಟು ಜೀವ ವೈವಿಧ್ಯತೆ ಯನ್ನು ಹೊಂದಿದ್ದರೂ ಕಡಿದು ಬಯಲಾಗಿಸಿ ಸಾಗವಾನಿ, ನೀಲಗಿರಿ ಮೊದಲಾದ ನೆಡುತೋಪು ಗಳನ್ನು ಮಾಡಲಾ ಯಿತು.

ವಾಣಿಜ್ಯ ದೃಷ್ಟಿಯಿಂದ ಮಾತ್ರ ಕಾಡನ್ನು ಬಳಸಿದ್ದರ ಪರಿಣಾಮ ಕಾಡಿನ ನಾಶಕ್ಕೆ ನಾಂದಿಯಾಯಿತು. ನೈಸರ್ಗಿಕ ಕಾಡಿನಲ್ಲಿ ನೂರಾರು ವರ್ಷಗಳಿಂದ ಬೆಳೆದ ಕಾಡನ್ನು ಕಡಿದು ಮರ-ಮಟ್ಟು ಸಂಗ್ರಹಿಸಿದಾಗ ಮತ್ತೆ ಕಾಡು ಮೊದಲಿನಂತಾಗಲು ಅಷ್ಟೇ ವರ್ಷಗಳು ಬೇಕು. ಆಲ್ಲದೇ ಕೆಲವೇ ಕೆಲವು ಜಾತಿಯ ಮರಗಳು ಮಾತ್ರ ವಾಣಿಜ್ಯ ದೃಷ್ಟಿಯಿಂದ ಮಹತ್ವದ್ದಾಗಿದ್ದರಿಂದ ಉಳಿದವುಗಳನ್ನು ನಿರ್ಲಕ್ಷ್ಯಕ್ಕೊಳಗಾದವು.

ಆದರೆ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವಾಗ ಸಾಮಾನ್ಯವಾಗಿ ಇವುಗಳಲ್ಲಿ ಹಣ್ಣು, ಎಲೆ, ಮೊದಲಾದ ಸಸ್ಯಗಳ







ಭಾಗಗಳು ಮಾತ್ರ ಉಪಯೋಗಿಸುವದರಿಂದ ಸುಸ್ಥಿತವಾಗಿ ಸಂಗ್ರಹಿಸಿದರೆ ನೈಸರ್ಗಿಕ ಅರಣ್ಯಕ್ಕೆ ಯಾವುದೇ ರೀತಿಯ ಧಕ್ಕೆಯಾಗದಂತೆ ಉತ್ಪನ್ನಗಳನ್ನು ಸಂಗ್ರಹಿಸಬಹುದು. ನಾವು ಬ್ಯಾಂಕಿನಲ್ಲಿ ನಿಧಿಯಿಟ್ಟು ಬಡ್ಡಿ ಮಾತ್ರ ಪಡೆದ ಹಾಗೆ.


ಕಾಡನ್ನು ಅವಲಂಭಿಸಿದ ಲಕ್ಷಾಂತರ ಜನರು ಈ ಪ್ರದೇಶದಲ್ಲಿ ಬಾಳುತ್ತಿದ್ದಾರೆ. ಅವರೆಲ್ಲರೂ ಕೃಷಿಯಲ್ಲಿ, ದೈನಂದಿನ ಕೆಲಸಗಳಲ್ಲಿ ಹಲವಾರು ರೀತಿಯಲ್ಲಿ ಈ ಅರಣ್ಯ ಉತ್ಪನ್ನಗಳನ್ನು ಅವಲಂಬಿಸಿದ್ದಾರೆ. ರೈತರ ನೇಗಿಲಿನಿಂದ ಹಿಡಿದು ಬೆತ್ತ, ಬಳ್ಳಿ, ಬಿದಿರು, ಹೊದಿಕೆ ಹೀಗೆ ಹಲವಾರು ರೀತಿಯಲ್ಲಿ ಇವು ಉಪಯೋಗವಾಗುತ್ತವೆ.

ತರಕಾರಿಯಾಗಿ, ಸಾಂಬಾರ ಪದಾರ್ಥಗಳಾಗಿ ಖಾದ್ಯತೈಲಗಳಾಗಿ ಕೊನೆಗೆ ಉಪ್ಪಿನಕಾಯಿಗೂ ಸಹ ಕಾಡಿನ ಉತ್ಪನ್ನಗಳು ನಮಗೆ ಬೇಕು. ಅವು ನಮ್ಮ ದಿನಚರಿಯ ಅವಿಭಾಜ್ಯ ಅಂಗಗಳು.


ಆದರೆ ಇಂದು ಈ ಉತ್ಪನ್ನಗಳಿಗೆ ಏನಾಗುತ್ತಿದೆ?









ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕಾಡಿನಲ್ಲಿ ಯತೇಚ್ಛವಾಗಿ ಸಿಗುತ್ತಿದ್ದ ಉಪ್ಪಾಗೆ ಹಣ್ಣಿನ ಬೀಜಗಳನ್ನು ಮಾತ್ರ ಈ ಪ್ರದೇಶದ ಸ್ತ್ರೀಯರು ಸಂಗ್ರಹಿಸುತ್ತಿದ್ದರು. ಬೀಜದ ಎಣ್ಣೆ ತೆಗೆದು ತುಪ್ಪವಾಗಿ ಉಪಯೋಗಿಸುತ್ತಿದ್ದರು.











ಈಗ ಉಪ್ಪಾಗೆ ಸಿಪ್ಪೆಗೆ ಭಾರೀ ಬೆಲೆ ಬಂದಿದೆ. ಸಂಗ್ರಾಹಕರ ನಡುವೆ ಹೆಚ್ಚೆಚ್ಚು ಸಂಗ್ರಹಿಸಲು ಸ್ಪರ್ಧೆ ಏರ್ಪಟ್ಟಿದೆ.

ಉಪ್ಪಾಗೆ ಇಂದು -







ಕೊಬ್ಬನ್ನು ಇಳಿಸುವ ಗುಣ ಇರುವ ಹೆಡ್ರಾಕ್ಸಿಸಿಟ್ರಿಕ್ ಎಸಿಡ್‌ನ್ನು ಉಪ್ಪಾಗೆ ಸಿಪ್ಪೆಯಿಂದ ತೆಗೆಯುತ್ತಾರೆ.
ಇದಕ್ಕೆ ವಿದೇಶದಿಂದ ಭಾರೀ ಬೇಡಿಕೆ.
ಹಾಗಾಗಿ ಬೆಲೆ ಹೆಚ್ಚಳ.

ಆಸೆಯೇ ದುಃಖಕ್ಕೆ ಕಾರಣ

ಎಷ್ಟು ಕಿಳಿದಿ ಹಾಗೆ ಬಿಡ್ಡಾನೆ
ಸಿಪ್ಪೆಯೂ ಕೆಡದಿಯಲ್ಲುವ
ಲಕ್ಷಣ ಮೂರಾಯಿತೇ!









ಬಿದ್ದ ಹಣ್ಣು ಆರಿಸಿ
ಸಿಪ್ಪೆ ಸಂಗ್ರಹಿಸದೇ..
ಹೀಗೆ ಕಾಡಿದರೆ
ಮುಂದೆ ಹೇಗಯ್ಯಾ?


ಹಾಗೇ ದಾಲ್ಚಿನ್ನಿ ಮತ್ತು ಶೀಗೆ ಇವುಗಳನ್ನು ಸಂಗ್ರಹಿಸುವ ರೀತಿಯೇ ಇದರ ನಾಶಕ್ಕೆ ಕಾರಣವಾಗಿದೆ. ಬೆಂಕಿ, ಒಣ ಮರಗಳ ಕಡಿತದಿಂದಾಗಿ ನೈಸರ್ಗಿಕ ಪೋಟರೆಗಳ ನಾಶ, ಮರಿ ರೊಟ್ಟು ಇರುವಾಗಲೇ ಸಂಗ್ರಹಣೆ, ಸಂಗ್ರಹಿಸುವಾಗ ಬೆಂಕಿ ಹಚ್ಚಿ ಹುಳು ಸಾಯುವುದು, ಕೃಷಿಯಲ್ಲಿ ಅತಿಯಾದ ಕೀಟನಾಶಕಗಳ ಬಳಕೆಯಿಂದ ಮಕರಂದ ವಿಷವಾಗುತ್ತಿದೆ. ಹಾಗಾಗಿ ಜೇನು ಸಹ ಈಗ ಕಡಿಮೆಯಾಗುತ್ತಿದೆ.





ರಾಜ್ಯದಲ್ಲಿ ೮೨-೮೩ರಲ್ಲಿ ದಾಖಲೆ ಕರ್ಪ ಟನ್ ಧೂಪದ ಅಂಟು ಸಂಗ್ರಹವಾಗಿತ್ತು. ೯೨-೯೪ರಲ್ಲಿ ದೊರಕಿದ್ದು ಕೇವಲ ೪ ಟನ್ ಮಾತ್ರ! ಈಗ ಧೂಪ ಸಂಗ್ರಹಣೆ ನಿಷೇಧಿಸಲಾಗಿದೆ.

ಧೂಪವನ್ನು ಸಂಗ್ರಹಿಸಲು ಮರದ ಕಾಂಡವನ್ನು ದೊಡ್ಡದಾಗಿ ಕೆತ್ತಿ ಸಂಗ್ರಹಿಸುವುದರಿಂದ ಮರಗಳು ನಾಶವಾಗತೊಡಗಿದವು. ಈಗ ಧೂಪದ ಮರಗಳೇ ಅಪರೂಪವಾಗುತ್ತಿವೆ. ಪಾರಿವಾಳದ ಜಾತಿಗೆ ಸೇರಿದ ಧೂಪದ ಹಕ್ಕಿ ಎಂದು ಸ್ಥಳೀಯರಿಂದ ಕರೆಯಲ್ಪಡುವ ಒಂದು ಜಾತಿಯ ಪಕ್ಷಿ ಈ ಸಸ್ಯದ ಬೀಜ ಪ್ರಸಾರಕ್ಕೆ ಮತ್ತು ಪುನರುತ್ಪಾದನೆಗೆ ಸಹಾಯಕವಾಗುತ್ತಿತ್ತು ಎಂದು ಸ್ಥಳೀಯ ಅನೇಕರು ಅಭಿಪ್ರಾಯಿಸುತ್ತಾರೆ. ಧೂಪದ ಮರಗಳ ನಾಶದಿಂದಾಗಿ ಈ ಪಕ್ಷಿಗಳೂ ಸಹ ವನಾಶದಂಚಿನಲ್ಲಿ ಇವುಗಳ ನಡುವಿನ ಸಂಕೀರ್ಣ ಸಂಬಂಧದ ಬಗ್ಗೆ ಅಧ್ಯಯನ ನಡೆಸಬೇಕಾಗಿದೆ.




ಧೂಪದ ಹಕ್ಕಿ (Imperial Pegeon)

ನಾಲ್ಕು ದಿಗಳಿಂದ ಹುಡುಕಾಟ ನಡೆಸಿದ್ದೇನೆ. ಎತ್ತರವೂ ವಿಶಾಲವೂ ಆದ ಮರ ಸಿಕ್ತಾನೇ ಇಲ್ಲ...



ಅಂಥ ಮರಗಳನ್ನು ಮನುಷ್ಯರು ಕಳೆಸಿದ್ದರೆ ತಾನೇ ನಾವು ಗೂಡು ಕಟ್ಟುವುದು

ಬಂದೇ ಜಾತಿಯ ಹುರಿಗಳ ಪ್ಲಾಂಟೇಶನ್ನು. ಹ್ಯೂಗಳೇ ಇಲ್ಲ




ಕೆಳಗಡೆ ನದಿಗಳೂ ಇಲ್ಲ, ಹೂಗಳೂ ಇಲ್ಲ


ಹ್ಯೂಗಳೇ ಇಲ್ಲ.. ಅಂದ್ಮಾಗೆ ಜೇನುತುಪ್ಪವ ಬ್ಯಾಟಲ್ಲೇ ನಾನು ಶರಗು ಹ್ಯೋಗ--ಬೇಕಾಗುತ್ತದೆ



ಕಾಡಿನಲ್ಲಿ ಅಂಟುವಾಳ ಕಾಯಿಯ(SOAPNUT) ಮರಗಳ ಕೆಳಗೆ ಬಂಸಾಗಿದೆ. ಜೇನುತುಪ್ಪಗಳಲ್ಲಿ ಅಂಟುವಾಳಕಾಯಿಯ ಅಂಶ ಇದ್ದು ಕೆಲವು ಬ್ಯಾಟರಿಗಳನ್ನೇ ಕೊಲ್ಲುತ್ತವೆ.



ಅಂಟುವಾಳದ ಹೂವು ಹೀರಿಕಟಾಗಿದೆ.. ಬೇರೆ ಬೇರೆ ಹೂಗಳೂ ಸಾಕಷ್ಟಿವೆ ಬಟಿಲಿವೆ.. ಅದಕ್ಕೇ ಎಲ್ಲಾ ಪೆಟ್ಟಿಗೆಗಳೂ ಹೊಸದಿವೆ!



ದಕ್ಷಿಣ ಕನ್ನಡದ ಕಾಡುಗಳಲ್ಲಿ ವಾಸಿಸುತ್ತಿರುವ ಮಲೆಕುಡಿಯರು ೧೭೩ ಸಸ್ಯಗಳು ಔಷಧಿಗಾಗಿಯೂ, ೧೪ ಸಸ್ಯಗಳನ್ನು ಬುಟ್ಟಿಮೊದಲಾದ ಕೈಗಾರಿಕಾ ವಸ್ತುಗಳನ್ನು ನೇಯಲು, ೫೭ ಸಸ್ಯಗಳನ್ನು ಆಹಾರವಾಗಿಯೂ, ೧೩ ಜಾತಿಯ ಸಸ್ಯಗಳನ್ನು ಮೀನು ಹಿಡಿಯಲೂ ಉಪಯೋಗಿಸುತ್ತಿದ್ದಾರೆ.

೧೮೬೭ ಇಸ್ವಿಗಿಂತ ಮುಂಚೆಯೇ ಅಳಲೆ ಕಾಯಿಯ ಉಪಯೋಗ ತಿಳಿದಿತ್ತು. ಹಳಿಯಾಳದ ಹಳ್ಳಿಗರು ಇದನ್ನು ಬಣ್ಣಕ್ಕೆ, ಚರ್ಮ ಹದಗೊಳಿಸಲು ಸಂಗ್ರಹಿಸುತ್ತಿದ್ದರು. ಹಿಂದಿನ ಜನ ಬರವಣಿಗೆಯ ಕಪ್ಪು ಶಾಯಿಗೆ, ಮಣ್ಣಿನ ನೆಲಕ್ಕೆ ಸಾರಣೆ ಮಾಡಲು ಇದನ್ನು ಬಳಸುತ್ತಿದ್ದರು.

ಈ ಸಸ್ಯ ನೈಸರ್ಗಿಕವಾಗಿ ಬೆಳೆಯಲು ತುಂಬಾ ಕಷ್ಟ. ದಪ್ಪ ಕವಚ ಹೊಂದಿರುವ ಈ ಕಾಯಿಗಳ ಬೀಜಗಳು ದನಗಳ ಕಾಲ ತುಳಿತಕ್ಕೆ ಸಿಕ್ಕಿ ಒಡೆಯಬೇಕು. ನಂತರ ಮಳೆಗಾಲ ಬಂದಾಗ ಮೊಳಕೆ ಯೊಡೆಯಬೇಕು. ಆದರೆ ಈ ಕಾಡಿನಲ್ಲಿ ಮೇಯಲು ದನಗಳಿಗೆಲ್ಲಿ ಅವಕಾಶವಿದೆ ? ಹೀಗಾಗಿ ಇತ್ತೀಚೆಗೆ ಅಣಲೆ ಕಾಯಿ ಮೊಳಕೆಯೊಡೆಯುವುದೇ ಕಡಿಮೆಯಾಗಿದೆ.



ಶಾಯಿ ತಯಾರಿಕೆ


- ಅಣಲೆ ಕಾಯಿ ಜಪ್ಪಿ ನೀರಿನಲ್ಲಿ ಒಂದು ವಾರಕಾಲ ನೆನಹಾಕುವುದು.
- ನಂತರ ಒಂದು ಕಬ್ಬಿಣದ ತುಂಡನ್ನು ಮತ್ತು ಹಿರೇಕಸ(ಆಯುರ್ವೇದೀಯ ವಸ್ತು) ಸೇರಿಸಿ ಬಂಕಿಯ ಮೇಲೆ ಬಿಸಿ ಮಾಡಬೇಕು. ಶಾಯಿಯ ಹದ ಬರುವ ತನಕ ಬತ್ತಿಸಬೇಕು.

ಬೇಡ್ತಿ ನದಿಯ ಅಂಚಿನ ಕಾಡು ಕೊಳ್ಳ ತಿರುಗುವುದು ಶೇನಾ ಸಿದ್ದಿಯ ಕಸುಬು. ಕಾಡಿನ ಜೇನು, ಅಂಟುವಾಳ, ಶೀಗೇಕಾಯಿ, ಅಪ್ಪೆಮಾವಿನ ಮಿಡಿ, ರಾಮಪತ್ರೆ, ಮುರುಗಲು ಹೀಗೆ ಕಾಡಿನ ಹಣ್ಣು ಹಂಸಲುಗಳು ಕೆರು ಅರಣ್ಯ ಉತ್ಪನ್ನ ಸಂಗ್ರಹಿಸುವನು. ಇವನ್ನು ವಾರಿ ಸಿಗುವ ಬೂರುಸಾರು ಕಾಸರ್ಲ್ ಜೇನಾನ. ಇದಕ್ಕಾಗಿ ಕಾಡರ್ಲ್ಲಿ ದಿನಂಪ್ರತಿ ೨೦–೨೫ ಕಿ.ಮೀ ಪಾರಣಿ. ಕೊರೆವ ಚಳಿ ಇರಲಿ, ಸುರಿವ ಮಳೆ ಬರಲಿ, ನಡು ಬೇಸಿಗೆ ಇರಲಿ ಕಾಡು ಸುತ್ತದಿದ್ದರೆ ಇವನ ಹಸಿವು ತೀರುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಹಿತ್ಲಳ್ಳಿ ಸನಿಹದ ಪುಲ್ಲೇಮನೆಯ ಒಂಭತ್ತರ ಹರೆಯದ ಶೇನಾ ಸಿದ್ದಿಯ ದಿನಚರಿಯು ಬಹುಪಾಲು ಹೆಜ್ಜೇನುಗಳು ಈಗಲೂ ಕಾಡಿಗೆ ಮೀಸಲು ಹಳೆ ದಂಡೆಯಲ್ಲಿ ಮಾಡಿದ ಪೊಟರೆಯೊಂದಕ್ಕೆ ಪ್ರತಿವರ್ಷ ಜೇನು ಬರುತ್ತದೆ. ಕಳೆದ ಐದಾರು ವರ್ಷಗಳಿಂದ ಈತ ತೆಗೆಯುತ್ತಿದ್ದಾನೆ. ಮಾರಿದ ಪೊಟರೆ ಕಡಿದು ಜೇನು ತೆಗೆಯುವಾಗ ಸಿಕ್ಕಾಪಟ್ಟೆ ಕಡಿದು ಜೇನಿನ ಈ ವಾಸಸ್ಥಾನ ಹಾಳು ಮಾಡಬಾರದು. ಕಡಿದ ದಾಗದಲ್ಲಿ ಪೊಟರೆಗೆ ಪುಟ್ಟ ಪುಟ್ಟ ಕಲ್ಲುಗಳನ್ನು ಹಾಕಬೇಕು. ಹೀಗೆ ಮಾಡುವುದರಿಂದ ತಪ್ಪದೇ ಆ ಮಾದಕ್ಕೆ ಜೇನು ಬರುತ್ತವೆ. ಹೀಗೆ ಬೇಡ್ತಿಕೊಳ್ಳದ ಕಾಡಿನಲ್ಲಿ ಹಲವು ಪೊಟರೆಗಳನ್ನು ನಂಬಿಕ್ಷಿಸಿಕೊಂಡಿರುವ ಶೇನು ಪ್ರತಿ ವರ್ಷ ತಾನು ಪೋಷಾನವಾಗಿರಿಸಿಕೊಂಡ ಮಾದಗಳಿಂದ ೧೦–೧೫ ಜೇನು ತೆಗೆಯುತ್ತಾನೆ.


ಕಾಡಿನ ಟೊಳ್ಳು ಕುಂಟೆ ತಂದು ಜೇನುಮೇಣ ಮೆತ್ತಿಡುತ್ತಿದ್ದ. ಮೇಣದ ವಾಸನೆ ಗ್ರಹಿಸಿ ಕಾಡಿನ ಜೇನುಗಳು ಶೇನುನ ಕುಂಟೆಗೆ ಬರುತ್ತಿದ್ದವು. ಹೀಗೆ ಗುಡಿಸಲು ಸನಿಹ ನಾಲ್ಕಾರು ಜೇನು ಗೂಡುಗಳನ್ನು ಕುಂಟೆಯಲ್ಲಿ ಸುಲಭವಾಗಿ ಸಾಕುತ್ತಿದ್ದ. ಆದರೆ ಈಗ ಕಾಡಿನಲ್ಲೇ ಜೇನು ಕುಟುಂಬಗಳು ಕ್ಷೀಣಿಸಿದ ಮೇಲೆ ಈ ಸಾಂಪ್ರದಾಯಿಕ ಸಾಕಣೆ ಇತಿಹಾಸದ ಪುಟಕ್ಕೆ ಸೇರಿದೆ. ಕೇವಲ ನಾಲ್ಕು ವರ್ಷದ ಹಿಂದೆ ದಿನಕ್ಕೆ ೨–೩ ತಾಡವಿ ಜೇನು ತೆಗೆಯುತ್ತಿದ್ದ. ಇಂದು ಅದೇ ಕಾಡಲ್ಲಿ ದಿನಕ್ಕೆ ಒಂದು ಸಿಗುವುದೂ ಕಷ್ಟ." ಹಿಂದೆ ಒಂದು ಜೇನು ತೆಗೆದ್ರೆ ಮೂರು ದಿನದ ಪಗಾರು ಹುಟ್ಟುವಷ್ಟು ತುಪ್ಪ ಸಿಗುತ್ತಿತ್ತು. ಆದರೆ ಈಗ ಜೇನಿನಾಗೆ ತುಪ್ಪಾನೇ ಇರಲ್ಲ ಬ್ಯಾ" ಜೇನು ತುಂಬಿದ ಶೇನು ಅಲವತ್ತುಕೊಳ್ಳುತ್ತಾನೆ. ಹಿಂದೆ ಜೇನು ತುಪ್ಪ, ಮೇಣ ಮಾರುತ್ತಿದ್ದ ಈತ ಈಗ ಜೇನುಗೂಡನ್ನೇ ಹಿಡಿದು ಪೆಟ್ಟಿಗೆಯಲ್ಲಿ ಸಾಕಾವವರಿಗೆ ಮಾರುತ್ತಿದ್ದಾನೆ. ಜೇನು ತುಪ್ಪಕ್ಕೆ ೬೦–೭೦ ರೂಪಾಯಿ, ಜೇನು ಗೂಡನ್ನು ೫೦ ರೂಪಾಯಿಗೆ ಮಾರಿ ಬದುಕುತ್ತಾನೆ. ಡಿಸೆಂಬರ್ ಹಾಗೂ ಮೇ, ಜೂನ್ ತಿಂಗಳಲ್ಲಿ ಜೇನಿನ ಅವಲಂಬನೆ. ನಂತರದ ದಿನಗಳಲ್ಲಿ ಬದಿರುಗಳಿಗಾಗಿ ಏಣಿ ತಯಾರಿಸಿ ಕೃಷಿಕರಿಗೆ ಮಾರುವುದು, ದಾಬ್ಬಣಿ ಮೊಗ್ಗು, ಕಾಳು ಮೆಣಸು , ವಾಟೆಕಾಯಿ, ಶೀಗೇಕಾಯಿ ಕೊಯ್ಯುತ್ತ ಜೀವನ.


ಇದು ಕಾಡಿನ ಸ್ಥಿತಿಯಾದರೆ, ಇತ್ತ ಸಂಗ್ರಹಿಸುವವನ ಸ್ಥಿತಿಯೂ ಸಹ ಉತ್ತಮವಾಗಿಲ್ಲ. ಗುತ್ತಿಗೆ ನೀಡುವ ಅರಣ್ಯ ಇಲಾಖೆಯ ನೀತಿಯಿಂದಾಗಿ, ಮಧ್ಯವರ್ತಿಗಳಿಗೇ ಹೆಚ್ಚಿನ ಲಾಭಸಿಗುತ್ತಿದೆ. ಸಂಗ್ರಾಹಕ ಸದಾ ಶೋಷಿತನಾಗುತ್ತಿದ್ದಾನೆ.


ಸಂಗ್ರಹಿಸುವವನ ಸಂಗತಿ...














ಕುಶಲ ಕರ್ಮಿಗಳಿಗೆ ಸಹಾಯವಾಗುವ ನೆಪದಲ್ಲಿ ಕೆಲವು ವರ್ಷಗಳ ಹಿಂದೆ ಸರ ಕಾರ ಕಾಡಿನಿಂದ ಬೆತ್ತವನ್ನು ಸಂಗ್ರಹಿಸಲು ಗುತ್ತಿಗೆ ನೀಡಲು ಪ್ರಾರಂಭಿಸಿತು. ಅಲ್ಲದೇ ಪಾರಂಪರಿಕವಾಗಿ ಬೆತ್ತವನ್ನು ಉಪಯೋಗಿಸುವ ಬಡಜನರು ಇದನ್ನು ಕಾಡಿನಿಂದ ನೇರವಾಗಿ ಸಂಗ್ರಹಿಸುವುದನ್ನು ನಿಷೇ ಧಿಸಿತು.




ಸ್ಥಳೀಯ ಕುಶಲಕರ್ಮಿ ಗಳು ಎಂದೂ ಎಳೆಯ ಬೆತ್ತ ಗಳನ್ನು, ಅವರಿಗದು ಉಪ ಯೋಗವಾಗದೇ ಇರುವುದರಿಂದ, ತರುತ್ತಿರಲಿಲ್ಲ. ಆದರೆ ಹೊರಗಿನ ಗುತ್ತಿಗೆದಾರರು ಕೇವಲ ಹಣದ ಆಮಿಶದಿಂದ ಎಳೆಯ ಬೆತ್ತಗಳನ್ನೂ ಸಂಗ್ರಹಿಸತೊಡಗಿದರಲ್ಲದೇ, ಉಳಿದ ಕಾಡಿನ ಸಂಪತ್ತಿಗೂ ಗಣನೀಯ ಹಾನಿಯನ್ನುಂಟು ಮಾಡಿದರು; ಕಾಡಿನ ನಾಶಕ್ಕೆ ಕಾರಣರಾದರು. ಇದರ ಪರಿಣಾಮ ವಾಗಿ, ಈ ಕುಶಲಕರ್ಮಿಗಳ ಇಂದಿನ ಪೀಳಿಗೆಯಲ್ಲಿ ಈ ಕಸುಬೇ ಮರೆಯಾಗುತ್ತಿದೆ; ಏಕೆಂದರೆ, ಅವರಿಗೆ ಬೆತ್ತವೇ ಸಿಗುತ್ತಿಲ್ಲ. ಇಂದಿನ ವಿಪರ್ಯಾಸವೆಂದರೆ, ಪೇಟೆಯ ಶ್ರೀಮಂತರಿಗೆ ಬೆತ್ತದ ಕುರ್ಚಿಗಳು ಸಿಗುವಷ್ಟು ಸುಲಭವಾಗಿ, ಕಾಡಿನಂಚಿನಲ್ಲಿ ವಾಸಿಸುವ ಕುಶಲಕರ್ಮಿಗೆ, ಹಳ್ಳಿಯ ರೈತನಿಗೆ, ಬೆತ್ತ, ಬೆತ್ತದ ಬುಟ್ಟಿ ಸಿಗುತ್ತಿಲ್ಲ.





ಮರೆಯಾಗುತ್ತಿರುವ ನಮ್ಮ ಪಾರಂಪರಿಕ ವಿಧಾನಗಳು :


ಕಾಲ ಬದಲಾದಂತೆ ನಮ್ಮ ಹಳೆಕಾಲದ ಜ್ಞಾನ ಕಡಿಮೆಯಾಗುತ್ತಿದೆ. ಮೀನು ಹಿಡಿಯುವುದರಿಂದ ಹಿಡಿದು, ಕೀಟನಾಶಕಗಳವರೆಗೆ ಕಾಡಿನ ಉತ್ಪನ್ನಗಳ ಉಪಯೋಗವನ್ನು ನಮ್ಮ ಹಿಂದಿನವರು ಕಂಡುಕೊಂಡಿದ್ದರು. ಆರಣ್ಯಾವಲಂಬಿ ಜನರು ಮೀನನ್ನೂ ಸಹ ಕಾಡಿನ ಸಸ್ಯಗಳನ್ನು ಉಪಯೋಗಿಸಿಯೇ ಹಿಡಿಯುತ್ತಿದ್ದರು. ಮೊದಲೇ ತಿಳಿಸಿದಂತೆ, ಮಲೆಕುಡಿಯರು ೧೪ ಜಾತಿಯ ಸಸ್ಯಗಳನ್ನು ಈ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದರು. ಅಂತಹ ಪದ್ಧತಿಯಲ್ಲಿ ಮೀನುಗಳನ್ನು ಪ್ರಜ್ಞೆ ತಪ್ಪಿಸಿ, ಕೇವಲ ದೊಡ್ಡ ದೊಡ್ಡ ಮೀನುಗಳನ್ನು ಮಾತ್ರ ಹಿಡಿಯಲಾಗುತ್ತಿತ್ತು. ನೀರಿಗೆ ಮುಕ್ಕಡದ ಸೊಪ್ಪು, ಕಾರೆಕಾಯಿ, ಮೊದಲಾದ ವನಸ್ಪತಿಗಳನ್ನು ನೀರಿನಲ್ಲಿ ಜಜ್ಜಿ ಹಾಕುತ್ತಿದ್ದರು. ಮೀನು ಪ್ರಜ್ಞೆ ತಪ್ಪಿ ಬಿದ್ದಾಗ ವಿಶೇಷವಾಗಿ ಬೆತ್ತದಿಂದ ತಯಾರಿಸಿದ ಉಪಕರಣದಿಂದ ದೊಡ್ಡ ಮೀನುಗಳನ್ನಷ್ಟೆ ಸಂಗ್ರಹಿಸುತ್ತಿದ್ದರು. ಆದರೆ ಈಗೀಗ ಕೈ ಬಾಂಬುಗಳನ್ನು ಹಾಕಿ ಮೀನು ಹಿಡಿಯುವುದು ಪ್ರಚಲಿತವಾಗುತ್ತಿದೆ. ಇದು ಕಡಿಮೆ ಶ್ರಮದಲ್ಲಿ ಹೆಚ್ಚು ಮೀನುಗಳನ್ನು ಜೆಲಿಟಿನ್ ಕಡ್ಡಿಗಳನ್ನು ಹಿಡಿಯಬಹುದೆಂಬ ಕಾರಣಕ್ಕಾಗಿ ಜನಪ್ರಿಯವಾಗುತ್ತಿದೆ. ಆದರೆ ಈ ಪದ್ಧತಿಯಿಂದ ನೀರಿಗೆ ವಿಷ ಪ್ರಸನವಾಗಿ ಮೀನಿನ ಮರಿಗಳು ಸಾಯುತ್ತವೆ.




ಗದ್ದೆಗೆ ರೋಗ ಬಂದಾಗ ಮುಕ್ಕಡದ ಸೊಪ್ಪು ಕಾಸರಕ ಮುಂತಾದ ವನಸ್ಪತಿಗಳನ್ನು ಉಪಯೋಗಿಸುತ್ತಿದ್ದರು. ಈಗ ರಾಸಾಯನಿಕ ಕೀಟನಾಶಕಗಳನ್ನು ಉಪಯೋಗಿಸಿ, ಇಡೀ ಕೀಟಲೋಕದ ಜೀವ ಸರಪಳಿಯೇ ಏರುಪೇರಾಗಿದೆ. ಬೆಳೆಗಳಿಗೆ ಕೀಟಗಳ ಹಾವಳಿ ಹೆಚ್ಚಾಗಿದೆ. ಮೊದಲು ಉಪಯೋಗಿಸುತ್ತಿದ್ದ ಜೈವಿಕ ಕೀಟನಾಶಕಗಳು, ಸಸ್ಯ ಜನ್ಯ ಔಷಧಿಗಳು ಪರಿಣಾಮ ಬೀರುತ್ತಿಲ್ಲ. ಮೊದಲಾದರೆ ಮುಕ್ಕಡದ ಸೊಪ್ಪನ್ನು ಗದ್ದೆಗೆ ಪ್ರಯೋಗಿಸಿದಾಗ, ಕೀಟಗಳು ಪ್ರಜ್ಞೆ ತಪ್ಪಿ ಬೀಳುತ್ತಿದ್ದವು, ಅಥವಾ ಸಾಯುತ್ತಿದ್ದವು. ಅಂಥವನ್ನು ಅಲ್ಲೇ ಇರುವ ಕಪ್ಪೆಗಳು ಹಿಡಿದು ತಿಂದು ಕೀಟಗಳನ್ನು ನಿಯಂತ್ರಣಗೊಲಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದವು. ಆದರೆ ಈಗಿನ ರಾಸಾಯನಿಕ ಕೀಟನಾಶಕಗಳು ಕಪ್ಪೆಗಳನ್ನೂ ಕೊಲ್ಲುವುದರ ಮೂಲಕ ಇಡೀ ಜೀವಸರಪಳಿಯೇ ನಾಶ ಮಾಡುತ್ತದೆ. ಇದರಿಂದಾಗಿ ಒಮ್ಮೆ ರಾಸಾಯನಿಕ ಕೀಟನಾಶಕವನ್ನು ಉಪಯೋಗಿಸಿದ ರೈತ ಪುನಃ ಹಳೆಯ ಸಸ್ಯ ಜನ್ಯ ಕೀಟನಾಶಕವನ್ನು ಉಪಯೋಗಿಸಿದರೆ ಅದು ಯಾವ ಪರಿಣಾಮವನ್ನೂ ಬೀರುವುದಿಲ್ಲ. ನಾವು ಜೀವ ನಿಯಂತ್ರಣದಲ್ಲಿ ಸಾಂಪ್ರದಾಯಿಕವಾಗಿ ಮುಂದುವರಿಯುವ ಅಗತ್ಯ ಇಂದಿನದು.

ಹಿಂದೆ ಮನುಷ್ಯ ತನಗೆ ಎಷ್ಟು ಬೇಕೋ ಅಷ್ಟನ್ನೇ ಉಪಯೋಗಿಸುತ್ತಿದ್ದ. ಆದರೆ ಹೆಚ್ಚುತ್ತಿರುವ ಹೊರಗಿನ ಮಾರುಕಟ್ಟೆಯಿಂದಾಗಿ ಆರಣ್ಯ ಉತ್ಪನ್ನಗಳೇ ನಾಶವಾಗುತ್ತಿವೆ.

ಹಿಂದೆ ಕಾಡು ಎಂದರೆ ಪೂಜ್ಯ ಭಾವನೆ ಇತ್ತು ಪೂಜಿಸುವ ಸಂಪ್ರದಾಯದ ಕುರುಹಾಗಿ ಈಗಲೂ ಅಲ್ಲಲ್ಲಿ ಪೂಜಿಸುವ ವಿಶಿಷ್ಟ ಪದ್ಧತಿಗಳನ್ನು ಕಾಣಬಹುದು ಪ್ರಾಚೀನಕಾಲದಲ್ಲಿ, ಮರಗಳೆ ದೇವರ ಸ್ವರೂಪವೆಂಬ ಭಾವನೆ, ಇತ್ತು. ಅಶ್ವತ್ಥ ವೃಕ್ಷಕ್ಕೆ ಉಪನಯನ ಸಂಸ್ಕಾರ ಪದ್ಧತಿ ಇದೆ.





ಹಾಗೆ ಇಲ್ಲಿ ಮನೆಯ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸುತ್ತಿದ್ದ ಈ ಉತ್ಪನ್ನಗಳು ಮಾರುಕಟ್ಟೆಯನ್ನು ಪಡೆಯತೊಡಗಿದವು. ಕಾಡಿನ ಕಥೆಯೂ ಚಿನ್ನದ ಮೊಟ್ಟೆಯ ಕೋಳಿಯ ಕಥೆಯಾಗಿದೆ.

ಹಿಂದಿನ ಕಾಲದಲ್ಲಿ ಆಹಾರದ ಪದ್ಧತಿಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ಗೆಣಸು, ಈಗ ಕಡೆಗಣಿಸಲ್ಪಟ್ಟಿದೆ. ಇವು ವೈವಿಧ್ಯಮಯ ಅರಣ್ಯದಲ್ಲಿ ಹೇರಳವಾಗಿರುತ್ತವೆ. ಆದರೆ ಇಂದಿನ ಒಂದೇ ಜಾತಿಯ ನೆಡುತೋಪುಗಳಿಂದ ಇವುಗಳಿಗೆ ಸ್ಥಾನವಿಲ್ಲ.

ಹಲವಾರು ಜಾತಿಯ ಕಾಡಿನ ಬಳ್ಳಿಗಳನ್ನು ಬೇಲಿ ಕಟ್ಟಲು, ಮನೆ ಕಟ್ಟಲು ಉಪಯೋಗಿಸುತ್ತಿದ್ದರು. ಈಗ ಸುಲಭವಾಗಿ ಸಿಗುವ ಪ್ಲಾಸ್ಟಿಕ್ ಬಳ್ಳಿ ಇಗಳನ್ನು ಬದಲಾಯಿಸುತ್ತಿದೆ. ಪ್ಲಾಸ್ಟಿಕ್ ಮಾಲಿನ್ಯ ಬಂದಿದೆ.

ಯಾವುದೇ ಕಾಡು ಅವಲಂಬಿತ ಜನಾಂಗದ ಜನರ ಮನೆಗಳಿಗೆ ಹೋದಾಗ ಬೆತ್ತದ ಅಥವಾ ಇನ್ನಿತರ ಕಾಡಿನ ವಸ್ತುಗಳಿಂದ ಗೃಹ ಕೈಗಾರಿಕೆಗಳನ್ನು ಮಾಡುತ್ತಿದ್ದ ಜನರನ್ನು ಕಾಣುವುದು ತೀರಾ ಸಾಮಾನ್ಯ ದೃಶ್ಯವಾಗಿತ್ತು. ಇವುಗಳೆಲ್ಲ ಕಣ್ಮರೆಯಾಗುತ್ತಲಿವೆ. ಬೆತ್ತದ ಕಥೆ ಹಿಂದೆಯೇ ಹೇಳಿದೆ. ಹಿತ್ತಂಡೆ, ಕೂಲಬಳ್ಳಿ ಮೊದಲಾದವೂ ಸಹ ಕರಕುಶಲ ವಸ್ತುಗಳನ್ನು ಮಾಡಲು ಉಪಯೋಗವಾಗುತ್ತಿತ್ತು.

ಔಷಧ ಸಸ್ಯಗಳ ಜ್ಞಾನವಂತೂ ಪ್ರತಿ ಮನೆ, ಹಳ್ಳಿಗಳಲ್ಲಿಯೂ ಇತ್ತು. ಪ್ರತಿ ಹಳ್ಳಿಗೊಬ್ಬರಾದರೂ ವೈದ್ಯರಿರುತ್ತಿದ್ದರು. ಆದರೆ, ಈಗ ಜೀವ ವೈವಿಧ್ಯತೆ ನಾಶವಾಗಿದೆ. ಅಮೂಲ್ಯ ಔಷಧಿ ಗಿಡಗಳು ಕಾಡಿನಲ್ಲಿ ಕಾಣಿಸಿಗುವುದಿಲ್ಲ. ಹೊಸ ಪೀಳಿಗೆಯ ಜನರಲ್ಲಿ ಔಷಧೀಯ ಜ್ಞಾನವೂ ನಶಿಸಿದೆ.

ಹೊಸ ಅಲೋಪತಿ ಔಷಧಿಗಳು ಸುಲಭವಾಗಿ, ಸುಗುತ್ತವೆ. ಶೀಘ್ರ ಪರಣಾಮವನ್ನು ಬೀರುತ್ತವೆ ಎಂದು ಭಾವಿಸಲಾಗುತ್ತದೆ. ಇವೆಲ್ಲವುಗಳೊಂದಿಗೆ, ಔಷಧೀಯ ಜ್ಞಾನವನ್ನು ಬೇರೆಯವರಿಗೆ ಹೇಳಬಾರದೆಂಬ ಒಂದು ಮೂಢ ನಂಬಿಕೆಯೂ ಈ ಪರಂಪರೆಯ ವಿನಾಶಕ್ಕೆ ನಾಂದಿಯಾಗಿದೆ.



ಕಾಡು ತಾರಕಾರಿಗಳು




ಹಲವಾರು ರೂಪಗಳಲ್ಲಿ ಇಲ್ಲಿನ ಜನತೆ ಕಾಡಿನ ತರಕಾರಿಗಳನ್ನು ಉಪಯೋಗಿಸುತ್ತಾರೆ. ಎಲೆ ತರಕಾರಿಗಳು, ಗಡ್ಡೆ ಗೆಣಸುಗಳು, ಖಾದ್ಯ ತೈಲಗಳು, ಉಪ್ಪಿನ ಕಾಯಿ, ಸಂಬಾರ ಪದಾರ್ಥಗಳು, ಆರೋಗ್ಯವರ್ಧಕ ಪೇಯಗಳು, ಕೆಲವು ಸಸ್ಯಗಳಿಂದ ವಿಶೇಷವಾಗಿ ಸಂಸ್ಕರಿಸಿದ ವಸ್ತುಗಳು, ಕಾಡಿನ ಹಣ್ಣುಗಳು.....

ಹೀಗೆ ಒಂದಿಷ್ಟು ವೈವಿಧ್ಯಮಯ ಉಪಯೋಗವನ್ನು ಪಡೆಯಲಾಗುತ್ತಿದೆ.

ಕನ್ನೆಕುಡಿ, ಎಲವರಿಗೆ, ಒಂದೆಲಗ...ಹೀಗೆ ಎಲೆ ತರಕಾರಿಯಾಗಿ ಉಪಯೋಗಿಸುವ ಸಸ್ಯಗಳ ಪಟ್ಟಿ ತುಂಬಾ




ದೊಡ್ಡದು. ಅವುಗಳನ್ನು ತಂಬಳಿ, ಪಲ್ಯ, ಮೊದಲಾದ ಬೇರೆ ಬೇರೆ ರೂಪದಲ್ಲಿ ಮುಖ್ಯ ಆಹಾರದೊಂದಿಗೆ ಉಪಯೋಗಿಸಲಾಗುತ್ತಿದೆ. ವರ್ಷದ ಬೇರೆ ಬೇರೆ ಋತುಗಳಿಗನುಸಾರವಾಗಿ ಬೇರೆ ಬೇರೆಯ ಸಸ್ಯಗಳೇ ಉಪಯೋಗವಾಗುತ್ತಿರುವುದು ವಿಶೇಷ.



ಮನುಷ್ಯನ ಆಹಾರಕ್ಕೆ ಪೌಷ್ಟಿಕತೆಯ ಜೊತೆಗೆ ವೈವಿಧ್ಯತೆಯನ್ನೂ ಒದಗಿಸುವ ಈ ನಿಸರ್ಗದತ್ತ ಆಹಾರಗಳನ್ನು ಬಳಸಿಕೊಳ್ಳುವಲ್ಲಿಯೂ ಜಾಣ್ಮೆಯನ್ನು ಮೆರೆದಿದ್ದಾರೆ.

ಎಲೆ ತರಕಾರಿಗಳು: ಸುಮಾರು ಐವತ್ತಕ್ಕೂ ಹೆಚ್ಚು ಬಗೆಯ ಸಸ್ಯ-ಬಳ್ಳಿಗಳನ್ನು ಎಲೆ ತರಕಾರಿಯನ್ನಾಗಿ ಉಪಯೋಗಿಸಲಾಗುತ್ತದೆ. ಉದಾ: ಎಲವರಿಗೆ, ಗಂಧದಕುಡಿ, ಕನ್ನೆಕುಡಿ, ಬೆಣ್ಣೆಕುಂಡಿಗೆ.... ಮುಂತಾದವುಗಳನ್ನು ತಂಬ್ಳಿ, ಹಸಿ, ಸಾರು (ಸಂಬಾರ), ಪಲ್ಯ, ಚಟ್ನಿ.... ಮುಂತಾದವುಗಳಾಗಿ ತಯಾರಿಸಿ, ಬಳಸಲಾಗುತ್ತಿದೆ.

ಗಡ್ಡೆ ಗೆಣಸುಗಳು : ನೊರೆ ಗೆಣಸು, ಹೆಗ್ಗೆಣಸು, ಕೆಸುವಿನ ಗಡ್ಡೆ, ಮೊದಲಾದವುಗಳನ್ನು ಶಿರಸಿ ಸುತ್ತಮುತ್ತ ಉಪಯೋಗಿಸಿದರೆ, ಅಣಶಿ ಪ್ರದೇಶದಲ್ಲಿ ಪಿರಶಿ, ವಿಸುಳಿ ಭಾಜಿ, ಕುಡ್ಡೆ ಭಾಜಿ,(ಭಾಜಿ=ಗೆಣಸು,ಗಡ್ಡೆ) ಎನ್ನುವ ಹೆಸರಿನ ಗಡ್ಡೆಗಳನ್ನು ಉಪಯೋಗಿಸಲಾಗುತ್ತಿದೆ. ಇವುಗಳನ್ನು ಸಾಂಬಾರಿಗೆ ಮತ್ತು ಹಾಗೇ ಆಹಾರವಾಗಿ ತಿನ್ನಲಾಗುತ್ತಿದೆ. ಹೆಗ್ಗಡದೇವನ ಕೋಟೆಯ ಜೇನು ಕುರುಬರು ತಾವು ಉಪಯೋಗಿಸುವ ಹದಿನಾಲ್ಕು ಜಾತಿಯ ಗಡ್ಡೆಗಳ ಹೆಸರನ್ನು ಹೇಳುತ್ತಾರೆ.



(ಅಕ್ಕಿ) ಗೆಣಸು, ನೋರೆ ಗೆಣಸು, ಕಾಯಿ ಗೆಣಸು, ನಾರು ಗೆಣಸು, ಹಾಲು ಗೆಣಸು,...)

ಉಪ್ಪಿನ ಕಾಯಿ: ಕೌಳಿಕಾಯಿ, ನೆಲ್ಲಿ, ಮಾಗಳೀಬೇರು, ಆರಮಾದಲ, ಜುಮ್ಮನಕಾಯಿ, ಅಪ್ಪೆ ಮಿಡಿ... ಇವುಗಳನ್ನು ಉಪ್ಪಿನಕಾಯಿ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತವೆ.

ಎಣ್ಣೆ ಬೀಜಗಳು : ಅರಿಶಿನ ಅಂಡಿ(ಅರಿಶನದೆಲೆ), ಮುರುಗಲು, ಉಪ್ಪಗೆ, ಮುಂತಾದವುಗಳನ್ನು ಕರಿಯಲು ಅಥವಾ ತುಪ್ಪದಂತೆ ಖಾದ್ಯ ತೈಲವಾಗಿ ಉಪಯೋಗಿಸಲಾಗುತ್ತದೆ.

ಹಪ್ಪಳ ಸಂಡಿಗೆ: ಹಲಸು, ಕೊಡಸಿನ ಹೂವು ಮುಂತಾದವುಗಳನ್ನು ಹಪ್ಪಳ ಸಂಡಿಗೆ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

ಪಾನೀಯಗಳು (ಕಷಾಯ): ಸುಗಂಧೀ ಬೇರು (ಹಾಲುಬಳ್ಳಿ ಬೇರು), ಶತಾವರಿ, ಅತ್ತೀಚಕ್ಕೆ, ಮುರುಗಲು, ಕಾಡು ಅರಿಶಿನದ ಗಡ್ಡೆ ಮುಂತಾದವುಗಳನ್ನು ಉಪಯೋಗಿಸಲಾಗುತ್ತದೆ.


ಕಾಡಿನ ಹಣ್ಣುಗಳು: ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಹಣ್ಣುಗಳನ್ನು ವಿವಿಧ ಋತುಗಳಲ್ಲಿ ಕಾಡಿನಿಂದ ಸಂಗ್ರಹಿಸಿ ತಿನ್ನುವರು. ಬಿಕ್ಕೆ, ಹಲಗೆ, ಹುಳಿ ಮಜ್ಜಿಗೆ, ಬಿಳೆ ಮುಳ್ಳಣ್ಣು ಪರಿಗೆ(ಕರಿ ಮುಳ್ಳಣ್ಣು), ನುರುಕಲು, ಕುನ್ನೇರಲು, ದೇವಣಿಗೆ ಹಣ್ಣು ರಂಜಲು, ಮುಳ್ಳು ಸಂಪಿಗೆ ಹಣ್ಣು ದಾಸವಾಳ, ಗುಡ್ಡೆಗೇರು, ನೇರಲು ಹಣ್ಣು, ಚಳ್ಳೆ ಹಣ್ಣು, ಈಚಲು ಹಣ್ಣು ... ಈ ಪಟ್ಟಿ ಹೀಗೇ ಬೆಳೆಯುತ್ತದೆ. ಕಳಲೆಯಂತೂ ಎಲ್ಲ ಕಡೆ ಉಪಯೋಗಿಸಲಾಗುತ್ತದೆ. ಬೈನೆ ಈಚಲುಗಳಿಂದ ಕಳ್ಳು (ಒಂದು ಬಗೆಯ ಮದ್ಯ) ತೆಗೆಯುವ ಪದ್ಧತಿ ಇತ್ತು. ಇದಲ್ಲದೇ ಹಲವಾರು ಜಾತಿಯ ಕಾಡು ಅಣಬೆಗಳೂ ಆಹಾರವಾಗಿ ಉಪಯೋಗವಾಗುತ್ತಿವೆ.

ಆದರೆ ಇತ್ತೀಚಿನ ದಿನಗಳಲ್ಲಿ, ಉಪಯೋಗಿಸುವ ಬಗೆಗಿನ ಕೀಳರಿಮೆಯಿಂದಾಗಿ, ಹೊಸ ತಲೆಮಾರಿನ ಜನಾಂಗದಲ್ಲಿ ಆಸಕ್ತಿ ಕಡಿಮೆಯಾಗಿರುವುದರಿಂದಾಗಿ, ತೀವ್ರವಾಗುತ್ತಿರುವ ಕಾಡಿನ ನಾಶದಿಂದಾಗಿ, ಸುಲಭವಾಗಿ ದೊರೆಯುವ ಮಾರುಕಟ್ಟೆಯ ತರಕಾರಿಯಿಂದಾಗಿ, ಕಾಡಿನ ತರಕಾರಿಗಳು ಮೂಲೆಗುಂಪಾಗುತ್ತಿವೆ; ಎಷ್ಟೋ ಸಸ್ಯಗಳ ಉಪಯೋಗವೇ ಮರೆತು ಹೋಗುತ್ತಿದೆ.

ಈ ಸಂಪನ್ಮೂಲಗಳನ್ನು ಬಳಸುವ ನಮ್ಮ ಜ್ಞಾನವೇ ಕಡಿಮೆಯಾಗುತ್ತಿದೆ. ಕಳಲೆಯಂಥ ಹಲವಾರು ತರಕಾರಿಗಳನ್ನು ಸಂಸ್ಕರಿಸಲು ದೀರ್ಘ ಸಮಯ ಬೇಕಾಗಿರವುದರಿಂದ ಇವುಗಳ ಬಳಕೆ ಕಡಿಮೆಯಾಗುತ್ತಿದೆ.

ಸಂಪನ್ಮೂಲ ರಕ್ಷಣೆ ನಮ್ಮ ಹೊಣೆ

ನಮ್ಮ ಬದುಕಿನೊಂದಿಗೆ ಹಾಸುಹೊಕ್ಕಾಗಿರುವ ಈ ಅಮೂಲ್ಯ ಸಂಪತ್ತನ್ನು ಉಳಿಸಿಕೊಳ್ಳುವುದು ನಮ್ಮ ಇಂದಿನ ಅಗತ್ಯವಾಗಿದೆ; ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದ ಈ ಎಲ್ಲ ಸಮಸ್ಯೆಗಳಿಗೆ ಮುಖ್ಯವಾಗಿ ನಮ್ಮಲ್ಲಿ ಹೆಚ್ಚಾಗಿರುತ್ತಿರುವ ಲಾಭಕೋರತನ; ಅದರಿಂದಾದ ಸಂಗ್ರಾಹಕರ ನಡುವಿನ ಸ್ಪರ್ಧೆ, ನೈಸರ್ಗಿಕ ಕಾಡಿನ ನಾಶ, ಏಕಜಾತಿಯ ನೆಡುತೋಪುಗಳ ಹೆಚ್ಚಳದಿಂದಾಗಿ ಇಲ್ಲಿ ಕಡಿಮೆಯಾಗುತ್ತಿರುವ ಸ್ಥಳೀಯ ಸಸ್ಯಗಳು, ಮತ್ತು ಪಾರಂಪರಿಕ ಜ್ಞಾನದ ಬಗೆಗಿನ ಅಸಡ್ಡೆ ಕಾರಣವಾಗಿವೆ.



ಊರಿನ ಜನರೆಲ್ಲಾ ಸೇರಿ ಒಟ್ಟಾಗಿ ಈ ಸಂಪನ್ಮೂಲಗಳು ಹಾಳಾಗದಂತೆ ಸಂಗ್ರಹಿಸುವ ಬಗ್ಗೆ ಯೋಚಿಸಿ, ಕಾರ್ಯ ಪ್ರವೃತ್ತರಾಗಬೇಕು. ಮರ ಕಡಿಯುವುದು, ಎಳೆ ಕಾಯಿಗಳನ್ನು ಕೊಯ್ಯುವುದು, ಬೆಂಕಿ ಹಚ್ಚುವುದು ಮೊದಲಾದ ಕೃತ್ಯಗಳನ್ನು ಸ್ಥಳೀಯರೇ ಮುಂದಾಗಿ ತಡೆಗಟ್ಟಬೇಕು. ಸರಕಾರ ಅಥವಾ ಬೇರ್ಯಾರೋ ರಕ್ಷಿಸುತ್ತಾರೆ ಎಂದುಕೊಂಡರೆ ಈ ಸಂಪನ್ಮೂಲ ಗಳ ನಾಶದಿಂದ ತೊಂದರೆಗೊಳಗಾಗುವವರು ಸ್ಥಳೀಯರೇ ಆದ್ದರಿಂದ ಸುರಕ್ಷತೆ ನಮ್ಮ ಮೊದಲ ಆದ್ಯತೆಯಾಗಬೇಕು.


ಉಪ್ಪಾಗೆಯನ್ನು ಒಣಗಿಸುವಾಗ ಕಟ್ಟಿಗೆಯ ಉಪಯೋಗದ ಪ್ರಮಾಣವನ್ನು ಕಡಿಮೆಗೊಳಿಸಲು ಡ್ರೈಯರುಗಳ ಬಳಕೆಗೆ ಮುಂದಾಗಬೇಕು.

ಕಾಡಿನ ತರಕಾರಿಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ನಿಡಬೇಕಾಗಿದೆ. ಕೀಟನಾಶಕಗಳಿಂದ ಮುಕ್ತವಾದ ವೈವಿಧ್ಯ ಮಯವಾದ ನಮ್ಮ ನೈಸರ್ಗಿಕ ತರಕಾರಿಗಳು ಆರೋಗ್ಯಕ್ಕೆ ಉತ್ತಮ ಎನ್ನುವ ಪ್ರಜ್ಞೆಯನ್ನು ಬೆಳೆಸಬೇಕಾಗಿದೆ.


ಪಾರಂಪರಿಕ ಜ್ಞಾನವನ್ನು ಕೀಳಾಗಿ ಕಾಣುವ ಬದಲು ದರ ಒಳ್ಳೆಯ ಶಗಳನ್ನು ಪಡೆದುಕೊಳ್ಳಬೇಕು, ಅಂಧ ಜ್ಞಾನ ಪೀಳಿಗೆಯಿಂದ ಪೀಳಿಗೆಗೆ ಹೋಗುವಂತೆ ನೋಡಿಕೊಳ್ಳಬೇಕು. ಈ ಸಂಪನ್ಮೂಲಗಳು ನಮ್ಮಿಂದ ಮರೆಯಾಗುವ ಮೊದಲು ಇವುಗಳನ್ನು ನೆಟ್ಟು ಬೆಳೆಸಬೇಕಾಗಿದೆ. ಹಲವಾರು ರಣ್ಯ ಉತ್ಪನ್ನಗಳು ಕೃಷಿಯೋಗ್ಯವಾಗಿವೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ. ಕೃಷಿಕರು ಮುಂದಾಗಬೇಕಿದೆ.


ಗುತ್ತಿಗೆನೀಡುವ ಸರಕಾರದ ನೀತಿ,ಸಹ ಬದಲಾಗಬೇಕಿದೆ. ಬದಲಾಗಿ ಸ್ಥಳೀಯ ಜನರಿಗೆ ಅಧಿಕಾರ ನೀಡಿ, ಅದರ ಮೂಲಕ ಈ ನೈಸರ್ಗಿಕ ಸಂಪನ್ಮೂಲ ತಮ್ಮದು ಎನುವ ಬಾವನೆ ಬೆಳೆಸಲು ಸಹಾಯಕವಾಗಬೇಕಿದೆ. ದಕ್ಕೆ ಸ್ಥಳೀಯರ ಸಂಘಟನೆಗಳಿಗೆ ಅರಣ್ಯ ಸಂರಕ್ಷಣೆ ಮತ್ತು ಕಿರು ಉತ್ಪನ್ನಗಳ ಸಂಗ್ರಹಣೆಯ ಜವಾಬ್ದಾರಿ ನೀಡಬೇಕಾಗಿದೆ. ನೆಡುತೋಪುಗಳಲ್ಲಿ ಸ್ಥಳೀಯ ಸಸ್ಯಗಳನ್ನು ವಿಶೇಷವಾಗಿ ಕಿರು ಅರಣ್ಯ ಉತ್ಪನ್ನಗಳನ್ನು, ಹೆಚ್ಚಾಗಿ ಬೆಳೆಸಬೇಕು. ಹಾಗೂ ಇಲ್ಲಿನ ಕಾಡಿನ ನೈಸರ್ಗಿಕ ಪುನರುತ್ಪಾದನೆಗೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ.

ಶತಮಾನಗಳಿಂದ ನಮ್ಮ ಜೀವನಾಡಿಯಾಗಿದ್ದ ಈ ಸಂಪನ್ಮೂಲಗಳನ್ನು ಕಳೆದುಕೊಂಡು, ಪರಾವಲಂಬಿ ಗಳಾಗುವ ಮೊದಲು, ಇವುಗಳನ್ನು ಉಳಿಸಿ, ಬೆಳೆಸಬೇಕಾಗಿದೆ. ಇಂದಿನಿಂದಲೇ ಕಾರ್ಯಪ್ರವೃತ್ತವಾಗೋಣವೇ?



ಜೋಕು








ನಿನಗೆ ಬರೀ ತಿನ್ನಿಯೋದು ಸೊತ್ತು.. ಕಾಯ್ದು ಕೊಳ್ಳೋದು ಸೊತ್ತಿಲ್ಲ!



ಬೆಳಿಕು ಮೊಟರಿಯಲ್ಲಿ ಪ್ರವೇಶಿಸು-ವಂತಿದ್ದರೆ 'ತುಡಿ' ಜೋನು ಬ್ಯಾರದು. ಕಾರಾಗಿ ಮೊಟರಿಯಲ್ಲ ಹೀಗೆ ಕೆಲ್ಸ ಗೆಳಸ್ಮ್ಮ ಇಟ್ಟು ಮುಚ್ಚಿ, ಜೋನಿಗಾಗಿ ಕಂಡಿ ಬಿಂದನ್ನು ಬಿಡಿಬೇಕು.



ಹಗ್ಗಡದೇವನ ಕೋಟೆಯ ಜೇನು ಕುರುಬರಲ್ಲಿ ಜೇನಿನ ಮರಕ್ಕೆ ಪೂಜೆ ಸಲ್ಲಿಸಿ ಗುರುತು ಹಾಕುವ ಪದ್ಧತಿ ಇಂದಿಗೂ ಇದೆ.



ಜೊಯಿಡಾದ ಕುಣಬಿ ಜನಾಂಗದವರಲ್ಲಿ ಜೇನು ಮರಗಳನ್ನು ಮನೆತನಕ್ಕೆ ಇಂತಿಷ್ಟು ಎಂದು ಹಂಚಿಕೊಳ್ಳುವ ಪದ್ಧತಿ ಇಂದಿಗೂ ಇದೆ.


ನಮ್ಮ ಅರಣ್ಯ ಇರಾವೆ ಮಾತ್ರ, ಇಡೀ ಕಾಡನ್ನೇ ಜೇನು ಕೊಯ್ಯಲು ಗುತ್ತಿಗೆ ನೀಡುತ್ತದೆ.

ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯ್ಲು


ಎಡಬಿಡದೇ ರಿಪಿ ರಿಪಿ ಮಳೆ ಹೊಯ್ಯುವ ಜೂನ್, ಜುಲೈ ಹೊತ್ತಿಗೆ ಕಾಡಿನ ಉಪ್ಪಾಗೇ ಮರಗಳ ಟೊಂಗೆ ಟೊಂಗೆಗಳಲ್ಲಿ ಹಣ್ಣು ಮಾಗಿದವು. ಬೇಸಿಗೆಯ ಉರಿಯಲ್ಲಿ ಬೆಂದ ವನ್ಯ ಮೃಗಗಳಿಗೆ ಹೊಸ ಜೀವ ಬಂತು. ಕಾಡು ಮಂಗಗಳು, ಅಳಿಲುಗಳು ಮನಸೋಚ್ಛೆ ಹಣ್ಣಿನ ಸಿಪ್ಪೆಗಳನ್ನು ತಿಂದವು. ವನ್ಯಮೃಗಗಳ ಬಾಯಿಯಿಂದ ಬೀಜಗಳು ಜಾರಿ ಭೂಮಿಗೆ ಬಿದ್ದವು. ಮಲೆನಾಡ ಹಳ್ಳಿಗಳಿಗೆ ಬೇಕಾದ್ದೇ ಆವು. ಹಳ್ಳಿಯ ಹೆಂಗಸರು ಜೋಪಾನವಾಗಿ ಕಾಡಿನಿಂದ ಉಪ್ಪಾಗೆಯ ಬೀಜ ಆರಿಸಿ ತಂದು ಒಣಗಿಸಿ ಉಪ್ಪಾಗೆ ತುಪ್ಪ ತೆಗೆದರು. ಹಬ್ಬ ಹರಿದಿನಗಳಲ್ಲಿ ರುಚಿ ರುಚಿ ಕಜ್ಜಾಯಕ್ಕೆ ಉಪ್ಪಾಗೆ ತುಪ್ಪ ಲಾಯಕ್ಕು ಎಂದು ಬೊಚ್ಚು ಬಾಯಿ ಅಗಲಿಸಿ ಹಿರಿಯಜ್ಜಿಯರು ಶಿಪಾರಸ್ಸು ಒಪ್ಪಿಸಿದರು. ತುಪ್ಪ ತೆಗೆಯುವ ಸಾಂಪ್ರದಾಯಿಕ ವಿಧಾನಗಳ ಜಾಣ್ಮೆಯ ಪಾಠ ತಲೆಮಾರಿನಿಂದ ತಲೆಮಾರಿಗೆ ಸಾಗಿತು. ಹಣ್ಣಿನ ತಿರುಳು ಕಾಡು ಮೃಗಗಳಿಗೆ ಆಹಾರವಾಯಿತು. ಹಾಗೆ ಬೀಜ ಅಡುಗೆಗೆ ನೆರವಾಯಿತು. ಇದೆಲ್ಲ ೨೦ ವರ್ಷಗಳ ಹಿಂದಿ ಕಾಲದ ಕಥೆ. ಆದರೆ ಕಾಡಿನ ಕಾಲ ಚಕ್ರವನ್ನು ಈಗ ನಾವು ಬದಲಿಸಿದ್ದೇವೆ. ಆದದ್ದು ಇಷ್ಟು. ಇಂದು ಉಪ್ಪಾಗೆ ಬೀಜವನ್ನು ಮನೆ ಬಳಕೆಗೆ ಸಂಗ್ರಹಿಸುವುದಕ್ಕಿಂತ ಹಣ್ಣಿನ ಸಿಪ್ಪೆ ಸಂಗ್ರಹಿಸಿ ಒಣಗಿಸಿದರೆ ಈಗ ಬಾರೀ ಬೇಡಿಕೆ ಕಿಲೋ ಉಪ್ಪಾಗೆ ಸಿಪ್ಪೆಗೆ ೭೦-೧೦೦ ರೂಪಾಯಿ ಬೆಲೆ! ಸರಿ ಸಿಪ್ಪಿಗೆ ಇನ್ನಿಲ್ಲದ ಬೆಲೆ ಬಂತೆಂದು ಹಣ್ಣು ಮಾಗುವ ಮುನ್ನವೆ ಎಳೆಗಾಯಿಗಳ ಕೊಯ್ತ. ಎತ್ತರದ ಮರವೇರಿ ಕೊಯ್ಯಲು ತಡವಾದೀತೆಂದು ಚಿನ್ನದ ತತ್ತಿ ಇಡುವ ಕೋಳಿ ಕೊಯ್ದ ಹಾಗೆ ಟೊಂಗೆಗಳ ಅಸಡಾಬಸಡಾ ಕಡಿತ. ಹಣಕ್ಕಾಗಿ ನಮ್ಮ ಪಾರಂಪರಿಕ ಉಪ್ಪಾಗೆ ತುಪ್ಪದ ಬಳಕೆ ಮರೆತವು. ವನ್ಯ ಮೃಗಗಳ ಆಹಾರವಾಗಿದ್ದ ಹಣ್ಣಿನ ಸಿಪ್ಪೆಯ ಸಂಗ್ರಹಕ್ಕೆ ನಿಂತು ನಾವು ಮಾಡಿದ್ದೇನು? ಇವತ್ತು ಕಾಡಿನಿಂದ ಉಪ್ಪಾಗೆ ನಾಡಿಗೆ ಬಂದು ನೋಡು ನೋಡುತ್ತಲೇ ಸಾವಿಗೆ ಸಾಲು ಹಚ್ಚಿದೆ. ನಾವು ಕಾಡಿನಿಂದ ಪಡೆಯುವ ಹೆಜ್ಜೆಯಲ್ಲಿ ಆವಸರ, ಪೈಪೋಟಿ, ಸೌಜನ್ಯ ಮೀರಿದ ವರ್ತತೆ ಜಾರಿಯಾದಾಗೆಲ್ಲ ಆಗುವುದು ಹೀಗೆ!

ಹಣ್ಣು ಕೊಯ್ಯುವಲ್ಲಿ ಕಾಯಿಗಳನ್ನೇ ಕೊಯ್ದರೆ ಒಮ್ಮೆಗೇ ಉತ್ಪನ್ನ ಸಂಗ್ರಹಿಸಿದ ಲಾಬ ಮೇಲ್ನೋಟಕ್ಕೆ ನಿಜ. ಧಿಡೀರೆಂದು ಹಣಗಳಿಕೆಗೆ ನಿಲ್ಲುವ ಚಾಳಿ ರೂಢಿಯಾದರೆ ಆಗುವ ಪರಿಣಾಮವೇನು? ಈ ಕೆಳಗೆ ನಮ್ಮ ಪಶ್ಚಿಮಘಟ್ಟದಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಇಂದು ಸಂಗ್ರಹವಾಗುತ್ತಿರುವ ಕಿರು ಅರಣ್ಯ ಉತ್ಪನ್ನಗಳಪಟ್ಟಿ ನೀಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿನ ಕೊಯ್ಲಿನ ಸ್ಥಿತಿಯನ್ನು ಹೇಳಲಾಗಿದೆ. ಹಿಂದೆ ಕೊಯ್ಲಿನ ವಿಧಾನ ಹೇಗಿತ್ತು ಎಂಬುದನ್ನು ತಿಳಿಸಲಾಗಿದೆ. ಉಳಿಸುವವರ ಆಯ್ಕೆ ಏಕೆ ಸಾಂಪ್ರದಾಯಿಕ ವಿಧಾನವಾಗಿದೆ ಎಂಬುದನ್ನು ನೀವೇ ಗಮನಿಸಿ.....

ಉತ್ಪನ್ನದ ಹೆಸರು	ಈಗಿನ ಕೊಯ್ಲಿನ ವಿಧಾನ	ಪರಿಣಾಮ	ಸಾಂಪ್ರದಾಯಿಕ ವಿಧಾನ	ಪರಿಣಾಮ
ಧೂಪ	ಮರದ ಸುತ್ತಲೂ ತೊಗಟೆ ತೆಗೆಯುವುದು	ಮರಗಳ ಸಾವು	ವಿ. ಆಕಾರದಲ್ಲಿ ಕಡಿಯುವುದು	ಮರಗಳ ಉಳಿಕೆ
ಜೇನು	ಪೊಟರೆಯನ್ನು ದೊಡ್ಡದಾಗಿ ತೂತು ಮಾಡುವುದು	ಜೇನಿನ ವಾಸಸ್ಥಾನಗಳು ಕಡಿಮೆಯಾಗುವುದು	ಜೇನು ಕೊಯ್ದ ನಂತರ ಪೊಟರೆಗಳನ್ನು ಕಲ್ಲಿನಿಂದ ಮುಚ್ಚಿ ಸಣ್ಣ ತೂತು ಬಿಡುವುದು	ಜೇನಿನ ಆ ವಾಸಸ್ಥಾನ ಉಳಿಯುತ್ತದೆ
ಉಪ್ಪಾಗೆ	ಮರ ಅಥವಾ ಟೊಂಗೆಗಳನ್ನೇ ಕಡಿಯುವುದು ಮತ್ತು ಕಾಯಿಗಳನ್ನು ಕೊಯ್ಯುವುದು	ಮರಗಳ ಸಂಖ್ಯೆ ಕಡಿಮೆ ದರ ಮತ್ತು ತೂಕ ಕಡಿಮೆ	ಹಣ್ಣುಗಳನ್ನು ಮಾತ್ರ ಸಂಗ್ರಹಿಸುವುದು	ಮರಗಳ ಉಳಿಕೆ ಬೆಲೆ ಮತ್ತು ತೂಕ ಜಾಸ್ತಿ
ದಾಲ್ಚಿನಿ	ಮರದ ಟೊಂಗೆ ಕಡಿಯುವುದು	ಮರಗಳ ಸಾವು ಲಭ್ಯತೆ ಕಡಿಮೆಯಾಗುವುದು	ಸಾಧ್ಯವಾದಷ್ಟು ಮೊಗ್ಗುಗಳನ್ನು ಮಾತ್ರ ಕೊಯ್ಯುವುದು	ಮರಗಳಿಗೆ ಉಳಿಕೆ ಆಧಿಕ ಲಭ್ಯತೆ
ಶೀಗೇಕಾಯಿ	ಶೀಗೇಕಾಯಿ ಕೊಯ್ಯುವ ಸಲುವಾಗಿ ಬಳ್ಳಿಯನ್ನೇ ಜಗ್ಗುವುದು ಅಥವಾ ಕಡಿಯುವುದು	ಬಳ್ಳಿಗಳ ಸಾವು	ಏಣಿ ಅಥವಾ ಕೊಕ್ಕೆಯ ಸಹಾಯದಿಂದ ಕೊಯ್ಯುವುದು	ಆಧಿಕ ಲಭ್ಯತೆ ಬಳ್ಳಿಗಳ ಉಳಿಕೆ
ಬೆತ್ತ	ಎಳೆಯ ಬೆತ್ತಗಳನ್ನು ಕಡಿಯುವುದು	ಗುಣಮಟ್ಟ ಮತ್ತು ದೊರಕುವ ಪ್ರಮಾಣ ಕಡಿಮೆ	ಬೆಳೆದ ಬೆತ್ತವನ್ನೇ ಕಡಿಯುವುದು	ಗುಣಮಟ್ಟದಲ್ಲಿ ಸುಧಾರಣೆ ದೊರಕುವ ಪ್ರಮಾಣ ಜಾಸ್ತಿ
ರಾಮಪತ್ರೆ	ಕಾಯಿಕೊಯ್ಯುವುದು ಗಿಡಕಡಿಯುವುದು	ತೂಕ ಕಡಿಮೆ ಗಿಡಗಳ ನಾಶ	ಹಣ್ಣು ಸಂಗ್ರಹಣೆ ಕೊಕ್ಕೆ ಉಪಯೋಗ	ಆದಾಯ ಹೆಚ್ಚು ನಿರಂತರ ಆದಾಯ
ಏಕನಾಯಕನ ಬೇರು	ಬೇರಿಗಾಗಿ ಇಡೀ ಸಸ್ಯ ಕೀಳುವುದು	ಸಸ್ಯದ ನಿರ್ನಾಮ	ಕೆಲವೇ ಬೇರು ಕತ್ತರಿಸಿ ಪುನಃ ಮಣ್ಣು ಮುಚ್ಚಿ ಗಿಡ ಬೆಳೆಯಲು ಸಹಕರಿಸುವುದು	ನಿರಂತರ ಪೂರೈಕೆ



ಮನೆಗಳ ನಿರ್ಮಾಣಕ್ಕೆ ಬೇಕಾದ ಸಲಕರಣೆಗಳು, ಅಡುಗೆಗೆ ಬೇಕಾದ ಸೊಪ್ಪು, ಹಣ್ಣು, ಗಡ್ಡೆ, ಕಾಯಿ, ಬೀಜಗಳು, ಔಷಧಕ್ಕೆ ಬೇಕಾಗುವ ನಾರು, ಬೇರುಗಳು, ಗುಡಿಕೈಗಾರಿಕೆಗೆ ಬೇಕಾಗುವ ಬೆತ್ತ, ಬಿದಿರು, ಈಚಲು ಹುಲ್ಲು ಜಾನುವಾರುಗಳ ಮೇವು ಮುಂತಾಗಿ ಕಾಡಿನಿಂದ ಪಡೆಯುವ ವಸ್ತುಗಳ ಪಟ್ಟಿ ದೊಡ್ಡದು. ಬಹುತೇಕ ಸಂದರ್ಭಗಳಲ್ಲಿ ಕಾಡನ್ನು ನಾವು ಆದಾಯದ ಮೂಲವಾಗಿ ತೂಗಿದ್ದೇವೆ. ಅರಣ್ಯದ ಹಣ್ಣು ಹಂಪಲುಗಳಲ್ಲಿ ಪರಿಶುದ್ಧ ಪೌಷ್ಟಿಕಾಂಶಗಳನ್ನು ಮರೆತು ಹಣ ಎಣಿಸಲು ನಿಂತಿದ್ದೇವೆ. ಬದುಕಿಗೆ ಇಂತಹ ಕಿರು ಅರಣ್ಯಗಳ ಉತ್ಪನ್ನಗಳ ಗಳಿಕೆ ಅನಿವಾರ್ಯ. ಹಾಗೆಂದ ಮಾತ್ರಕ್ಕೆ ನಾಳೆಗೆ ಉಳಿಸುವ ಗೋಜಿಗೆ ಹೋಗದೆ ಕಣ್ಣು ಮುಚ್ಚಿ ಎಲ್ಲವನ್ನೂ ಇಂದೇ ತೀರಿಸುವ ಧಾವಂತ ಸರಿಯಲ್ಲ. ಹೆಚ್ಚುಗಳಿಸುವ ಹುಚ್ಚಿನ ಹಿಂದೆ ನಮಗರಿವಿಲ್ಲದಂತೆ ಕಾಡಿನ ಕಾಮಧೇನು ಬರಡಾಗುತ್ತಿದೆ. ನಾವು ಕತ್ತಿ ಹಿಡಿದು ಕಾಡು



ನೋಡುವುದರಲ್ಲಿ ಪಳಗಿದ್ದೇವೆ. ಆದರೆ ಗುದ್ದಲಿ ಹಿಡಿದು ಬೆಳೆಸುವಲ್ಲಿ ಸಾಕಷ್ಟು ಹಿಂದೆ ಬಿದ್ದಿದ್ದೇವೆ. ಹಾಗೆ ನೋಡಿದರೆ ಬೆಳೆಸಲು ಹೊರಟಾಗ ನಮ್ಮ ಮಿತಿ ತೀರಚಿಕ್ಕದು. ಉಪ್ಪಾಗೆಯ ಸಸಿಯನ್ನೆ ಉದಾಹರಣೆಗೆ ತೆಗೆದುಕೊಂಡರೆ ಇದನ್ನು ನೆಟ್ಟು ಬೆಳೆಸಿದರೆ ೧೬ ವರ್ಷಗಳಾದರೂ ಫಲ ಬಿಡುವ ಖಾತ್ರಿ ಇಲ್ಲ . ಸುಧಾರಿತ ಕಸಿ ತಂತ್ರಜ್ಞಾನವು ಪ್ರಯೋಜನವಾದೀತೆ ಎಂಬುದು ಈಗಲೂ ಅನುಮಾನವಾಗಿದೆ. ಭೂಮಿಯ ಫಲವತ್ತತೆ, ಕಾಡಿನ ಪರಿಸರ, ಹವಾಮಾನ, ಅಲ್ಲಿ ಬದುಕುವ ಪಕ್ಷಿ, ಕೀಟಗಳ ಜೊತೆ ಸಂಕೀರ್ಣ ಸಂಬಂಧ ಇಂಥ ಸಸ್ಯಗಳ ಬೆಳವಣಿಗೆ ಹಾಗೂ ಫಲ ನೀಡಿಕೆಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಹಾಗಾಗಿ ನಾವು ಸಸಿ ನೆಟ್ಟ ಮಾತ್ರಕ್ಕೆ ಫಲ ದೊರಕುವ ಖಾತ್ರಿ ಇಲ್ಲ. ಪ್ರಕೃತಿಯ ತೊಟ್ಟಿಲಲ್ಲಿ ಬೆಳೆದ ನೈಸರ್ಗಿಕ ಸಸ್ಯ ಸೃಷ್ಟಿಯ ವಿಚಾರದಲ್ಲಿ ನಮ್ಮ ಸಾಮರ್ಥ್ಯ ತೀರ ಕುಬ್ಜ.


ಚಿತ್ರಲೇಖಾ ಮುದ್ರಣ, ಶಿರಸಿ. ಫೋ : 36884

ರಕ್ಷಿಸು

ಹಳೆಯ ತಳಿ ಸಂರಕ್ಷಣೆ



ಜೈನಿ







ಭತ್ತ

ನವಧಾನ್ಯ, ದೆಪಚ

ಪಂಸರ ಸಂರಕ್ಷಣ ಕೇಂದ್ರ, ಶಿರಸಿ (ಉ.ಕ.)

ಬನಗಾಲು ದಿಕ್ಕು!?



ಸಂಪಾದಕ : ಪಾಂಡುರಂಗ ಹೆಗಡೆ

ಕಲೆ, ವಿನ್ಯಾಸ : ಸತೀಶ್ ಯಲ್ಲಾಪುರ

: ಪ್ರಕಟಣೆ :

ಪರಿಸರ ಸಂರಕ್ಷಣ ಕೇಂದ್ರ, ಶಿರಸಿ

ನವಭಾವ, ದೆಹಲಿ

ಒಂದು ಮಾತು..

ಪ್ರಿಯ ರೈತ ಬಾಂಧವರೇ,

ನಾವೀಗ ಜಾಗೃತರಾಗಬೇಕಿದೆ. ವಿಳಂಬಿಸಿದರೆ ಅಪಾಯ ತಪ್ಪಿದ್ದಲ್ಲ. ವೈಜ್ಞಾನಿಕ ಪ್ರಗತಿಯ ಜಾಡಿನಲ್ಲಿ ನಡೆದು ಪಾ ರಂಪರಿಕ ಕೃಷಿ ಅಲಕ್ಷಿಸಿ, ನಿಸರ್ಗ ನಾಶನದ ಮೂಲಕ ನಮ್ಮ ನಾಶಕ್ಕೆ ಎಡೆ ಮಾಡಿಕೊಡುತ್ತಿದ್ದೇವೆ.

* ಒಂದು ಕಾಲದಲ್ಲಿ ಭಾರತ ಳಂ ಸಾವಿರ ವಿಧದ ಭತ್ತದ ಮೂಲತಳಿ ಹೊಂದಿತ್ತು. ಇಂದು ಕೇವಲ ನೂರಾರು ಉಳಿದಿವೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ ಮಾಡಿ ಅಧಿಕ ಇಳುವರಿ ತಳಿ ಬೆಳೆಯಲು ಹೋಗಿ ಭೂಮಿ ಬರಡಾಗಿಸಿದ್ದೇವೆ.

* ಕೃಷಿ ಅರಣ್ಯ ಆಧಾರಿತ. ಅರಣ್ಯ ಗಣನೀಯ ಪ್ರಮಾಣದಲ್ಲಿ ನಾಶವಾಗಿದೆ. ಅರಣ್ಯ ಮೂಲದ ಗೊಬ್ಬರ, ನೈಸರ್ಗಿಕ ಕ್ರಿಮಿನಾಶಕವಾಗಬಲ್ಲ ಸಸ್ಯಗಳು, ಔಷಧೀಯ ಸಸ್ಯಗಳು, ವಿಶಿಷ್ಟ ಹಣ್ಣು ತರಕಾರಿಗಳು ಪಾ.ಗೂ ಕೃಷಿಗೆ ಮಹತ್ವದ ಸಲಕರಣೆಯಾಗುವ ಗಿಡಗಳು ನಾಶವಾಗುತ್ತಿವೆ.


* ಅಧಿಕ ಇಳುವರಿಯ ಸೋಗಿನ 'ಹೈಬ್ರೀಡ್ ತಳಿ ಬೀಜ'ಗಳ ಹಿನ್ನೆಲೆ ಏನು? ರೈತ ಇದರಿಂದ ಪಡುತ್ತಿರುವ ತೊಂದರೆಗಳೇನು?

* ಭಾರತಕ್ಕೆ 'ಹೊಸತಳಿ' (ಸಸ್ಯ ಹಾಗೂ ಪ್ರಾಣಿ) ಎಷ್ಟರ ಮಟ್ಟಿಗೆ ಲಾಭ ತಂದಿದೆ?

* ನಾವು ಮಾಡುತ್ತಿರುವ ಕೃಷಿಗೂ, ಅಂತರರಾಷ್ಟ್ರೀಯ ಕಂಪನಿಗಳಿಗೂ ಯಾವ ತರಹದ ಸಂಬಂಧವಿದೆ?

* ನಮ್ಮ ಪಾರಂಪರಿಕ ಕೃಷಿ ಮತ್ತೆ ಬೆಳೆಸುವ, ಹಳೆ ತಳಿಗಳನ್ನು ರಕ್ಷಿಸುವ ಅಗತ್ಯತೆ ಏನು?

ಇವುಗಳಿಗೆ ಉತ್ತರ ರೂಪವಾಗಿ ಒಂದಷ್ಟು ಮಾಹಿತಿ ಮುಂದಿನ ಪುಟದಲ್ಲಿದೆ.



ಹೊಸತಳಿಗಳಿಂದರೆ ಹೊಸ ಸಮಸ್ಯೆಗಳಿಂದು ಅನುಭವವೇದ್ಯ. ಮೊದ ಮೊದಲು ಉತ್ತಮ ಫಲಿತಾಂಶ. ಬರಬರುತ್ತ ಹೊಸಹೊಸ ರೋಗಗಳು. ಹೊಸ ಹೊಸ ರಾಸಾಯನಿಕ ರೋಗ ನಿವಾರಕಗಳು. ಬೆಳೆ ರಕ್ಷಣೆಗೆ ಇವನ್ನು ಬಳಕೆ ಮಾಡಹೋಗಿ ಭೂಮಿ ಬರಡಾಗಿದೆ. ಉಪಯುಕ್ತ ಕೀಟ-ಪ್ರಾಣಿಗಳೂ ಕೀಟ ನಾಶಕದಿಂದ ನಾಶವಾಗಿದೆ. ಎರೆಹುಳು, ಕಪ್ಪೆ, ಹಾವು ಇದನ್ನೇ ಗಮನಿಸಿ. ಕೀಟನಾಶಕದ ಅಂಶ ಭತ್ತದ ಹುಲ್ಲಿನ ಮೇಲೆ ಗಾಢ ದುಷ್ಪರಿಣಾಮ ಬೀರಿ ದನಕರುಗಳಿಗೆ ಅಪಾಯಘನ್ನುಂಟುಮಾಡಿದೆ. ಅದರಿಂದ ಪಡೆಯುವ ಹಾಲು ವಿಷಪೂರಿತವಾಗಿದೆ.



* ಹೊಸತಳಿ ಮೇವಿಗೂ ಸರಿಬಾರದು. ಅದೇ ಹಳೇ ತಳಿಯ ಭತ್ತದ ಹುಲ್ಲು ಮೂರುಪರೆ ಅಡಿಯಿಂದ ಐದೂವರೆ ಅಡಿಗೂ ಹೆಚ್ಚು, ಎತ್ತರ ಬೆಳೆದು ಪೌಷ್ಟಿಕ ಮೇವಿನ ಗುಣ ಹೊಂದಿರುತ್ತದೆ.




* ಹಳೆಯ ತಳಿಗಳಿಗೆ ನಿಸರ್ಗದತ್ತ ರೋಗನಿರೋಧಕ ಶಕ್ತಿ ಹೆಚ್ಚಿದೆ.
* ಕಳೆ ಬೆಳೆದರೂ ಅದನ್ನು ಮೀರಿ ಸೊಕ್ಕಿ ಬೆಳೆಯುವುದು.

* ಹಳೆಯ ತಳಿಯ ಅಕ್ಕಿ ಊಟಕ್ಕೂ ರುಚಿಕರ!



* ನೆಲ್ಲಿ, ಕಾಸರಕ, ಅಣಲೆ, ತಾರೆಕಾಯಿ, ಕವಲು, ಗೋಮೂತ್ರ ಸುಲಭದಲ್ಲಿ ಲಭ್ಯವಾಗಬಲ್ಲ ಉತ್ತಮ ಕ್ರಿಮಿನಾಶಕಗಳು.




- ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಅರಣ್ಯ ನಾಶವಾಗಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.
- ಹಸಿರು ಬಾಳಿನ ಉಸಿರು. ಕೃಷಿಗೆ ಅವಶ್ಯವುಳ್ಳ ನೀರಿನ ತೊರೆಗಳು ಬತ್ತಿವೆ. ನಾರಿನ ಗಿಡಗಳು, ಬೈನೆ ಮರ, ರೊಮ್ಮನ ಸೊಪ್ಪು, ಕಾಸರಕ ಮುಂತಾದ ಮಹತ್ವದ ಮರಗಳು ನಾಶವಾಗಿವೆ.



- ಅರಣ್ಯಾಭಿವೃದ್ಧಿ ಹೆಸರಿನಲ್ಲಿ ಸರಕಾರ ಪ್ಲಾಂಟೇಶನ್ ಮಾಡುತ್ತದೆ. ಅರಣ್ಯೀಕರಣದ ಉದ್ದೇಶಕ್ಕಿಂತ ಕೈಗಾರಿಕೀಕರಣದ ಉದ್ದೇಶ ಎದ್ದುತೋರುತ್ತದೆ.


- ಹಸಿರಿನಿಂದ ತುಂಬಿದ ಬೆಟ್ಟವಿರಬೇಕಾದಲ್ಲಿ ಬೋಳು ಬೋಳು. ಅದರಂಚಿನ ತೋಟ ನಮ್ಮವು. ತಂಪಿಲ್ಲ. ರಾಸಾಯನಿಕ ಗೊಬ್ಬರಗಳ, ಕ್ರಿಮಿನಾಶಕಗಳ ಬಳಕೆ ಹೆಚ್ಚು. ಕೊಳೆರೋಗ ಕಡಿಮೆ ಆಗಿಲ್ಲ. ಫಸಲಿನ ಪ್ರಮಾಣ ಹೆಚ್ಚಿಲ್ಲ. ಅಡಿಕೆಯ ಉಪಬೆಳೆ ಮೆಣಸು ಸುಟ್ಟು ಹಳದಿಯಾಗಿ ಉದುರುತ್ತಿವೆ. ಬಾಳೆ ಕಟ್ಟಿಗೆ ಬಲಿಯಾಗಿದೆ.



- ನಿಸರ್ಗದತ್ತವಾಗಿ ಭೂಮಿ ಹೊಂದಬೇಕಾದ ಸತ್ವವನ್ನು ಬಿಟ್ಟು, ಕೃತಕ ಸತ್ವ ನೀಡುತ್ತಿದ್ದೇವೆ. ಭೂಮಿತಾಯಿ ಬರಡಾಗುತ್ತಿದ್ದಾಳೆ.

- ನಿಸರ್ಗವೇ ಉತ್ತಮ ಗೊಬ್ಬರದ ಮೂಲಗಳನ್ನು ತೋರಿಸಿದೆ. ಕ್ರಿಮಿನಾಶಕಗಳನ್ನು ತೋರಿಸಿದೆ. ಇದಕ್ಕೆ ಹೊಂದುವಂತಹ ತಳಿಗಳನ್ನು ಸಾವಿರಾರು ವರ್ಷದಿಂದ ರೈತ ಬೆಳೆಯುತ್ತಿದ್ದಾನೆ. ವೃಥಾ ಅಧಿಕ ಇಳುವರಿಯ ದುರಾಸೆಗೆ ಬಲಿಯಾಗುವುದೇ?






ರೈತ ಶತ್ರು 'ಡಂಕೆಲ್'

ಕೃಷಿಕನಿಗೆ ಗೊತ್ತಿರುವ ಎಲ್ಲ ರೋಗಗಳನ್ನೂ ಮೀರಿ ನಿಲ್ಲುವ ರೈತನ ರಕ್ತ ಬೆವರು ಹೀರುವ ಶ್ರೀಮಂತ ರಾಷ್ಟ್ರಗಳು ಅಂಟಿಸುತ್ತಿರುವ ಹೊಸರೋಗ ಈ 'ಪೇಟೆಂಟ್' ನೀತಿ.

''ಸುಬ್ಬಣ್ಣ ಟೊಮೇಟೋ ಬೆಳೆಯುವ ರೈತ. 'ಹೈಬ್ರಿಡ್‌ತಳಿ ಬೀಜ' ಖರೀದಿಸಿದ್ದಾನೆ. ದೊಡ್ಡ ದೊಡ್ಡ ಟೊಮ್ಯಾಟೋ, ಬಹಳ ಫಸಲು ಎಲ್ಲ ಬಂತು. ಮೂರನೇ ವರ್ಷ ತಾನು ಬೆಳೆದ ಟೊಮೇಟೋದಿಂದ ಸಂಗ್ರಹಿಸಿದ ಬೀಜ ಬಿತ್ತಲು ಮುಂದಾದ. ಆದರೆ ಈ ಮೊದಲು ಅವನಿಗೆ ಹೈಬ್ರಿಡ್ ತಳಬೀಜ ನೀಡಿದ್ದ ಶ್ರೀಮಂತ ರಾಷ್ಟ್ರದ ಬೀಜದ ಕಂಪೆನಿ ಅವನಿಗೆ ಬೀಜ ಬಿತ್ತಲು ಬಿಡುವುದಿಲ್ಲ. ಬೀಜದ ಮೇಲೆ ತನಗೆ ಸಂಪೂರ್ಣ ಹಕ್ಕಿದೆ. ಬೀಜ ಬೇಕಿದ್ದರೆ ಕಂಪೆನಿಗೆ ಸುಬ್ಬಣ್ಣ ಹೆಚ್ಚು ಹಣತೆತ್ತು ಮತ್ತೆ ಖರೀದಿಸಬೇಕು ಎನ್ನುತ್ತದೆ. ಸುಬ್ಬಣ್ಣ ತಾನು ಬೆಳೆದ ಟೊಮೇಟೋವಿನ ಬೀಜದ ಮೇಲಿನ ಹಕ್ಕು ಅವನಿಗೆ ಗೊತ್ತಿರದಂತೆ ಕಳೆದುಕೊಂಡಿರುತ್ತಾನೆ''.



ಬಹುರಾಷ್ಟ್ರೀಯ ಕಂಪೆನಿಗಳು ನಮ್ಮಂಥ ಬಡ ರಾಷ್ಟ್ರಗಳ ಕೃಷಿ ಕ್ಷೇತ್ರಕ್ಕೆ ಲಗ್ಗೆ ಇಟ್ಟು ಇಲ್ಲಿನ ಫಸಲುಗಳಲ್ಲಿನ ವಿಶೇಷ ಗುಣಗಳನ್ನು ಸಂಗ್ರಹಿಸಿ ಪ್ರಯೋಗ ನಡೆಸಿ ಹೊಸತಳಿ ಸೃಷ್ಟಿ ಮಾಡಿ ಪೇಟೆಂಟ್ (ಹಕ್ಕು) ಮಾಡಿಕೊಂಡು ನಮ್ಮ ಆರ್ಥಿಕ ಶಕ್ತಿ ಹೀರುವುದು. ಇಷ್ಟೇ ಅಲ್ಲ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಮಾರಾಟದಿಂದ ಅಧಿಕ ಲಾಭ ಗಳಿಸುವುದರೊಂದಿಗೆ ನಮ್ಮ ರೈತ ಆಧುನಿಕ ಕೃಷಿಗೆ ಅವರನ್ನೇ ಅವಲಂಬಿಸುವಂತೆ ಮಾಡಿದೆ. ಭೋಪಾಲ್‌ನ 'ಯೂನಿಯನ್ ಕಾರ್ಬೈಡ್' ಎಂಬ ಕ್ರಿಮಿನಾಶಕ ತಯಾರಿಕೆಯ ಕಾರ್ಖಾನೆ ನೆನಪಿಸಿಕೊಳ್ಳಿ. ಕೆಲ ವರ್ಷಗಳ ಕೆಳಗೆ ಈ ಕಾರ್ಖಾನೆಯಲ್ಲಿ ಆದ ಅನಾಹುತವನ್ನು ನಾವು ಶತ ಶತಮಾನ ಅನುಭವಿಸುವಂತಾಗಿದೆ.


ಇಲ್ಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ. ಶ್ರೀಮಂತ ರಾಷ್ಟ್ರದ ಕಂಪೆನಿಗಳು ಬಡ ರಾಷ್ಟ್ರದ ರೈತನ ವ್ಯವಸಾಯ ಸ್ವಾತಂತ್ರ್ಯವನ್ನು ಹಂತ ಹಂತವಾಗಿ ಕಸಿಯುತ್ತಿವೆ ಎಂಬುದು.

ಇವೆಲ್ಲ ವಿಚಾರಗಳು ಜಿನೀವಾದ ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟಾರಿಫ್ ಮಹಾನಿರ್ದೇಶಕ ಆರ್ಥರ್ ಡಂಕೆಲ್‌ನೆಂಬವನ ಪ್ರಸ್ತಾವನೆಯ ಕರಾಳ ಛಾಯೆಗಳು. ಈ ಪ್ರಸ್ತಾವನೆಗೆ ಭಾರತ ಸಹಿ ಹಾಕಿದರೆ ರೈತ ಕೆಟ್ಟೆಂತೆಯೇ! ಏಕೆಂದರೆ ಈ ಡಂಕೆಲ್ ಪ್ರಸ್ತಾವನೆ, ಹಕ್ಕುಗಳನ್ನು ಪಡೆದು ಭಾರತದ ಬಡ ರೈತ ತನ್ನ ಫಸಲಿನಲ್ಲಿ ಮರುವರ್ಷ ಬಿತ್ತನೆಗಾಗಿ ಕಾದಿಡುತ್ತಿದ್ದ ಬೀಜವನ್ನು ಉಪಯೋಗಿಸದಂತೆ ಒತ್ತಡ ತರಲಿದೆ!

ತಾನು ಬೆಳೆದ ಬೀಜವನ್ನು ಬಿತ್ತದ ಪರಿಸ್ಥಿತಿಯಲ್ಲಿ ರೈತನ ವಿನಾಶ ಖಂಡಿತ. ವಿನಾಶ ತಡೆಯಲು ಜಾಗೃತಿ ಅವಶ್ಯ.



ನಾಗಪ್ಪನ ಹೊಲದಿಂದ
ಜಡ್ಡನ ಮಡ್ಲು ಹಳೆತಳಿ
ಭತ್ತದ ಅಪಹರಣ




ಬಯೋಟೆಕ್ನೀಯ ತಂಬಾಸಿ
ತ್ರಿಯೋಗಾಲಯ




ರೋಗ ನಿರೋಧಕ ಶಕ್ತಿ ಹೆಚ್ಚುಳ್ಳ
ತಳಿ ಇದು.. ನಮ್ಮ ಭತ್ತಕ್ಕೆ
ಇದನ್ನು ಸಂಯೋಗಗೊಳಿಸಿ
ಹೊಸ ತಳಿ ತಯಾರಿಸಿ!


ನಂತರ




' ತಗೊಳ್ಳಿ.. ಹೊಸ ತಳಿ
ಬೀಜ ಕಳು!



ಇದರ ಮೇಲೆ ನಮ್ಮ
'ಪೇಟೆಂಟ್ (ಹಕ್ಕು) ಇದೆ!



ನಾಗಪ್ಪ ನೀನು ಜಡ್ಡನಮಣ್ಣು
ಬೀಜ ಬಿತ್ತಬಾರದು.. ಅದರ ವಿಶಿಷ್ಟ
ಗುಣದ ಮೇಲೆ ನಮ್ಮ 'ಪೇಟೆಂಟ್'
ಇದೆ. ಹಕ್ಕು ಹೊಂದಿದ್ದೇವೆ.



ನೀನು ಹೆಬ್ಬುಹಣ್ಣ
ನೀಡಿ ನಮ್ಮ
ಹೈಬ್ರಿಡ್ ಬೀಜ
ಖರೀದಿಸು






ಹೆಚ್ಚಿಗೆ ಬೆಳೆದರೆ
ನೀನು ಹಣ ಕೊಡ್ಲೇಕು..
.. ಇಲ್ಲಾ ನಿಮ್ಮ
ಸರಕಾರದಿಂದ
ವಸೂಲು ಮಾಡ್ತೇವೆ!




ಬೀಜದ ಬಾಕ್ಸು!



ನಿಮ್ಮ ಹೊಸ ತಳಿ
ಬೀಜ ಕೊಡಿ




ಸಿದ್ದಪ್ಪ, ಹೊಸ ಬೀಜ ಖರೀದಿಸಿ
ತಂದಿದ್ದೇನೆ.. ಮುಂದಿನ ಸಲ ನಾನೇ
ನಿನಗೆ ಬೀಜಗಳನ್ನು ಕೊಡ್ತೀನಿ!
ವಿದೇಶೀ ತಳಿ!!



ರಾಮಣ್ಣೋರೆ, ನಿಮ್ಗೆ ವಿಷಯ ಗೊತ್ತಿಲ್ಲ,
ಆ ವಿದೇಶೀ ಕಂಪೆನಿ ಬೀಜ ನನ್ನ ಬಳಿ
ಇದೆ. ಕಳೆದ ಬಾರಿ ತಂದು ಬೆಳೆದಿದ್ದು,
ಈ ವರ್ಷ ಆ ಬೀಜ ನಾನು ಬೆಳೆಯಲು
ಬರದೆನ್ನುತ್ತಾರೆ ಅವರು.. ಹೆಚ್ಚು
ಹಣ ಕೊಟ್ಟು ಅವರ ಬಳಿಯೇ
ಖರೀದಿಸಬೇಕಂತೆ!

ಬೀಜ ಸತ್ಯಾಗ್ರಹ ಪ್ರಸರಣ

– ಒಂದು ಭಾಗದ ನೋಟ –



RATNACHUDA (Name of traditional Paddy Variety)

(CONSERVATION OF GENETIC RESOURCES)


NAVADANYA, DELHI

PSK - SIRSI


ರಕ್ಷಿಸು

ಹಳೆಯ ತಳಿ ಸಂರಕ್ಷಣೆ









ನವಧಾನ್ಯ. ದೆಹಲಿ

ಪಂಸರ ಸಂರಕ್ಷಣ ಕೇಂದ್ರ, ಶಿರಸಿ (ಉ.ಕ.)

FARMER

AT CROSS ROADS

NOTE : YOU CAN USE THIS MATERIAL.
BUT PLEASE MENTION THE
SOURCE

EDITOR : PANDURANG HEGDE

ART/DESIGN: SATEESH YELLAPUR

PUBLISHED BY: PARISARA SANMRAKSHANA KENDRA,
SIRSI

NAVADANYA, DELHI

ಬನಗಾರು ದಿಕ್ಕು?!



ಸಂಪಾದಕ : ಪಾಂಡುರಂಗ ಹೆಗಡೆ
ಕಲೆ, ವಿನ್ಯಾಸ : ಸತೀಶ್ ಯಲ್ಲಾಪುರ

: ಪ್ರಕಟಣೆ :

ಪರಿಸರ ಸಂರಕ್ಷಣ ಕೇಂದ್ರ, ಶಿರಸಿ
ನವಧಾನ್ಯ, ದೆಹಲಿ

LISTEN. . . . . .

Dear Farmer Friends,

The so called development in agriculture has destroyed the nature and is going to destroy farmers. We have to become aware. It is not too late.

* In India farmers cultivated 40000 rice varieties. Many varieties have become extinct. Only some varieties exist today. By adopting high yielding varieties we have destroyed earth.

* Agriculture is dependent on forests. From forests we get manure, natural pesticides, medicinal herbs, fruits and vegitables. But forests are disappearing, creating erosion of genetic resources.

* What is the background of HYV? What are the problems of farmers using HYV?

* What is the link between agriculture and multinationals?

* How, and why should we conserve the genetic resources?

We have tried to answer these questions in the following pages.

ಒಂದು ಮಾತು..

ಪ್ರಿಯ ರೈತ ಬಾಂಧವರೇ,

ನಾವೀಗ ಜಾಗೃತರಾಗಬೇಕಿದೆ. ವಿಳಂಬಿಸಿದರೆ ಅಪಾಯ ತಪ್ಪಿದ್ದಲ್ಲ. ವೈಜ್ಞಾನಿಕ ಪ್ರಗತಿಯ ಜಾಡಿನಲ್ಲಿ ನಡೆದು ಪಾ ರಂಪರಿಕ ಕೃಷಿ ಅಲಕ್ಷಿಸಿ, ನಿಸರ್ಗ ನಾಶನದ ಮೂಲಕ ನಮ್ಮ ನಾಶಕ್ಕೆ ಎಡೆ ಮಾಡಿಕೊಡುತ್ತಿದ್ದೇವೆ.

* ಒಂದು ಕಾಲದಲ್ಲಿ ಭಾರತ ಳಂ ಸಾವಿರ ವಿಧಿಧ ಭತ್ತದ ಮೂಲತಳಿ ಹೊಂದಿತ್ತು. ಇಂದು ಕೇವಲ ನೂರಾರು ಉಳಿದಿವೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ ಮಾಡಿ ಅಧಿಕ ಇಳುವರಿ ತಳಿ ಬೆಳೆಯಲು ಹೋಗಿ ಭೂಮಿ ಬರಡಾಗಿಸಿದ್ದೇವೆ.

* ಕೃಷಿ ಅರಣ್ಯ ಆಧಾರಿತ. ಅರಣ್ಯ ಗಣನೀಯ ಪ್ರಮಾಣದಲ್ಲಿ ನಾಶವಾಗಿದೆ. ಅರಣ್ಯ ಮೂಲದ ಗೊಬ್ಬರ, ನೈಸರ್ಗಿಕ ಕ್ರಿಮಿನಾಶಕವಾಗಬಲ್ಲ ಸಸ್ಯಗಳು, ಔಷಧೀಯ ಸಸ್ಯಗಳು, ವಿಶಿಷ್ಟ ಹಣ್ಣು, ತರಕಾರಿಗಳು ಪಾ.ಗೂ ಕೃಷಿಗೆ ಮಹತ್ವದ ಸಲಕರಣೆಯಾಗುವ ಗಿಡಗಳು ನಾಶವಾಗುತ್ತಿವೆ.

* ಅಧಿಕ ಇಳುವರಿಯ ಸೋಗಿನ 'ಹೈಬ್ರೀಡ್ ತಳಿ ಬೀಜ'ಗಳ ಹಿನ್ನೆಲೆ ಏನು? ರೈತ ಇದರಿಂದ ಪಡುತ್ತಿರುವ ತೊಂದರೆಗಳೇನು?

* ಭಾರತಕ್ಕೆ 'ಹೊಸತಳಿ' (ಸಸ್ಯ ಹಾಗೂ ಪ್ರಾಣಿ) ಎಷ್ಟರ ಮಟ್ಟಿಗೆ ಲಾಭ ತಂದಿದೆ?

* ನಾವು ಮಾಡುತ್ತಿರುವ ಕೃಷಿಗೂ, ಅಂತರರಾಷ್ಟ್ರೀಯ ಕಂಪನಿಗಳಿಗೂ ಯಾವ ತರಹದ ಸಂಬಂಧವಿದೆ?

* ನಮ್ಮ ಪಾರಂಪರಿಕ ಕೃಷಿ ಮತ್ತೆ ಬೆಳೆಸುವ, ಹಳೆ ತಳಿಗಳನ್ನು ರಕ್ಷಿಸುವ ಅಗತ್ಯತೆ ಏನು?

ಇವುಗಳಿಗೆ ಉತ್ತರ ರೂಪವಾಗಿ ಒಂದಷ್ಟು ಮಾಹಿತಿ ಮುಂದಿನ ಪುಟದಲ್ಲಿದೆ.

The new high yielding varieties have brought new problems with them. Initially the yield is high. Gradually the pests increase and more pesticides is a must. Earth-worm, frog and insects that are farmers friends have disappeared. The hay also has residues of pesticides. This has polluted our milk.

* New varieties is not useful for fodder. But traditional varieties is a good fodder source.


* Indigenous varieties are pest resistance.

* Indigenous varieties are weed resistant.

* The taste of indigenous variety is better!

* Nelli (Phylanthus Emblica) Anale (Terminalia Chebula)
Kasarka(Strichnos Nux-vomica) Kavalu(Caria Arboria)


these are locally available pesticides
(Plant based).



ಹೊಸತಳಿಗಳಿಂದರೆ ಹೊಸ ಸಮಸ್ಯೆಗಳಿಂದು ಅನುಭವವೇದ್ಯ. ಮೊದ ಮೊದಲು ಉತ್ತಮ ಫಲಿತಾಂಶ. ಬರಬರುತ್ತ ಹೊಸಹೊಸ ರೋಗಗಳು. ಹೊಸ ಹೊಸ ರಾಸಾಯನಿಕ ರೋಗ ನಿವಾರಕಗಳು. ಬೆಳೆ ರಕ್ಷಣೆಗೆ ಇವನ್ನು ಬಳಕೆ ಮಾಡಹೋಗಿ ಭೂಮಿ ಬರಡಾಗಿದೆ. ಉಪಯುಕ್ತ ಕೀಟ-ಪ್ರಾಣಿಗಳೂ ಕೀಟ ನಾಶಕದಿಂದ ನಾಶವಾಗಿದೆ. ಎರೆಹುಳು, ಕಪ್ಪೆ, ಹಾವು ಇದನ್ನೇ ಗಮನಿಸಿ. ಕೀಟನಾಶಕದ ಅಂಶ ಭತ್ತದ ಹುಲ್ಲಿನ ಮೇಲೆ ಗಾಢ ದುಷ್ಪರಿಣಾಮ ಬೀರಿ ದನಕರುಗಳಿಗೆ ಅಪಾಯಘನ್ನುಂಟುಮಾಡಿದೆ. ಅದರಿಂದ ಪಡೆಯುವ ಹಾಲು ವಿಷಪೂರಿತವಾಗಿದೆ.

* ಹೊಸತಳಿ ಮೇವಿಗೂ ಸರಿಬಾರದು. ಅದೇ ಹಳೇ ತಳಿಯ ಭತ್ತದ ಹುಲ್ಲು ಮೂರುಪರೆ ಅಡಿಯಿಂದ ಐದೂವರೆ ಅಡಿಗೂ ಹೆಚ್ಚು ಎತ್ತರ ಬೆಳೆದು ಪೌಷ್ಟಿಕ ಮೇವಿನ ಗುಣ ಹೊಂದಿರುತ್ತದೆ.





* ಹಳೆಯ ತಳಿಗಳಿಗೆ ನಿಸರ್ಗದತ್ತ ರೋಗನಿರೋಧಕ ಶಕ್ತಿ ಹೆಚ್ಚಿದೆ.
* ಕಳೆ ಬೆಳೆದರೂ ಅದನ್ನು ಮೀರಿ ಸೊಕ್ಕಿ ಬೆಳೆಯುವುದು.

* ಹಳೆಯ ತಳಿಯ ಅಕ್ಕಿ ಊಟಕ್ಕೂ ರುಚಿಕರ!



* ನೆಲ್ಲಿ, ಕಾಸರಕ, ಅಣಲೆ, ತಾರೆಕಾಯಿ, ಕವಲು, ಗೋಮೂತ್ರ ಸುಲಭದಲ್ಲಿ ಲಭ್ಯವಾಗಬಲ್ಲ ಉತ್ತಮ ಕ್ರಿಮಿನಾಶಕಗಳು.


* Nature has genetic resources that can be used as pesticides similarly farmers have evolved crops suitable to soil. Shall we scumb to the temptation of new varieties.

Leaves
as
fertiligers

Natural
Pesticides

- ನಿಸರ್ಗವೇ ಉತ್ತಮ ಗೊಬ್ಬರದ ಮೂಲಗಳನ್ನು ತೋರಿಸಿದೆ. ಕ್ರಿಮಿನಾಶಕಗಳನ್ನು ತೋರಿಸಿದೆ. ಇದಕ್ಕೆ ಹೊಂದುವಂತಹ ತಳಿಗಳನ್ನು ಸಾವಿರಾರು ವರ್ಷದಿಂದ ರೈತ ಬೆಳೆಯುತ್ತಿದ್ದಾನೆ. ವೃಥಾ ಅಧಿಕ ಇಳುವರಿಯ ದುರಾಸೆಗೆ ಬಲಿಯಾಗುವುದೇ?






- The destruction of forests in Uttara Kannada is obvious.

- This has dried up our streams. Trees that are useful to farmers have become rare and some are extinct.

- The government is planting trees that can get more revenue.

- The fertility of soil has gone down. The diversity in spice garden has been destroyed.

- By adding chemical fertilisers we are destroying our soil.




- ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಅರಣ್ಯ ನಾಶವಾಗಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.
- ಹಸಿರು ಬಾಳಿನ ಉಸಿರು. ಕೃಷಿಗೆ ಅವಶ್ಯವುಳ್ಳ ನೀರಿನ ತೊರೆಗಳು ಬತ್ತಿವೆ. ನಾರಿನ ಗಿಡಗಳು, ಬೈನೆ ಮರ, ರೊಮ್ಮನ ಸೊಪ್ಪು, ಕಾಸರಕ ಮುಂತಾದ ಮಹತ್ವದ ಮರಗಳು ನಾಶವಾಗಿವೆ.


ಅರಣ್ಯ ವೈವಿಧ್ಯತೆಯೂ ನಾಶ

- ಅರಣ್ಯಾಭಿವೃದ್ಧಿ ಹೆಸರಿನಲ್ಲಿ ಸರಕಾರ ಪ್ಲಾಂಟೇಶನ್ ಮಾಡುತ್ತದೆ. ಅರಣ್ಯೀಕರಣದ ಉದ್ದೇಶಕ್ಕಿಂತ ಕೈಗಾರಿಕೀಕರಣದ ಉದ್ದೇಶ ಎದ್ದುತೋರುತ್ತದೆ.

- ಹಸಿರಿನಿಂದ ತುಂಬಿದ ಬೆಟ್ಟವಿರಬೇಕಾದಲ್ಲಿ ಬೋಳು ಬೋಳು. ಅದರಂಬಿನ ತೋಟ ನಮ್ಮವು. ತಂಪಿಲ್ಲ. ರಾಸಾಯನಿಕ ಗೊಬ್ಬರಗಳ, ಕ್ರಿಮಿನಾಶಕಗಳ ಬಳಕೆ ಹೆಚ್ಚು. ಕೊಳೆರೋಗ ಕಡಿಮೆ ಆಗಿಲ್ಲ. ಫಸಲಿನ ಪ್ರಮಾಣ ಹೆಚ್ಚಿಲ್ಲ. ಅಡಿಕೆಯ ಉಪಬೆಳೆ ಮೆಣಸು ಸುಟ್ಟು ಹಳದಿಯಾಗಿ ಉದುರುತ್ತಿವೆ. ಬಾಳೆ ಕಟ್ಟೆಗೆ ಬಲಿಯಾಗಿದೆ.



- ನಿಸರ್ಗದತ್ತವಾಗಿ ಭೂಮಿ ಹೊಂದಬೇಕಾದ ಸತ್ವವನ್ನು ಬಿಟ್ಟು, ಕೃತಕ ಸತ್ವ ನೀಡುತ್ತಿದ್ದೇವೆ. ಭೂಮಿತಾಯಿ ಬರಡಾಗುತ್ತಿದ್ದಾಳೆ.

DUNKEL DRAFT 'The Enemy of farmers'

Farmers have experienced disease to their crops. But the so called developed nations are forcing poor countries to introduce another deadly disease. This is 'Patents' issue.

"Subbanna grows hybrid tomatoes. He gets good yield. However, when he plans to sow the seeds of this tomato, the multinational company that has patents on it prohibits him from sowing. It says that the company has PATENT on it. If he wants to sow, he should purchase it from the company. The farmer loses his right to sow his own seeds".

Multinational companies have earned huge profits from sale of fertilisers and pesticides. Remember Bhopal? This is the gift of multinationals. Now they are targetting on "Seeds". The indigenous varieties are a resource to make profits.

The developed nations are gradually taking away the decision making power of farmers in poorer countries.


These are the basic features of Dunkel draft. If India accepts this, then the farmers will loose their right to grow crops from his own seeds.

This will destroy farmers. So, we should become aware to resist it.

ರೈತ ಶತ್ರು 'ಡಂಕೆಲ್'

ಕೃಷಿಕನಿಗೆ ಗೊತ್ತಿರುವ ಎಲ್ಲ ರೋಗಗಳನ್ನೂ ಮೀರಿ ನಿಲ್ಲುವ ರೈತನ ರಕ್ತ ಬೆವರು ಹೀರುವ ಶ್ರೀಮಂತ ರಾಷ್ಟ್ರಗಳು ಅಂಟಿಸುತ್ತಿರುವ ಹೊಸರೋಗ ಈ 'ಪೇಟೆಂಟ್' ನೀತಿ.

''ಸುಬ್ಬಣ್ಣ ಟೊಮೇಟೋ ಬೆಳೆಯುವ ರೈತ. 'ಹೈಬ್ರಿಡ್‌ತಳಿ ಬೀಜ' ಖರೀದಿಸಿದ್ದಾನೆ. ದೊಡ್ಡ ದೊಡ್ಡ ಟೊಮ್ಯಾಟೋ, ಬಹಳ ಫಸಲು ಎಲ್ಲ ಬಂತು. ಮೂರನೇ ವರ್ಷ ತಾನು ಬೆಳೆದ ಟೊಮೇಟೋದಿಂದ ಸಂಗ್ರಹಿಸಿದ ಬೀಜ ಬಿತ್ತಲು ಮುಂದಾದ. ಆದರೆ ಈ ಮೊದಲು ಅವನಿಗೆ ಹೈಬ್ರಿಡ್ ತಳಿಬೀಜ ನೀಡಿದ್ದ ಶ್ರೀಮಂತ ರಾಷ್ಟ್ರದ ಬೀಜದ ಕಂಪೆನಿ ಅವನಿಗೆ ಬೀಜ ಬಿತ್ತಲು ಬಿಡುವುದಿಲ್ಲ. ಬೀಜದ ಮೇಲೆ ತನಗೆ ಸಂಪೂರ್ಣ ಹಕ್ಕಿದೆ. ಬೀಜ ಬೇಕಿದ್ದರೆ ಕಂಪೆನಿಗೆ ಸುಬ್ಬಣ್ಣ ಹೆಚ್ಚು ಹಣತೆತ್ತು ಮತ್ತೆ ಖರೀದಿಸಬೇಕು ಎನ್ನುತ್ತದೆ. ಸುಬ್ಬಣ್ಣ ತಾನು ಬೆಳೆದ ಟೊಮೇಟೋವಿನ ಬೀಜದ ಮೇಲಿನ ಹಕ್ಕು ಅವನಿಗೆ ಗೊತ್ತಿರದಂತೆ ಕಳೆದುಕೊಂಡಿರುತ್ತಾನೆ''.



ಬಹುರಾಷ್ಟ್ರೀಯ ಕಂಪೆನಿಗಳು ನಮ್ಮಂಥ ಬಡ ರಾಷ್ಟ್ರಗಳ ಕೃಷಿ ಕ್ಷೇತ್ರಕ್ಕೆ ಲಗ್ಗೆ ಇಟ್ಟು ಇಲ್ಲಿನ ಫಸಲುಗಳಲ್ಲಿನ ವಿಶೇಷ ಗುಣಗಳನ್ನು ಸಂಗ್ರಹಿಸಿ ಪ್ರಯೋಗ ನಡೆಸಿ ಹೊಸತಳಿ ಸೃಷ್ಟಿ ಮಾಡಿ ಪೇಟೆಂಟ್ (ಹಕ್ಕು) ಮಾಡಿಕೊಂಡು ನಮ್ಮ ಆರ್ಥಿಕ ಶಕ್ತಿ ಹೀರುವುದು. ಇಷ್ಟೇ ಅಲ್ಲ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಮಾರಾಟದಿಂದ ಅಧಿಕ ಲಾಭ ಗಳಿಸುವುದರೊಂದಿಗೆ ನಮ್ಮ ರೈತ ಆಧುನಿಕ ಕೃಷಿಗೆ ಅವರನ್ನೇ ಅವಲಂಬಿಸುವಂತೆ ಮಾಡಿದೆ. ಭೋಪಾಲ್‌ನ 'ಯೂನಿಯನ್ ಕಾರ್ಬೈಡ್' ಎಂಬ ಕ್ರಿಮಿನಾಶಕ ತಯಾರಿಕೆಯ ಕಾರ್ಖಾನೆ ನೆನಪಿಸಿಕೊಳ್ಳಿ. ಕೆಲ ವರ್ಷಗಳ ಕೆಳಗೆ ಈ ಕಾರ್ಖಾನೆಯಲ್ಲಿ ಆದ ಅನಾಹುತವನ್ನು ನಾವು ಶತ ಶತಮಾನ ಅನುಭವಿಸುವಂತಾಗಿದೆ.

ಇಲ್ಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ. ಶ್ರೀಮಂತ ರಾಷ್ಟ್ರದ ಕಂಪೆನಿಗಳು ಬಡ ರಾಷ್ಟ್ರದ ರೈತನ ವ್ಯವಸಾಯ ಸ್ವಾತಂತ್ರ್ಯವನ್ನು ಹಂತ ಹಂತವಾಗಿ ಕಸಿಯುತ್ತಿವೆ ಎಂಬುದು.

ಇವೆಲ್ಲ ವಿಚಾರಗಳು ಜಿನೀವಾದ ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟಾರಿಫ್ ಮಹಾನಿರ್ದೇಶಕ ಆರ್ಥರ್ ಡಂಕೆಲ್‌ನೆಂಬವನ ಪ್ರಸ್ತಾವನೆಯ ಕರಾಳ ಛಾಯೆಗಳು. ಈ ಪ್ರಸ್ತಾವನೆಗೆ ಭಾರತ ಸಹಿ ಹಾಕಿದರೆ ರೈತ ಕೆಚ್ಚೆಂತೆಯೇ! ಏಕೆಂದರೆ ಈ ಡಂಕೆಲ್ ಪ್ರಸ್ತಾವನೆ, ಹಕ್ಕುಗಳನ್ನು ಪಡೆದು ಭಾರತದ ಬಡ ರೈತ ತನ್ನ ಫಸಲಿನಲ್ಲಿ ಮರುವರ್ಷ ಬಿತ್ತನೆಗಾಗಿ ಕಾದಿಡುತ್ತಿದ್ದ ಬೀಜವನ್ನು ಉಪಯೋಗಿಸದಂತೆ ಒತ್ತಡ ತರಲಿದೆ!

ತಾನು ಬೆಳೆದ ಬೀಜವನ್ನು ಬಿತ್ತದ ಪರಿಸ್ಥಿತಿಯಲ್ಲಿ ರೈತನ ವಿನಾಶ ಖಂಡಿತ. ವಿನಾಶ ತಡೆಯಲು ಜಾಗೃತಿ ಅವಶ್ಯ.

NAGAPPA'S PADDY FIELD

THEFT OF JADDAN MADLU
INDIGENOUS VARIETY
FROM THE FIELD

THIS HAS PEST RESISTANCE
TAKE OUT THE GENE
AND PRODUCE HYBRID SEEDS.


LAB


(MULTINATIONAL CO.,)

WE HAVE
'PATENT' ON
THIS !

HERE
NEW VARIETIES


ನಾಗಪ್ಪನ ಹೊಲದಿಂದ
ಜಡ್ಡನ ಮಡ್ಲು ಹಳೆತಳಿ
ಭತ್ತದ ಅಪಹರಣ


ಬಯೋತಂತ್ರಜ್ಞಾನ ಕೇಂದ್ರ
ತ್ರಿಯೋಗಾಲಯ
ಯೋಗ ನಿರೋಧಕ ಶಕ್ತಿ ಹೆಚ್ಚುಳ್ಳ
ತಳಿ ಇದು.. ನಮ್ಮ ಭತ್ತಕ್ಕೆ
ಇದನ್ನು ಸಂಯೋಗಗೊಳಿಸಿ
ಹೊಸ ತಳಿ ತಯಾರಿಸಿ!



ನಂತರ
ತಗೊಳ್ಳಿ.. ಹೊಸ ತಳಿ
ಬೀಜಗಳು!
ಇದರ ಮೇಲೆ ನಮ್ಮ
'ಪೇಟೆಂಟ್' (ಹಕ್ಕು) ಇದೆ!

"Nagappa you cannot grow Jaddan
Madlu Variety. We have 'Patent'
on its special characteristics.


YOU CAN PURCHASE
OUR SEEDS AND PAY
MORE MONEY

IF YOU WANT TO GROW
YOUR INDIGENOUS VARIETY,
THEN ALSO YOU HAVE TO
PAY US ROYALTY. OTHERWISE
WE WILL ASK YOUR GOVERNMENT
TO PAY !


INDIA IN THE GRIP OF MULTINATIONAL
COMPANIES



ನಾಗಪ್ಪ ನೀನು ಜಡ್ಡನಮಡ್ಲು ಬೀಜ ಬಿತ್ತಬಾರದು.. ಅದರ ವಿಶಿಷ್ಟ ಗುಣದ ಮೇಲೆ ನಮ್ಮ 'ಪೇಟೆಂಟ್' ಇದೆ. ಹಕ್ಕು ಹೊಂದಿದ್ದೇವೆ.



ನೀನು ಕೆಬ್ಬುರಣ್ಣ ನೀಡಿ ನಮ್ಮ ಹೈಬ್ರಿಡ್ ಬೀಜ ಖರೀದಿಸು





ಹಳೆತಳಿ ಬೆಳೆದರೆ ನೀನು ಹಣಕೊಡ್ಬೇಕು.. .. ಇಲ್ಲಾ ನಿಮ್ಮ ಸರಕಾರದಿಂದ ವಸೂಲು ಮಾಡ್ತೇವೆ!



ಬೆಂಬಿಡಿಸ್ತೀಯ ಕಿಂಚಿತ್ತಿ

FARMERS RIGHT ON SEEDS

CARGIL
CO.,

GIVE ME
NEW VARIETY


SIDDAPPA, I HAVE PURCHASED
NEW VARIETY. NEXT YEAR
I WILL GIVE YOU THE SEEDS!

RAMANNA ! You are not aware of the
fact. I already have that seed
from Cargil. But the company says
that I can not grow from the seeds
I have saved. They say that I should
go to them to purchase seeds by
paying more money !


ಬೀಜದ ರಾಕ್ಷ!



ನಿಮ್ಮ ಹೊಸ ತಳಿ
ಬೀಜ ಕೊಡಿ



ಸಿದ್ದಪ್ಪ, ಹೊಸ ಬೀಜ ಬರೀದಿಸಿ
ತಂದಿದ್ದೇನೆ.. ಮುಂದಿನ ಸಲ ನಾನೇ
ನಿನಗೆ ಬೀಜಗಳನ್ನು ಕೊಡ್ತೀನಿ!
ವಿದೇಶೀ ತಳಿ!!



ರಾಮಣ್ಣೋರೆ, ನಿಮ್ಮೆ ವಿಶಯ ಗೊತ್ತಿಲ್ಲ,
ಆ ವಿದೇಶೀ ಕಂಪೆನಿ ಬೀಜ ನನ್ನ ಬಳ
ಇದೆ. ಕಳೆದ ಬಾರಿ ತಂದು ಬೆಳೆದದ್ದು,
ಈ ವರ್ಶ ಬಿಬೀಜ ನಾನು ಬೆಳೆಯಲು
ಬರದೆನ್ನುತ್ತಾರೆ ಅವರು..ಹೆಚ್ಚು
ಹಣ ಕೊಟ್ಟು ಅವರ ಬಳಿಯೇ
ಬರೀದಿಸಬೇಕಂತೆ!

SEEDS SATYAGRAHA

SPREADS WORLD WIDE

1992 BANGALORE (DEC')

KARNATAKA RAJYA RAITA SANGHA


LAUNCHES SEED SATYAGRAHA

FARMERS
RIGHTS
ON
SEEDS

SEEDS SATYAGRAHA SPREADS WORLD WIDE

ಬೀಜ ಸತ್ಯಾಗ್ರಹ ಪ್ರಸರಣ

– ಬಂದಿ ಭಾಯಿ ನ್ಹೋಚ –



ಕಕಾಪೊ

ದಶಕದ ಈಚೆಗೆ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾದ ಪರಿಸರ ಲೇಖನಗಳ ಸಂಗ್ರಹ



ಪ್ರಕಟಣೆ :

ಪರಿಸರ ಸಂರಕ್ಷಣಾ ಕೇಂದ್ರ

ಹುಲೇಮಳಗಿ ಬ್ರದರ್ಸ್, ಜೋಕಿಮಠ ರಸ್ತೆ, ಶಿರಸಿ-581 401

ಸಂದರ್ಭ :

ಪರಿಸರ ಬರಹಗಾರರ ಕಾರ್ಯಾಗಾರ-೯೮

ನೀರ್ನಳ್ಳಿ, ಡಿಸೆಂಬರ ೨೫, ೨೬ ಹಾಗೂ ೨೭

ಅರಿಕೆ

ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗುವ ಕತೆಗಳು, ವಿಮರ್ಶಾ ಬರಹಗಳನ್ನು ಆಯ್ದು ಪುಸ್ತಕವಾಗಿ ಪ್ರಕಟಿಸುವ ಪ್ರಯತ್ನಗಳು ನಡೆಯುತ್ತಿವೆ. ನಮ್ಮ ಪರಿಸರ ಬರಹಗಾರರು ಸುತ್ತಲಿನ ಆಗು ಹೋಗುಗಳನ್ನು ಜೀವ ಜಗತ್ತಿನ ವಿಸ್ಮಯಗಳನ್ನು ನುಡಿ ಚಿತ್ರಗಳ ಮುಖೇನ ಪತ್ರಿಕೆಗಳಲ್ಲಿ ದಾಖಲಿಸಿದ್ದು ಇವತ್ತು ವ್ಯವಸ್ಥಿತ ದಾಖಲೆಯಾಗಿ ಉಳಿಯುತ್ತಿಲ್ಲ. ಪುಸ್ತಕವಾಗಿ ಪ್ರಕಟವಾಗುತ್ತಿಲ್ಲ. ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗುವ ಉತ್ತಮ ಪರಿಸರ ಲೇಖನಗಳನ್ನು ಆಯ್ದು ಪುಸ್ತಕವಾಗಿ ಪ್ರಕಟಿಸಿದರೆ ಕನ್ನಡದ ಪರಿಸರ ಸಾಹಿತ್ಯದ ಬೆಳವಣಿಗೆ ಸಾಧ್ಯ. ಬರಹಗಾರರ ಅಧ್ಯಯನ ಶೀಲತೆಯನ್ನು ಪರಿಸರದ ದಾಖಲಾತಿ ಕಾರ್ಯವನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಇಂತಹ ಕೃತಿಗಳು ಪರಿಸರ ಪತ್ರಿಕೋದ್ಯಮದ ಅಧ್ಯಯನಾರ್ಥಿಗಳಿಗೂ ಪ್ರಯೋಜನವಾಗಬಲ್ಲದು.

ಒಂದು ದಶಕದ ಈಚೆಗೆ ಕನ್ನಡದ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಬರಹಗಳನ್ನು ನಾವು ಗಮನಿಸಿದೆವು. ಬರಹ ವಸ್ತು, ಶೈಲಿ ಅಧ್ಯಯನಶೀಲತೆಯಲ್ಲಿನ ಹೊಸತನ ಗಮನಿಸಿದಾಗ ಇವನ್ನೆಲ್ಲ ಸೇರಿಸಿ ಪುಸ್ತಕ ಮಾಡಿಸಿ ಪರಿಸರ ಬರಹಗಾರರ ಕಾರ್ಯಾಗಾರದ ಪ್ರತಿನಿಧಿಗಳಿಗೆ ಒದಗಿಸುವ ತೀರ್ಮಾನ ಮಾಡಿದೆವು. ಜೀವ ವೈವಿಧ್ಯದ ನೆರಿ ಬೆಲೆಯಿಂದ ಆರಂಭಿಸಿ, ಪರಿಸರ ನಾಶ, ಹೋರಾಟ, ಬದಲಿ ತಂತ್ರಜ್ಞಾನಗಳ ಬಳಕೆಯಂತ ಬಗೆಗಿನ ಬರಹಗಳನ್ನು ಆಯ್ದು ತಮಗೆ ನೀಡುತ್ತಿದ್ದೇವೆ. ನ್ಯೂಜಿಲೆಂಡಿನ 'ಕಕಾಪೊ' ಗಿಳಿ ನಮ್ಮ ಕಣ್ಣೆದುರೇ ನಿರ್ವಂಶವಾಗುತ್ತಿರುವ ನೋವಲ್ಲಿ ಈ ಕೃತಿಗೆ 'ಕಕಾಪೊ' ಎಂದೇ ಕರೆದಿದ್ದೇವೆ. ಇಲ್ಲಿನ ಬರಹಗಳನ್ನು ಪ್ರಕಟಿಸಿದ ಪತ್ರಿಕೆಗಳನ್ನು, ಬರೆದ ಬರಹಗಾರರನ್ನು ಅಭಿನಂದಿಸಿ ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳುತ್ತಿದ್ದೇವೆ.

— ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ


1998ರ ಡಿಸೆಂಬರ್ 25, 26 ಹಾಗೂ 27 ರಂದು ನೀರ್ನಳ್ಳಿಯಲ್ಲಿ ನಡೆದ ಪರಿಸರ ಬರಹಗಾರರ ಕಾರ್ಯಾಗಾರಕ್ಕಾಗಿ ಈ ಸಂಕಲನವನ್ನು ಸಿದ್ಧಪಡಿಸಲಾಗಿದೆ.

ಪರಿವಿಡಿ

ಕ್ರ.ಸಂ.		ಪುಟ ಸಂಖ್ಯೆ
01.	ಜೈವಿಕ ವೈವಿಧ್ಯದ ನೆರಿ ಬೆರೆ — ಡಾ. ಎನ್.ಎ. ವಿದ್ಯಾಸ್ಥ	01
02.	ವಸಂತದಲ್ಲೀ ಏಕೆ ಚಿಗುರುವ ಬಯಸುಕೆ.. ? — ಕೆ.ಎಸ್.ಮುರಳಿ	04
03.	ಭೀಮಗುತಿಡಿಂದು ಪುಡಾವೃಷ — ಟಿ.ಕೆ.ಜಿ. ಭಟ್ಟ	07
04.	ಜೀವಜಾಲದ ತೊಡಿಪ್ಪಲು — ಕಾಂಡ್ಲಕಾಡು — ಸಿ.ಸತೀಶಕುಮಾರ	10
05.	ಉತ್ತರ ಕನ್ನಡದ ಪಕ್ಷಿ ಪ್ರಪಂಚ — ಪಿ.ಡಿ. ಸುದರ್ಶನ	13
06.	ಕಳಿಂಗ ಪಕ್ಷಿಂದು ಪುತ್ತೊಳ್ತ್ಸವ — ಅನಂತ ತಪ್ಪೀಸರ	17
07.	ಕುಪ್ಪಳಿಸುವ ಕಪ್ಪೆ ಹಾರಾಟ ನಡೆಸಿದಾಗ — ಮಂಜುನಾಥ ಹೆಗಡೆ ಹೊಸಬಾಳೆ	19
08.	ಹಸಿರಿಲೆಂತೇ ಹೆರಿಗೆ ಮನೆ. — ಶಿವಾನಂದ ಕಳವೆ	22
09.	ಹೊಳೆದಂಡೆಂತು ಪೇಲೆ ಹೊಳೆಂತುವ ಮಣಿ ಹೊಸ್ಸೆರಾ — ನಿರಂಜನ ವಾನಳ್ಳಿ	24
10.	ವನಸಿರಿಂದು ಗರ್ಭದಲ್ಲೊಂದು ಬೆಳ್ಳಂತು ಧಾರೆ — — ಬಿ. ಸೀತಾರಾಮ ಭಟ್	25
11.	ಕೂಗಲ ಬಳ್ಳಿಂದಿಂದ ಕುಕ್ಕೆ, ಬುಟ್ಟಿ, ಬೀಸಣಿಕೆ — — ಎಂ. ಜಿ. ಹಲಸಿಗೆ	28
12.	ಕೊಲ್ಲೂರಿನ ಗಣಿ: ಮುಗಿಂದಿತು ಜಿನ್ನ—ಮುಗಿಂದುದ ಮಾಲಿನ್ಯ — ನಾಗೇಶ ಹೆಗಡೆ	31
13.	ಂಯೂಣದ ತುಂಬಾ ಮಂದಾರ ಹೂವೇ ಮಾರಿನ್ಯ — ಬರಹ — ಪಾಂಡುರಂಗ ಹೆಗಡೆ	37
14.	ಹಸಿದ ಬಿರತೆಗಳ ಪೂರಣ ಹೋಮ — ದಿನೇಶ ಪಟವರ್ಧನ	41
15.	ವುಲಲ್ಲಪಕ್ಕಿಂದು ಕೊಸಿಂದು ದಿನಗಳು — ಗೋಪಾಲಕೃಷ್ಣ— ಕುಂಬಿನ	45
16.	ಕಕೊಪೊ ಗಿಳಿಂದು ಕೊಸಿಂದು ದಿನಗಳು —	47
17.	ಜನಾಂದೋಳನವಾದ ಜಲ ವುರುಪೂರಣ —	49
18.	ಬೊಮ್ಮನ ಅಳಿಲು — 'ಅಳಲು' — ಕೃಪಾಕರ—ಸೇನಾನಿ	53
19.	ಟರ್ಮಿನೇಟರೆ ತಳಿ ತಂತ್ರಜ್ಞಾನ: ಬೀಜಕ್ಕೆ ಬಂಜೆತನದ ಅಭಿಶಾಪ? — ಡಾ. ಶರಣಬಸವೇಶ್ವರ ಅಂಗಡಿ — ಡಾ. ಎಚ್. ಈ. ಶಶಿಧರ	55
20.	ತಿವಿಂಗಿಲಗಳ ಆತ್ಮಹತ್ಯೆ —	60
21.	ಪರಿಸರ ಮಾಲಿನ್ಯ ನಿಯಂತ್ರಣವೆಂಬ ಪ್ರಹಸನ — — ಡಾ. ರವೀಂದ್ರನಾಥ ಶಾನಭಾಗ	64
22.	ಗಿಡಮರ ರಕ್ಷಣೆಗೆ ಕಾಂಕ್ರೀಟ್ ಹಲಗೆ — ಡಾ. ಚಂದ್ರಶೇಖರ ದಾಮ್ಲೆ	68
23.	ಹಸಿರು ಜಿನ್ನದ ವಿದ್ಯೆ — ಸತೀಶ ಬಿಪ್ಪರಿಕೆ	70

ಜೈವಿಕ ವೈವಿಧ್ಯದ ನೆತೆ ಬೆಲೆ

■ ಡಾ. ಎನ್. ಎ ಮಧ್ಯಸ್ಥ



(ಚಿತ್ರ: ಮಲ್ಲಿಕ್)

ಗುಲಗಂಜಿ: ವಿಷವೂ ಹೌದು, ಔಷಧವೂ ಹೌದು



(ಚಿತ್ರ: ಮಹಾಬಲೇಶ್ವರ ಕಾಟ್ರಹಳ್ಳಿ)



(ಚಿತ್ರ: ಮಹಾಬಲೇಶ್ವರ ಕಾಟ್ರಹಳ್ಳಿ)

ತೀರ್ಥಹಳ್ಳಿಯ ಆಸುಪಾಸಿನ ಕೆಲವು ಹಳ್ಳಿಗಳಲ್ಲಿ ಒಂದು ವಿಶಿಷ್ಟ ಸಮೀಕ್ಷೆಯನ್ನು ಹಳ್ಳಿಯ ಜನರೇ ನಡೆಸುತ್ತಿದ್ದಾರೆ ಗೊತ್ತೆ? ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಹಳ್ಳಿಯ ತಜ್ಞರ ನೆರವಿನಿಂದ ಸುಮಾರು 25 ಚದರ ಕಿಲೊ ಮೀಟರ್ ವಿಸ್ತೀರ್ಣದಲ್ಲಿನ ಎಲ್ಲ ಬಗೆಯ ಜೀವಿಗಳ (ಅಂದರೆ ಗಿಡ, ಬಳ್ಳಿ, ಮರ, ಪಾಚಿ, ಪ್ರಾಣಿ, ಪಶು, ಪಕ್ಷಿ, ಜಲಚರ, ಕೀಟ ಪತಂಗ ಎಲ್ಲವುಗಳ) ದಾಖಲಾತಿಯ ಕೆಲಸ ನಡೆಯುತ್ತಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಖ್ಯಾತ ಪರಿಸರ ವಿಜ್ಞಾನಿ ಪ್ರೊ. ಮಾಧವ ಗಾಡಗೀಳರ ನೇತೃತ್ವದಲ್ಲಿ ನಡೆಯುತ್ತಿರುವ ಈ ದಾಖಲಾತಿ ಅಂತರ ರಾಷ್ಟ್ರೀಯ ಗಮನ ಸೆಳೆಯುತ್ತಿದೆ. ಇದು ಕೇವಲ ತೀರ್ಥಹಳ್ಳಿಯ ಯೋಜನೆಯಲ್ಲ. 1600 ಕಿಲೊಮೀಟರ್ ಉದ್ದದ ಪಶ್ಚಿಮ ಘಟ್ಟದ ವಿವಿಧ ಜೀವಾವಾಸಗಳ ವೈವಿಧ್ಯಜೀವ ಜಾತಿಗಳನ್ನು ಗುರುತಿಸುವ ಮಹಾ ಯೋಜನೆ. ಅಮೆರಿಕಾದ ಪ್ಯೂ (PEW) ಪುದುವಟ್ಟಿನ ನೆರವಿನಿಂದ ಪ್ರೊ ಗಾಡಗೀಳರು 1994ರ ಜೂನ್ ತಿಂಗಳಿನಿಂದ ಈ ಪ್ರಯತ್ನ ನಡೆಸುತ್ತಿದ್ದಾರೆ. ಪಶ್ಚಿಮ ಘಟ್ಟ ಪ್ರದೇಶದ ಐದು ರಾಜ್ಯಗಳ ಇಪ್ಪತ್ತೆರಡು ತಂಡಗಳು ಪ್ರೊ. ಗಾಡಗೀಳರಿಗೆ ನೆರವಾಗುತ್ತಿವೆ. ಕಾಲೇಜು ಪ್ರಾಧ್ಯಾಪಕರು ತಮ್ಮ ಬಿಡುವಿನ ವೇಳೆಯಲ್ಲಿ ಮತ್ತು ರಜಾ ದಿನಗಳಲ್ಲಿ ಆಸಕ್ತ ವಿದ್ಯಾರ್ಥಿಗಳ ನೆರವಿನಿಂದ ತಮಗೆ ಹತ್ತಿರದ ಪಶ್ಚಿಮ ಘಟ್ಟ ಪ್ರದೇಶವೊಂದರ ಸಸ್ಯ ಮತ್ತು ಕೆಲವು ನಿರ್ದಿಷ್ಟ ಪ್ರಾಣಿ ಗುಂಪುಗಳ ವ್ಯವಸ್ಥಿತ ವೈಜ್ಞಾನಿಕ ಸಮೀಕ್ಷೆ ನಡೆಸುತ್ತಿದ್ದಾರೆ.

ಹಳ್ಳಿಯ ಡಾಕ್ಟರೇಟುಗಳು

ಜೀವಗಣತಿಯ ಜತೆಜತೆಗೇ ಸ್ಥಳೀಯ ಜನರ ಪರಿಣತಿಯನ್ನು ಗುರುತಿಸಿ ದಾಖಲಿಸುವ ಕೆಲಸವೂ ಇಲ್ಲಿ ನಡೆದಿದೆ. ಅಂದರೆ ನಾಟಿವೈದ್ಯರ ಹಾಗೂ ಔಷಧೀಯ ಗಿಡಮೂಲಿಕೆಗಳ, ಹಳೇಕಾಲದ ಅಜ್ಜಿ ಅಜ್ಜಂದಿರ ಸಸ್ಯಜ್ಞಾನ, ಪ್ರಾಣಿಜ್ಞಾನದ ಪರಿಣತಿಯ ದಾಖಲಾತಿ.

ಈ ದಾಖಲಾತಿಯ ಇನ್ನೊಂದು ಮಹತ್ವ ಏನೆಂದರೆ, ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ದೇಶೀಯ ಜ್ಞಾನಕ್ಕೆ ಪ್ರೋತ್ಸಾಹ ನೀಡುವುದು: ಜೀವವೈವಿಧ್ಯವನ್ನು ರಕ್ಷಿಸುವುದು. ಕಹಿಬೇವು ಮತ್ತು ಅರಿಶಿಣಗಳ ಕಹಿ ಕತೆ ಉಳಿದ ಸಸ್ಯಗಳಿಗೆ ಪುರಕಳಿಸದಂತೆ ತಡೆಯುವ ಪ್ರಯತ್ನ ಇದು.

ಕಹಿಬೇವು ಮತ್ತು ಅರಿಶಿಣಗಳ ಕತೆ ಗೊತ್ತಲ್ಲ? 1995ರಲ್ಲಿ ಅಮೆರಿಕಾದ ಇಬ್ಬರು ವಿಜ್ಞಾನಿಗಳು ಅರಿಶಿಣ ಪುಡಿಯನ್ನು 'ಗಾಯ ವಾಸಿಮಾಡುವ ಔಷಧ' ಎಂದು ಘೋಷಿಸಿ, ತಾವಿದನ್ನು ಮೊದಲ ಬಾರಿಗೆ ಕಂಡು ಹಿಡಿದೆವೆಂದು ಪೇಟೆಂಟ್‌ಗೆ ಅರ್ಜಿ ಹಾಕಿದರು. ನಮಗಿದು ನಿಜಕ್ಕೂ ಆಶ್ಚರ್ಯ ಸಂಗತಿ. ಏಕೆಂದರೆ ಭಾರತದಲ್ಲಿ ಆಡುಗೆಯಿಂದ ಔಷಧದವರೆಗೆ ವ್ಯಾಪಕವಾಗಿ ಬಳಕೆಯಾಗುತ್ತಿರುವ ಅರಿಶಿಣಪುಡಿ ವಿದೇಶೀಯ ಹಕ್ಕಿನ ವಸ್ತುವಾಗುತ್ತದೆ ಎಂಬುದು ನಂಬುವುದೂ ಕಷ್ಟ. ಆದರೂ ನಿಜ. ಲಕ್ಷಾಂತರ ಭಾರತೀಯರ ಆಕ್ರೋಶಕ್ಕೆ ಗುರಿಯಾದ ಈ ಸುದ್ದಿಯ ಹಿನ್ನೆಲೆಯಲ್ಲಿ, ಭಾರತ ಸರ್ಕಾರ ಅಮೆರಿಕಾದ ಪೇಟೆಂಟ್ ಕಛೇರಿಯಲ್ಲಿ ವಿಧ್ಯುಕ್ತವಾಗಿ ಪ್ರತಿಭಟನೆ ಸಲ್ಲಿಸಿತು.


ಅರಸಿನಪುಡಿ ಭಾರತದಲ್ಲಿ ಬಹಳಕಾಲದಿಂದ ಔಷಧಿಯಾಗಿ ಉಪಯೋಗವಾಗುತ್ತಿತ್ತು ಎಂಬುದಕ್ಕೆ ಲಿಖಿತ ದಾಖಲೆ ಒದಗಿಸಿದರೆ ಮಾತ್ರ ಭಾರತ ಸರ್ಕಾರದ ವಾದ ಒಪ್ಪುವುದು ಸಾಧ್ಯ. ಆದರೆ ಲಿಖಿತ ದಾಖಲೆಗಳು ನಮ್ಮಲ್ಲಿ ಎಲ್ಲಿ ಇವೆ? 1982ರಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪತ್ರಿಕೆಯಲ್ಲಿ ಅರಿಶಿಣದ ಔಷಧೀಯ ಗುಣಗಳ ಬಗ್ಗೆ ಬರೆಯಲಾಗಿದ್ದರೂ, ಅದು ಯಾವುದೇ ಪ್ರಾಯೋಗಿಕ ಆಥವಾ ಸಂಶೋಧನಾ ಪರದಿಯಲ್ಲ ಎಂದು ಅರಿಶಿಣ ಪೇಟೆಂಟ್‌ದಾರರು ವಾದಿಸಿದರು. ಮಾತ್ರವಲ್ಲ, ತಾವು ಕಂಡು ಹಿಡಿದುದು ಹೊಸ ಸಂಶೋಧನೆಯ ಫಲ ಎಂದು ಹೇಳಿ, ಹುಣ್ಣು-ಗಾಯ ಗುಣಮಾಡುವ ಸರಳ, ಸುಲಭ ಮತ್ತು ಅಗ್ಗದ ಔಷಧ ತಮ್ಮದೆಂದೂ ಹೇಳಿ ಪ್ರಚಾರ ಪಡೆದರು.



ಹಾವಿನ ವಿಷವನ್ನು ಇಳಿಸಬಲ್ಲ ಹುಗನ ಬಳ್ಳಿ



ನಿದ್ರಾಹೀನತೆಗೆ ಉತ್ತಮ ಮದ್ದು ಇಂಗ್ಲಾರದ ಕಾಯಿ



ಜಪಾನೀಯರನ್ನು ಆಕರ್ಷಿಸಿದ ಕೀಟಭಕ್ಷಕ ಡ್ರೊಸೆರಾ

(ಚಿತ್ರ: ಮನ್ಸಟ್ಟೊ)

ಸಂರಕ್ಷಣ ಸಂಸ್ಥೆಯು ಕಹಿಬೇವನ್ನು ಕೀಟನಾಶಕವಾಗಿ ಬಳಸಲು ಅನುಮೋದನೆ ನೀಡಿದೆ. 'ಮಾರ್ಗೆಸನ್-ಬಿ' ಎಂಬ ವಾಣಿಜ್ಯ ನಾಮಾಂಕಿತ ಕಹಿಬೇವಿನ ರಾಸಾಯನಿಕವೊಂದು ಅಮೇರಿಕಾದ ಹಲವಾರು ರಾಜ್ಯಗಳಲ್ಲಿ ಕೀಟನಾಶಕವಾಗಿ ಜನಪ್ರಿಯತೆ ಗಳಿಸುತ್ತಿದೆ. ನಮ್ಮ ದೇಶದಲ್ಲಿ ಅನಾದಿಕಾಲದಿಂದ ಹಲ್ಲು ಉಜ್ಜಲು ಉಪಯೋಗಿಸುತ್ತಿದ್ದ ಕಹಿಬೇವಿನ (ಮಾರ್ಗೊಸಾ) ದಂಟು ಟೂತ್‌ಪೇಸ್ಟ್ ರೂಪ ಪಡೆದು ಮಾರಾಟವಾಗುತ್ತಿದೆ. ಇತ್ತೀಚಿನ ವರದಿಗಳ ಪ್ರಕಾರ ಕಹಿಬೇವಿನ ವಿವಿಧ ಉತ್ಪನ್ನಗಳು ಸುಮಾರು ಇನ್ನೂರು ವಿಧದ ಕೀಟಗಳ ಮೇಲೆ ಸಕ್ರಿಯ ಪರಿಣಾಮ ಬೀರಬಲ್ಲವು. ಅಜಟಿನ್, ಟರ್ಪ್ಸೆಕ್ಸ್, ಆಲಿನ್ ಎಂಬ ಕಹಿಬೇವಿನ ಉತ್ಪನ್ನಗಳು ಪೇಟೆಂಟ್ ಪಡೆದು ಮಾರುಕಟ್ಟೆಗೆ ಬಂದಿವೆ. ಕೀಟನಾಶಕವಾಗಿ ಕಹಿಬೇವು ನಮ್ಮ ದೇಶದಲ್ಲಿ ಕನಿಷ್ಟ ಐದು ಸಾವಿರ ವರ್ಷಗಳಿಂದ ಬಳಕೆಯಲ್ಲಿದೆ. ಆದರೇನು? ಅದರ ರಾಸಾಯನಿಕಗಳ ಹಕ್ಕು ಅಮೇರಿಕಾಕ್ಕೆ! ಎಂತಹ ವಿಪರ್ಯಾಸ?

ಜಾಗತೀಕರಣದ ಜಾಡ್ಯ

ಅರಸಿನ ಮತ್ತು ಕಹಿಬೇವಿನ ಕತೆಗಳ ಹಿಂದೆ ಮಾರ್ಮಿಕವಾದ ಪಾಠವೊಂದಿದೆ. ಎಲ್ಲದಕ್ಕೂ ವಿದೇಶೀಯರನ್ನು ಹಳಿಯುವುದರಲ್ಲಿ ಅರ್ಥವಿಲ್ಲ. ಆರ್ಥಿಕ ಸಾಮರ್ಥ್ಯ ಬೆಳೆಸಿಕೊಳ್ಳಲು ಅವರ ಮಟ್ಟಿಗೆ ಅವರ ಪ್ರಯತ್ನ ಸಹಜವೆ.


ಜನಗಣತಿಯು ಹಾಗೆಯೇ 'ಜೀವಗಣತಿ'ಯು ಕಲಿಸಬಲ್ಲ ನಮ್ಮ ಭಾರತದಲ್ಲಿ ಅವಶ್ಯವಾಗಿ ಆಗಬೇಕಿದೆ. ಯಾಕೆಂದರೆ ಜನಸಂಖ್ಯೆ ಹೆಚ್ಚಾಗುತ್ತ ಹೋದ ಹಾಗೆ ಇತರ ಜೀವಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಜಗತ್ತಿನ ಹನ್ನೆರಡು ಮಹಾವೈವಿಧ್ಯದ ಪ್ರಾಂತಗಳಲ್ಲಿ ಭಾರತವೂ ಒಂದು. ನಮ್ಮ ಸುತ್ತಮುತ್ತ ಜೀವಿಸಿದ್ದ ಲಕ್ಷಾಂತರ ಜೀವಿಗಳು ನಮ್ಮಲ್ಲಿವೆ. ಇವು ನಾಶವಾಗುವ ಮುನ್ನ, ವಿದೇಶೀಯರ ಸೊತ್ತಾಗುವ ಮುನ್ನ ಅವುಗಳ ದಾಖಲಾತಿ ಆಗಬೇಕಿದೆ.

ಇದೊಂದು ವಿಚಿತ್ರ ವಾದ. ತಾಂತ್ರಿಕವಾಗಿ ಅಭಿವೃದ್ಧಿ ಸಾಧಿಸಿದ ದೇಶಗಳು ತಮ್ಮ ಅನುಕೂಲ ಕ್ಕಾಗಿ ಮಾತ್ರ ಸೃಷ್ಟಿಸಿಕೊಂಡ ವಿತಂಡ ವಾದ. ಇದು ಕೇವಲ ಅರಸಿನದ ಪೇಟೆಂಟ್ ಪ್ರಶ್ನೆ ಅಲ್ಲ. ಬಡದೇಶಗಳ ಜೈವಿಕ ಸಂಪತ್ತನ್ನು ವಿಜ್ಞಾನದ ಹೆಸರಿನಲ್ಲಿ ಸೂರೆಹೊಡೆಯುವ ಯತ್ನ. ಬೌದ್ಧಿಕ ಆಸ್ತಿ ಹಕ್ಕು (ಇಂಟೆಲೆಕ್ಚುವಲ್ ಪ್ರಾಪರ್ಟಿ ರೈಟ್) ಎಂಬ ಛತ್ರಿಯಡಿ ಶ್ರೀಮಂತ ದೇಶಗಳು ಇತರೆ ದೇಶಗಳ ಪರಂಪರಾಗತ ಜ್ಞಾನವನ್ನು ಕೊಳ್ಳಿ ಹೊಡೆಯುವ ಮಾರ್ಗ. ಕ್ಲಿಷ್ಟವಾದ. ಅಂತರರಾಷ್ಟ್ರೀಯ ಆಯಾಮವುಳ್ಳ ಪ್ರಶ್ನೆಯಿದು.

ಕಹಿಯಾದ ಕಹಿಬೇವು


ನಮ್ಮ ದೇಶದಿಂದ ಹೊರಹೊರಟು ಪೇಟೆಂಟ್ ಪಡೆದ ಇನ್ನೊಂದು ಸಸ್ಯವೆಂದರೆ ಕಹಿಬೇವು. 1975ರಿಂದ ಈಚೆಗೆ ಸುಮಾರು ಎಪ್ಪತ್ತು ಸಾವಿರ ಕಹಿಬೇವಿನ ಸಸಿಗಳು ಅಮೆರಿಕಾದಲ್ಲಿ ಬೆಳೆಯುತ್ತಿವೆ. ಮಾತ್ರವಲ್ಲ, ಅಮೆರಿಕಾದ ಪರಿಸರ

ಕರ್ನಾಟಕಕ್ಕೇ ವಿಶಿಷ್ಟವಾದ 'ಥಂಬರ್ಜಿಯಾ ಮೈಸೂರಿಯೆನ್ಸಿಸ್'



TP-NAM

ಭಾರತದ ಅರ್ಥವ್ಯವಸ್ಥೆಯನ್ನು ಜಾಗತೀಕರಣಗೊಳಿಸಿದ ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ದೇಶದ ಜೈವಿಕ ಸಂಪತ್ತಿನ ಮೇಲೆ ಕಣ್ಣಿಟ್ಟಿರುವುದು ಸಹಜವೆ. ನಮ್ಮ ಪರಂಪರಾಗತ ಔಷಧ ಜ್ಞಾನವನ್ನು ಮಾರುಕಟ್ಟೆ ಸಂಸ್ಕೃತಿಗೆ ತರುವ ಪ್ರಯತ್ನವಿದು. ಅವರ ಈ ಪ್ರಯತ್ನಕ್ಕೆ ನಾವು ಸ್ವಲ್ಪ ಮಟ್ಟಿಗೆ ಕಾರಣ. ನಮ್ಮ ವಿಜ್ಞಾನಿಗಳು ಈ ದಿಸೆಯಲ್ಲಿ ಕಾರ್ಯಾಪ್ರವೃತ್ತರಾಗಿರದೆ ಇರುವುದು ಮತ್ತು ಪೇಟೆಂಟ್ ಕಾಯಿದೆಯಲ್ಲಿ ಇರುವ ಹಲವಾರು ತೊಡಕುಗಳು ವಿದೇಶೀಯರ ಬೌದ್ಧಿಕ ಆಕ್ರಮಣಕ್ಕೆ ದಾರಿ ಮಾಡಿಕೊಟ್ಟಿದೆ. ನಮ್ಮ ದೇಶೀಯ ಔಷಧ ಜ್ಞಾನದ ಆಧಾರದ ಮೇಲೆ ಸಾವಿರಾರು ಹೊಸ ಔಷಧಗಳನ್ನು ಕಂಡುಕೊಳ್ಳಬಹುದಾಗಿದೆ ಎಂಬುದು ಒಂದು ವರದಿ. ಇವು ವಿದೇಶೀಯರ ವಸ್ತುವಾಗುವ ಮೊದಲೇ ನಾವು ಎಚ್ಚರಗೊಳ್ಳಬೇಕು ಮತ್ತು ರಕ್ಷಿಸಬೇಕು. ಆಗ ಮಾತ್ರ ನಮ್ಮ ಪರಂಪರಾಗತ ದೇಶೀಯ ಔಷಧ ಜ್ಞಾನವನ್ನು ಪರಕೀಯರು



ಹೆಗ್ಗಡದೇವನ ಕೋಟೆ ಜಿಲ್ಲೆಯಲ್ಲಿ ಸಸ್ಯರಕ್ಷಣೆಗೆ ಟೊಂಕಕಟ್ಟಿದ ದಲಿತರು

ಚಿತ್ರ: ಎಸ್ ಶ್ರೀಕಾಂತ್

ಶೋಷಿಸಲಾರರು. ಇಲ್ಲವಾದಲ್ಲಿ ಊರು ಕೊಳ್ಳೆ ಹೋದ ಮೇಲೆ ದಿಡ್ಡೀ ಬಾಗಿಲು ಮುಚ್ಚಿದಂತಾಗುತ್ತದೆ.

ಹದಿನೇಳು ಸಹಸ್ರ ವಿಧದಲ್ಲಿ...

ಅಪೆಲ ಭಾರತ ಜನಾಂಗ ಜೀವವಿಜ್ಞಾನ (ಎಥ್ನೊ ಬಯಾಲಜಿ) ತಜ್ಞರು ನಮ್ಮ ದೇಶೀಯ ಗಿಡಮೂಲಿಕೆಗಳ ಹದಿನೇಳು ಸಾವಿರ ಉಪಯೋಗಗಳನ್ನು ದಾಖಲಿಸಿದ್ದಾರೆ. ಸಧ್ಯದ ಅಂತರರಾಷ್ಟ್ರೀಯ ಕಟ್ಟುಕಟ್ಟಳೆಯಂತೆ ಅವುಗಳನ್ನು ಅನಾಯಾಸವಾಗಿ ಅಪಹರಣ ಮಾಡಬಹುದು. ಬ್ರೆಜಿಲ್‌ನಲ್ಲಿ 1992ರಲ್ಲಿ ನಡೆದ ವಿಶ್ವಶೃಂಗ ಸಭೆಯು ದೇಶೀಯ ಜೈವಿಕ ಸಂಪತ್ತು ಮತ್ತು ಸ್ಥಳೀಯ ಜ್ಞಾನವನ್ನು ಕಾಪಾಡುವ ದಿಸೆಯಲ್ಲಿ ಸಾಕಷ್ಟು ಪ್ರಯತ್ನಪಟ್ಟಿದ್ದರೂ, ಅಭಿವೃದ್ಧಿಶೀಲ ದೇಶಗಳ ಶಂಕೆ-ಆತಂಕಗಳು ಇನ್ನೂ ದೂರವಾಗಿಲ್ಲ. ಜೈವಿಕ ವಸ್ತುವೊಂದರ ಮೂಲದ ದೇಶದ ಸಾರ್ವಭೌಮತೆಯ ಬಗ್ಗೆ ರಕ್ಷಣೆ ಇನ್ನು ಮರೀಚಿಕೆಯಾಗಿಯೇ ಉಳಿದಿದೆ. ಬೌದ್ಧಿಕ ಆಸ್ತಿಹಕ್ಕು ಎಂಬ ಸವಕಲು ಧೋರಣೆ ಬದಲಾಗದ ಹೊರತು ಬೌದ್ಧಿಕ ಅಪಹರಣ ಸಹಜವೆ. ಜೈವಿಕ ವೈವಿದ್ಯದ ಸಂರಕ್ಷಣೆಗೆ ಬದ್ಧವಾದ ಒಡಂಬಡಿಕೆಗೆ 1994ರಲ್ಲಿ ಭಾರತ ಸಹಿಹಾಕಿದ್ದರೂ, ಪ್ರತಿಫಲ ಕಂಡುಬಂದಂತಿಲ್ಲ. ಈಕ್ವೆಡಾರ್ ಮತ್ತು ಫಿಲಿಪ್ಪೀನ್ಸ್‌ನಂಥ ಚಿಕ್ಕ ರಾಷ್ಟ್ರಗಳು ತಮ್ಮ ಜೈವಿಕ ಸಂಪತ್ತಿನ ರಕ್ಷಣೆಗಾಗಿ ಕಾನೂನಿನ ಕ್ರಮ ಕೈಗೊಂಡಿರುವುದು ನಮ್ಮ ಕಣ್ಣು ತೆರೆಸಬೇಕು.

ರಿಯೋ ಶೃಂಗಸಭೆಯ ಫಲಶೃತಿ:

1992ರಲ್ಲಿ ನಡೆದ ಜಾತಿಕ ಜೀವವೈವಿಧ್ಯ ಸಮಾವೇಶದ ಕೆಲ ಪ್ರಮುಖ ಅಂಶಗಳು:

* ದೇಶದ ಜೀವ ವೈವಿಧ್ಯ ಸಂರಕ್ಷಣೆ ಮತ್ತು ವಿವೇಚನಾಪೂರ್ಣ ಬಳಕೆಗೆ ಕಾರ್ಯಯೋಜನೆ ರೂಪಿಸುವುದು;
* ಜೀವ ವೈವಿಧ್ಯದ ವಿವಿಧ ಅಂಶಗಳನ್ನು ಗುರುತಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು;
* ಜೀವ ವೈವಿಧ್ಯದ ಪ್ರಮುಖ ಆವಾಸಗಳನ್ನು ಸಂರಕ್ಷಿಸುವುದಲ್ಲದೆ, ಅವುಗಳ ಮೇಲೆ ಆಗ ಬಹುದಾದ ಋಣಾತ್ಮಕ ಪರಿಣಾಮಗಳನ್ನು ತಡೆಯುವಂತೆ ಕ್ರಮ ತೆಗೆದುಕೊಳ್ಳುವುದು;
* ಜೀನ್ ಬ್ಯಾಂಕ್ ಸ್ಥಾಪನೆ- ರಕ್ಷಣೆಗೆ ಪ್ರೋತ್ಸಾಹ ನೀಡುವುದು;
* ಸ್ಥಳೀಯ ಜ್ಞಾನ, ಪರಿಣತಿ, ಪರಂಪರಾಗತ ಪದ್ಧತಿಗಳನ್ನು ಗುರುತಿಸಿ ಜೀವ ವೈವಿಧ್ಯ ರಕ್ಷಣೆಯಲ್ಲಿ ಬಳಸುವುದು.
* ಜೀವ ವೈವಿಧ್ಯಕ್ಕೆ ಸಂಬಂಧಿಸಿದ ಅಂತರ ರಾಷ್ಟ್ರೀಯ ವಿವಾದಗಳನ್ನು ಒಡಂಬಡಿಕೆಯ ಕಾನೂನಿನ ಅನುಗುಣವಾಗಿ ಇತ್ಯರ್ಥ ಮಾಡುವುದು.

ಇಲ್ಲಿ ಎರಡು ಅಂಶಗಳನ್ನು ವಿಶೇಷವಾಗಿ ಗಮನಿಸಬೇಕು: ಜೀವ ವೈವಿಧ್ಯಗಳನ್ನು ಗುರುತಿಸುವುದು ಮತ್ತು ದೇಶೀಯ ಪರಿಣತಿಗೆ ರಕ್ಷಣೆ.

ಪ್ರಪಂಚದ ಹನ್ನೆರಡು ಬೃಹತ್ ಜೈವಿಕ ವೈವಿಧ್ಯದ ದೇಶಗಳಲ್ಲಿ ಒಂದಾದ ಭಾರತದಲ್ಲಿ ಜಗತ್ತಿನ ಜೀವಪ್ರಭೇದಗಳ ಶೇಕಡಾ ಐದರಷ್ಟಿದೆ. ನಮ್ಮ ಅಗಾಧ ವನ್ಯಜೀವಿ ಸಂಪತ್ತಿನ ದಾಖಲಾತಿ ಕಾರ್ಯ ನಮ್ಮ ರಾಷ್ಟ್ರೀಯ ಆದ್ಯತೆಗಳಲ್ಲಿ ಒಂದು. ಇದೊಂದು ಬೃಹತ್ ಕಾರ್ಯ. ಜಗತ್ತಿನ ಸುಮಾರು ಆರೇಳು ಕೋಟಿ ಜೀವಿ ಪ್ರಕಾರಗಳಲ್ಲಿ ಈವರೆಗೆ ವಿಜ್ಞಾನದ ತೆಕ್ಕೆಗೆ ಸಿಕ್ಕಿರುವುದು ಕೇವಲ 17 ಲಕ್ಷದಷ್ಟು ಮಾತ್ರ! ಸದ್ಯ ಸಕ್ರಿಯವಾಗಿರುವ 20-30 ಸಾವಿರ ವರ್ಗೀಕರಣ ವಿಜ್ಞಾನಿಗಳನ್ನು ಗಮನದಲ್ಲಿಟ್ಟುಕೊಂಡರೆ, ಎಲ್ಲಾ ಜೀವಿಗಳ ಅಧ್ಯಯನಕ್ಕೆ ಕನಿಷ್ಟ ಇನ್ನು ಐದುನೂರು ವರ್ಷಗಳೇ ಬೇಕು! ಆ ವೇಳೆಗಾಗಲೇ ಹಲವಾರು ಚಿಕ್ಕಪುಟ್ಟ ಜೀವಿಗಳು ಕಣ್ಮರೆಯಾಗಿರುತ್ತವೆ. ಅವುಗಳ ಉಪಯುಕ್ತತೆ ಗೊತ್ತಾಗುವ ಮೊದಲೇ ಇಲ್ಲವಾಗುತ್ತವೆ. ಅಂದರೆ ಜೀವ ವೈವಿಧ್ಯದ ದಾಖಲಾತಿ ನಮ್ಮ ಅಜ್ಞಾನದ ವಿರುದ್ಧದ ವಿಮೆ ಎಂತಲೇ ಹೇಳಬೇಕು. ಇದು ಭಾರತದ ಮಟ್ಟಿಗೆ ಅಕ್ಷರಶಃ ಸತ್ಯ.

ಜೀವವೈವಿಧ್ಯ ದಾಖಲಾತಿಯೊಂದಿಗೆ ನಮ್ಮ ಪರಂಪ ಗತ ಜ್ಞಾನದ ದಾಖಲಾತಿಯೂ ನಡೆಸುವುದು ಅಗತ್ಯ. ಅಂದರೆ, ಹಿಂದೆ ಹೇಳಿದ ಹಾಗೆ ನಾಟಿ ವೈದ್ಯರ, ಆದಿವಾಸಿಗಳ ಜ್ಞಾನವನ್ನು ಲಿಪಿತ ರೂಪದಲ್ಲಿ ದಾಖಲಿಸುವುದು. ಜೀವಿಯೊಂದರ ತವರೂರಿನ ಸರಿಯಾದ ಮಾಹಿತಿ ಮತ್ತು ಅದರ ಸ್ಥಳೀಯ ಉಪಯೋಗಗಳ ಪಟ್ಟಿ ವ್ಯಾಪಕವಾದ ಮಹತ್ವ ಪಡೆದಿದೆ. 'ಬೌದ್ಧಿಕ ಆಸ್ತಿ ಹಕ್ಕು' ಸ್ಥಾಪಿಸುವವರಿಗೆ ಪಾಠ ಕಲಿಸಲು ಸಾಧ್ಯವಾದೀತು. ಇಂತಹ ದಾಖಲಾತಿಗಳನ್ನು ಸಂಶಯಿಸುವವರೂ ಇದ್ದಾರೆ. ನಮ್ಮ ಜ್ಞಾನವನ್ನು ಅನಾಯಾಸವಾಗಿ ಇತರರಿಗೆ ಧಾರೆ ಎರೆದಂತಾಗುತ್ತದೆ ಎಂಬುದು ಕೆಲವರ ವಾದ. ದೇಶದ ಹಿತಾಸಕ್ತಿಗೆ ಮಾರಕವಾಗದೇ? ಎಂಬ ಪ್ರಶ್ನೆಯೂ ಸಹಜ ದಾಖಲಾತಿ ಇಲ್ಲದಿದ್ದರೂ, ಹಣದ ಬಲದಿಂದ ನಮ್ಮ ದೇಶೀಯ ಜ್ಞಾನ ಹೊರಕ್ಕೆ ಹೋಗಬಾರದೆಂದಿಲ್ಲ. ಶುದ್ಧ ಭಾರತೀಯ ಸರ್ಪಗಂಧಿ ಸಸ್ಯ, ವಿದೇಶೀಯ ರಿಸರ್ಪೈನ್ ಮೂಲವಾಗಿ ವಿದೇಶ ಸೇರಿರುವುದು ಸರ್ವವಿಧಿತ. ಪ್ರೋಟೀನು ಜೀರ್ಣಿಸುವ ವಿಶೇಷ ಕಿಣ್ವವಿರುವ ಡ್ರೋಸೆರಾ (ಕೀಟಾದಾರಿ ಸಸ್ಯ) ಜಪಾನೀಯರ ಆಕರ್ಷಿಸಿದುದು ಗುಟ್ಟಿನ ವಿಷಯವೇನಲ್ಲ.

ಜೀವ ವೈವಿಧ್ಯ ದಾಖಲಾತಿಯೊಂದಿಗೆ, ಅಂತರರಾಷ್ಟ್ರೀಯವಾಗಿ ಅವುಗಳನ್ನು ರಕ್ಷಿಸುವ ದಿಟ್ಟ ಹೆಜ್ಜೆಯಿಡಬೇಕು. ದೇಶೀಯ ಮೂಲದ ಸಸ್ಯಗಳ ಉತ್ಪನ್ನಗಳ ಮೇಲೆ ಹಕ್ಕು ಪಡೆಯುವ ಅಂತರರಾಷ್ಟ್ರೀಯ ಕಾನೂನನ್ನು ಊರ್ಜಿತಗೊಳಿಸುವ ಮತ್ತು ಚಲಾಯಿಸುವ ದೃಢ ಸಂಕಲ್ಪ ಬೇಕು. ಆಗ ಮಾತ್ರ ನಮ್ಮ ದೇಶೀಯ ಪರಂಪರಾಗತ ಜ್ಞಾನಕ್ಕೆ ಬೆಲೆ ಸಿಕ್ಕೀತು. ಅಂತಹ ಕಾಲ ದೂರವಿಲ್ಲವೆಂದು ನಂಬೋಣ.

ಜೈವಿಕ ಸಂಪತ್ತಿನ ಅರಿವು, ಜೈವಿಕ ವೈವಿಧ್ಯದ ವ್ಯಾಪಕತೆ, ಅವುಗಳನ್ನು ಸಂರಕ್ಷಿಸುವ ಹಾದಿ, ಮತ್ತು ಧಾರಣ ಶಕ್ತಿಯನ್ನು ಆಧರಿಸಿದ ಅಭಿವೃದ್ಧಿಯ ಯೋಜನೆಗಳು ಜೀವವೈವಿಧ್ಯದ ದಾಖಲಾತಿಯ ಉದ್ದೇಶಗಳು. ಮುಂದಿನ ಶತಮಾನದಲ್ಲಿ ಶೇಕಡಾ 40 ರಷ್ಟು ಉತ್ಪನ್ನಗಳು ಜೀವ ತಂತ್ರಜ್ಞಾನದಿಂದ ಬರುವಂಥವುಗಳೆಂಬ ಅಂದಾಜಿನ ಹಿನ್ನೆಲೆಯಲ್ಲಿ ಈ ಪ್ರಯತ್ನ ಮಹತ್ವದ್ದು.

ವಸಂತದಲ್ಲೇಕೆ ಚಿಗುರಬೇಕು?




ಬಾನಂಗಳಕ್ಕೆ ಬರೆದ ರಂಗವಲ್ಲಿ

ಹೇಮಂತ-ಶಿಶಿರ ಋತುಗಳಲ್ಲಿ ಎಲೆ ಉದುರಿಸಿಕೊಂಡು ನಿಸ್ತೇಜವಾಗುವ ಗಿಡಮರಗಳು ವಸಂತನ ಆಗಮನದ ವೇಳೆಗೆ ಹಸಿರುಡುಗೆ ತೊಟ್ಟು ಹೂ ಮುಡಿದು ಸಿಂಗರಿಸಿಕೊಂಡು ನಿಲ್ಲುತ್ತವೆ.

ತಮ್ಮೊಳಗಿನ ತೇವಾಂಶ ಆರಿ ಹೋಗದ ಹಾಗೆ ಅವು ಚಳಿಗಾಲದಲ್ಲಿ ಎಲೆ ಉದುರಿಸಿ ನಿಲ್ಲುತ್ತವೆಂದು ವಿಜ್ಞಾನಿಗಳು ಹೇಳುತ್ತಾರೆ. ಹಾಗಿದ್ದರೆ ಕಡು ಬೇಸಿಗೆ ಕಳೆದ ಮೇಲೆಯೇ ಚಿಗುರಬಹುದಿತ್ತಲ್ಲ? ವಸಂತದಲ್ಲೇಕೆ ಅವು ಚಿಗುರಬೇಕು? ಈ ಒಗಟಿಗೆ ಒಂದು ಕುತೂಹಲಕಾರಿ ಉತ್ತರ ಇಲ್ಲಿದೆ.

■ ಕೆ. ಎಸ್. ಮುರುಳಿ

ಪಾರದರ್ಶಿಕೆಗಳು:
ಕೃಪಾಕರ ಸೇನಾನಿ



ಚೈತ್ರದ ಸಂಭ್ರಮ


'ವಸಂತ ಬಂದ. ಋತುಗಳ ರಾಜ ತಾ ಬಂದ' ಎಂಬ ಕವಿವಾಣಿ ಯಾರಿಗೆ ಗೊತ್ತಿಲ್ಲ? ಕವಿಗಳಷ್ಟೇ ಅಲ್ಲ. ಸಾಮಾನ್ಯ ನಾಗರಿಕನೂ ವಸಂತಮಾಸದಿಂದ ಪುಳಕಗೊಳ್ಳುತ್ತಾನೆ. ವಸಂತದ ಆರಾಧನೆ ಎಲ್ಲಾ ದೇಶಗಳ ಕಾವ್ಯ ಮತ್ತು ಸಂಸ್ಕೃತಿಗಳಲ್ಲಿ ಹಾಸುಹೊಕ್ಕಾಗಿದೆ. ವಸಂತಕ್ಕೆ ಸೋಲದ ಮನಸ್ಸೇ ಇಲ್ಲ.


ಈ ಋತುವಿನಲ್ಲೇ ಚೈತನ್ಯ ಚಿಮ್ಮಲು ಕಾರಣವೇನು?

ಚಳಿಗಾಲ ಮುಗಿಯುತ್ತಿದ್ದಂತೆ ಎಲೆಯುದುರಿಸುವ ಕಾಡಿಗೆ ಸಾವಿನ ಕಳೆ ಆವರಿಸುತ್ತದೆ. ಕಳೆದ ವಸಂತದಲ್ಲಿ ನಸುಗೆಂಪಾಗಿ ಅಂಕುರಗೊಂಡು ವಿವಿಧ ಆಕಾರಗಳಲ್ಲಿ ಹಸುರು ಬಣ್ಣಕ್ಕೆ ತಿರುಗಿ ಮರಕ್ಕೆ ಜೀವ ತುಂಬಿದ ಎಲೆಗಳು ಬದುಕ ಮುಗಿಸಿ ಭುವಿ ಸೇರುವ ಸಮಯ. ಮಾಗಿಯ ತಂಪು ಮಾಯವಾಗಿ ಬೆಚ್ಚನೆಯ ಗಾಳಿ ಬೀಸಿ ಬಂದಾಗ ಎಲೆಗಳು ಟೊಂಗೆಗಳಿಂದ ಕಳಚುತ್ತವೆ. ಹಗುರವಾಗಿ ತೇಲುತ್ತ ತೊನೆಯುತ್ತ ಭೂಸ್ಪರ್ಶ ಮಾಡುತ್ತವೆ. ಎಲೆ ಕಳಚಿದ ಮರಗಳು ಪ್ರೇತ ಕಳೆ ಹೊತ್ತು ಸ್ತಬ್ಧವಾಗಿ ನಿಲ್ಲುತ್ತವೆ. ಎಲೆಗಳ ಮರೆಯಲ್ಲಿ ಅವಿತಿದ್ದ ಹಕ್ಕಿಗಳು, ಸರೀಸೃಪಗಳು, ಕೀಟಗಳು ಬಿಸಿಲಿನ ಪ್ರಖರತೆಗೆ ಬೆಚ್ಚಿ ವಿಳಾಸವಿಲ್ಲದೇ ಮರೆಯಾಗುತ್ತವೆ.

ಭೂಮಿಯ ಮೇಲೆ ಪದರು ಪದರಾಗಿ ಸಂಚಯನಗೊಂಡ ತರಗೆಲೆಗಳು ಆಗೊಮ್ಮೆ, ಈಗೊಮ್ಮೆ, ಬೀಸುವ ಗಾಳಿಗೆ ಮರಮರನೆ ಲೋಕಗೀತೆ ಹಾಡುತ್ತವೆ. ಉಳಿದಂತೆ ಯಾವ ಕಾರ್ಯ ಚಟುಪಟಿಕೆಯೂ ಇಲ್ಲದೆ ಕಾಡಿನಲ್ಲಿ ಸ್ಮಶಾನ ಮೌನದ ಕವಿದಿರುತ್ತದೆ.

ಹೇಮಂತ-ಶಿಶಿರ ಋತುಗಳಲ್ಲಿ ಕಾಡು ಹೀಗೆ ಕಳೆಗುಂದಿದ್ದರೆ, ವಸಂತ ಆಗಮನದೊಡನೆ ಚಿತ್ರವೇ ಬೇರೆಯಾಗುತ್ತದೆ. ಅಂತರಿಕ್ಷದಿಂದ ದೊರೆತ ಭರವಸೆಗೆ ಸ್ಪಂದಿಸುವಂತೆ ಜೀವರಸ ಉಕ್ಕುತ್ತದೆ. ಬಾಡಿ ಬಸವಳಿದು ನಿಂತಂತಿದ್ದ ಮರಗಳು ಹಸಿರುಟ್ಟು, ಹೂ ಮುಡಿದು ಸಿಂಗರಿಸಿಕೊಳ್ಳುತ್ತವೆ. ಕೋಗಿಲೆ ಕಾಜಾಣ-





ವಸಂತದ ಪಲ್ಲವಿ

ರಂಗೇರಿದ ತಳಿರು



ಚಿಲುವಿನ ಪುಲಕ

ಗಳ ಹಾಡಿಗೆ ಪ್ರತಿಯಾಗಿ ಸಿಕಾಡಾ ನೊಣಗಳ ಮಂತ್ರ ಪಠನ ಕೂಡಾ ಆರಂಭವಾಗುತ್ತದೆ. ಮೈಯೆಲ್ಲಾ ಹೂವಾದ ಮುತ್ತುಗ, ಬೂರುಗ ಮತ್ತು ಹಾಲವಾಣ ಮರಗಳ ಶೃಂಗಾರಕ್ಕೆ ಮರುಳಾಗಿ ಹಲವಾರು ಪಕ್ಷಿಗಳು ಅಲ್ಲೇ ನೆಲೆ ನಿಲ್ಲುತ್ತವೆ. ಜಿಂಕೆ ಕಡವೆಗಳು ರತಿಕ್ರೀಡೆಯಲ್ಲಿ ತೊಡಗುತ್ತವೆ. ದಟ್ಟ ಮೋಡಗಳು ಮೇಳೈಸಿ ಆಗಾಗ್ಗೆ ತಂಪೆರೆದರೂ ಬಿಸಿಯಳಿಯದ ಹವೆ. ಈ ಎಲ್ಲಾ ನಸು ಬೆಚ್ಚಗಿನ ಕ್ರಿಯೆಗಳು ಒಮ್ಮೆಲೇ ಆರಂಭವಾಗುವುದರಿಂದಲೇ ವಸಂತಕ್ಕೆ ಇಷ್ಟೊಂದು ಪ್ರಾಮುಖ್ಯ.

ಚೇತೋಹಾರಿ ವಸಂತ ಋತು ಉಷ್ಣವಲಯದಲ್ಲಷ್ಟೇ ಅಲ್ಲ, ಶೀತವಲಯದಲ್ಲೂ ಹೊಸ ಕಳೆಯನ್ನು ಹೊತ್ತು ತರುತ್ತದೆ. ನಾಲ್ಕು ತಿಂಗಳು ಕಾಲ ಸತತ ಕವಿದಿದ್ದ ಮಂಜಿನ ಪಾತಾವರಣವನ್ನು ಓಡಿಸಿ ಚುಮು ಚುಮು ಬಿಸಿಲಿನೊಂದಿಗೆ ಬರುವ ವಸಂತವನ್ನು ಅಲ್ಲಿನ ಜನ ನೂರ್ಮಡಿ ಉತ್ಸಾಹದಿಂದ ಸ್ವಾಗತಿಸುತ್ತಾರೆ. ಪ್ರಾಯಶಃ ಭೂಭಾಗದ ಎಲ್ಲಾ ಜನರೂ ವಸಂತವನ್ನು ಒಂದಲ್ಲ ಒಂದು ರೀತಿಯಲ್ಲಿ ಬರಮಾಡಿಕೊಳ್ಳುತ್ತಾರೆ.


ನಮ್ಮ ಭಾರತದ ರಂಗಿನ ಓಕುಳಿಯಾಟ 'ಹೋಳಿ' ವಸಂತನ ಸ್ವಾಗತಕ್ಕೆ ಅರ್ಥಪೂರ್ಣ ಸಂಕೇತವಾಗಿದೆ. ಅದು ಇಡೀ ಭೂಮಿಗೆ ಹೊಸ ರಂಗು ಬಂದಿದ್ದರ ಪ್ರತೀಕವಾಗಿದೆ. ಬೈಸಾಖಿ, ವಿಷು, ಬಿಹು, ಯುಗಾದಿ ಎಲ್ಲವೂ ವಸಂತ ಋತುವಿನಲ್ಲೇ ಸಂತಸವನ್ನು ಹರಡಿ ವರ್ಷಾರಂಭಕ್ಕೆ ನಾಂದಿ ಹಾಡುತ್ತವೆ.

ಇಷ್ಟೆಲ್ಲಾ ಜನಪ್ರಿಯವಾದ ವಸಂತ ಋತು ವಿಜ್ಞಾನಿಗಳಲ್ಲೂ ಕುತೂಹಲ ಉಂಟುಮಾಡಿದೆ. ಪ್ರಾಣಿ, ಪಕ್ಷಿ ಹಾಗೂ ಮರಗಿಡಗಳಿಗೆ ವಸಂತದಲ್ಲೇ ಏಕೆ ಸಡಗರ ಎಂಬ ಪ್ರಶ್ನೆಗೆ ಅವರು ಉತ್ತರವನ್ನು ಹುಡುಕುತ್ತಿದ್ದಾರೆ. ದೀರ್ಘಾಯುಷ್ಯದ ಮರಗಳು ವಾರ್ಷಿಕ ಋತುಚಕ್ರಕ್ಕೆ ಅಂದರೆ ಬೇಸಿಗೆ, ಮಳೆ ಮತ್ತು ಚಳಿಗಾಲಕ್ಕೆ ತಮ್ಮ ಜೀವ ಚಕ್ರವನ್ನು ಹೊಂದಿಸಿಕೊಂಡಿವೆ.

ಮುಂಗಾರಿಗೆ ಮುನ್ನ ಹೊಸ ತಳಿರನ್ನು ಹೊದೆದ ಮರಗಳು ನಂತರ ಮಳೆಗಾಲದಲ್ಲಿ ಸುಲಭವಾಗಿ ಲಭ್ಯವಾಗುವ ತೇವವನ್ನು ಹೀರಿ, ಆಹಾರ ಸಂಗ್ರಹಿಸುತ್ತವೆ. ಹೀಗೆ ಸಂಗ್ರಹವಾದ ಆಹಾರವನ್ನು ಬೇಸಿಗೆಯಲ್ಲಿ ಉಪಯೋಗಿಸುವುದನ್ನು ಸಸ್ಯವರ್ಗ ರೂಢಿ ಮಾಡಿಕೊಂಡಿದೆ. ಇದರಿಂದ ಸಮಯದ ಸಮರ್ಪಕ ಉಪಯೋಗವಾಗುತ್ತದೆಂದು ಕೆಲವು ವಿಜ್ಞಾನಿಗಳ ವಾದ. ಸಾಮಾನ್ಯವಾಗಿ ಉಷ್ಣವಲಯದ ಕಾಡುಗಳಲ್ಲಿ ಅದರಲ್ಲೂ ಎಲೆಯುದುರಿಸುವ ಕಾಡುಗಳಲ್ಲಿ ಈ ವರ್ತನೆ ಅನಿವಾರ್ಯ. ನೆಲದ ತೇವಾಂಶದಲ್ಲಿ ಏರು ಪೇರು ಈ ಕಾಡುಗಳಲ್ಲಿ ಸಾಮಾನ್ಯ. ಬೇಸಗೆಯಲ್ಲಂತೂ ಭೂಮಿಯಲ್ಲಿ ನೀರ ಪಸೆಯೂ ಇಲ್ಲವಾಗುತ್ತದೆ. ನೀರಿನ ಇಂಥ ಕೊರತೆಯ ಕಾಲದಲ್ಲಿ ಎಲೆಯ ಮುಖಾಂತರ ಆಗುವ ಬಾಷ್ಪೀಕರಣ ಕ್ರಿಯೆ ಸಸ್ಯದಲ್ಲಿರುವ ನೀರಿನಾಂಶದ ನಷ್ಟಕ್ಕೆ ಕಾರಣವಾಗುತ್ತದೆ. ಅದನ್ನು ತಡೆಯಲು ಗಿಡಗಳು ಎಲೆಗಳನ್ನೆಲ್ಲ ಉದುರಿಸುತ್ತವೆ.

ಆದರೆ ಹಾಗೆ ಉದುರಿಸುವುದೇ ಆದರೆ, ಮಾರ್ಚ್ ತಿಂಗಳಿನಲ್ಲೇ ಅವಸರದಲ್ಲಿ ಮತ್ತೆ ಏಕೆ ಚಿಗುರಬೇಕು? ಬೇಸಿಗೆ ಪೂರ್ತಿ ಕಳೆದು ಮಳೆಗಾಲ ಕಾಲಿಟ್ಟಾಗ ಚಿಗುರಿದರೆ ಇನ್ನೂ ಒಳ್ಳೆಯದಲ್ಲವೆ? ನೀರಿನ ಅವಶ್ಯಕತೆ ಅತಿ ಹೆಚ್ಚಿರುವ ಸಮಯದಲ್ಲೇ ಎಳೆ ತಳಿರನ್ನು ಚಿಗುರಿಸುವುದರಲ್ಲಿ ಯಾವ ಪುರುಷಾರ್ಥ ಇದೆ?

ನಿಸರ್ಗದ ಅದ್ಭುತ ರಕ್ಷಣಾ ತಂತ್ರಗಳನ್ನು ನಾವಿಲ್ಲಿ ಕಾಣಬಹುದು. ಸಸ್ಯಗಳಂತೆ ಸಸ್ಯಾಹಾರಿ ಕೀಟಗಳೂ ಋತು ಚಕ್ರಕ್ಕೆ ತಮ್ಮ ಜೀವನ ಕ್ರಮವನ್ನು ಹೊಂದಿಸಿಕೊಂಡಿವೆ. ಮುಂಗಾರಿಗೆ ಮುನ್ನ ಗಾಢ ನಿದ್ದೆಯಲ್ಲಿರುವ ಪೊರೆಹುಳು (ಪ್ಯೂಪೆ)ಗಳು ಮಳೆ ಹನಿಯ ಆಗಮನದೊಡನೆ ಚೇತನಕೊಳ್ಳುತ್ತವೆ. ಪೊರೆ ಹುಳುವಿನ ಕೋಶದಿಂದ ಚಿಟ್ಟಿಯಾಗಿ ಹೊರ ಬಂದು ಪ್ರಣಯಕೇಳಿ ನಡೆಸಿ ಸಂತಾನಾಭಿ



ಚಿಗುರೊಡೆಯುವ ತವಕ

ವೃದ್ಧಿ ಮಾಡಿ ಸಸ್ಯಗಳ ಮೇಲೆ ದಾಂಧಲೆಗೆ ತೊಡಗುತ್ತವೆ. ಆಗ ತಳಿರನ್ನು ಚಿಗುರಿಸಿದ್ದೇ ಆದರೆ, ಈ ಕೀಟಗಳ ದಾಳಿಗೆ ಎಳೆ ಎಲೆಗಳೆಲ್ಲ ಬಲಿಯಾಗುತ್ತವೆ. ಕೀಟಗಳಿಗೆ ಚಳಿ ಹಣ್ಣು ತಿನ್ನಿಸಲೆಂದೇ, ಅವು ನಿದ್ದೆ ಹೋಗಿದ್ದಾಗಲೇ ಮರಗಳು ತಳಿರನ್ನು ಚಿಗುರಿಸಿಬಿಡುತ್ತವೆ.

ಹಾಗಿದ್ದರೆ ಕೀಟಗಳಿಗೆ ತಮ್ಮ ಸುತ್ತ ಆಹಾರದ ವಿಜಾನೆಯೇ ಚಿಗುರುತ್ತಿರುವುದು ಗೊತ್ತಾಗುವುದಿಲ್ಲವೆ? ಅವು ನಿದ್ದೆಯಿಂದೆದ್ದು ಊಟಕ್ಕೆ ತೊಡಗಬಾರದೇಕೆ? ಇಷ್ಟಕ್ಕೂ ಸಸ್ಯಗಳ ವಿಕಾಸವಾದ ನಂತರವೇ ಕೀಟಗಳು ಈ ನಿಸರ್ಗದಲ್ಲಿ ಜನ್ಮವೆತ್ತಿ ಬಂದಿದ್ದಾವಲ್ಲ? ಅವು ಏಕೆ ಅರಿವಳಿಕೆ ಮದ್ದು ಸೇವಿಸಿದ ಹಾಗೆ ನಿದ್ದೆಯಲ್ಲಿ ಬಿದ್ದಿರುತ್ತವೆ?



ಹರೆಯ ಬಂದಂಥ ಸಮಯ

.ಏಕೆಂದರೆ, ಸಸ್ಯಗಳು ಎಳೆ ಚಿಗುರಿನಲ್ಲಿ ನಿಜಕ್ಕೂ ಅರಿವಳಿಕೆಯ ವಿಷಪದಾರ್ಥಗಳನ್ನು ತಯಾರಿಸಿರುತ್ತವೆ! ಅವೇನಾದರೂ ನಿದ್ದೆಯಿಂದ ಎದ್ದು ಊಟಕ್ಕೆ ತೊಡಗಿದ್ದೇ ಆದರೆ ವಾಕರಿಕೆ ಮಾಡಿಕೊಂಡು ಸಾಯುವ ಸ್ಥಿತಿಗೆ ಬರುತ್ತವೆ. ಹೀಗಾಗಿ ನೀರಿನ ಕೊರತೆಯಿದ್ದರೂ ಸಸ್ಯಗಳು ವಸಂತ ಋತುವಿನಲ್ಲೇ ಚಿಗುರುವ ಕ್ರಮಕ್ಕೆ ಬದ್ಧವಾಗಿವೆ.

ಅಷ್ಟೆಲ್ಲ ಮಾಡುವುದಾದರೆ ಸಸ್ಯಗಳು ಮಳೆಗಾಲದಲ್ಲೇ ಚಿಗುರಿಕೊಂಡು, ಕೀಟಗಳಿಗೆ ವಿಷ ಉಣ್ಣಿಸಿ ಕೊಲ್ಲಬಾರದೇಕೆ? ಇದು ನಮ್ಮ ತರ್ಕಕ್ಕೆ ಸರಿ ಹೊಂದೀತಾದರೂ ನಿಸರ್ಗಕ್ಕೆ ಸಸ್ಯಗಳೂ ಬೇಕು; ಕೀಟಗಳೂ ಬೇಕು. ಮಳೆಗಾಲದಲ್ಲಿ ಕೀಟಗಳು ಸಸ್ಯವನ್ನು ಅದೆಷ್ಟೇ ಪ್ರಮಾಣದಲ್ಲಿ ತಿಂದರೂ ಸಸ್ಯಕ್ಕೆ ಆ ಹಾನಿಯನ್ನು ಭರಿಸುವ ಶಕ್ತಿ ಇರುತ್ತದೆ. ವಸಂತ ಕಾಲದ ಅಂತ್ಯದಲ್ಲಿ ನೀರಿನ ಮರುಪೂರೈಕೆ ಆರಂಭವಾಗಿರುತ್ತದೆ. ನೈಸರ್ಗಿಕ ಚಕ್ರ ಹೀಗೆ ನಿರಂತರ ಚಲಿಸುತ್ತದೆ.

ಈ ಚಕ್ರದ ಬಹುಮುಖ್ಯ ಭಾಗವಾಗಿ, ಜಗತ್ತಿನ ಜೀವರಾಶಿಗೆ ಚೇತನ ನೀಡುತ್ತಿರುವ ವಸಂತ ನಿಜಕ್ಕೂ ಋತುಗಳ ರಾಜನೇ ಅಲ್ಲದೆ ಮತ್ತಿನ್ನೇನು?

ಭೀಮಗುಂಡಿಯ ಮಹಾವೃಕ್ಷ

ಮುಂದಿನ ವಾರ ಪರಿಸರ ದಿನಾಚರಣೆಗೆಂದು ಈ ಮೇಘಚುಂಬಿ ಮಹಾಮರದ ಸುತ್ತ ಅಪ್ಪಿಕೋ ಚಳವಳಿ ಮಾಡುವುದಾದರೆ ತಂಡ ಕಟ್ಟಿಕೊಂಡು ಬನ್ನಿ.



ದಿಲ್ಲಿಯ ಕುತುಬ್ ಮಿನಾರ್ ಅಥವಾ ಶ್ರವಣ ಬೆಳಗೊಳದ ಬಾಹುಬಲಿ ಅಥವಾ ಯಾಣದ ಭೈರವೇಶ್ವರ ಶಿವಿರಗಳ ಬಳಿ ಎಂದಾದರೂ ಹೆಜ್ಜೆ ಹಾಕಿದ್ದೀರಾ? ಇವುಗಳ ಸಮೀಪ ಸಮೀಪ ಬಂದ ಹಾಗೆ ಉದ್ವೇಗ ಹೆಚ್ಚುತ್ತದೆ. ನೋಡಲೇಬೇಕೆಂದು ಎಂದಿನಿಂದಲೋ ಕಟ್ಟಿಟ್ಟುಕೊಂಡ ಆಸೆ ಕೈಗೂಡುವ ಕ್ಷಣ ಹತ್ತಿರ ಬಂದಂತೆಲ್ಲ ಕಾತರ ಹೆಚ್ಚುತ್ತದೆ. 'ಇಷ್ಟು ಹತ್ತಿರ ಬಂದರೂ ಇನ್ನೂ ಕಾಣಲ್ವಲ್ಲ' ಎಂದು ಏದುಸಿರಿನ ಮಧ್ಯೆ ಮನಸ್ಸು ತುಡಿಯ ತೊಡಗುತ್ತದೆ.

ಈ ಭೀಮಗುಂಡಿಯ ಬೂರುಗ ಮರವೂ ಹಾಗೇ. ತನ್ನ ಬಳಿ ಬಂದವರೊಡನೆ ಇದೇ ರೀತಿ ಚಿನ್ನಾಟವಾಡುತ್ತದೆ. ನೋಡ ಬಂದವರ ತೂಹಲವನ್ನು ಒಮ್ಮೆ ಕೆಣಕಿ. ಒಮ್ಮೆ ತಣಿಸಿ. ಒಮ್ಮೆಲೇ ಕಣ್ಮರೆಯಾಗಿ. ಮತ್ತೆ ಗೋಚರಿಸಿ. ನೀವದರ ಪಾದ ಮುಟ್ಟುವವರೆಗೂ ಕಣ್ಣಾ ಮುಚ್ಚಾಲೆ ಆಡುತ್ತದೆ.

ಪಾದವೋ ಭೀಮಪಾದ. ಅದನ್ನು ತಲುಪಲು ಕೊಯ್ನಾಡಿನ ಪಕ್ಕದ ಪಯಸ್ವಿನಿ ನದಿ ದಾಟಿ ಪಾಂಡವರು ಅರಣ್ಯ ವಾಸಕ್ಕೆ ಹೊರಟ ಹಾಗೆ ಕಾಲ್ನಡಿಗೆಯಲ್ಲಿ ಎರಡು ತಾಸು ನಡೆಯಬೇಕು. ಅಂಕು ಡೊಂಕು ಏರಿ ಸಾಗುವ ದಾರಿ : ಅಲ್ಲಿ ಇಲ್ಲಿ ಮುರಿದು ಬಿದ್ದ ಮರದ ಕೊಂಬೆ: ಬೆಳೆದು ನಿಂತ ಪೊದೆ ಬಳ್ಳಿ. ಮರ ಕಡಿದು ಸಾಗಿಸುವ ಗುತ್ತಿಗೆ ಮಂದಿಗಳು ಮಾಡಿಟ್ಟ ಕೂಪು ರಸ್ತೆ.

ಈ ಮರ ಇಪ್ಪತ್ತರ ಬೆಳೆದು ನಿಂತಿದ್ದು ಅಚ್ಚರಿಯ ಸಂಗತಿಯಲ್ಲ. ಆದರೆ ಬೆಂಕಿ ಪೊಟ್ಟಣಕ್ಕೊಪ್ಪೆ ಪ್ರೈವುಡ್ ಫ್ಯಾಕ್ಟರಿಗೊ ಗುತ್ತಿಗೆದಾರರು ಅದನ್ನು ಕಡಿದು ಸೀಳಿ ಇನ್ನೂ ಸಾಗಿಸಲಿಲ್ಲ– ಅದೇ ಅಚ್ಚರಿ.

ನಾವು. ಕೊಯನಾಡಿನ ಫಾರೆಸ್ಟರ್ ತಿಮ್ಮಪ್ಪ ಮತ್ತು ಸಂಪಾಜೆ ಜೂನಿಯರ್ ಕಾಲೇಜಿನ 86 ಹುಡುಗರು. ಆರು ಮಂದಿ ಅಧ್ಯಾಪಕರೂ ಕಳೆದ ಜನವರಿ 14 ರಂದು ಈ ಮರದ ಬಳಿ ಸಾರಿದಾಗ ಕಾಡೆಲ್ಲ ಸಂಕ್ರಾಂತಿ. ಕತ್ತೆತ್ತಿ ನೋಡಿದಾಗ ನೀಲ ಗಗನದ ಬಳಿ ಬೂರುಗದ ಕೆಂಪು ಹೂಗಳ ಚಿತ್ತಾರದ ಚಾದರ ಹೊದೆಸಿದಂತೆ ಕಾಣುತ್ತಿತ್ತು. ಕಾಲಿಡಲು ಕೂಡ ಸ್ಥಳವಿಲ್ಲದಂತೆ ಭೂಮಿತಾಯಿ ಹೂಪಕಳೆ ಹೊದ್ದುಕೊಂಡಿದ್ದಳು.

ಕಾಂಡದ ಸುತ್ತಳತೆ ನೋಡಲೆಂದು ಅಳತೆ ಪಟ್ಟಿ ಒಯ್ದ ನಮಗೆ ಮೊದಲ ನೋಟಕ್ಕೇ ಲೆಕ್ಕ ತಪ್ಪಿತು. ಏಕೆಂದರೆ ಬೇರುಗಳೇ ಹದಿನೈದು ಅಡಿಗಳ ಎತ್ತರದ ವರೆಗೆ ಕಾಂಡವನ್ನು ಆವರಿಸಿದ್ದವು.




ಚಿತ್ರಗಳು :
ಕೃಷ್ಣ ಅಚ್ರಪ್ಪಾಡಿ
ಮಾಹಿತಿ :
ಟಿ.ಕೆ.ಜಿ. ಭಟ್

ಅದಕ್ಕಿಂತ ಎತ್ತರ ಏರಿ ಅಪ್ಪುಗೆ ಹಾಕಿ ಅಳೆಯುವುದು ಹೇಗೆ?


ಆದರೂ ಹುಡುಗರು ಅಪ್ಪಿದರು. ನೆಲದ ಮೇಲಿನ ಬೇರುಗಳ ಉದ್ದ ಅಳೆದರು. ಒಂದು ಬೇರು ಹದಿನೇಳುವರೆ ಮೀಟರ್ ಎಂದೂ, ಇನ್ನೊಂದು ಹದಿನಾಲ್ಕು ಚಿಲ್ಲರೆ ಮೀಟರ್ ಎಂದೂ ಬರೆದುಕೊಂಡರು. ಕಪ್ಪಪಟ್ಟು ನಾಲ್ಕೂವರೆ ಮೀಟರ್ (15 ಅಡಿ) ಎತ್ತರಕ್ಕೇರಿ ಬೇರುಗಳು ಕಾಂಡವನ್ನು ಸೇರುವಲ್ಲಿ, ಕಾಂಡದ ಸುತ್ತಳತೆ 7.7 ಮೀಟರ್ (25.4 ಅಡಿ) ಎಂದು ಲೆಕ್ಕ ತೆಗೆದರು.

ಈಗ ಗೊತ್ತಾಯಿತು : ಈ ಮರವನ್ನು ಯಾರೂ ಏಕೆ ಕಡಿದು

(52ನೇ ಪುಟ ನೋಡಿ)



ಭೀಮಗುಂಡಿಯ ಮಹಾವೃಕ್ಷ



42 ನೇ ಪುಟದಿಂದ

ಸಾಗಿಸಿಲ್ಲ ಅಂತ. ಕಡಿದರೂ ಇದರ ಕಾಂಡ ಲಾರಿಯಲ್ಲಿ ಓಡಿಸುವುದು ತುಂಬ ಕಷ್ಟ !


ಬಾಂಬೆಕ್ಸ್ ಸೀಬಾ ಎಂಬ ವೈಜ್ಞಾನಿಕ ಹೆಸರಿನ ಈ ಬೂರುಗ ಮರ ಹೀಗೇ ನೇರವಾಗಿ ಎಲ್ಲೆಲ್ಲೂ ಟಿಸಿಲಾಗದೇ 23 ಮೀಟರ್ ಎತ್ತರ ಏರಿ ಅಲ್ಲಿ ಛತ್ರಿಯ ಹಾಗೆ ಛಾವಣಿ ಬಿಚ್ಚಿಕೊಂಡಿದೆ. ಹೂ ಅರಳುವ ದಿನಗಳಲ್ಲಿ ನೂರೊಂದು ಬಗೆಯ ಪಕ್ಷಿ ಪ್ರಾಣಿಗಳಿಗೆ ಹಾಗೂ ಸಹಸ್ರಾರು ಬಗೆಯ ಕೀಟಗಳಿಗೆ ಮಧು ಸಂತರ್ಪಣೆ ಮಾಡಿ ತಾನೇ ಒಂದು ವನ್ಯಧಾಮವಾಗುತ್ತದೆ. ಮಾರ್ಚ್ ತಿಂಗಳಲ್ಲಿ ಬೀಜಗಳಿಗೆಲ್ಲ ಹತ್ತಿಯ ಮೆತ್ತೆ ಹೊದಿಸಿ ದೂರಕ್ಕೆ ರವಾನಿಸಿ ಮತ್ತೆ ತಾನು ಹಸಿರು ಹಚ್ಚಡ ಹೊದೆದು ನಿಲ್ಲುತ್ತದೆ.


ಇಪ್ಪತ್ತರ ಕಾಂಡವನ್ನು ಅಳಿಯುವುದು ಹೇಗೆ? ಹೆಲಿಕಾಪ್ಟರ್ ಮೇಲಿಂದ ನೂಲೇಣಿ ಇಳಿಸಿ ನೋಡುವುದೆ? ನೂಲೇಣಿಯನ್ನೂ ನೋಡಿರದ ನಮ್ಮ ಪುದುಗರು ಪಕ್ಕದ ಚಿಕ್ಕ ಮರ ಏರಿ. ಅದರ ಎತ್ತರ ಅಳೆದರು. ಬೂರುಗದ ಮರ ಅದರ ಎರಡುಪಟ್ಟು ಅಂದರೆ 23 ಮೀಟರ್ ಎತ್ತರ ಇರಬೇಕೆಂದು ಕಣ್ಣಳತೆಯಲ್ಲೇ ನಿರ್ಧರಿಸಿದರು.

ಇದು ನಿಖರ ಅಳತೆಯೇನಲ್ಲ. ನಮಗೆ ನಿಖರ ಅಳತೆ ಯಾಪಾಗ ಬೇಕಾಗುತ್ತದೆ? ಈ ಮರದ ಜತೆ ಪೈಪೋಟಿ ಮಾಡಬಲ್ಲ ಬೇರೆ ಮರಗಳು ಎಲ್ಲಾದರೂ ಇದ್ದಾಗ ತಾನೆ? ಇದೇ ಕೊಯನಾಡಿನಲ್ಲಿ ಒಂದೆ ಡಿಎಫ್ಓ ಆಗಿದ್ದು ಈಗ ಬೆಂಗಳೂರಿನ ಸಿಲ್ವಿಕಲ್ಚರ್ ಉಪ ಸಂರಕ್ಷಣಾಧಿಕಾರಿ ಆಗಿರುವ ಎಮ್.ಎಚ್. ಸ್ವಾಮಿನಾಥನ್ ಹೇಳುವ ಪ್ರಕಾರ ಅರಣ್ಯ ಇಲಾಖೆ ಇಂಥ ಮಹಾಮರಗಳ ದಾಖಲೆಯನ್ನೇ ಇಟ್ಟಿಲ್ಲ. ರಾಜ್ಯದ ಅತಿ ದೊಡ್ಡ ಮರ ಯಾವುದೆಂದು ಕೇಳಿದರೆ ತಕ್ಷಣ 'ಬೆಂಗಳೂರಿನ ಬಳಿಯ ದೊಡ್ಡಾಲದ ಮರ' ಎಂದು ಎಲ್ಲರೂ ಹೇಳುತ್ತಾರೆ. ಅದು ನಮ್ಮ ರಾಜ್ಯದ ಅತ್ಯಂತ ವಿಶಾಲ ಮರ ಸರಿ. ಆದರೆ ಅತ್ಯಂತ ಎತ್ತರದ ಮರ ಯಾವುದು? ಅತ್ಯಂತ ಗಾತ್ರದ ಕಾಂಡವುಳ್ಳ ಮರ ಯಾವುದು? ಅತ್ಯಂತ ಪುರಾತನ ಮರ ಯಾವುದು?

ಇವೆಲ್ಲ ದಾಖಲೆ ಇಡಬೇಕಾದುದು ಅತ್ಯಗತ್ಯ ಎಂಬ ಮಾತನ್ನು ಸ್ವಾಮಿನಾಥನ್ ಒಪ್ಪುತ್ತಾರೆ. ಭೀಮಗುಂಡಿಯ ಬೂರುಗದ ನಿಖರ ಎತ್ತರ ಎಷ್ಟೆಂಬುದನ್ನು ಅಳೆಯಿಸಿ 'ಸುಧಾ'ಕ್ಕೆ ತಿಳಿಸುತ್ತೇನೆಂದೂ ಹೇಳಿದ್ದಾರೆ. ಎತ್ತರ ಅಳೆಯಲು ಮರ ಹತ್ತುವ ಅಗತ್ಯ ಇಲ್ಲವೆಂದೂ. ಟ್ರಿಗನಾಮಿಟ್ರಿ ಸೂತ್ರದ ಪ್ರಕಾರ. ಮರದಿಂದ ನಿಗದಿತ ದೂರದಲ್ಲಿ ನೆಲದ ಮೇಲೆ ನಿಂತು ಥಿಯೊಡೊಲೈಟ್ ಕಂಪಾಸ್ ಮೂಲಕ ಮರದ ತುತ್ತ ತುದಿಯ ಕೋನ ಎಷ್ಟೆಂದು ನೋಡಿ ಟ್ಯಾನ್ ಥೀಟಾ ಲೆಕ್ಕ ಹಾಕಿ ಎತ್ತರ ಕಂಡುಹಿಡಿಯಬಹುದು.

ಆದರೆ ಕೊಯನಾಡಿನ ಈ ಮರ ಅಷ್ಟೆಲ್ಲ ಸುಲಭವಾಗಿ ತನ್ನ ಎತ್ತರದ ಗುಟ್ಟು ಬಿಡಲಿಕ್ಕಿಲ್ಲ. ಇಲ್ಲಿ ಸುತ್ತೆಲ್ಲೂ ಸಪಾಟಾದ ಬಯಲಿಲ್ಲ. ಸುಮಾರು ಸಾವಿರ ಚದರ ಮೀಟರಿನಷ್ಟು ವಿಶಾಲ





ಭಾವಣಿಯ ತುತ್ತತುದಿಯೇ ಕಾಣುವುದಿಲ್ಲ, ಸುತ್ತೆಲ್ಲ ಆಕಾಶವೇ ಸ್ಪಷ್ಟ ಕಾಣದಷ್ಟು ದಟ್ಟ ಗಿಡಮರ ತುಂಬಿವೆ.

ಹಿಂದೆ ಇಲ್ಲೆಲ್ಲ ಇಂಥ ಅದೆಷ್ಟೋ ಮರ ಇದ್ದವೆಂದು ಕೊಯನಾಡಿನ ಹಿರಿಯರು ಹೇಳುತ್ತಾರೆ. ಈಗಲೂ ಅಲ್ಲೆಲ್ಲ ವಿಶಾಲ ಬೊಡ್ಡೆಗಳು ಕಾಣುತ್ತವೆ. ಕಡಿದ ಮರಗಳ ಬುಡದಲ್ಲಿ ಮುರುಟಿ ಚಿಗುರಿದ ಕೂಳೆ ಕೊಂಬೆಗಳು ಗತ ವೈಭವಗಳ ಸಾಕ್ಷಿ ಹೇಳುತ್ತವೆ. ಅಲ್ಲೋ ಇಲ್ಲೋ ಕೆಲವು ಕಣ್ತಪ್ಪಿ ಉಳಿದುಕೊಂಡ ಪತ್ತಾಳೆತ್ತರ ಕಿರಿಮರಗಳು ಮಹಾವೃಕ್ಷವಾಗುವ ಕನಸು ಕಾಣುತ್ತಿವೆ.

ಇವೆಲ್ಲ ಮರಿಸೈನ್ಯದ ಮಧ್ಯೆ ಭೀಮಗುಂಡಿ ಮಹಾವೃಕ್ಷ ಒಂಟಿಯಾಗಿ ನಿಂತಿದೆ. ಇದರ ಸಂಗಾತಿಗಳೆಲ್ಲ ಕೊರಡುಗಳಾಗಿ, ಸಪೂರು ಪಲಗೆಗಳಾಗಿ ಯಾವುದೋ ಗಗನಚುಂಬಿ ಕಾಂಕ್ರೀಟ ಕಟ್ಟಡದ ತುತ್ತತುದಿ ಮಾಳಿಗೆಯ ಬಾಗಿಲು ಕಟಾಂಜನಗಳಾಗಿ ನಿಂತಿರುವುದನ್ನು ಊಹಿಸುತ್ತ ನಿಂತಂತಿದೆ. ತಾನೊಬ್ಬನೇ ಪಶ್ಚಿಮ ಘಟ್ಟಗಳ ನಿಸರ್ಗದ ಭವ್ಯ ಪರಂಪರೆಯ ಕೊನೆಯ ಕೊಂಡಿಯಾಗಿ ಉಳಿದೆನೆಂದು ಅಳಲು ತುಂಬಿ ನಿಂತಂತಿದೆ.

ಮಾನವನ ಪ್ರಗತಿಯ ಭೀಮ ಹೆಜ್ಜೆಗಳು ಭೀಮಗುಂಡಿಗೆ ಮತ್ತೊಮ್ಮೆ ಭೇಟಿಕೊಡುವ ಮುನ್ನ ನಿಮಗೂ ಈ ಮಹಾಮರವನ್ನು ನೋಡಬೇಕೆಂದು ಅನ್ನಿಸಿದರೆ ತುಸು ಪೂರ್ವ ಸಿದ್ಧತೆಯೊಂದಿಗೆ, ಹೋಗಿ. ಮದಕೇರಿ ಅಥವಾ ಮಂಗಳೂರಿನಿಂದ ಹೋಗುವ ಎಕ್ಸ್‌ಪ್ರೆಸ್ ಬಸ್‌ಗಳು ಕೊಯನಾಡಿನಲ್ಲಿ ನಿಲ್ಲುವುದಿಲ್ಲ, ಸಮೀಪದ ಸಂಪಾಜೆ ಚೆಕ್‌ಪೋಸ್ಟ್ ಬಳಿ ನಿಲ್ಲುತ್ತವೆ. ಅಲ್ಲಿಂದ 2 ಕಿ.ಮೀ. ಸಾಗಿ ಕೊಯನಾಡಿಗೆ ಬಂದು ಯಾರನ್ನಾದರೂ ಮಾರ್ಗ ದರ್ಶನಕ್ಕೆ ಜತೆಗೆ ಒಯ್ಯುವುದು ಉತ್ತಮ. ಕಾಡಿನಲ್ಲಿ ದಾರಿ ತಪ್ಪುವ ಸಾಧ್ಯತೆ ಇದೆ. ಕಾಡಾನೆಗಳೂ ಅಪ್ರಿತಪ್ಪಿ ದಾರಿಗೆ ಅಡ್ಡಬಂದು ಸುಂಕಕ್ಕೆ ನಿಮ್ಮನ್ನೇ ವಸೂಲು ಮಾಡುವ ಸಾಧ್ಯತೆಯಿದೆ! ●

ಬೇರೂರಿದ ದಾಖಲೆವೀರರು

ಜಗತ್ತಿನ : ಅತ್ಯಂತ ಭಾರೀ ಗಾತ್ರದ ಜೀವಂತ ವಸ್ತು ಯಾವುದು?

ಉತ್ತರ : 6167 ಟನ್ ತೂಕದ ಸಿಕೋಯಾ ಮರ. ಕ್ಯಾಲಿಫೋರ್ನಿಯಾದ ಈ ಮಹಾವೃಕ್ಷಕ್ಕೆ 'ಜನರಲ್ ಶೆರ್ಮನ್' ಎಂದು ಕರೆಯುತ್ತಾರೆ. ನೆಲದಿಂದ ಕೇವಲ ಮೂರಡಿ ಎತ್ತರದವರೆಗಿನ ಕಾಂಡವನ್ನಷ್ಟೇ ತೂಗಿದರೂ ಅದು ಒಂದು ಬೋಯಿಂಗ್ 737 ವಿಮಾನಕ್ಕಿಂತ ಹೆಚ್ಚು ಭಾರವಾಗಿದೆ. 83.8 ಮೀಟರ್ (274.9 ಅಡಿ) ಎತ್ತರದ ಈ ಮರದ ಸುತ್ತಳತೆ ಎದೆ ಎತ್ತರದಲ್ಲಿ 25.1 ಮೀಟರ್ (22.3 ಅಡಿ) ಇದೆ. ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಹುಟ್ಟಿದ ಈ ವೃಕ್ಷದಿಂದ ಇಂದು ಸುಮಾರು 500 ಕೋಟಿ ಬೆಂಕಿ ಕಡ್ಡಿ ತಯಾರಿಸಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಜಗತ್ತಿನ ಪ್ರತಿ ವ್ಯಕ್ತಿಗೂ ಒಂದೊಂದು ಕಡ್ಡಿ.

1940 ರಲ್ಲಿ ಅಮೆರಿಕನ್ ಫಾರೆಸ್ಟ್ರಿ ಅಸೋಸಿಯೇಶನ್ ತನ್ನ ರಾಷ್ಟ್ರದ ವೃಕ್ಷ ಜಾತಿಯ ಎಲ್ಲ 'ದಾಖಲೆ ವೀರ'ರ ಠಿಜಿಸ್ಟ್ರಿ ಆರಂಭಿಸಿತು. ಒಂದೊಂದು ಜಾತಿಯ ಸಸ್ಯದಲ್ಲೂ ಅತ್ಯಂತ ದೊಡ್ಡದು ಯಾವುದೆಂದು ಗುರುತಿಸಿ ಈವರೆಗೆ 750ಕ್ಕೂ ಹೆಚ್ಚು 'ನ್ಯಾಶನಲ್ ಚಾಂಪಿಯನ್'ಗಳನ್ನು ದಾಖಲೆಗೆ ಸೇರಿಸಿದೆ.

ವೃಕ್ಷ ಪ್ರಪಂಚದ ಇತರ ದಾಖಲೆಗಳು ಹೀಗಿವೆ :

ಅತ್ಯಂತ ಹೆಚ್ಚಿನ ಸುತ್ತಳತೆಯ ವೃಕ್ಷ : ಮೆಕ್ಸಿಕೋ ದೇಶದ ಸೈಪ್ರೆಸ್ ಮರ. ಎದೆಮಟ್ಟದಲ್ಲಿ ಇದರ ಸುತ್ತಳತೆ 35.8 ಮೀ. (117.6 ಅಡಿ) ಇದೆ. 190 ಅಡಿ ಸುತ್ತಳತೆಯ ಚೆಸ್ಟ್‌ನಟ್ ಮರವೊಂದು ಇಟಲಿಯಲ್ಲಿ ಇದೆಯಾದರೂ ಅದು ಈಗ ಮೂರು ಪ್ರತ್ಯೇಕ ಭಾಗವಾಗಿದೆ.

ಅತ್ಯಂತ ವೇಗ ಬೆಳೆಯುವ ವೃಕ್ಷ : ಹುಲ್ಲಿನ ಜಾತಿಗೆ ಸೇರಿದ ಬಿದಿರನ್ನು ಬಿಟ್ಟರೆ, ಮಲೇಶಿಯದ ಅಲ್ಬೀಸಿಯಾ ಫಲ್ಕಾಟಾ ಗಿಡ ಹದಿಮೂರು ತಿಂಗಳಲ್ಲಿ 33.5 ಅಡಿ ಬೆಳೆದಿದೆ.

ಅತ್ಯಂತ ಎತ್ತರ ಬೆಳೆದ ಮರ : ಆಸ್ಟ್ರೇಲಿಯದ ನೀಲಗಿರಿ ಮರ ನೂರಾಹತ್ತು ವರ್ಷಗಳ ಹಿಂದೆ ಅಳೆದಾಗ 435 ಅಡಿ ಎತ್ತರವಿತ್ತೆಂದು ದಾಖಲಾಗಿದೆ. ಈಗಿರುವ ಮರಗಳಲ್ಲಿ ಬ್ರಿಟಿಷ್ ಕೊಲಂಬಿಯಾದ ಡಗ್ಲಾಸ್ ಫರ್ ಮರ 415 ಅಡಿ ಎತ್ತರವಿದೆ.

ಅತ್ಯಂತ ಪುರಾತನ ಮರ : 4700 ವರ್ಷಗಳ ಹಿಂದೆ ಹುಟ್ಟಿದ್ದೆಂದು ಅಂದಾಜು ಮಾಡಲಾದ ಬ್ರಿಸ್ಲ್‌ಕೋನ್ ಪೈನ್ ವೃಕ್ಷ ಕ್ಯಾಲಿಫೋರ್ನಿಯಾದ ಶ್ವೇತ ಪರ್ವತದಲ್ಲಿದೆ.


ಅತ್ಯಂತ ವಿಶಾಲ 'ಎಲೆ'ಯುಳ್ಳ ಮರ ಹಿಂದೂ ಮಹಾಸಾಗರದ ಮಸ್ಕರೀನ್ ದ್ವೀಪದಲ್ಲಿ ಬೆಳೆಯುವ 'ರಫಿಯಾ ತಾಳೆ' ಮರದ ಸೋಗೆಗಳು 65 ಅಡಿ ಉದ್ದ ಬೆಳೆಯುತ್ತವೆ.

ಅತ್ಯಂತ ದುಬಾರಿ ಬೆಲೆಯ ಸಸ್ಯ : 51.000 ಡಾಲರ್ ಕೊಟ್ಟು ಮಿಸ್ಸೂರಿಯ ನರ್ಸರಿಗೆಂದು ಗೋಲ್ಡನ್ ಡಿಲೀಶಸ್ ಸೇಬಿನ ಸಸ್ಯವನ್ನು 1959 ರಲ್ಲಿ ಖರೀದಿಸಲಾಯಿತು. (ಇಂದಿನ ಬೆಲೆಯಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿ).

ಅತ್ಯಂತ ತೂಕದ ದಿಮ್ಮಿ : ಬ್ಲಾಕ್ ಐರನ್‌ವುಡ್ ಎಂಬ ಮರದ ಪ್ರತಿ ಘನ ಮೀಟರ್ ದಿಮ್ಮಿಯ ತೂಕ 1490 ಕಿಲೊ. ಇದು ದಕ್ಷಿಣ ಆಫ್ರಿಕದಲ್ಲಿ ಬೆಳೆಯುತ್ತದೆ.

ಅತ್ಯಂತ ಹಗುರದ ದಿಮ್ಮಿ : ಕ್ಯೂಬಾದಲ್ಲಿ ಬೆಳೆಯುವ ಎಷ್ಮಿನಾಮಿನ ಹಿಸ್ಪಿಡಾ ವೃಕ್ಷದ ಪ್ರತಿ ಘನ ಮೀಟರ್ ದಿಮ್ಮಿಯ ತೂಕ ಕೇವಲ 44 ಕಿಲೊ.

ಅತ್ಯಂತ ವಿಶಾಲ ವೃಕ್ಷ : ಕಲ್ಕತ್ತಾದ ಸಸ್ಯೋದ್ಯಾನದ ಆಲದ ಮರಕ್ಕೆ 1775 ಬಿಳಲುಗಳಿದ್ದು ಒಟ್ಟೂ ಮೂರು ಎಕರೆ ಸ್ಥಳ ಆಕ್ರಮಿಸಿಕೊಂಡಿದೆ. ಇದೇ ಗಿನ್ನೆಸ್ ಪುಸ್ತಕದಲ್ಲಿ ತುಂಬ ವರ್ಷಗಳಿಂದ ದಾಖಲೆಯಾಗುತ್ತಿತ್ತು. ಆದರೆ ಆಂಧ್ರ ಪ್ರದೇಶದ ಗುತ್ತಿ ಬಯಲು ಎಂಬ ಊರಿನಲ್ಲಿ 5.2 ಎಕರೆ ವಿಸ್ತೀರ್ಣದ 'ತಿಮ್ಮಮ್ಮ ಮರಿಮಾನು' ಎಂಬ ಹೆಸರಿನ ಆಲದ ಮರದ ವಿವರಗಳು 'ಸುಧಾ'ದಲ್ಲಿ ಮೊದಲಬಾರಿಗೆ ಪ್ರಕಟವಾದ ನಂತರ (24-4-88) ಅದೂ ಗಿನ್ನೆಸ್ ದಾಖಲೆಗೆ ಸೇರ್ಪಡೆಯಾಗಿದೆ.



ಗೋಪುರ

ಜೀವಜಾಲದ ತೊಟ್ಟಿಲು ಕಾಂಡ್ಲಾವನ

ಕಾಂಡ್ಲಾಕಾಡುಗಳು ಜಗತ್ತಿನ ಅತಿ ವಿಶಿಷ್ಟ ಹಾಗೂ ಅತ್ಯಪರೂಪದ ಜೀವ ಭಂಡಾರ. ಬಂಗಾಳದಂಚಿನ 'ಸುಂದರವನ' ಬಿಟ್ಟರೆ ಭಾರತದ ಎರಡನೇ ಅತಿದೊಡ್ಡ ಕಾಂಡ್ಲವನ ಪಿಚಾವರಂನಲ್ಲಿದೆ. ನಿರಂತರ ಬಳಕೆ ಹಾಗೂ ಪ್ರವಾಸೋದ್ಯಮದ ಕಾರಣದಿಂದಾಗಿ ಈ ಸಿರಿ ಇಂದು ವಿನಾಶದ ಅಂಚಿನತ್ತ ಸಾಗುತ್ತಿದೆ. ಮುಂದೊಂದು ದಿನ ಈ ಸಸ್ಯ ತಳಿಗಳೇ ಯಾವುದಾದರೊಂದು ಜೈವಿಕ ಪ್ರಯೋಗಕ್ಕೆ ಬೇಕಾದರೆ?

ಪಿಚಾವರಂ ವನಸಿರಿಯ ಇಂದಿನ ಸ್ಥಿತಿ-ಗತಿಯ ಚಿತ್ರಣ ಇಲ್ಲಿದೆ.



ಮರದಲ್ಲೇ ಮೊಳಕೆಯೊಡೆಯುವ ಬೀಜ, ಉಸಿರಾಡುವ ಬೇರುಗಳು; ಮರವೇರುವ ಮೀನುಗಳು; ಸಂದಿಪದಿಯಾಗಿ ಜನಿಸಿ ಚಿಪ್ಪಿನೊಳಗೆ ಬದುಕುವ ಏಡಿಗಳು; ತಲೆಯ ಮೇಲೆ ಬೆಳ್ಳಕ್ಕಿಗಳ ಗುಂಪು... ಎಲ್ಲವನ್ನೊಳಗೊಂಡು ನೀರ

ಜೀವಜಾಲದ ತೊಟ್ಟಿಲು

ಕಾಂಡ್ಲಾವನ

"ಜೀವಜಾಲದ ಕೊರಡಿ"
ನಿಂದರ ಪಡೆಯಬಹುದಷ್ಟೆ.
ಕೊಳ್ಳಲು ಸಾಧ್ಯ
ಕಾಂಡ್ಲ ಕಾಡುಗಳಿಗೆ ಬರಬೇಕು.
ಇಲ್ಲಿ ಬಲ್ಲ ನೋಡಿದರು
ಬರೀ ಕೊರಡಿರುವೇ ಕೊರಡಿ
ಕಾಣುತ್ತವೆ.

ಚಿತ್ರ-ಲೇಖನ:
ಪಿ. ಸತೀಶ್ ಕುಮಾರ್

ಮೇಲೆ ತೇಲಾಡುವ ಹಸಿರಿನ ಈ ಲೋಕ ವಿಚಿತ್ರದೊಳಗೊಂದು ವಿಚಿತ್ರ!

ಕಾಂಡ್ಲಕಾಡು (ಇಂಗ್ಲಿಷ್‌ನಲ್ಲಿ ಮ್ಯಾಂಗ್ರೂವ್ಸ್ Mangroves) ಜಗತ್ತಿನ ಉಷ್ಣವಲಯದ ಸಮುದ್ರ ದಂಚಿನ ಜೀವಜಾಲದ ತೊಟ್ಟಿಲು. ಭಾರತದ ಪೂರ್ವ ಕರಾವಳಿಯಲ್ಲಿ ಜಗತ್ತಿನ ಅತ್ಯಂತ ದೊಡ್ಡ ಮ್ಯಾಂಗ್ರೂವ್ಸ್ ಕಾಡು ಪಶ್ಚಿಮ ಬಂಗಾಳದ ಸುಂದರ ಬನದಲ್ಲಿದೆ: ಎರಡನೆಯದು ದಕ್ಷಿಣದ ತಮಿಳುನಾಡಿನ ಕರಾವಳಿಯಲ್ಲಿರುವ ಪಿಚಾವರಂನ ಕಾಂಡ್ಲಕಾಡುಗಳು.

ಸಾಗರ ಹಾಗೂ ನದಿಯ ಸಂಗಮದ ಬಳಿ, ಉಪ್ಪುನೀರಿನ ನಡುವಣ ಫಲವತ್ತಾದ ಕಪ್ಪು ಜೌಗಿನಲ್ಲಿ ಉಪ್ಪು ನೀರಿನ ನಡುವೆ ಬೆಳೆದು ನಿಲ್ಲುವ ಕಾಂಡ್ಲ ಸಸ್ಯಗಳ ವಿಶೇಷ ಗುಣಗಳೆಂದರೆ: ಅವು ಸಸ್ಯ ವರ್ಗದ ಬೇರೆ ಬೇರೆ ಸಂಸಾರದ ಬೇರೆ ಬೇರೆ ಪ್ರಭೇದಗಳಾಗಿರುವುದು. ಪ್ರತಿ ಪ್ರಭೇದವೂ ತನ್ನದೇ ವಿಶಿಷ್ಟ ಹೊಂದಾಣಿಕೆಯ ಮೂಲಕ ಆ ವಿಶಿಷ್ಟ ಪರಿಸರದಲ್ಲಿ ಬದುಕುತ್ತಿರುವುದು.


ಹಸಿರಿನ ಅಡ್ಡಗೋಡೆ

ಹೊಳೆಯ ದಡದ ಅಲೆಗಳಿಗೆ ಎದೆಯೊಡ್ಡಿ, ಹಸಿರಿನ ಅಡ್ಡಗೋಡೆ ನಿರ್ಮಿಸಿ, ಅಲೆಗಳಿಂದ ತನ್ನ ನೆರೆಹೊರೆಯ ಹಸಿರನ್ನು ರಕ್ಷಿಸುತ್ತಾ ನಿಲ್ಲುವ ಮ್ಯಾಂಗ್ರೂವ್ಸ್ ದೊರೆ ರೈಝೋಪೊರಾ.

ಕಾಂಡ್ಲ ಸಸ್ಯಗಳಲ್ಲೇ ವಿಶಿಷ್ಟ 'ವ್ಯಕ್ತಿತ್ವ'ದ ರೈಝೋಪೊರಾ ತನ್ನ ಬೇರುಗಳ ಚಪ್ಪರದ ಮೇಲೆ ಗೋಪುರಾಕೃತಿಯ ಸದಾಹಸಿರಾಗಿರುವ ಎಲೆಯ ಕವಚ ಧರಿಸಿದ್ದರೆ... ಆ ಹಸಿರಿನ ಗೋಪುರದ ಮೇಲೆ ಕೊಕ್ಕರೆಗಳ ಸಾಲೋ... ಸಾಲು.

ಉಬ್ಬರವಿಳಿತಕ್ಕೆ ಓಗೊಟ್ಟು, ಬಿರುಗಾಳಿಗೆ ತಲೆಗೊಟ್ಟು ನಿಲ್ಲುವ ರೈಝೋಪೊರಾಕ್ಕೆ 'ಸ್ಟಿಲ್ಟ್ ರೂಟ್ಸ್' ಎಂಬ ಊರುಗೋಲಿನಂಥ ವಿಶಿಷ್ಟ ಬೇರುಗಳಿರುತ್ತವೆ. ನೀರಿನ ಹೊಡೆತಕ್ಕೆ ಕೊಚ್ಚಿಹೋಗದಂತೆ ನಿಸರ್ಗ ನೀಡಿದ ಆಸರೆ ಈ ಸ್ಟಿಲ್ಟ್ ರೂಟ್‌ಗಳು. ಒಂದೊಂದು ಗಿಡದಿಂದ ಸಾವಿರಕ್ಕಿಂತಲೂ ಹೆಚ್ಚಿಗೆ ಹೊರಚಾಚುವ ಈ ಬೇರುಗಳು ಸಸ್ಯದ ಬುಡದಿಂದ ಮಾತ್ರವಲ್ಲ, ಕೊಂಬೆಗಳಿಂದಲೂ ಹೊರಟು ನೆಲ ಸೇರಿರುತ್ತವೆ. ಜೊತೆಗೆ ಈ ಬೇರುಗಳು ಆ ಪ್ರದೇಶದ ಮಣ್ಣು ಸವೆದು ಹೋಗದಂತೆ ತಡೆಯುತ್ತವೆ.

ಸದಾ ನೀರ ಮೇಲೆ ನಿಲ್ಲುವ ರೈಜೋಪೊರಾಗೆ ಪ್ರಕೃತಿ ನೀಡಿದ ಮತ್ತೊಂದು ಕೊಡುಗೆಯೆಂದರೆ ತಾಯಿ ಸಸ್ಯದಲ್ಲಿಯೇ ಬೀಜ ಮೊಳಕೆಯಾಗುವ ಕ್ರಿಯೆ. ಸಾಮಾನ್ಯ ಸಸ್ಯಗಳಲ್ಲಿ ಹಣ್ಣು ಫಲಿತ ನಂತರ ನೆಲ ಸೇರಿ, ಬೀಜಗಳು ಮಣ್ಣನ್ನು ಸ್ಪರ್ಶಿಸಿ



ಕಾಂಡ್ಲಕಾಡಿನ ನಡುವೆ ಕಾಯ್ಕ್ರೇಟ್ ಕಾಡು

ಅಲ್ಲಿ ಅವು ಮೊಳಕೆಯೊಡೆಯುತ್ತವೆ. ಆದರೆ ಇಲ್ಲಿ ಹಣ್ಣಿನ ತೊಟ್ಟು ಕಳಚಿದರೆ ಅದು ಸ್ಪರ್ಶಿಸುವುದು ನೆಲವನ್ನಲ್ಲ, ಜಲರಾಶಿಯನ್ನು. ಯಾರಿಗೆ ಗೊತ್ತು, ಆಗ ಅದರ ಸಂತಾನೋತ್ಪತ್ತಿ ಕ್ರಿಯೆಯೇ ನಿಂತು ಹೋಗಬಹುದು. ಹಾಗೆ ಆಗದಂತೆ ನಿಸರ್ಗ ಇಲ್ಲಿ ಅಪಾರ ಜಾಣ್ಮೆ ತೋರಿದೆ; ನೀರಿಲ್ಲದ ಸಮಯ ನೋಡಿಯೇ ಗಿಡದಿಂದ ಹಣ್ಣು ಬೀಳುತ್ತದೆ!

ನೆಲಕ್ಕೆ ಇರಿಯುವ ಕೋಡು

ರೈಝೂಪೊರಾದಲ್ಲಿ ಮರದ ಮೇಲೆಯೇ ಹಣ್ಣು ಬಲಿತು, ಹಣ್ಣೊಳಗಿನ ಬೀಜ ಅಲ್ಲಿಯೇ ಮೊಳಕೆಯೊಡೆದು... ಉದ್ದನೆಯ ಚೂಪಾದ ತುದಿಯುಳ್ಳ ಕೋಡುಗಳ ರೂಪ ಧರಿಸುತ್ತವೆ. ವಿಚಿತ್ರವೆಂದರೆ ಬಲಿತ ಆ ಕೋಡುಗಳು ನೆಲ ಸೇರುವ ಸಮಯ ಹಾಗೂ ಕ್ರಿಯೆ. ಯಾವ ಕಾರಣಕ್ಕೂ ಉಬ್ಬರದ ಸಮಯದಲ್ಲಿ ಬಲಿತ ಆ ಕೋಡುಗಳು ತಾಯಿ ಸಸ್ಯದಿಂದ ಕಳಚಿಕೊಳ್ಳುವುದಿಲ್ಲ. ಬದಲಾಗಿ ಇಳಿತದ ಸಮಯದಲ್ಲಿ ಮರದ ಬುಡದಲ್ಲಿ ನೀರು ಕಡಿಮೆಯಿದ್ದಾಗ ಯಾರ ಆಜ್ಞೆ ಅಪ್ಪಣೆಗೂ ಕಾಯದೆ, ಭೂಮಿತಾಯಿಯ ಕರೆಗೆ ಓಗೊಟ್ಟು ಈ ಕೋಡು ತಾಯಿ ಸಸ್ಯದಿಂದ ಬೇರಾಗಿ, ನೇರ ಬಾಣದಂತೆ ನೆಲದತ್ತ ಸಾಗಿ ಚೂಪಾದ ಅದರ ತುದಿ ಮೆತ್ತನೆಯ ಮಣ್ಣಲ್ಲಿ ಠಪ್ಪೆಂದು ಚುಚ್ಚಿಕೊಳ್ಳುತ್ತದೆ! ಆಗ ಹೊಸ ಜೀವಿಯೊಂದರ ಉಗಮವಾಗುತ್ತದೆ.

ರೈಝೂಪೊರಾದ ಬೇರುಗಳ ಬಿಗಿ ಹಿಡಿತ ಬಿಡಿಸಿಕೊಳ್ಳುತ್ತ ನಾವು ಕಾಂಡ್ಲ ಕಾಡಿನ ನಡುವೆ ತೂರಿದರೆ ಧುತ್ತನೆ ಈಟಿಗಳ ರೂಪದ ಆಕೃತಿಗಳು ಎದುರಾಗುತ್ತವೆ. ಅವೇ ಸೊನರೇಶಿಯಾದ ಉಸಿರಾಡುವ ಬೇರುಗಳು! ಸುಮಾರು ಆರರಿಂದ ಏಳು ಅಡಿ ಎತ್ತರಕ್ಕೆ ಸಸ್ಯದ ಸುತ್ತಲೂ ಹರಡಿರುವ ಬೇರುಗಳ ದಟ್ಟ ಜಾಲದ ಮೂಲಕ ನೆಲ ಬಿಟ್ಟು ಮೇಲೆದ್ದ ನೂರಾರು ಉಸಿರಾಡುವ ಬೇರುಗಳು ಸೊನರೇಶಿಯಾ ಸಸ್ಯ ಕುಟುಂಬದ ವೈಶಿಷ್ಟ್ಯ; ಅವಿಸಿನಿಯಾ ಜಾತಿಯ ಸಸ್ಯದ ಉಸಿರಾಡುವ ಬೇರುಗಳು ಒಂದೂವರೆ ಆಳೆತ್ತರಕ್ಕೆ ಸುತ್ತಲೂ ದಟ್ಟವಾಗಿ ಬೆಳೆದು ಸಸ್ಯದ ಬಳಿ ಸಾಗಬೇಕೆನ್ನುವ ನಮ್ಮ ಪ್ರಯತ್ನಕ್ಕೆ ಪ್ರಬಲ ಪ್ರತಿರೋಧ ಒಡ್ಡುತ್ತವೆ.


ಒಂದು ಕಾಲದಲ್ಲಿ ಪಿಚಾವರಂನ ಕಾಂಡ್ಲ ಕಾಡುಗಳಲ್ಲಿ ಸೊನರೇಶಿಯಾದ ಎರಡು ಪ್ರಭೇದಗಳನ್ನು ಹೇರಳವಾಗಿ ಕಾಣಬಹುದಿತ್ತು. ಈಗ ಕೆಲವೇ ಕೆಲವು ಪ್ರತಿನಿಧಿಗಳನ್ನು ಮಾತ್ರ ಕಾಣಬಹುದು.

ರೈಝೂಪೊರಾ ದರ್ಬಾರು

ಸುಮಾರು ಇಪ್ಪತ್ತು ಮ್ಯಾಂಗ್ರೂವ್ಸ್ ಪ್ರಬೇಧಗಳು ಪಿಚಾವರಂನ ಕಾಂಡ್ಲ ಕಾಡುಗಳಲ್ಲಿ ಹರಡಿವೆ. ದರ್ಬಾರು ಮಾತ್ರ ರೈಜೋಫೊರಾ ಮತ್ತು ಅವಿಸಿನಿಯಾದ್ದು. ಉಳಿದ ಪ್ರಭೇದಗಳ ಸಂತತಿ ಪುಡಿ ಪುಡಿಯಾಗಿ ಅಲ್ಲಲ್ಲಿ ಹರಡಿದ್ದು ಈಗಂತೂ ಬಾಹ್ಯ ಒತ್ತಡಗಳಿಂದ ಕಣ್ಣಿಗೇ ಕಾಣಲಾರದಷ್ಟು ವಿರಳವಾಗಿವೆ.

ಕಾಂಡ್ಲ ಕಾಡುಗಳ ಮತ್ತೊಂದು ಮುಖ್ಯ ವಿಶೇಷವೆಂದರೆ ಈ ಇಕಾಲಜಿಯಲ್ಲಿ ಕಾಣಬರುವ ಸಸ್ಯ-ಸಸ್ಯ, ಸಸ್ಯ-ಪ್ರಾಣಿ, ಪ್ರಾಣಿ-ಪ್ರಾಣಿಗಳ ನಡುವಿನ ಪರಸ್ಪರ ಅವಲಂಬನೆ ಹಾಗೂ ಸಹ ಜೀವನ. ಹೊಳೆಗೆ ಎದುರಾಗಿ ರೈಝೂಪೊರಾ ಜೊತೆಗೆ ಅವಿಸಿನಿಯಾ, ಹಿಂದೆ ಸೊನರೇಶಿಯಾ, ಬೆನ್ನಲ್ಲಿ ಎಜಿಸಿರಾಸ್, ದೂರದ ಬಟ್ಟ ಬಯಲಲ್ಲಿ ಮುಳ್ಳಿನ ಮೈಯುಳ್ಳ ಅಕ್ಯಾಂಥಸ್... ಸಸ್ಯ-ಸಸ್ಯಗಳ ಸಂಬಂಧವಿದಾದರೆ...

ಸಸ್ಯ-ಪ್ರಾಣಿಗಳ ಸಂಬಂಧ ನೋಡಿ: ರೈಝೂಪೊರಾದ ಬೇರುಗಳ ನಡುನಡುವೆ ಸೀಗಡಿಗಳು ಸೊಗಸಾಗಿ ಮನೆಮಾಡಿ ನಿಂತಿದ್ದರೆ, ಮೇಲೆ ಹಸಿರೆಲೆಗಳಂತೂ ಕೊಕ್ಕರೆಗಳ ತವರೂರು. ಕಾಂಡ್ಲ ಸಸ್ಯಗಳ ಬೇರುಗಳ ಜಾಲದಲ್ಲಿ ಮತ್ಸ್ಯಕನ್ಯೆಯರ ನರ್ತನವಂತೂ ನಿರಂತರ. ದೂರದ ಅಕ್ಯಾಂಥಸ್‌ನ ನಡುವೆ ತನ್ನರ್ಧ ದೇಹವನ್ನು ಚಿಪ್ಪಿನೊಳಗಿಟ್ಟು



ರೈಝೂಪೊರಾ ಜತೆ ಅವಿಸೀನಿಯಾ ಸಹಜೀವನ

ಕೊಂಡು ಕಾಲು ಹೊರಚಾಚಿ ಚಿಪ್ಪಿನ ಕವಚದೊಂದಿಗೇ ಚಲಿಸುವ ಏಡಿ, 'ಹರ್ಮಿಟ್ ಕ್ರ್ಯಾಬ್'.

ಏಡಿ-ಕೊಕ್ಕರೆ ಸಂಬಂಧ

ಪ್ರಾಣಿ-ಪ್ರಾಣಿಗಳ ನಡುವಿನ ಜೀವಜಾಲದ ಕೊಂಡಿ ಕಾಂಡ್ಲಕಾಡುಗಳಲ್ಲಿ ಸರ್ವೇಸಾಮಾನ್ಯ. ಬೇರುಗಳ ಜಾಲದ ನಡುವಿರುವ ಮತ್ಸ್ಯಗಳನ್ನು, ಸೀಗಡಿಗಳನ್ನು, ಏಡಿಗಳನ್ನು ಹುಡುಕಲೆಂದು ನೀಳ ಕೊಕ್ಕು ಚಾಚಿ ನೀರನ್ನು ಬಾಚುವ ಕೊಕ್ಕರೆಗಳು ಹಾಗೂ ಅವುಗಳ ಸಂಬಂಧಿಗಳು ಮ್ಯಾಂಗ್ರೂವ್ಸ್ ಪ್ರದೇಶದಲ್ಲಿಯೇ ಬೀಡುಬಿಟ್ಟಿರುತ್ತವೆ.

ಈ ವಿಶಿಷ್ಟ ಕಾಂಡ್ಲಕಾಡುಗಳು ಪಿಚಾವರಂನ ಸುತ್ತಮುತ್ತ ಸುಮಾರು ಮೂರು ಸಾವಿರ ಎಕರೆ ಪ್ರದೇಶವನ್ನಾವರಿಸಿವೆ ಎಂದು ಅಲ್ಲಿರುವ ಸರ್ಕಾರಿ ಫಲಕ ಹೇಳುತ್ತದೆ. ಆದರೆ ಅಲ್ಲಿ ಕಾಣುವ ಕಾಂಡ್ಲ ಕಾಡಿನ ಇಂದಿನ ಸ್ಥಿತಿ ಮಾತ್ರ ಶೋಚನೀಯ.

ನಿರಂತರ ಬಳಕೆ ಇಲ್ಲಿನ ಕಾಂಡ್ಲಕಾಡುಗಳ ದರಿದ್ರ ಸ್ಥಿತಿಗೆ ಒಂದು ಮುಖ್ಯ ಕಾರಣವಾಗಿದ್ದರೆ, ಮತ್ತೊಂದು ಮುಖ್ಯ ಕಾರಣ ನಿಸರ್ಗ ಸೌಂದರ್ಯವನ್ನು ಹಣವಾಗಿಸಲು ಹೊರಟಿರುವುದು.

ಹದಿನೈದು ವರ್ಷಗಳ ಹಿಂದೆ ಸಮೃದ್ಧವಾಗಿದ್ದ ಪಿಚಾವರಂನ ಕಾಂಡ್ಲ ಕಾಡುಗಳು ಇಂದು ಸಾವಿನಂಚಿಗೆ ಸಾಗುತ್ತಿವೆ. ಸುತ್ತ ಚಿದಂಬರಂ, ಪೂಂಪುಹಾರ್, ಪಾಂಡಿಚೇರಿ ಮುಂತಾದ ಪ್ರವಾಸಿ ಹಾಗೂ ಪುಣ್ಯಕ್ಷೇತ್ರಗಳ ನಡುವಿರುವ ನಿಸರ್ಗದ ಈ ಅಪರೂಪದ ಸಿರಿ ಇಂದು ಪ್ರವಾಸೋದ್ಯಮದ ಕೈಯ್ಯಲ್ಲಿ ನರಳುತ್ತಿವೆ.

ಅಣ್ಣಾ ಟೂರಿಸ್ಟ್ ಕಾಂಪ್ಲೆಕ್ಸ್

ಹಿನ್ನೀರಿನ ದ್ವೀಪವೊಂದರ ಮೇಲೆ ಸುಮಾರು ಇಪ್ಪತ್ತು ಎಕರೆಯಷ್ಟು ಕಾಂಡ್ಲ ಕಾಡನ್ನು ಸವರಿ 'ಅಣ್ಣಾ ಟೂರಿಸ್ಟ್ ಕಾಂಪ್ಲೆಕ್ಸ್' ಎಂಬ ಕಾಂಕ್ರೀಟ್ ಕಾಡನ್ನು ನಿರ್ಮಿಸಲಾಗಿದೆ. ಇದುವರೆಗೆ ಹುಟ್ಟು ಹಾಕುವ ದೋಣಿಗಳ ಮೂಲಕ ಪ್ರವಾಸಿಗರಿಗೆ ಕಾಂಡ್ಲಕಾಡಿನ ದರ್ಶನವಾಗುತ್ತಿತ್ತು. ಈಗೀಗ ಯಾಂತ್ರೀಕೃತ ದೋಣಿಗಳು ಬಂದಿವೆ. ಕಡಿಮೆ ಬಾಡಿಗೆಯ ಟೂರಿಸ್ಟ್ ಕಾಟೇಜ್‌ಗಳು ತಲೆ ಎತ್ತಿವೆ; ಉಪಾಹಾರಗೃಹಗಳು ಕೈಬೀಸಿ ಕರೆಯುತ್ತಿವೆ. ಪ್ರವಾಸೋದ್ಯಮದ ತೀವ್ರಗತಿಯಲ್ಲಿ ಮುನ್ನಡೆಯುತ್ತಿದೆ.

ಹಿಂದೆ ಕೇವಲ ಕೊಯಮತ್ತೂರಿನ ಫಾರೆಸ್ಟ್ ಕಾಲೇಜಿನ ವಿದ್ಯಾರ್ಥಿಗಳು, ಆಸಕ್ತರು ಭೇಟಿ ನೀಡುತ್ತಿದ್ದ ಪಿಚಾವರಂನ ಕಾಂಡ್ಲಕಾಡುಗಳಿಗೆ ಈಗ ಈ ಹೊಸ ಸೌಲಭ್ಯಗಳಿಂದಾಗಿ ಗಣನೀಯ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

ಸಂಖ್ಯೆಯೇನೋ ಹೆಚ್ಚಿದೆ. ಆದರೆ ಬೇಟಿಯ ಉದ್ದೇಶಗಳು ಮಾತ್ರ ಕವಲೊಡೆಯುತ್ತಿವೆ. ಇಲ್ಲಿರುವ ಅಪರೂಪದ ಜೀವಜಾಲವನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳ ಮಹತ್ವ ಅರಿಯುವುದು ಹೆಚ್ಚಿನವರ ಬೇಟಿಯ ಉದ್ದೇಶವಲ್ಲ.

'ಅಣ್ಣಾ ಟೂರಿಸ್ಟ್ ಕಾಂಪ್ಲೆಕ್ಸ್' ಕಾಟೇಜ್ ಗಳ 'ಸದುಪಯೋಗ'ವಂತೂ ಸದಾ ನಡೆಯುತ್ತಿದ್ದು, ಕಾಂಡ್ಲಕಾಡಿನ ನಡುವಣ ಕಾಂಕ್ರೀಟ್ ಕಾಡು ಪರಿಸರ-ಪ್ರವಾಸೋದ್ಯಮದ ನೆಪದಲ್ಲಿ ಮೋಜಿನ ಕೇಂದ್ರವಾಗಿಬಿಟ್ಟಿದೆ.

ಈ ನಡುವೆ ಕೇಂದ್ರ ಪರಿಸರ ಮತ್ತು ಜೀವಿ ಪರಿಸ್ಥಿತಿ (ಇಕಾಲಜಿ) ಇಲಾಖೆಯವರು ಪಿಚಾವರಂನ ಕಾಂಡ್ಲಕಾಡಿನ ಪುನರುತ್ಥಾನಕ್ಕೆ 'ಬೃಹತ್' ಯೋಜನೆ (ಕೋಟಿಗಳ ಲೆಕ್ಕದಲ್ಲಿ) ಹಾಕಿದ್ದಾರೆ; ಇದಕ್ಕೆ ತದ್ವಿರುದ್ಧವಾಗಿ, ತಮಿಳುನಾಡು ಸರ್ಕಾರ ಪ್ರವಾಸೋದ್ಯಮದ ಪುನರುತ್ಥಾನಕ್ಕೆ ಟೊಂಕ ಕಟ್ಟಿ ನಿಂತಿದೆ. ಇದು ನಮ್ಮ ಸರ್ಕಾರಗಳ ದ್ವಿಮುಖ ನೀತಿಯ ಒಂದು ಉದಾಹರಣೆ.

ಪ್ರವಾಸಿಗಳ ಪರೇಡ್

ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾಲಯ ಕ್ಯಾಂಪಸ್‌ನಿಂದ ಕೇವಲ 15 ಕಿಲೋಮೀಟರ್ ದೂರದಲ್ಲಿರುವ ಈ ಅಪರೂಪದ ಜೀವಸಂಕುಲದ ಈಗಿನ ಪರಿಸ್ಥಿತಿಯ ಕುರಿತು ಅಲ್ಲಿನ ಸಸ್ಯಶಾಸ್ತ್ರ ವಿಭಾಗದ ರೀಡರ್ ಸಂಪತ್ ಕುಮಾರ್‌ರವರನ್ನು ವಿಚಾರಿಸಿದಾಗ 'ಇದೇ ರೀತಿ ಪ್ರವಾಸಿ ಪರೇಡ್ ಮುಂದುವರೆದರೆ ಇನ್ನು ಹತ್ತು ವರ್ಷದಲ್ಲಿ ಈ ಸಸ್ಯಲೋಕವೇ ಇಲ್ಲವಾಗುತ್ತದೆ' ಎಂದು ನೊಂದು ನುಡಿಯುತ್ತಾರೆ.


ಇಡೀ ಪ್ರಪಂಚವೇ ಮುಂದಿನ ಜೈವಿಕ ತಂತ್ರಜ್ಞಾನ ಯುಗಕ್ಕಾಗಿ ತಮ್ಮಲ್ಲಿರುವ ಅಪರೂಪದ ವಂಶವಾಹಿನಿಗಳ ಭಂಡಾರವನ್ನು ಕಾಪಾಡುವ ಪ್ರಯತ್ನ ಮಾಡುತ್ತಿರುವಾಗ, ನಾವು ಅಪರೂಪದ ಕಾಂಡ್ಲಕಾಡಿನಂತಹ ವಂಶವಾಹಿನಿಗಳ ಭಂಡಾರವನ್ನು ಪ್ರವಾಸೋದ್ಯಮದ ಹೆಸರಲ್ಲಿ ಕಳೆದುಕೊಳ್ಳುವ ಹಂತ ತಲುಪಿದ್ದೇವೆ.

ಉಪ್ಪು ನೀರಿನ ನಡುವೆ ಬೆಳೆಯುವ ವಿಶಿಷ್ಟ ವಂಶವಾಹಿನಿಯನ್ನು ಹೊತ್ತು ನಿಂತಿರುವ ಕೇವಲ ಇಪ್ಪತ್ನಾಲ್ಕು ಸಸ್ಯಪ್ರಭೇದಗಳ ಇದೇ ವಂಶವಾಹಿನಿ (ಜೀನ್ಸ್)ಗಳು ಮುಂದೊಂದು ದಿನ ಯಾವುದಾದರೂ ಜೈವಿಕ ಪ್ರಯೋಗಕ್ಕೆ ಬೇಕಾದರೆ...?

ಉತ್ತರ ಕನ್ನಡದ ಪಕ್ಷಿ ಪ್ರಪಂಚ

ನಿಸರ್ಗ ಸೌಂದರ್ಯದ ತವರು ಉತ್ತರ ಕನ್ನಡ ಜಿಲ್ಲೆ. ಪಶ್ಚಿಮ ಕರಾವಳಿಗುಂಟ ಸಹ್ಯಾದ್ರಿಯನ್ನು ಅಪ್ಪಿ ಮಲಗಿರುವ ಜಿಲ್ಲೆಯ ವನ್ಯ ಪರಿಸರ ಹಲವು ಬಗೆಯ ವನ್ಯ ಜೀವಿಗಳಿಗೆ ಆಶ್ರಯ ನೀಡಿದೆ. ಇಲ್ಲಿಯ ಪಕ್ಷಿ ಸಂಕುಲವಂತೂ ವೈವಿಧ್ಯ ಹಾಗೂ ಸಂಖ್ಯಾಬಲಗಳಿರದರಲ್ಲೂ ದೇಶದಲ್ಲಿಯೇ ವೈಶಿಷ್ಟ್ಯ ಪೂರ್ಣವೆನಿಸಿಕೊಂಡಿದೆ.

ನಿಯಮಿತ ಹಾಗೂ ವ್ಯವಸ್ಥಿತ ಪಕ್ಷಿ ಸಮೀಕ್ಷೆಗಳನ್ನು ಕಂಡಿರುವ ನಮ್ಮ ದೇಶದ ಕೆಲವೇ ಭಾಗಗಳಲ್ಲಿ ಉತ್ತರಕನ್ನಡ ಜಿಲ್ಲೆಯೂ ಒಂದು. ಒಂದು ಶತಮಾನಕ್ಕಿಂತಲೂ ಹೆಚ್ಚಿನ ದೀರ್ಘಾವಧಿಯ ಅಧ್ಯಯನದ ಚರಿತ್ರೆಯುಳ್ಳ ಜಿಲ್ಲೆ ಇದು. ಭಾರತದಲ್ಲಿ ಪಕ್ಷಿಗಳ ವೈಜ್ಞಾನಿಕ ಅಧ್ಯಯನ




ಫೋ: ಶ್ರೀಧರ್

ನೊಣಹಿಡುಕ ನೀಲಹಕ್ಕಿ


ನಮ್ಮ ದೇಶದ ಪಕ್ಷಿ ಪ್ರಭೇದಗಳಲ್ಲಿ ಮೂರರಲ್ಲೊಂದು ಪಾಲು ಪಕ್ಷಿಗಳು ಈ ಒಂದೇ ಜಿಲ್ಲೆಯಲ್ಲಿವೆ. ಇತ್ತೀಚಿಗೆ ಪತ್ತೆಯಾದ ಅತ್ತಿವೇರಿ ಪಕ್ಷಿಕಾಶಿಯೂ ಸೇರಿದಂತೆ, ಚಿಕ್ಕ ದೊಡ್ಡ ಅಸಂಖ್ಯ ಪಕ್ಷಿಧಾಮಗಳು ಇಲ್ಲಿವೆ. ಅಭಿವೃದ್ಧಿಯ ಹೆಸರಿನಲ್ಲಿ ಹಾಗೂ ಬೇಟೆಯ ತೆವಲಿನಲ್ಲಿ, ನಿಸರ್ಗವನ್ನು ಅದೆಷ್ಟೇ ಬಗ್ಗುಬಡಿದರೂ ಈ 'ಬಾನಂಗಳದ ಪುಷ್ಪಗಳು' ಮಾತ್ರ ಮತ್ತೆ ಮತ್ತೆ ಈ ಜಿಲ್ಲೆಯ ಆಸರೆಯನ್ನೇ ಬಯಸುತ್ತವೆ.

■ ಪಿ.ಡಿ. ಸುದರ್ಶನ್



ಗೂಡುಕಟ್ಟುವ ಗಿಡುಗ-ಕೋಗಿಲೆ

ಫೋ: ಶ್ರೀಧರ್



ಸದಾನಂದ ತಳ್ಳೂರು

ಹಣ್ಣು-ಕಾಯಿಗಳಾಚೆ ಬಣ್ಣದ ಕೊಕ್ಕರೆ




ಹಳ್ಳ-ತೊರೆಗಳ ಬಳಿ ಕಪ್ಪು-ಬಿಳಿ ಮಿಂಚುಳ್ಳಿ

ಸದಾನಂದ ತಲ್ಲೂರು

ಆರಂಭವಾದದ್ದು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ. ಆರಂಭಿಕ ಕಾಲದಿಂದಲೂ ಈ ಜಿಲ್ಲೆ, ಪಶ್ಚಿಮ ಸಾಗರ ಹಾಗೂ ತಜ್ಞರ ಗಮನ ಸೆಳೆದಿದೆ.

ಕಳೆದ 110 ವರ್ಷಗಳಿಂದೀಚೆ ಈ ಜಿಲ್ಲೆಯಲ್ಲಿ ಐದು ಅಧ್ಯಯನಗಳು ನಡೆದಿವೆ. ಈ ಮಾಲಿಕೆಯಲ್ಲಿ ಮೊಟ್ಟಮೊದಲ ದಾಖಲೆ ದೊರೆಯುವುದು 1883ರಲ್ಲಿ ಪ್ರಕಟವಾದ ಸರ್ ಜಿ.ಎಂ. ಕ್ಯಾಂಪ್‌ಬೆಲ್ ಅವರ ಕ್ಯಾನರಾ ಗೆಜೆಟಿಯರಿನಲ್ಲಿ. ಈ ಗೆಜೆಟಿಯರಿಗಾಗಿ ಆಗಿನ ಅರಣ್ಯ ಸಂರಕ್ಷಣಾಧಿಕಾರಿ ಕರ್ನಲ್ ಡಬ್ಲ್ಯೂ. ಪೀಟನ್ 40 ಪಕ್ಷಿಗಳ ಯಾದಿಯನ್ನು ಒದಗಿಸಿದ್ದಾರೆ. ಇವೆಲ್ಲಾ ಬೇಟೆಯ ಕ್ರೀಡೆಗೆ ಉಪಯುಕ್ತವಾದ ಪಕ್ಷಿ (ಗೇಮ್‌ಬರ್ಡ್)




ಎಸ್. ಶ್ರೀಧರ್

ಎಲೆಹೊಲದು ಮನೆಕಟ್ಟುವ ದರ್ಜಿಹಕ್ಕಿ

ಇದಾದ ನಂತರ 1938ರಲ್ಲಿ ಜಿಲ್ಲೆಯ ಉತ್ತರ ಭಾಗದ ಪಕ್ಷಿಗಳ ಅಧ್ಯಯನ ಮಾಡಿದವರು ಡಬ್ಲ್ಯೂ. ಕೋಲ್ಸ್ ಎಂಬ ಪಕ್ಷಿ ವಿಜ್ಞಾನಿ. ಇವರು ದಾಖಲಿಸಿರುವ ಪ್ರಭೇದಗಳು 232. ಈ ಇಬ್ಬರು ಪಕ್ಷಿವಿಜ್ಞಾನಿಗಳ ಅಧ್ಯಯನದ ವಿವರಗಳು ಬಾಂಬೆ ಪ್ರಾಕೃತಿಕ ಇತಿಹಾಸ ಸಂಘದ ಜರ್ನಲುಗಳಲ್ಲಿ ಪ್ರಕಟಗೊಂಡಿವೆ.

ಇವೆಲ್ಲ ಮಾಹಿತಿ ಕ್ರೋಢೀಕರಿಸಿ ಅತ್ಯಂತ ಸಮಗ್ರ ಅಧ್ಯಯನ ಮಾಡಿದವರು ಡಾ. ಆರ್.ಜೆ. ರಂಜಿತ್ ಡ್ಯಾನಿಯಲ್ಸ್. 1983ರಿಂದ 1988ರವರೆಗೆ 5 ವರ್ಷಗಳ ಕಾಲ ಜಿಲ್ಲೆಯ ಪಕ್ಷಿಗಳ ವ್ಯಾಪಕ ಸಮೀಕ್ಷೆ ಕೈಗೊಂಡು ಹಿಂದಿನ ದಾಖಲೆಗಳನ್ನು ಪರಿಶೀಲಿಸುವುದರೊಂದಿಗೆ 36 ಪ್ರಭೇದಗಳನ್ನು



ಎಸ್. ಶ್ರೀಧರ್

ಬೀಸಣಿಕೆ ಬಾಲದ ನೊಣಹಿಡುಕ

'ಹಾಲಕ್ಕಿ' ಹೆಸರಿನ ಚಿಟ್ಟುಗೂಬೆ

ಹೊಸದಾಗಿ ದಾಖಲಿಸಿದ್ದಾರೆ. ಅಲ್ಲದೇ ದಾಖಲಾದ ಪ್ರಭೇದಗಳ ಯಾದಿಯನ್ನು ನವೀಕರಿಸಿ 419 ಪ್ರಭೇದಗಳ ಪಟ್ಟಿಯನ್ನು ತಯಾರಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಪಕ್ಷಿಗಳ ಸಂರಕ್ಷಣಾ ತಂತ್ರಗಳನ್ನು ರೂಪಿಸುವುದು ಇವರ ಅಧ್ಯಯನದ ಮುಖ್ಯ ಗುರಿಯಾಗಿತ್ತು. ಈ ಉದ್ದೇಶಕ್ಕಾಗಿ ಕಳೆದ ಒಂದು ಶತಮಾನದ ಕಾಲಾವಧಿಯಲ್ಲಿ ಜಿಲ್ಲೆಯ ಜನ ಜೀವನ, ಭೂಬಳಕೆ, ಹವಾಮಾನ, ಅರಣ್ಯ ಮತ್ತು ಸಸ್ಯ ರಾಶಿ, ಜೀವಪರಿಸರ, ನಗರೀಕರಣ, ಅತಿಕ್ರಮಣ, ಅಭಿವೃದ್ಧಿ ಯೋಜನೆ, ಕೈಗಾರಿಕೆ, ಕೃಷಿ– ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಆದ



ನೀಲ ನಭದ ಹೂಪಕಳಿ, ಸ್ವಾರ್ಕ್

ಗಳು. ಬೇಟೆ ಪ್ರತಿಷ್ಠಿತ ವ್ಯಕ್ತಿಗಳ ಅಚ್ಚುಮೆಚ್ಚಿನ ಹುಚ್ಚು ಆಗಿದ್ದ ಕಾಲ ಅದು. ಬ್ರಿಟಿಷರಿಗಂತೂ ಇದು ಅತಿ ಮೋಜಿನ ಹವ್ಯಾಸವಾಗಿತ್ತು. ಬೇಟೆಯ ಕ್ರೀಡೆಗೆ ಅನುಕೂಲವಾಗಲು ಈ ಮಾಹಿತಿಯನ್ನು ಒದಗಿಸಲಾಗಿದ್ದರೂ ಪಕ್ಷಿಗಳ ಅಧ್ಯಯನಕ್ಕೆ ಇಂದು ಇಡೊಂದು ಉಪಯುಕ್ತ ದಾಖಲೆಯಾಗಿದೆ.

1888-1896ರ ಅವಧಿಯಲ್ಲಿ ಜೆ. ಡೇವಿಡ್ಸನ್ ಎಂಬ ಆಂಗ್ಲ ಪಕ್ಷಿ ವಿಜ್ಞಾನಿ ಕೈಕೊಂಡ ಅಧ್ಯಯನ ಪೆಚ್ಚು ಸಮಗ್ರವಾಗಿದೆ. ಇವರು ಜಿಲ್ಲೆಯ 341 ಪ್ರಭೇದಗಳನ್ನು ದಾಖಲಿಸುವುದರೊಂದಿಗೆ ಅವುಗಳ ಭೌಗೋಲಿಕ ವ್ಯಾಪ್ತಿ, ವಂಶಾಭಿವೃದ್ಧಿ, ವಲಸೆ, ವಿರಳತೆ/ವಿಪ್ರಲತೆ– ಮುಂತಾದ ಹಲವಾರು ಅಂಶಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಅಲ್ಲದೇ ಪಕ್ಷಿಗಳ ಮಾದರಿಗಳನ್ನು ಸಂಗ್ರಹಿಸಿ ವೈಜ್ಞಾನಿಕ ವಿಂಗಡನೆಗೂ ನೆರವಾಗಿದ್ದಾರೆ.

ಸದಾನಂದ ತಲ್ಲೂರು

ಎದೆಪಟ್ಟಿಯ ಪೈ-ಕಾಗೆ



ಅತ್ತಿವೇರಿ ಪಕ್ಷಿಧಾಮದಲ್ಲಿ ನೀರುಕಾಗೆಯ ಮರಿಗಳು

ಬದಲಾವಣೆಗಳ ಹಿನ್ನೆಲೆಯಲ್ಲಿ ಪಕ್ಷಿಗಳ ಜೀವನ ಕ್ರಮದ ಮೇಲಾದ ಪ್ರಭಾವಗಳನ್ನು ಅಭ್ಯಸಿಸಿ ಶಿಫಾರಸ್ಸುಗಳನ್ನು ನೀಡಿದ್ದಾನೆ. ಪ್ರೊ. ಮಾಧವ ಗಾಡಗೀಳ ಅವರ ಮಾರ್ಗದರ್ಶನದಲ್ಲಿ ಕೈಕೊಳ್ಳಲಾದ ಈ ಅಧ್ಯಯನವನ್ನು ಮನ್ನಿಸಿ ಭಾರತೀಯ ವಿಜ್ಞಾನ ಸಂಸ್ಥೆ ರಂಜಿತ್ ಡೇನಿಯಲ್ಸ್‌ರಿಗೆ ಪಿಎಚ್.ಡಿ. ಪದವಿ ನೀಡಿದೆ.


ಇವರ ಅಧ್ಯಯನ ಹಲವಾರು ಹೊಸ ಅಂಶಗಳನ್ನು ಬೆಳಕಿಗೆ ತಂದಿದೆ. ಕಳೆದ ಒಂದು ಶತಮಾನಾವಧಿಯಲ್ಲಿ ಪಕ್ಷಿಜೀವನದ ಮೇಲೆ ಪರಿಣಾಮ' ಬೀರುವ ಹಲವಾರು ತೀವ್ರತರ ಸ್ಥಿತ್ಯಂತರಗಳು ಸಂಭವಿಸಿದ್ದರೂ ಬಹುತೇಕ ಪ್ರಭೇದಗಳು ತಮ್ಮ ಅಸ್ತಿತ್ವವನ್ನು ಯಥಾಸ್ಥಿತಿ ಉಳಿಸಿಕೊಂಡಿವೆ. ಅಲ್ಲದೇ, ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಬಾಳಲು ಕಲಿತಿವೆ. ಆದಾಗ್ಯೂ ಸಿರ್ಕೀರ್ ಕುಕು, ಇಂಡಿಯನ್ ಕೋರ್ಸರ್, ಸಣ್ಣ ಫ್ಲೋರಿಕನ್ —ಮುಂತಾದ ಕೆಲವು ಪ್ರಭೇದಗಳು ಮಾತ್ರ ಜಿಲ್ಲಾ ವ್ಯಾಪ್ತಿಯಿಂದ ಅಳಿದುಹೋಗಿವೆ. ಕಿತ್ತಳೆ ಬಣ್ಣದ ಎದೆಯ ಹಸಿರು ಪಾರಿವಾಳ, ಭಾರತೀಯ ದೊಡ್ಡ ಗಿಳಿ, ಹುರುಪೆ ಚುಂಚಿನ ಹಸಿರು ಮರಕುಟುಕ, ಹಳದೀ ಬೆನ್ನಿನ ಸೂರಕ್ಕಿ— ಮುಂತಾದವು ಸಂತತಿ ನಾಶದ ಅಂಚಿನಲ್ಲಿದೆ. ಭಾರತೀಯ ಹಿರಿಯ ಹೆಗ್ಗೊಕ್ಕು, ಕಪ್ಪು ಗರುಡ, ಸಿಲೋನ್ ಫ್ರಾಗ್‌ಮೌತ್, ವಯನಾಡ್ ಲಾಪಿಂಗ್ ಥ್ರಶ್, ಬಿಳೀ ಹೊಟ್ಟೆಯ ಟ್ರೀ ಪೈ, ನೀಲಗಿರಿ ಅಡವಿ ಪಾರಿವಾಳ, ಬಿಳೀ ಹೊಟ್ಟೆಯ ನೀಲಿ ಫ್ಲೈಯ್‌ಕ್ಯಾಚರ್ —ಮುಂತಾದ 10—15 ಪ್ರಭೇದಗಳು ಕ್ಷೀಣಾವಸ್ಥೆಯಲ್ಲಿವೆ. ಇವೆಲ್ಲವುಗಳಿಗೂ ತುರ್ತು ರಕ್ಷಣೆಯ ಅಗತ್ಯವಿದೆ.

ಡಾ. ರಂಜಿತರು ತಯಾರಿಸಿದ ಯಾದಿಗೆ 1991ರಲ್ಲಿ ಇನ್ನೊಂದು ಪ್ರಭೇದದ ಸೇರ್ಪಡೆಯಾಗಿದೆ. ಬಸಪ್ಪ ಮತ್ತು ಕೊಳ್ಳಾನವರ ಜತೆಗೂಡಿ ಪಿ.ಡಿ. ಸುದರ್ಶನ್ ಮುಂಡಗೋಡದ ಬಳಿ 'ಪಟ್ಟೆ ತಲೆಯ ಹೆಬ್ಬಾತು'ಗಳನ್ನು ಪತ್ತೆ ಮಾಡಿದ್ದಾರೆ. ಹೀಗಾಗಿ ದಾಖಲಿತ ಪ್ರಭೇದಗಳ ಸಂಖ್ಯೆ 420ಕ್ಕೆ ಏರಿದೆ. ಇದು ಅಂತಿಮವಾದುದ್ದೇನಲ್ಲ. / ಇನ್ನೂ ದಾಖಲಿಸದ ಕೆಲವು ಪ್ರಭೇದಗಳು ಇರುವ ಸಾಧ್ಯತೆ ಅಧಿಕವಾಗಿದ್ದು, ಡಾ. ರಂಜಿತ್ ಹಾಗೂ ಹಲವು ಪಕ್ಷಿ ವೀಕ್ಷಕರ ಅಭಿಪ್ರಾಯದ ಮೇರೆಗೆ ಜಿಲ್ಲಾ ವ್ಯಾಪ್ತಿಯಲ್ಲಿರಬಹುದಾದ ಪ್ರಭೇದಗಳು ಸುಮಾರು 460. ಈ ದಿಸೆಯಲ್ಲಿ ಶೋಧನಾ ಕಾರ್ಯ ಆಗಬೇಕಾಗಿದೆ.

ದಾಖಲಿತ 420 ಪ್ರಭೇದಗಳು ಒಟ್ಟು 68 ಕುಟುಂಬಗಳಾಗಿ ವಿಂಗಡನೆಗೊಂಡಿದ್ದು, ಇದರಲ್ಲಿ ಜಿಲ್ಲೆಯ ಖಾಯಂ ನಿವಾಸಿ ಹಾಗೂ ವಲಸೆ ಬರುವ ಪ್ರಭೇದಗಳೂ ಸೇರಿವೆ. ಭಾರತೀಯ ಉಪಖಂಡದ 1240 ಮುಖ್ಯ ಪ್ರಭೇದಗಳ 1/3 ರಷ್ಟು ಪ್ರಭೇದಗಳನ್ನು ಈ ಜಿಲ್ಲೆಯೊಂದರಲ್ಲೇ ಕಾಣುತ್ತೇವೆ. ಇದು ಕೇರಳ ರಾಜ್ಯವೊಂದರ ಪ್ರಭೇದಗಳಿಗಿಂತಲೂ ಅಧಿಕವಾಗಿದೆ.

ಅಧ್ಯಯನ ದೃಷ್ಟಿಯಿಂದ ಭಾರತವನ್ನು ಎಂಟು ಪಕ್ಷಿವಲಯಗಳಾಗಿ ವಿಂಗಡಿಸಲಾಗಿದ್ದು, ಇದರಲ್ಲಿ ಮಲಬಾರ್ ವಲಯದಲ್ಲಿ ಉತ್ತರಕನ್ನಡ ಜಿಲ್ಲೆ ಬರುತ್ತದೆ. ಇಡೀ ಪಶ್ಚಿಮ ಕರಾವಳಿ ಹಾಗೂ ಪಶ್ಚಿಮಘಟ್ಟ ಪ್ರದೇಶಗಳು ಈ ವಲಯದಲ್ಲಿವೆ. 'ಉತ್ತರ ಸಹ್ಯಾದ್ರಿ, ದಕ್ಷಿಣ ಸಹ್ಯಾದ್ರಿ, ನೀಲಗಿರಿ—ವಯನಾಡ ಹಾಗೂ ಪಾಲಘಾಟಿನ ದಕ್ಷಿಣ ಭಾಗ' ಎಂಬ ನಾಲ್ಕು ಉಪವಲಯಗಳಲ್ಲಿ ಮಲಬಾರ ವಲಯವನ್ನು ವಿಂಗಡಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಸಹ್ಯಾದ್ರಿ ಉಪವಲಯದಲ್ಲಿದೆ. ಇಲ್ಲಿಗೆ ವಲಸೆ ಬರುವ ಪಕ್ಷಿಗಳಲ್ಲಿ ಶೇಕಡ 90ಕ್ಕಿಂತ ಅಧಿಕ ಪ್ರಭೇದಗಳು ಯುರೋಪ್, ಉತ್ತರ ಆಫ್ರಿಕಾ ಹಾಗೂ ಉತ್ತರ ಏಷ್ಯಾ ('ಪೇಲಿಯಾರ್ಕ್ಟಿಕ್ ರೀಜನ್'ನ) ಮೂಲನಿವಾಸಿಗಳಾಗಿವೆ. ತೀವ್ರ ಚಳಿ ಹಾಗೂ ಆಹಾರ ಅಭಾವದಿಂದಾಗಿ ಇವು ವಲಸೆ ಹೊರಟು ಇತ್ತ ಬರುತ್ತವೆ. ಈ ಪಕ್ಷಿಗಳು ಇಲ್ಲಿಯ ಮೂಲ ಪಕ್ಷಿಗಳೊಂದಿಗೆ ಬೆರೆತರೂ ಇಲ್ಲಿ ಸಂತಾನ ವರ್ಧನೆಯಲ್ಲಿ ತೊಡಗುವುದಿಲ್ಲ. ಇವು ಚಳಿಗಾಲದ ಅತಿಥಿಗಳು ಮಾತ್ರವಾಗಿದ್ದು, ಬೇಸಿಗೆ ಆರಂಭವಾಗುತ್ತಲೇ ತಮ್ಮ ಮೂಲ ಸ್ಥಾನಕ್ಕೆ ಹೋಗಿ ಮೊಟ್ಟೆಯಿಟ್ಟು ಮರಿಮಾಡುತ್ತವೆ.


ಉತ್ತರ ಕನ್ನಡ ಜಿಲ್ಲೆಗೆ ವಲಸೆ ಬರುವ ಪ್ರಭೇದಗಳಲ್ಲಿ ಚರಲೆ, ಬಾತುಕೋಳಿ, ಖಿಂಜನ, ಪ್ಲೋವರ್, ಕೊಕ್ಕರೆ, ಗರುಡ, ಗಿಡುಗ, ವಾರ್ಬ್ಲರ್, ಟರ್ನ್, ಗಲ್— ಮುಂತಾದ ವರ್ಗಕ್ಕೆ ಸೇರಿದ ಪಕ್ಷಿಗಳು ಪ್ರಮುಖವಾಗಿವೆ.



ನೀರು ನವಿಲು



ಪಟ್ಟೆ ತಲೆಯ ಹೆಬ್ಬಾತು



ಒಂದು ಅಂದಾಜಿನಂತೆ 35 ರಿಂದ 50 ಸಾವಿರ ಚರಲೆ ಮತ್ತು ಬಾತುಕೋಳಿಗಳು ಇಲ್ಲಿಯ ಒದ್ದೆಭೂಮಿ (ವೆಟ್‌ಲ್ಯಾಂಡ್)ಗಳಿಗೆ ಪ್ರತಿ ವರ್ಷ ವಲಸೆ ಬರುತ್ತವೆ. ಗಾಡ್‌ವಾಲ್, ಸಾಮಾನ್ಯ ಚರಲೆ, ಶಾವಲರ್, ಸೂಜಿಬಾಲದ ಬಾತು, ಗಾರ್ಗನಿ– ಮುಂತಾದವುಗಳು ಈ ಗುಂಪಿಗೆ ಸೇರಿವೆ. ಮಚ್ಚೆ ಕೊಕ್ಕಿನ ಬಾತು, ಸಿಳ್ಳೆ ಹಾಕುವ ಸಣ್ಣ ಚರಲೆ, ಕಾಟನ್ ಟೀಲ್, ಕಪ್ಪು ಬೆನ್ನಿನ ಬಾತು ಇಲ್ಲಿಯ ಮೂಲನಿವಾಸಿಗಳು. ವಲಸೆ ಬರುವ ವಾರ್ಬ್ಲರ್ ಗುಂಪಿನ ಮರವಾಸೀ ಪಕ್ಷಿಗಳ ಸಂಖ್ಯೆಯೂ ಅಗಣಿತವಾಗಿದೆ.


ಕೆಲವು ಪ್ರಭೇದಗಳು ವಿಶ್ರಾಂತಿಗಾಗಿ/ಅಥವಾ ಸಂತಾನಾಭಿವೃದ್ಧಿಗಾಗಿ ನಿರ್ದಿಷ್ಟ ಜಾಗಗಳಲ್ಲಿ ಒಟ್ಟುಗೂಡುತ್ತವೆ. ಸುರಕ್ಷತೆ, ಆಹಾರ ಮತ್ತು ಗೂಡು ಕಟ್ಟಲು ಪರಿಕರ, ಅನುಕೂಲತೆ ಇರುವ ಪರಿಸರಗಳನ್ನೇ ಇವು ಆಯ್ದುಕೊಳ್ಳುತ್ತವೆ. ಬಕ, ಕೊಕ್ಕರೆ, ಬೆಳ್ಳಕ್ಕಿ, ಮೈನಾ, ಚರಲೆ, ಬಾತು, ಪಿಂಜನ, ನೀರುಕಾಗೆ– ಮುಂತಾದ ಪ್ರಭೇದಗಳು ಸ್ವಭಾವತಃ ಸಾಮೂಹಿಕ ಜೀವನವನ್ನು ಬಯಸುತ್ತವೆ. ಬೆಳಗಾಗುತ್ತಲೇ ಉದರಂಭರಣೆಗಾಗಿ ಹಲವಾರು ಮೈಲು ದೂರ ಕ್ರಮಿಸುವ ಇಂತಹ ಪಕ್ಷಿಗಳು ಸಂಜೆಗೆ ತಮ್ಮ ನೆಚ್ಚಿನ ತಾಣಕ್ಕೆ ಹಿಂದಿರುಗಿ ಒಟ್ಟಿಗೆ ವಿಶ್ರಾಂತಿ ಪಡೆಯುತ್ತವೆ.

ಜಿಲ್ಲೆಯ ಪ್ರತಿ 500-600 ಚದರ ಮೈಲಿಗೆ ಒಂದಾದರೂ ಪಕ್ಷಿಗಳ ಸಾಮೂಹಿಕ ರಾತ್ರಿ ವಾಸದ ಸ್ಥಾನಗಳಿವೆ. ಇಂತಹ ನೆಲೆಗಳಲ್ಲಿ 200 ರಿಂದ ಏಳೆಂಟು ಸಾವಿರದವರೆಗೆ ಪಕ್ಷಿಗಳನ್ನು ಕಾಣಬಹುದು. ಪಕ್ಷಿಗಳು ವಲಸೆ ಬರುವ ಅಕ್ಟೋಬರ್‌ದಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಇಂತಹ ತಾಣಗಳಲ್ಲಿ ಪಕ್ಷಿಸಂಖ್ಯೆ ಅತಿ ಹೆಚ್ಚಾಗಿರುತ್ತದೆ.

ಕಳೆದ ಹಲವು ವರ್ಷಗಳಿಂದ ಈ ಲೇಖಕನ ನೇತೃತ್ವದಲ್ಲಿ ಜಿಲ್ಲೆಯ ಹಲವು ಪಕ್ಷಿಧಾಮಗಳ ಸಮೀಕ್ಷೆ ಕೈಗೊಳ್ಳಲಾಗಿದೆ. 1988 ರಿಂದ ಏಷ್ಯಾ ರಾಷ್ಟ್ರಗಳ ಮಧ್ಯ ಚಳಿಗಾಲದ ಜಲಪಕ್ಷಿ ಗಣತಿ ಕಾರ್ಯಕ್ರಮದಲ್ಲಿ 20 ಜಲಭೂಮಿಗಳನ್ನು ಗುರುತಿಸಲಾಗಿದೆ. 1990ರಲ್ಲಿ ಶೋಧವಾದ ಮುಂಡಗೋಡ ತಾಲೂಕಿನ ಅತ್ತಿವೇರಿ ಜಲಾಶಯದಲ್ಲಿ ಉತ್ತಮ ಪಕ್ಷಿಧಾಮದ ಲಕ್ಷಣಗಳೆಲ್ಲ ಇವೆ. ಪಕ್ಷಿಗಳ ರಾತ್ರಿ ವಾಸಸ್ಥಾನವಾಗಿರುವ ಈ ಜಲಾಶಯ ಸಂತಾನಾಭಿವೃದ್ಧಿ ಕೇಂದ್ರವೂ ಹೌದು. ಸುಮಾರು 1200 ಜೊತೆ ವಿವಿಧ ಪ್ರಭೇದಗಳಿಗೆ ಸೇರಿದ ಪಕ್ಷಿಗಳು ಇಲ್ಲಿ ಗೂಡು ಕಟ್ಟುತ್ತವೆ. ಬಣ್ಣದ ಕೊಕ್ಕರೆ, ಬಿಳಿ ಐಬೀಸ್, ನೀರುಕಾಗೆ, ಇಂಡಿಯನ್ ಶ್ಯಾಗ್, ನೀರುನವಿಲು, ಚಮಚೆ ಕೊಕ್ಕರೆ ಇಲ್ಲಿ ಗೂಡು ಕಟ್ಟುವ ಮುಖ್ಯ ಪ್ರಭೇದಗಳು. ಸುಮಾರು 40 ಜಲಪಕ್ಷಿ ಪ್ರಭೇದಗಳಿಗೆ ಆಶ್ರಯ ತಾಣವಾದ ಈ ಜಲಾಶಯದ ಸುತ್ತ ಮುತ್ತ ಮರವಾಸಿ ಹಾಗೂ ಭೂವಾಸಿ ಪ್ರಭೇದಗಳು ಸುಮಾರು 100. 1991ರ ಜನವರಿಯಲ್ಲಿ ಪಕ್ಷಿಗಳ ಗಣತಿ ಮಾಡಿದಾಗ ಇಲ್ಲಿ 8,700 ಜಲಪಕ್ಷಿಗಳಿದ್ದವು. ಈ ಪಕ್ಷಿಧಾಮದ ಅಭಿವೃದ್ಧಿಗೆ ಸಲ್ಲಿಸಲಾಗಿದ್ದ ಯೋಜನಾ ವರದಿಯನ್ನು ಮನ್ನಿಸಿ ಅರಣ್ಯ ಇಲಾಖೆ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಅದನ್ನು ಪಕ್ಷಿಧಾಮವೆಂದು ಅಧಿಕೃತವಾಗಿ ಘೋಷಿಸಿದೆ.

ಆಘನಾಶಿನಿ ನದಿಮುಖದ ಪ್ರದೇಶ ಪಕ್ಷಿಗಳನ್ನು ಆಕರ್ಷಿಸುವ ಪ್ರಮುಖ ತಾಣವಾಗಿದೆ. ಮಾಸೂರಿನಿಂದ ತದಡಿ, ಗೋಕರ್ಣದವರೆಗಿನ ಸುಮಾರು 40 ಚದರ ಮೈಲು ವಿಸ್ತೀರ್ಣದ ಈ ಪ್ರದೇಶ ಹಿನ್ನೀರು ಹಾಗೂ ಗರುಗಿನ ಭೂಮಿಗಳಿಂದ ಕೂಡಿದೆ. 'ಗರುಗಿನ ಭೂಮಿ' ಎಂದರೆ ಪ್ರತಿ ಹನ್ನೆರಡು ತಾಸಿಗೆ ನೀರಿನಿಂದ ಆವೃತವಾಗಿ ಮತ್ತೆ ಖಾಲಿ ಬಯಲಾಗುವ ಪ್ರದೇಶ. ಬಹುಪಾಲು ಗರುಗಿನ ಭೂಮಿ ಖಾಸಗಿ ಒಡೆತನಕ್ಕೆ ಸೇರಿದ್ದಾದರೂ ಅದರ ಮೂಲ ಬಳಕೆಗೆ ಬಾಧಕ ವಾಗದ ರೀತಿಯಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಿ ಈ ಪ್ರದೇಶವನ್ನು ಆಕರ್ಷಣೀಯ ಪಕ್ಷಿ ವೀಕ್ಷಣಾ ಕೇಂದ್ರವನ್ನಾಗಿ ಜನಪ್ರಿಯಗೊಳಿಸಲು ಸಾಧ್ಯವಿದೆ. ಸೋಂದಾ ಬಳಿಯ ಬಾಡಲಕೊಪ್ಪದ ಮುಂಡಿಗೆ ಕೆರೆ, ಶಿರಸಿ ನಗರ ಮಧ್ಯದ ಕೋಟೆಯ ಕೆರೆಯ ಪರಿಸರ (ಇದು ಬೆಳ್ಳಕ್ಕಿ, ಬಕ, ಕಾಗೆ, ಮೈನಾ ಮುಂತಾದ ಪಕ್ಷಿಗಳ ರಾತ್ರಿವಾಸದ ತಾಣ), ಮುಂಡಗೋಡದ ಬಾಚಣಕಿ ಜಲಾಶಯ ಪಕ್ಷಿಗಳನ್ನಾಕರ್ಷಿಸುವ ಇನ್ನಿತರ ಕೆಲವು ಕೇಂದ್ರಗಳು. ಬನವಾಸಿ ಹತ್ತಿರದ ವರದಾ ನದಿಗೆ ಕಟ್ಟಿದ ಸೇತುವೆ ಸ್ವಾಲೋ ಹಕ್ಕಿಗಳ ಸಂತಾನಾಭಿವೃದ್ಧಿ ಕೇಂದ್ರವಾಗಿದ್ದು, ವೀಕ್ಷಣಾ ಯೋಗ್ಯವಾಗಿದೆ.

ನಿಸರ್ಗ ಕರುಣಿಸಿರುವ ಅಪರಿಮಿತ ಖಗ ಸಂಪತ್ತನ್ನು ಉಳಿಸಿ ಸಂವರ್ಧನೆಗೊಳಿಸಿ ಆ ಮೂಲಕ ಪರಿಸರ ರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯ ಒಂದಕ್ಕೊಂದು ಪೂರಕವಾಗಿ ಜಿಲ್ಲೆಯಲ್ಲಿ ಆಗಬೇಕಾಗಿದೆ. ●



ಸಿಲೋನಿನ ಕಪ್ಪೆಮೂತಿಯ ಪಕ್ಷಿ

ಕಳಿಂಗ ಪಕ್ಷಿಯು



ಗೂಡಿನಲ್ಲಿರುವ ಮರಿಗೆ ಗುಟುಕು ನೀಡುವ ತಾಯಿ ಹಕ್ಕಿ



ಹಸಿರು ಹುಲ್ಲಿನ ಹಾಸಿನ ನಡುವೆ ಬೆಚ್ಚನೆಯ ಗೂಡು

ಚಿತ್ರ-ವಿವರಣೆ: **ಅನಂತ ತಟ್ಟೀಸರ**

ಯಾಕೆ ಈ ಹಕ್ಕಿಗಳು ತಮ್ಮ ಗೂಡಿಗೆ ಛಾವಣಿಯನ್ನೇ ಕಟ್ಟುತ್ತಿಲ್ಲ? ಈ

ನಾನು ನೆಲದಿಂದ 35 ಅಡಿ ಎತ್ತರದಲ್ಲಿ ನಿರ್ಮಿತ ಅಡಿಕೆ ಮರದ ಆಟ್ಟಣಿಗೆಯಿಂದ ಹೇಳುತ್ತಿದ್ದೇನೆ. ಸಮಯ ಬೆಳಗಿನ 8 ಗಂಟೆ. ಶುಭ್ರ ಆಕಾಶ ಸೂರ್ಯನ ಕಿರಣಗಳಿಗೆ ಯಥೇಚ್ಛ ಸ್ವಾಗತ ನೀಡಿದೆ. ಪ್ರಕೃತಿ ಮಾತೆಯ ಹಸಿರು ಸೀರೆಗೆ ಇಬ್ಬನಿ ಅಲ್ಲಲ್ಲಿ ಮುತ್ತು ಪೋಣಿಸಿದೆ. ಇಬ್ಬನಿಯ ಮುತ್ತಿನೊಳಗಿಂದ ಹಾಯ್ದು ಚೆದುರಿದ ಸೂರ್ಯ ಕಿರಣಗಳು ಬಣ್ಣಾದ ಕಿಡಿಗಳ ಚಿತ್ತಾರ ಮೂಡಿಸಿವೆ. ಪಕ್ಷಿಗಳ ಕಲರವ ಸಾಕಷ್ಟು ಇದ್ದು ಆದರಲ್ಲಿ ಗದ್ಯವನ್ನೂ, ಪದ್ಯವನ್ನೂ ಬೇರ್ಪಡಿಸುವುದು ಕಷ್ಟವಾಗಿದೆ. ಅವರಲ್ಲಿ ಪಾಪ್ ಸಂಗೀತಗಾರರೂ, ಶಾಸ್ತ್ರೀಯ ಸಂಗೀತಗಾರರೂ ಭಾಷಣಕಾರರೂ ಒಮ್ಮೆಲೇ ಧ್ವನಿ ಎತ್ತಿದ್ದರಿಂದ ರೇಡಿಯೋದಲ್ಲಿ ಎರಡು ಮೂರು ಕೇಂದ್ರಗಳ ಪ್ರಸಾರವನ್ನು ಒಟ್ಟಿಗೇ ಕೇಳುತ್ತಿರುವ ಅನುಭವ. ಈ ಮಧ್ಯೆ ಆದೋ ನನ್ನೆದುರಿನ ಮರದ ರೆಂಬೆಯ ಮೇಲೆ ಪಕ್ಷಿಯೊಂದು ಕುಳಿತು ಅತ್ತಿತ್ತ ನೋಡುತ್ತಿದೆ. ಅದರ ಬಾಯಲ್ಲಿ ತನ್ನ ಮಕ್ಕಳಿಗಾಗಿ ತಂದ ತಾಜಾ ತಿಂಡಿ ಇದೆ. ಸುಂದರ ದೃಶ್ಯ. ಪಕ್ಷಿ ಪಕ್ಕದಲ್ಲಿಯೇ ಇರುವ ತನ್ನ ಗೂಡಿಗೆ ತೆರಳಿತು ಹಾಗೂ ತಿಂಡಿಯನ್ನು ಮರಿಗಳ ಬಾಯಲ್ಲಿ...

ಯಾವುದೋ ಕ್ರಿಕೆಟ್ ಆಟದ ವೀಕ್ಷಕ ವಿವರಣೆಯ ನೆನಪಾಯಿತೆ? ವೀಕ್ಷಕ ವಿವರಣೆ ಸರಿ; ಆದರೆ ಕ್ರಿಕೆಟ್ ಆಟದ್ದಲ್ಲ. ಕಳಿಂಗ ಪಕ್ಷಿಯ ಬಾಣಂತನದ್ದು.

ಇದೆಲ್ಲ ಹೇಗಾಯಿತೆಂದು ಫ್ಲಾಶ್ ಬ್ಯಾಕ್‌ನಲ್ಲಿ ಹೇಳುತ್ತೇನೆ. ಹದಿನೈದು ದಿನಗಳ ಹಿಂದೆ ಹೀಗೇ ಗುಡ್ಡದಂಚಿನ ರಸ್ತೆಗುಂಟ ಬೈಕ್ ಏರಿ ಸಾಗುತ್ತಿದ್ದಾಗ ಎತ್ತರದ ಮರದ ಟೊಂಗೆಯ ಮೇಲೆ ಅಪರಿಚಿತ ಜೋಡಿಗಳು ಮನೆ ಕಟ್ಟುತ್ತಿದ್ದರು. ಸೂಕ್ಷ್ಮವಾಗಿ ವೀಕ್ಷಿಸೋಣ ಎಂದರೆ ದೂರದರ್ಶಕ ಒಯ್ದಿರಲಿಲ್ಲ. ಹತ್ತಿರ ಹೋದರೆ ಅವರಿಗೆ ತೊಂದರೆ. ಹೀಗಾಗಿ ಅವರನ್ನು ಅವರಷ್ಟಕ್ಕೆ ಬಿಟ್ಟು, ಮರುದಿನ ದೂರದರ್ಶಕ ಹಿಡಿದು ಹತ್ತಿರ ಹೋಗಿ ನೋಡಿದಾಗ ಗೂಡು ಪೂರ್ತಿಯಾಗಿತ್ತು. ಆದರೆ ಪಕ್ಷಿ ಜೋಡಿ ಅಲ್ಲಿರಲಿಲ್ಲ. ಗೃಹ ಪ್ರವೇಶಕ್ಕೆ ಆಮಂತ್ರಣ ಹಂಚಲು ಹೋಗಿದ್ದವೋ ಏನೋ. ನಾನು ಮೆಲ್ಲಗೆ ಮರ ಏರಿ ಗೂಡಿನಲ್ಲಿ ಇಣುಕಿದೆ.


ಎಲೆಮರೆಯ ತಾಯಿ!

ಮರದ ರೆಂಬೆಯ ಬಣ್ಣವನ್ನೇ ಹೋಲುವ ಗೂಡು ನಿರ್ಮಿಸಿ ಈ ಹಕ್ಕಿ ಸುರಕ್ಷಾ ಜಾಲವನ್ನೇನೊ ಹೆಣೆದುಕೊಂಡಿತ್ತು. ಆದರೆ ಗೂಡಿಗೆ ಮೇಲ್ಛಾವಣಿ ಇರಲಿಲ್ಲ! ಅಂದರೆ ಈ ಹಕ್ಕಿಗೆ ಎಲೆ ಮರೆಯ ತಾಯಿ ಆಗಲು ಇಷ್ಟವಿಲ್ಲವೆ? ಕಾಗೆಯೋ ಗಿಡುಗನೋ ಇದರ ಮೊಟ್ಟೆ/ಮರಿಗಳನ್ನು ತಿಂದು ಹಾಕಿದರೆ?

ಹಕ್ಕಿಗಿಂತ ಹೆಚ್ಚಿನ ಆತಂಕ ನನಗೆ ಆಗತೊಡಗಿತು. ಏನೇ ಆಗಲಿ ನಾನಂತೂ ಚಿತ್ರ ತೆಗೆಯಬೇಕಾದರೆ ಕೊಂಚ ದೂರದಲ್ಲಿ ವನಗಾಗಿ ಒಂದು ಗೂಡು (ಹೈಡ್) ಕಟ್ಟಬೇಕಾಗಿತ್ತು.

ಆದರೆ 35 ಅಡಿ ಎತ್ತರದ ಅಡಿಕೆ ಮರದ ಮೇಲೆ ಆಟ್ಟಣಿಗೆ ನಿರ್ಮಾಣ ಸುಲಭವೆ? ಕೂಲಿಯಾಳು ನಾರಾಯಣ ಗೌಡನ ಸಹಾಯ ಪಡೆದು ಇಬ್ಬರೂ ಅಡಿಕೆ ದಿಮ್ಮಿಗಳನ್ನು, ಬಿದಿರಿನ ಏಣಿಗಳನ್ನು ಹೊತ್ತು, ನಾಲ್ಕು ದಿನ ಶ್ರಮಪಟ್ಟು ಹೈಡ್ ನಿರ್ಮಿಸಿದೆವು. ಆರನೇ ದಿನ ಗೂಡಿನ ಬಳಿ ಹೋದಾಗ ಗೂಡಲ್ಲಿ ಕುಳಿತಿದ್ದ ಹಕ್ಕಿ ನಾನು ಆಟ್ಟಣಿಗೆ ಏರುತ್ತಿದ್ದಂತೆ ಹಾರಿ ಹೋಯಿತು. ನೋಡಿದರೆ ಗೂಡಿನ ಬಣ್ಣವನ್ನೇ ಹೋಲುವ ಒಂದು ಮೊಟ್ಟೆ ಗೂಡಲ್ಲಿತ್ತು. ಮೆಲ್ಲಗೆ ಕೆಳಗಿಳಿದು ಮನೆಗೆ ಮರಳಿದ ನಾನು, ಮತ್ತೆ ಎರಡು ದಿನ ಆ ಕಡೆ ಹೋಗಲಿಲ್ಲ. ಎರಡು ದಿನ ಬಿಟ್ಟು ಹೋಗಿ ನೋಡಿದರೆ ಮೂರು ಮೊಟ್ಟೆಗಳಿಂದ ಗೂಡಿನ ಹೊಟ್ಟೆ ತುಂಬಿತ್ತು. ರೆಂಬೆಯ ಬಣ್ಣವನ್ನೇ ಹೋಲುವ ಗೂಡಿನ ತಟ್ಟೆ. ಗೂಡಿನ ಬಣ್ಣವನ್ನೇ ಹೋಲುವ ಮೊಟ್ಟೆ. ಅಬ್ಬಾ ಪ್ರಕೃತಿ ವಿಸ್ಮಯವೆ!

ನಾನು ಕೆಳಗಿಳಿದು ಬೈಕ್ ಮೇಲೆ ಕೂರುವಷ್ಟರಲ್ಲಿ ಹಕ್ಕಿ ಪುಳಕ್ಕನೆ ಗೂಡು ಸೇರಿ ಮೊಟ್ಟೆಗಳ ಮೇಲೆ ಕಾವಿಗೆ ಕುಳಿತಿತ್ತು. ಮೊಟ್ಟೆ ಮರಿಯಾಗಲು ಸಾಮಾನ್ಯವಾಗಿ 13 ರಿಂದ 15 ದಿನಗಳು ಬೇಕು. 14ನೇ ದಿನದಿಂದಲೇ ನಾನು ದಿನಾಲು ಬೆಳಿಗ್ಗೆ ಹೈಡ್ ಸೇರಿ ವೀಕ್ಷಣೆ ಮಾಡ ತೊಡಗಿದೆ. ವಿಶೇಷ ಏನೂ ಘಟಿಸದಿದ್ದರೂ ಪ್ರಕೃತಿ ತನ್ನ ವಿಸ್ಮಯಗಳನ್ನು ಒಂದೊಂದಾಗಿ ತೆರೆದಿಡತೊಡಗಿತು. ಹಕ್ಕಿಯ ಗೂಡಿನ ಮೇಲೆ ಕಾಡು ಮಲ್ಲಿಗೆ ಬಳ್ಳಿ ಚಿಗುರಿ ಹಸಿರು ಛತ್ರಿಯನ್ನು ಗೂಡಿನ ಮೇಲೆ ಹಿಡಿದಿತ್ತು. ಶತ್ರುವಿಮಾನ (ಕಾಗೆ, ಡೇಗೆ)ಗಳಿಗೆ ಈಗ ಗೂಡು ಕಾಣುತ್ತಿರಲಿಲ್ಲ. ಹಕ್ಕಿಗಳು ಗೂಡಿಗೆ ಮೇಲ್ಛಾವಣಿ ಯಾಕೆ ಕಟ್ಟಿಲ್ಲ ಎಂದು ಈಗ ಗೊತ್ತಾಯಿತು. ಅದರ ಅಗತ್ಯವೇ ಇರಲಿಲ್ಲ. ಹೀಗೆ ಗೂಡಿನ ಸುತ್ತ



ಸಂಗಾತಿಗಾಗಿ ಕುಹೂ, ಕುಹೂ?

ಪುತ್ರೋತ್ಸವ

ಪ್ರಶ್ನೆಗೆ ಉತ್ತರ ಸುತ್ತಲ ನಿಸರ್ಗದಲ್ಲೇ ಇತ್ತು.

ಪೊದೆ ಬೆಳೆಯುತ್ತದೆಂದು ಈ ಪಕ್ಷಿಗಳಿಗೆ ಹೇಗೆ ಮುನ್ಸೂಚನೆ ಸಿಕ್ಕಿತ್ತೊ?

ಎತ್ತರದ ಜೊ ಜೊ ಆಟ

ಎರಡೂ ಹಕ್ಕಿಗಳು ಪಾಳಿಯ ಪ್ರಕಾರ ಮೊಟ್ಟೆಗೆ ಕಾವು ಕೊಡುತ್ತಿದ್ದವು. ಒಂದು ಕಾವು ಕೊಡುತ್ತಿದ್ದಾಗ ಇನ್ನೊಂದು ಸುತ್ತಲಿನ ಮರಗಳಲ್ಲಿದ್ದು ಪಹರೆ ನಡೆಸುತ್ತಿತ್ತು. ಶತ್ರುಗಳ ಸುಳಿವು ಸಿಕ್ಕಾಗ ಸೀಟಿಯ ಸೈರನ್‌ನ ಮೂಲಕ ಎಚ್ಚರಿಸುತ್ತಿತ್ತು. ಕಾವು ಕೊಡುತ್ತಿದ್ದ ಹಕ್ಕಿ ಆಗ ಎಷ್ಟು ನಿಶ್ಚಲವಾಗಿರುತ್ತಿತ್ತೆಂದರೆ ಹೈಡ್‌ನಲ್ಲಿ ಕುಳಿತ ನನಗೆ ಕೂಡಾ ಅದು ಒಣ ರೆಂಬೆಯ ತುಂಡಿನಂತೆ ಕಾಣುತ್ತಿತ್ತು. ಪಹರೆ ಮಾಡುತ್ತಿದ್ದ ಹಕ್ಕಿ ಪುರ್ರನೆ ಗೂಡಿಗೆ ಬಂದು ಸೀಟಿ ಹಾಕಿದಾಗ ಗೂಡಲ್ಲಿದ್ದ ಹಕ್ಕಿ ಸರ್ರನೆ ಜಾಗ ಖಾಲಿಮಾಡಿ ಸುತ್ತಲಿನ ಮರಗಳಲ್ಲಿ ಆಹಾರ ಅರಸುತ್ತ ಪಹರೆ ಡ್ಯೂಟಿ ಮಾಡುತ್ತಿತ್ತು. ತಾಸಿಗೊ ಒಂದೂವರೆ ತಾಸಿಗೊ ನಡೆಯುವ ಜೊ-ಜೊ ಆಟ.

ಮೊಟ್ಟೆಗೆ 20 ದಿನ ಕಳೆದಾಗ ನನಗೇ ಆತಂಕ. ಇನ್ನೂ ಯಾಕೆ



ಅಳಬೇಡ, ಕಂದಾ!

ಮರಿ ಆಗಲಿಲ್ಲ?

ಇಪ್ಪತ್ತೊಂದನೇ ದಿನ ಮುಂಜಾನೆ ಹೈಡ್ ಸೇರುತ್ತಿದ್ದಂತೆ ಹಕ್ಕಿಯ ಭಿನ್ನ ವರ್ತನೆ ನನ್ನನ್ನು ಸ್ವಾಗತಿಸಿತು: ಚಿಟ್-ಚಿಟ್ ಎಂದು ಗದರಿಸುತ್ತ ನನ್ನ ತಲೆಯನ್ನು ಕುಕ್ಕಿದಂತೆಯೇ ವರ್ತಿಸಿದಾಗ ಲಗುಬಗೆಯಿಂದ ಹೈಡ್ ಸೇರಿ ತಲೆ ಮರೆಸಿಕೊಂಡು ಗೂಡನ್ನು ವೀಕ್ಷಿಸಿದೆ. ಗೂಡು ಸುರಕ್ಷಿತವೆಂದು ತಿಳಿದಾಗ ನನ್ನ ದಿಗಿಲು ಕರಗಿತ್ತು. ಮೊಟ್ಟೆಯೊಡೆದು ಮರಿ ಆಗುತ್ತಿರಬೇಕೆಂದು ತಿಳಿದು ಸಂತಸಪಟ್ಟೆ.

ಗೂಡಿನಿಂದ ಸಂಭ್ರಮದ ಸಿಳ್ಳೆ ಬಂತು. ಸುತ್ತಲಿನ ಮರಗಳೆಡೆಯಿಂದ ಅಷ್ಟೇ ಸಂತಸದ ಸಿಳ್ಳೆ ಸದ್ದಿನ ಪ್ರತ್ಯುತ್ತರವೂ ಬಂತು. ತಾಯಿಗೆ ಶುಭಾಶಯ ಹೇಳಬಂದ ತಂದೆ ತನ್ನ ಮಕ್ಕಳಿಗೆ ಮಿಠಾಯಿ ತರುವುದನ್ನು ಮರೆತಿರಲಿಲ್ಲ. ಗಂಡನನ್ನು ಮಕ್ಕಳ ಯೋಗಕ್ಷೇಮಕ್ಕೆ ಬಿಟ್ಟು ತಾಯಿ ಮೊಟ್ಟೆಯ ಚಿಪ್ಪನ್ನೆತ್ತಿ ಬಿಸುಟು ಬರಲು ಹೊರಟಿತು. ಅಂದಿನಿಂದ ಶುರುವಾಯ್ತು ಮಕ್ಕಳ ಪಾಲನೆಯ ಎಡೆಬಿಡದ ಕಾರ್ಯಕ್ರಮ. ಮರಿಗಳ ಪಾಲನೆಯಲ್ಲಿ ಅವಿಶ್ರಾಂತವಾಗಿದ್ದರೂ ಮಕ್ಕಳ ಹಿಕ್ಕೆಯನ್ನು ಪಕ್ಕದಲ್ಲೆಲ್ಲೂ ಬೀಳಗೊಡದೆ ದೂರ ಒಯ್ದು-ಬಿಸಾಕುತ್ತಿದ್ದವು. ಎಲ್ಲೊ ಸಿಂಗಪುರದ ಜನರಿಂದ ಕಲಿತು ಬಂದಿವೆಯೊ ಏನೊ.

ಇದರ ಹೆಸರು 'ಕಾಮನ್ ವುಡ್ ಶ್ರೈಕ್' Common wood shrike. ಕನ್ನಡದ ನಾಮಧೇಯ 'ಕಟ್ಟಿಗೆ ಕಳಿಂಗ'. ಇದರ 'ಟುಯಿ ಟುಯಿ' ಕೂಗು ಮನುಷ್ಯರು ಸೀಟಿ ಹಾಕಿದಂತೆ ಕೇಳಿಸುತ್ತದೆ. ಇದರ ವಂಶ ಭಾರತದಾಚೆ ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ, ಮಯನ್ಮಾರ್‌ಗಳಲ್ಲಿಯೂ ಇದೆ. ಫೆಬ್ರುವರಿಯಿಂದ ಸೆಪ್ಟೆಂಬರ್ ನಡುವೆ (ಹೆಚ್ಚಾಗಿ ಮಾರ್ಚ್-ಏಪ್ರಿಲ್)ನಲ್ಲಿ ಇವು ಗೂಡು ಕಟ್ಟಿ ಮರಿಮಾಡುತ್ತವೆ.

ಈ ನಡುವೆ ನನ್ನ ಚಿತ್ರೀಕರಣಕ್ಕೆ ಕೆಲ ದಿನಗಳ ವಿರಾಮ ನೀಡಿದ್ದೆ. ಮರಿಗಳು ದೊಡ್ಡವಾದರೆ ಒಳ್ಳೆಯ ಪೋಸ್ಚರ್ ಸಿಕ್ಕೀತು ಎಂಬ ಭಾವನೆ. ಅದೂ ಅಲ್ಲದೆ ಮೊಟ್ಟೆಯೊಡೆಯಲು 21 ದಿನ ತೆಗೆದುಕೊಂಡ ಮೇಲೆ ಮರಿಗೆ ರೆಕ್ಕೆ ಬಂದು ಹಾರಲಿಕ್ಕೂ ಅಷ್ಟೇ ಅವಧಿ ಬೇಕೆಂಬ ಅಂದಾಜು.

ಮರಿಯಾದ 16ನೇ ದಿನ ಚಿತ್ರೀಕರಣದ ಸಾಮಗ್ರಿ ಹೊತ್ತು ಮತ್ತೆ ಬೈಕ್ ಏರಿದೆ. ಗೂಡಿದ್ದ ಸ್ಥಳ ಹತ್ತಿರವಾಗುತ್ತಿದ್ದಂತೆ ನನ್ನ ದೃಷ್ಟಿ ಪೊದೆ ಗಿಡಗಳನ್ನು ತಡವುತ್ತಾ ಸಾಗಿತ್ತು. ಚಿಕ್ಕ ಮರಿಯೊಂದು ಗಿಡದ ಮೇಲೆ ಕಂಡಾಗ ನಿಂತೆ. ನಾನು ಬಹಳ ದಿನ ತಡಮಾಡಿದೆನೆ ಎಂಬ ಸಂಶಯ ಬಂದು ಲಗುಬಗೆಯಿಂದ ಅಟ್ಟಣಿಗೆ ಏರತೊಡಗಿದೆ.


ನಾನು ನನ್ನ ಕಾಮೆಂಟರಿ ಬಾಕ್ಸ್ ಸೇರುತ್ತಿದ್ದಂತೆ ಉಳಿದ ಎರಡು ಮರಿಗಳೂ ಬುರ್ರನೆ ಹಾರಿ ದೂರ ಸಾಗುತ್ತಾ ನನಗೆ ವಿದಾಯ ಹೇಳಿದವು.

ಮಲೆನಾಡಿನ ನಿತ್ಯ ಹಸಿರು ಅರಣ್ಯ ಕಂಪಡರಿದ ಪಶ್ಚಿಮದ ಚಿತ್ತಾರದ ಸೊಬಗು. ಸಾಯಂಕಾಲದ ಮುನ್ಸೂಚನೆ ನೀಡುತ್ತಿತ್ತು. ಕಾಡಿನ ಕಾಲುದಾರಿಯಲ್ಲಿ ಸಾಗುವಾಗ, ಮರದ ಕಾಂಡದಿಂದ ಚಿಕ್ಕ ಆಕೃತಿಯೊಂದು ಗಾಳಿಯಲ್ಲಿ ತೇಲಿ ಬಂದು ಮರದ ಬುಡದಲ್ಲಿ ಇಳಿದಂತಾದ ಅನುಭವ. ಕುತೂಹಲ ಗರಿಗೆದರಿತು. ಮರದ ಬುಡದಲ್ಲಿದ್ದ ಕಾಡು ಜಾತಿಯ ಕಾಳು ಮೆಣಸಿನ ಬಳ್ಳಿಯನ್ನು ಕೂಲಂಕಷ ವೀಕ್ಷಿಸಿದಾಗ ಆಶ್ಚರ್ಯ ಅಷ್ಟಿಷ್ಟಲ್ಲ. ಎಲೆಮರೆಯ ಹಸಿರಿನಾಶ್ರಯದಲ್ಲಿ ಹಸಿರು ಬಣ್ಣವನ್ನೇ ಹೋಲುತ್ತಾ ಎಲೆಯ ಆಕೃತಿಯಂತೇ ಕಾಣುವ ಹಾರುವ ಕಪ್ಪೆ! ನೂರಾರು ವರ್ಷದಿಂದ ಆಗಾಗ ಸುದ್ದಿಯಲ್ಲಿರುತ್ತಾ ವಿಶ್ವವಿಖ್ಯಾತ ಪ್ರಕೃತಿ ಶಾಸ್ತ್ರಜ್ಞರಿಗೂ ಕಣ್ಣಿಗೆ ಕಾಣದೇ, ಕೇವಲ ದಂತಕಥೆಯಿಂದಲೇ ಪ್ರಸಿದ್ಧಿ ಪಡೆದ ಹಾರು ಕಪ್ಪೆಯನ್ನು ಪ್ರಕೃತಿಯ ಮಡಿಲಲ್ಲಿ ಜೀವಂತವಾಗಿ ಕಂಡಾಗ ಆದ ಅನುಭವ ಅವಿಸ್ಮರಣೀಯ.

ಹಾರುವ ಕಪ್ಪೆಗಳೆಂಬ ವಿಶೇಷಣ ಹೊಂದಿದ ಕೆಲವೇ ಸಂಕುಲಗಳು ಮಂಡೂಕ ಸಾಮ್ರಾಜ್ಯದಲ್ಲಿವೆ. ಕೇವಲ ಕುಪ್ಪಳಿಸುವ ಕಪ್ಪೆಗಳು ಮರದಿಂದ ಮರಕ್ಕೆ ಗಾಳಿಯಲ್ಲಿ ನೆಗೆಯುವ ನೋಟ ನಿಜಕ್ಕೂ ರೋಚಕ. ಇವಕ್ಕೆ ಹಕ್ಕಿಗಳಂತೆ ರೆಕ್ಕೆ ಬಡಿದು ಹಾರುವ ಸಾಮರ್ಥ್ಯವಿಲ್ಲ; ಆದರೂ ಹಾರುವ ಕಪ್ಪೆ (Flying Frog)ಗಳೆಂದೇ ಕರೆಯಲಾಗುತ್ತದೆ. ಪ್ರಕೃತಿಯಲ್ಲಿ ಬದುಕಿ ಉಳಿಯುವುದಕ್ಕಾಗಿ ಜೈವಿಕ ವಿಕಾಸವೆಂಬ ದುರ್ಗಮ, ದೀರ್ಘ ಹಾದಿಯಲ್ಲಿ ವೈರಿಗಳಿಂದ ಜೀವ ರಕ್ಷಿಸಿಕೊಳ್ಳಲು ಹಾಗೂ ಆಹಾರ ಹುಡುಕಲು ತಮ್ಮ ವಂಶಜರಿಗಿಂತ ವಿಶೇಷ ಸಾಮರ್ಥ್ಯ ಗಳಿಸಿಕೊಂಡ ಕೆಲವೇ ಸಂಕುಲಗಳಲ್ಲಿ ಹಾರುವ ಕಪ್ಪೆಯೂ ಒಂದು. ಬಹುಶಃ ತಮ್ಮ ವಂಶಜರಲ್ಲೇ ಪರಸ್ಪರ ಸ್ಪರ್ಧೆ ವಿಪರ್ಯಾಸಗೊಂಡಾಗ ಮರಗಪ್ಪೆ ಮರದಿಂದ ನೆಗೆದಿರಬಹುದು. ಈ ಸಾಮರ್ಥ್ಯ ತಿಳಿದು ಬೆಳೆದು "ಪ್ರಕೃತಿಯ ಆಯ್ಕೆ" ಎಂಬ ಪ್ರಯೋಗದಲ್ಲಿ ಯಶಸ್ವಿಯಾಗಿ ಹಾರುವ ಸಾಮರ್ಥ್ಯ ಪಡೆದು ಹೊಸ ಸಂಕುಲದ ಉಗಮಕ್ಕೆ ಕಾರಣವಾಗಿರಬಹುದು.

ಆವಾಸ:—ಈ ಹಾರುವ ಕಪ್ಪೆಯ ವಾಸಕ್ಷೇತ್ರ ಪಶ್ಚಿಮ ಘಟ್ಟದ ಸದಾ ಹಸಿರು ಅರಣ್ಯಗಳು. (ಕರ್ನಾಟಕ, ಕೇರಳ—


ಊಸರವಳ್ಳಿಯಂತೆ ಬಣ್ಣ ಬದಲಿಸುತ್ತ, ಹಾರುವ ಓತಿಯಂತೆ 40–50 ಅಡಿ ಜಾರಿಳಿಯುತ್ತ, ಹೆಣ್ಣಿನ ಬೆನ್ನೇರಿ ಪೆಡಲ್ ತುಳಿಯುತ್ತ ವಂಶವೃದ್ಧಿ ಮಾಡುವ ಈ ಕಪ್ಪೆ ಪ್ರಕೃತಿಯ ಅಪರೂಪದ ಕೃತಿ.



ಕುಪ್ಪಳಿಸುವ ಕಪ್ಪೆ ಹಾರಾಟ ಗಡಿಸಿದಾಗ

ಚಿತ್ರ ಲೇಖನ– ಮಂಜುನಾಥ ಹೆಗಡೆ ಹೊಸಬಾಳೆ.


ಅರಣ್ಯದ ಅವಿವಾಹಿತ ಕಪ್ಪೆ ಹಳದಿ ವರ್ಣ ವಿನ್ಯಾಸ ಜಾಹೀರುಪಡಿಸಿ ಆತ್ಮರಕ್ಷಿಸಿಕೊಳ್ಳುವ ತಂತ್ರ.



ಎತ್ತರದ ಮರದಿಂದ, ಜಾರುಪಾದ ವಿಸ್ತರಿಸಿ ಗ್ಲೈಡರ್‌ನಂತೆ ನಿಧಾನವಾಗಿ ಜಾರಿಳಿದು ಬಂದ ಹಾರುಗಪ್ಪೆ.



ವಿಹಾರಕ್ಕೆ ಸಹಕರಿಸುವ ಉರುಟಾದ ದೊಡ್ಡ ಕಣ್ಣುಗಳು. ಕುಪ್ಪಳಿಸಲು, ಕುಳಿತುಕೊಳ್ಳಲು ಸಹಕರಿಸುವ ವಿಸ್ತಾರವಾದ ಜಾ(ಲ)ರು ಪಾದಗಳು.



ಜಾರಿಯುವ ಸ್ಪರ್ಧೆಗಾಗಿ ಅಪ್ಪಿಕುಳಿತ ಹಾರುಕಪ್ಪೆಯ ವಿಶಿಷ್ಟ ಭಂಗಿ.

ತಮಿಳುನಾಡು) ಮಲಯಾ
ದ್ವೀಪಗಳಿಂದ ಹಿಡಿದು
ಬೋರ್ನಿಯೋ ದ್ವೀಪ
ಸಮೂಹದವರೆಗೆ ವ್ಯಾಪಿಸಿದೆ. ಮರ
ಗಿಡಗಳ ಹಸಿರು ಬಣ್ಣವನ್ನೇ
ಹೋಲುವ ಈ ಕಪ್ಪೆ ಹಗಲು
ಹೊತ್ತಿನಲ್ಲಿ ಎಲೆಗಳ ಮೇಲೆ
ಕುಳಿತಾಗ ಗುರ್ತಿಸುವುದೇ ಅಸಾಧ್ಯ.
ನಿಶಾಚರಿಯಾದ ಇದು ಹಗಲಿನಲ್ಲಿ
ಗಿಡಗಳ ಮರೆಯಲ್ಲಿ ಅವಿತು
ನಿದ್ರಿಸುತ್ತದೆ. ಎಲೆಗಳ ಆಕಾರಕ್ಕೆ
ತಕ್ಕಂತೆ ದೇಹದ ಅಂಗಾಂಗ ರಚನೆ,
ಎಲೆ ಬಣ್ಣವನ್ನೇ ಹೋಲುವ
ಇದರ ಮೈ ಚರ್ಮದ ವರ್ಣ
ವಿನ್ಯಾಸ ಹಾಗೂ ಪರಿಸರದ
ವಸ್ತುಗಳಿಗೆ ತಕ್ಕಂತೆ ಹೊಂದಿ
ಕುಳಿತುಕೊಳ್ಳುವ ಇದರ
ನಡವಳಿಕೆಗಳು ವೈರಿಗಳ ದೃಷ್ಟಿಗೆ
ಸಿಲುಕದೇ ಪಾರಾಗುವಂತೆ
ರೂಪುಗೊಂಡಿದ್ದು ಉತ್ತಮ ರಕ್ಷಣೆ
ಒದಗಿಸುತ್ತದೆ. ತಮ್ಮ ಪರಿಸರದ
ಎಲೆ– ಗಿಡ ಕಾಂಡಗಳ ವರ್ಣ
ಸಾಂದ್ರತೆಗೆ ತಕ್ಕಂತೇ
ದೇಹವರ್ಣವೂ
ಮಾರ್ಪಾಡಾಗುವುದು ವಿಶೇಷ
ಹಾಗೂ ಅಧ್ಯಯನ ಯೋಗ್ಯ.
(ಚಿತ್ರ–1).


ಹಾರುಗಪ್ಪೆಗಳು
ರಾಕೋಪೋರಿಡೇ
(Rhacoporidae) ಎಂಬ
ಮರಕಪ್ಪೆಗಳ ಕುಟುಂಬಕ್ಕೆ ಸೇರಿದೆ.
ಅತಿ ಪ್ರಮುಖ ಕುಟುಂಬಗಳೆಂದರೆ
ಮಲಯಾದ ಹಾರುವ ಕಪ್ಪೆ
ಹಾಗೂ ವ್ಯಾಲ್ಲೇಸ್ ಹಾರುಗಪ್ಪೆ
(Wallace,s Flying Frog) ಗಳು.
ಈ ಮಲಯಾದ ಹಾರುಕಪ್ಪೆಯ
ವೈಜ್ಞಾನಿಕ ಹೆಸರು
ರಾಕೋಪೋರಸ್ ರೀಇನ್‌ವರ್ಡ್ಟೀ
(Rhacophorus Reinwarditi).

ಮಲಯಾದ ಹಾರುಕಪ್ಪೆ
ಸಾಮಾನ್ಯವಾಗಿ 4 ಆಂಗುಲ
ಉದ್ದವಿರುತ್ತದೆ. ದೇಹದ ಮೇಲ್ಭಾಗ
ಸದಾ ತೇವಭರಿತವಾಗಿದ್ದು
ಹೊಳೆಯುವ ಹಸಿರು
ಬಣ್ಣದಲ್ಲಿರುತ್ತದೆ. ಪಾರ್ಶ್ವ ಭಾಗವು
ಹಳದಿಯಾಗಿದ್ದು ಕಪ್ಪು ಚುಕ್ಕೆ
ಪಟ್ಟಿಗಳನ್ನು ಹೊಂದಿ ಅಪಾಯ
ಸೂಚಕ ವರ್ಣವಿನ್ಯಾಸ
ಹೊಂದಿರುತ್ತದೆ. (ತನ್ನ ಮೈಯಲ್ಲಿ
'ವಿಷವಿದೆ ಹುಷಾರ್!' ಎಂಬುದನ್ನು
ಸಾರಿ ಹೇಳಲು ಪ್ರಕೃತಿಯ ಅನೇಕ
ಜೀವಿಗಳು ಪ್ರಖರ ಬಣ್ಣಗಳಲ್ಲಿ
ಮಿರುಗುತ್ತವೆ. ಕೆಲವು ಬಾರಿ ಇದು
ಸುಳ್ಳು ಬೆದರಿಕೆ ಕೂಡಾ
ಇರಬಹುದು. ಹೊಟ್ಟೆಯ ಅಡಿ
ಭಾಗ ಹಳದಿ ಮಿಶ್ರಿತ ಬಿಳಿ
ಬಣ್ಣದಲ್ಲಿರುತ್ತದೆ. ಕೈ ಕಾಲಿನ
ಜಾಲ ಪಾದದಂತಹಾ ಹೀರು
ಪಾದ (sucker disks) ಗಳೂ
ಕಡು ಕೆಂಪು ವರ್ಣದ ಅಪಾಯ
ಸೂಚನ ವರ್ಣ ವಿನ್ಯಾಸ
ಹೊಂದಿದೆ. ಹಗಲಿನಲ್ಲಿ ಹಸಿರು
ಎಲೆಗಳ ಮೇಲೆ ಅವಿತಿರುವ ಕಪ್ಪೆ,
ಅಪಾಯದ ಅರಿವಾದೊಡನೆ,
ಪಕ್ಷಿಗಳು ತಿನ್ನಲು ಹತ್ತಿರ
ಬಂದೊಡನೆ, ತನ್ನ ಜಾಲ ಪಾದದ
ಕೆಂಪು ಬಣ್ಣ ಹಾಗೂ ಹಳದಿ ಕಪ್ಪು
ಪಟ್ಟಿಗಳ ಅಪಾಯ ಸೂಚಕ
ವರ್ಣವನ್ನು ಜಾಹೀರುಪಡಿಸಿ
ವೈರಿಗಳಿಗೆ 'ತಾವು
'ವಿಷಕಾರಿ 'ಗಳೆಂಬಂತೆ ಭ್ರಮೆಯೊಡ್ಡಿ
ಆತ್ಮ ರಕ್ಷಿಸಿಕೊಳ್ಳುತ್ತವೆ. ಇಲ್ಲಿ
ಪ್ರಮುಖವಾಗಿ ಆತ್ಮ ರಕ್ಷಣೆಗೆ
ಸಹಕರಿಸುವ ಎರಡು ವಿಭಿನ್ನ
ವರ್ಣ ಸಂಯೋಜನೆಗಳನ್ನು
ಗಮನಿಸಬಹುದು. ಹಸಿರು ಎಲೆಗಳ
ಮೇಲೆ ಅವಿತಿರುವಾಗ
ಪರಿಸರದೊಂದಿಗೆ ಲೀನವಾಗಿ ವೈರಿ
ದೃಷ್ಟಿಗೆ ಅಸ್ತಿತ್ವ ಕಾಣದಂತೆ
ಸಹಕರಿಸುವರ್ಕ್ಷಣಾತ್ಮಕ ವರ್ಣ
ವಿನ್ಯಾಸ (ಚಿತ್ರ–1) ಹಾಗೂ
ಅಕಸ್ಮಾತ್ತಾಗಿ ವೈರಿ ದೃಷ್ಟಿಗೆ ಕಪ್ಪೆ
ಬಿದ್ದಲ್ಲಿ, ಕಪ್ಪೆ ತನ್ನ ದೇಹದ
ಪಾರ್ಶ್ವದ ಹಳದಿ ಕಪ್ಪು
ಪಟ್ಟಿಗಳನ್ನು ಜಾಲಪಾದ (ಗಾಳಿ
ಪಾದ) ದ ಕಡುಗೆಂಪು ಬಣ್ಣದ
ಅಪಾಯ ಸೂಚನ ವರ್ಣ ವಿನ್ಯಾಸ
(ಚಿತ್ರ–2)– ಹೀಗೆ ಎರಡು ವಿಭಿನ್ನ
ರೀತಿಯಿಂದ ಆತ್ಮರಕ್ಷಣೆಗೆ ಇದು
ಯತ್ನಿಸುತ್ತದೆ.

ದೇಹ– ಅಂಗಾಂಗ

ವಿನ್ಯಾಸ:– ಹಾರುಗಪ್ಪೆಯ
ಹಸ್ತಪಾದಗಳಲ್ಲಿನ ಉರುಟಾದ
ಜಾಲ ಪಾದದ ತೆಳು ಚರ್ಮವು
ಸದಾ ತೇವಭರಿತವಾಗಿದ್ದು, ಕಪ್ಪೆ
ಎಲೆಕಾಂಡಗಳ ಮೇಲೆ
ಕುಳಿತುಕೊಳ್ಳುವಾಗ ನಿರ್ವಾತದ
ಸ್ಥಿತಿ ಉಂಟಾಗಿ ಕಾಲಿಗೆ ಹಿಡಿತ
ನೀಡುತ್ತದೆ. (ಕೆಲವು ಹ್ಯಾಂಗರ್
ಸ್ಟಿಕರ್, ಕಾರಿನ ಗಾಜಿಗಂಟಿಸುವ
ಕೂಲಿಂಗ್ ಸ್ಟಿಕರ್‌ಗಳಂತೆ) ಬೆಳಕಿನ
ತುದಿಯಲ್ಲಿರುವ ಚಿಕ್ಕ ಗ್ರಂಥಿಗಳು
ಸದಾ ಜಿಗುಟು ದ್ರವವನ್ನು
ಸ್ರವಿಸುತ್ತಾ, ಹೀರು ಪಾದಗಳ
ಮಧ್ಯೆ ಗಾಳಿ ಗುಳ್ಳೆ ಸೇರದಂತೆ
ಮಾಡುವಲ್ಲಿ ಸಹಕರಿಸುತ್ತವೆ.
ಇದಲ್ಲದೇ ಹೊಟ್ಟೆಯ ಅಡಿಭಾಗವೂ
ಟೊಳ್ಳಾಗಿದ್ದು, ಜಿಗುಟು ದ್ರವ
ಸ್ರವಿಸುತ್ತಾ ನಿರ್ವಾತ ಸ್ಥಿತಿಯಿಂದ
ಹಿಡುಪು ಸಾಮರ್ಥ್ಯ ನೀಡುತ್ತದೆ.

ಮರಗಪ್ಪೆಯ ಉರುಟಾದ
ದೊಡ್ಡ ಕಣ್ಣುಗಳು ಮುಂಭಾಗಕ್ಕೆ
ಕೇಂದ್ರೀಕೃತವಾಗಿದ್ದು ರಾತ್ರಿ
ವಿಹಾರದಲ್ಲಿ ಹೆಚ್ಚಿನ ಬೆಳಕು



ಹಾರುಕಪ್ಪೆಯ ಅಡಿ ಭಾಗ– ಜಿಗುಟು ದ್ರವ ಸ್ರವಿಸಿ ನಿರ್ವಾತ ಸ್ಥಿತಿಯಿಂದ ಹೀರುಪಾದ ಹಾಗೂ ಹೊಟ್ಟೆಯನ್ನು ಗಾಜಿಗೆ ಅಪ್ಪಿಸಿ ಕುಳಿತ ಹಾರುಕಪ್ಪೆ.

ಗ್ರಹಿಸಲು ಸಹಕಾರಿಯಾಗಿದೆ. ಕಣ್ಣಿನ ಪಾಪೆ ಕ್ಷಿಪ್ರ ಗತಿಯಲ್ಲಿ ಬೆಳಕಿಗೆ ತಕ್ಕಂತೆ ಸ್ಪಂದಿಸುತ್ತದೆ. ಪ್ರಖರ ಬೆಳಕಿದ್ದಾಗ ಕಪ್ಪು ಸೀಳಿನಂತೆ ಚಿಕ್ಕದಾಗುವ ಪಾಪೆ ಬೆಳಕು ಕಡಿಮೆ ಇದ್ದಾಗ ಕಣ್ಣಿನ ತುಂಬಾ ಕವಾಟ ತೆರೆದುಕೊಂಡು ದೊಡ್ಡದಾಗುತ್ತದೆ.

ಹಾರಾಟ– ಜಾರಾಟ:–


ಹಾರುಗಪ್ಪೆಗಳು ಸಾಮಾನ್ಯವಾಗಿ ಹಗಲಿನಲ್ಲಿ ಬಿಸಿಲ ಬೇಗೆಗೆ ದೇಹದ ತೇವಾಂಶ ಆರಿ ಚರ್ಮ ಒಣಗದಂತೆ ಜಿಗುಟು ದ್ರವ ಸ್ರವಿಸುತ್ತಿರುತ್ತದೆ. ಎತ್ತರದ ಹಸಿರು ಎಲೆ ಕಾಂಡಗಳಲ್ಲಿ ದೇಹಕ್ಕೆ ಹೆಚ್ಚಿನ ಬಿಸಿಲು ನಾಟದಂತೆ ಕೈ ಕಾಲುಗಳನ್ನು ದೇಹದಲ್ಲಿ ಹುದುಗಿಸಿಕೊಂಡು ಸಾಧ್ಯವಾದಷ್ಟು ದೇಹಕ್ಕೆ ಕಡಿಮೆ ಬಿಸಿಲು ಬೀಳುವಂತೆ ನಿಗಾ ವಹಿಸುತ್ತದೆ. ಹಾಗಾಗಿ ಕೆಲವೊಮ್ಮೆ ಇವು ಮರಕ್ಕೆ ಸಮಾಂತರವಾಗಿ ಅಪ್ಪಿ ವಿಶ್ರಾಂತಿಸುತ್ತವೆ. ಪ್ರಖರ ಬೆಳಕಿನಲ್ಲಿ ನೀಲಿ– ಹಸಿರು ವಿಶ್ರವರ್ಣ ತಾಳುವ ಹಾರು ಕಪ್ಪೆ ಸಂಜೆಯಾದಂತೆ ತಿಳಿ ಹಸಿರು ಬಣ್ಣ ತಾಳುತ್ತಾ, ರಾತ್ರಿಯಾದಂತೆ ಮಾಸಲು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ವರ್ಣ ಸ್ಥಿತ್ಯಂತರ ಕ್ರಿಯೆ ಗಂಡಿನಲ್ಲಿ ವೇಗವಾಗಿ ನಡೆದರೆ ಹೆಣ್ಣಿನಲ್ಲಿ ಮಂದಗತಿಯಲ್ಲಿ ಸಾಗುತ್ತದೆ. ನಿಶಾಚರಿಯಾದ ಇವು ರಾತ್ರಿಯಾದಂತೆ ಚಟುವಟಿಕೆ ಆರಂಭಿಸುತ್ತವೆ. ಹಾರುಗಪ್ಪೆಯ ಪ್ರಮುಖ ಆಹಾರ ಜೀರುಂಡೆ. ಎಲೆಯಲ್ಲಿರುವ ಹುಳ ಹುಪ್ಪಟೆ ಹಿಡಿದು ತಿನ್ನುತ್ತಾ ಮರ ಏರುತ್ತಾ ಸಾಗಿ ಮರದಿಂದ ಕುಪ್ಪಳಿಸಿ ನೆಗೆದು ಕಾಲಿನ ಜಾಲಪಾದ ವಿಸ್ತರಿಸಿ, ಜಾರಿಳಿಯಲು ತೊಡಗುತ್ತದೆ. ಕೊಂಬೆಗಳಿಂದ ಕೊಂಬೆಗೆ ಸುಮಾರು ಆರು ಅಡಿಗಳವರೆಗೆ ಕುಪ್ಪಳಿಸಿದರೆ, ಮರದಿಂದ ಮರಕ್ಕೆ ಪ್ಯಾರಾಶೂಟಿನಂತೆ ಜಾರಿಳಿಯುತ್ತಾ ವಿಸ್ತರಿಸಿದ ಜಾಲಪಾದದಿಂದ ಗಾಳಿಗೆ ತಡೆಯೊಡ್ಡುತ್ತಾ ಸಾಗಿ ಸುಮಾರು 40–50 ಅಡಿ ದೂರವನ್ನು ಕ್ರಮಿಸಬಲ್ಲವು. ಜೊತೆಗೆ ಹೊಟ್ಟೆಯನ್ನು ಒಳಕ್ಕೆಳೆದು ಟೊಳ್ಳಾಗಿಸಿ ಚಿಕ್ಕ ಕೊಡೆಯಂತಾಗಿ ಗಾಳಿ ಸಿಕ್ಕಿಸಿಕೊಂಡು ಗುರುತ್ವಾಕರ್ಷಣೆಗೆ ತಡೆಯೊಡ್ಡಿ ಜಾರಿಳಿಯುತ್ತದೆ. ಜಾರಿಳಿತದ ಹಂತದಲ್ಲಿ ಕೆಲವೊಮ್ಮೆ ದಿಕ್ಕನ್ನು ದೂರವನ್ನು ಅಂಗಾಂಗ ಚಲನೆಯ ಮೂಲಕ ನಿಯಂತ್ರಿಸುತ್ತದೆ (ಇಳಿಯುವಾಗ ದೇಹವನ್ನು ಭೂಮಿಗೆ ಲಂಬವಾಗಿಸಿ ನೇರವಾಗಿ ಕಪ್ಪೆ ಕೆಳಕ್ಕಿಳಿಯಬಲ್ಲದು) ಆದರೆ ಪಕ್ಷಿಗಳಂತೆ ರೆಕ್ಕೆ ಬಡಿದು ಸ್ವಸಾಮರ್ಥ್ಯದಿಂದ ಹಾರಲು ಬಾರದ ಕಾರಣ ಇವನ್ನು ಜಾರು ಕಪ್ಪೆ (Gliding Frog) ಎಂದು ಸಂಬೋಧಿಸುವುದು ಸೂಕ್ತವೆನಿಸಬಹುದು.

ಪ್ರಣಯ ಹಾಗೂ ವಂಶಾಭಿವೃದ್ಧಿ:– ಇತರ ಕಪ್ಪೆಗಳಂತೆ ಹಾರುಗಪ್ಪೆ ನೀರಿಗಿಳಿಯದೇ ದೊಡ್ಡ ಎಲೆಗಳಲ್ಲಿ ನೊರೆ ಗುಳ್ಳೆಗಳ ಗೂಡು (Foam Nest) ನಿರ್ಮಿಸುತ್ತದೆ. ಪ್ರಣಯ ಕಾಲದಲ್ಲಿ ಇತರ ಕಪ್ಪೆಗಳಂತೆ ಹೆಣ್ಣಿನ ಬೆನ್ನನ್ನು/ಗಂಡು ಕಪ್ಪೆ ಗಟ್ಟಿಯಾಗಿ ತಬ್ಬಿ ಹಿಡಿದುಕೊಂಡು ಹೆಣ್ಣಿನೊಂದಿಗೆ ಸವಾರಿ ಮಾಡುತ್ತದೆ. ಹೆಣ್ಣು ಹಿಂದಿನಿಂದ ಹೊಟ್ಟೆಗಳನ್ನು ಹೊರ ಹಾಕಿದಂತೆ ಲೋಳೆಯಾದ ಅಲ್ಬುಮಿನ್ ದ್ರವವನ್ನೂ ಹೊರ ತಳ್ಳುತ್ತದೆ. ಈ ದ್ರವವನ್ನು ಗಂಡು– ಹೆಣ್ಣು ಕಪ್ಪೆಗಳು ತಮ್ಮ ಹಿಂಗಾಲಿನಿಂದ ಸೈಕಲ್ ಸವಾರರು ಪೆಡಲ್ ತುಳಿಯುವಂತೇ ವರ್ತುಲಾಕಾರವಾಗಿ ತಟ್ಟುತ್ತವೆ. ನೋಡಲು ಸ್ಪಂಜಿನಂತೆ ಕಾಣುವ ಬುರುಗು ನೊರೆ ದ್ರವವು ಕ್ರಮೇಣ ಹೊರಭಾಗದಗುಂಟ ಗಟ್ಟಿ ರೂಪ ತಾಳುತ್ತಾ ಕೊನೆಗೆ ಹಣ್ಣಿನ ಜಾಮ್‌ನಂತಾಗುತ್ತದೆ. ಆದರೆ ಒಳ ಭಾಗ ಮಾತ್ರ ತೇವದಿಂದ ದ್ರವ ರೂಪದಲ್ಲೇ ಉಳಿಯುತ್ತದೆ. ಅತಿ ಸೂಕ್ಷ್ಮವಾಗಿರುವ ಗರ್ಭ ತಾಳಿದ ಅಂಡ ಅಥವಾ ಮೊಟ್ಟೆಗಳು ಮಳೆಗಾಲ ಬರುವವರೆಗೂ ಹಾಗೇ ಇರುತ್ತವೆ. ಮಳೆ ಸುರಿದು ಕೆರೆ ಕುಂಟೆಗಳಲ್ಲಿ ನೀರು ಸಂಗ್ರಹವಾದಂತೇ, ಗೊದಮೊಟ್ಟೆಗಳಾಗಿ ಹೊರ ಬಂದು ನೀರಿನಾಶ್ರಯಕ್ಕೆ ಸೇರುತ್ತವೆ. ಒಮ್ಮೆ ಮಳೆ ಬಾರದಿದ್ದರೆ ಗೂಡಿನ ಗಟ್ಟಿ ಹೊರ ಕವಚ ಕರಗುತ್ತಾ ಬಂದು ಮೊಟ್ಟೆ ಅಥವಾ ಗೊದಮೊಟ್ಟೆಗಳು ಹೊರ ಬೀಳುತ್ತವೆ. ಈ ಹಾರುಗಪ್ಪೆ ಕಣ್ಣಿಗೆ ಕಾಣುವುದೇ ಅಪರೂಪ. ಇದರ ಬಗ್ಗೆ ನಡೆದಿರುವ ಅಧ್ಯಯನಗಳೂ ಅಷ್ಟಕಷ್ಟೇ. ಇವುಗಳ ಆಹಾರ ಪಟ್ಟಿ, ವೈರಿಗಳು, ಗಂಡು ಹೆಣ್ಣುಗಳ ಆಯ್ಕೆ, ಪ್ರಣಯ ಕ್ರೀಡೆ ಮತ್ತು ಮರಿಗಳ ಬೆಳವಣಿಗೆ ಮುಂತಾದ ಹಲವಾರು ವಿಷಯಗಳ ಬಗ್ಗೆ ಅಧ್ಯಯನ ನಡೆಯಬೇಕಿದೆ.

ಹಾರು ಕಪ್ಪೆಗಳ ಐತಿಹ್ಯ:–

ಮೊದಲು ಯುರೋಪಿಯನ್ನರು ಈ ಹಾರುಗಪ್ಪೆಗಳು ಮರದಿಂದ ಹಾರಿಳಿಯುವುದನ್ನು ಈಶಾನ್ಯ ಏಷ್ಯಾದ ಒಬ್ಬ ಚೀನೀ ಕೂಲಿಕಾರನಿಂದ ಕೇಳಿ ತಿಳಿದರು. ಮೊದಮೊದಲು, ಕಪ್ಪೆ ಹಾರಲು ಸಾಧ್ಯವಿಲ್ಲವೆಂದು ತಿಳಿದರೂ, ಅಂತೂ ಸಂಶಯದಿಂದಲೇ ಈ ಕಥೆಯನ್ನು ಒಪ್ಪಿಸಿದರು. ಒಂದು ಆಚಾನಕ್ ಘಟನೆಯಿಂದಾಗಿ ಪುನಃ ಈ ಹಾರುಗಪ್ಪೆಯ ಹಾರು ಸಾಮರ್ಥ್ಯದ ಬಗ್ಗೆ ಸಂಶಯ ಆವರಿಸಿತು. ಅದು ಆದದ್ದು ಹೀಗೆ: ಖ್ಯಾತ ಪ್ರಕೃತಿ ಶಾಸ್ತ್ರಜ್ಞ ಆಲ್ಫ್ರೆಡ್ ರಸೆಲ್ ವ್ಯಾಲ್ಲೇಸ್ ಬಹಳ ಜಾಗರೂಕ ಲೆಕ್ಕಾಚಾರಗಳ ಮೂಲಕ ಹಾರುಗಪ್ಪೆಯ ಜಾಲಪಾದಗಳು, ಚಪ್ಪಟೆ ಕೈಕಾಲುಗಳಷ್ಟೇ ಹಾರಲು ಸಹಕಾರಿ ಎಂಬ ತೀರ್ಮಾನಕ್ಕೆ ಬಂದರು. ಇವರ ಲೆಕ್ಕಾಚಾರಗಳಲ್ಲಿ ಕೆಲವಾರು ನ್ಯೂನತೆಗಳು ನುಸುಳಿರುವುದನ್ನು ಕೆಲವು ಸಂಶೋಧಕರು ಪತ್ತೆ ಮಾಡಿದರು. ಇದರಿಂದಾಗಿ ಕಪ್ಪೆಯ ಹಾರು ಸಾಮರ್ಥ್ಯದ ಬಗ್ಗೆ ಪುನಃ ದೊಡ್ಡ ವಿವಾದವೆದ್ದಿತು. ಇವರ ವನ್ಯ ಜೀವಿ ತಜ್ಞರಿಗೆ ಈ ಜೀವಂತ ಹಾರುಗಪ್ಪೆ ಒಮ್ಮೆಯೂ ಕಣ್ಣಿಗೆ ಬಿದ್ದಿರಲಿಲ್ಲ. ಹಾಗಾಗಿ ವ್ಯಾಲ್ಲೇಸ್ ಅವರ ಲೆಕ್ಕಾಚಾರಗಳನ್ನು ಪರೀಕ್ಷಿಸುವುದಾಗಲೀ, ಅಲ್ಲಗೆಳೆಯುವುದಾಗಲೀ, ಚೀನೀ ಕಾರ್ಮಿಕರ ಕಥೆಗಳನ್ನು ನಿರಾಕರಿಸುವುದಾಗಲೀ ಸಾಧ್ಯವಿರದ ಕೆಲಸವಾಗಿತ್ತು. ಆದರೂ 1926ರಲ್ಲಿ ಹೆಚ್.ಬಿ. ಕಾರ್ ಎಂಬುವವರು ಬ್ರೆಜಿಲಿಯನ್ ಮರಗಪ್ಪೆ (Hyla Venulosa) ಸಹಾಯದಿಂದಾಗಿ, ಚಿಕ್ಕ ಜಾರುಪಾದವಿರುವ ಸಣ್ಣ ಮರಗಪ್ಪೆಯೂ ಅತೀ ಎತ್ತರದಿಂದ ಬಿಟ್ಟಾಗ ಸುರಕ್ಷಿತವಾಗಿ ಗಾಯಗೊಳ್ಳದೇ ಜಾರಿಳಿಯಬಲ್ಲವೆಂದು ತೋರಿಸಿಕೊಟ್ಟರು. ಸುಮಾರು 140 ಅಡಿ ಎತ್ತರದ ಕಟ್ಟಡದಿಂದ ಮರಕಪ್ಪೆಯನ್ನು ಬಿಟ್ಟಾಗ ಕಪ್ಪೆ ಜಾರಿಳಿಯುತ್ತಾ ಸಾಗಿ ಕಟ್ಟಡದಿಂದ ಸುಮಾರು 160 ಅಡಿ ದೂರ ಕ್ರಮಿಸಿತು. ಹೀಗೆ ಹಾರು ಕಪ್ಪೆ ಪರಿಸರದಲ್ಲಿ ಕಣ್ಮರೆಯಾಗಿ, ವೈರಿಗಳಿಗೆ ಗೊಡ್ಡು ಬೆದರಿಕೆ ಹಾಕುವ ವರ್ಣ ವಿನ್ಯಾಸದೊಂದಿಗೆ ತನ್ನ ವಂಶಜರಿಗಿಂತ ಭಿನ್ನವಾದ ಹಾರುವ ಸಾಮರ್ಥ್ಯದಂತಹ ತಾಂತ್ರಿಕತೆಯನ್ನು ಮೈಗೂಡಿಸಿಕೊಂಡು ಜೈವಿಕ ವಿಕಾಸದ ಹಾದಿಯಲ್ಲಿ ಮುನ್ನಡೆದಿರುವುದು ಪ್ರಾಣಿ ಪ್ರಪಂಚದ ಅದ್ಭುತವೇ ಸರಿ.

ಹಗಲಿನಲ್ಲಿ ತನ್ನ ಮೈಬಣ್ಣದ ಎಲೆಗಳಲ್ಲಿ ಅವಿತುಕೊಳ್ಳುವ ಹಾರುಕಪ್ಪೆಯ ರಕ್ಷಣಾತ್ಮಕ ವರ್ಣ ವಿನ್ಯಾಸ.



ಹಸಿರೆಲೆಯೋ




ಎಲೆಯ ಮೇಲೆ ನೆಲ್ಲಿ ಕಾಯಿಯಂತೆ ಕಾಣುವ ಗಂಟುಗಳು

ನಮ್ಮ ಅಡಿಕೆ ತೋಟದ ಅಂಚಿನಲ್ಲಿ ಗಂಧಗರಿಗೆ (Toonaciliata) ಎಂಬ ಕಾಡು ವೃಕ್ಷವೊಂದಿದೆ. ಪೀಠೋಪಕರಣ ತಯಾರಿಕೆಗಾಗಿ ಬಳಸುವ ಗಟ್ಟಿ ಜಾತಿಯ ಮರ ಇದು. ಕಳೆದ ವರ್ಷ ಜುಲೈ ತಿಂಗಳ ಪ್ರಾರಂಭದಲ್ಲಿ ಈ ಮರದ ಎಲೆಗಳ ಮೇಲೆಲ್ಲಾ ನೆಲ್ಲಿಕಾಯಿ ಗಾತ್ರದ ಗುಳ್ಳೆಗಳನ್ನು ಕಂಡೆ. ರೋಗದಿಂದಲೋ ಕೀಟಬಾಧೆಯಿಂದಲೋ ಕೆಲವು ಮರದ ಎಲೆಗಳ ಮೇಲೆ ಕಜ್ಜಿಯ ತರಹದ ಪುಟ್ಟ ಪುಟ್ಟ ಗಂಟುಗಳು ಬೆಳೆಯುವದು ಗೊತ್ತಿತ್ತು. ಆದರೆ ಎಲೆಗಳ ಮೇಲೆ ದೊಡ್ಡ ದೊಡ್ಡ ಗುಳ್ಳೆಗಳು? ಕುತೂಹಲ ತಡೆಯಲಾರದೆ ಟೊಂಗೆ ಇನ್ನೊಂದು ಟೊಂಗೆ ಮುರಿದು ಮನೆಗೆ ತಂದೆ. ಕಳೆದ ವರ್ಷ ನಮ್ಮ ಅಡಿಕೆ ತೋಟ ವಿಸ್ತರಿಸುವ ಯೋಜನೆ ಹಾಕಿ ಈ ಗಂಧಗರಿಗೆ ಮರ ಕಡಿಯಬೇಕೆಂದು ಅಣ್ಣಂದಿರು ನಿಶ್ಚಯಿಸಿದ್ದರು. 'ಸ್ವಲ್ಪ ನಿಧಾನಿಸಿ, ಈ ವೈಚಿತ್ರ್ಯದ ತಲೆ ಬುಡ ನೋಡೇ ಬಿಡೋಣ!' ಎಂದೆ.

ಆಗಸ್ಟ್ ತಿಂಗಳು ಬರುವ ಹೊತ್ತಿಗೆ ಮರದಲ್ಲಿ ಗಂಟು ಬೆಳೆದಿದ್ದ ಎಲೆಗಳೆಲ್ಲ ಕಪ್ಪಗಾಗಿ ಕೊಳೆತಿದ್ದವು. ಮತ್ತೆ ಹೊಸ ಎಲೆಗಳು ಚಿಗುರುವವರೆಗೆ ನಾನು ಕಾಯಬೇಕಿತ್ತು.

1994ರ ಏಪ್ರಿಲ್ ಕೊನೆಯಲ್ಲಿ ಈ ಮರದ ಟೊಂಗೆಗಳ ತುದಿಗಳಲ್ಲಿ ಚಿಗುರುಗಳು ಹೊರಬಿದ್ದವು. ಒಂದೇ ವಾರದಲ್ಲಿ ಈ ಚಿಗುರುಗಳು ಬಹುಬೇಗ ಬೆಳೆಯುತ್ತ ನಾಗಿದಂತೆ, ಹದಿನಾರರ ಚೆಲುವೆಯ ಕೆನ್ನೆ ಮೇಲಿನ ಕೆಂಪನೆಯ ಮೊಡವೆಯ ಹಾಗೆ ತಿಳಿಗೆಂಪು ಬಣ್ಣದ ಚಿಗುರಿನ ಮೊಗ್ಗಿನ ಮೇಲೆ ಕೆಂಪು ಚುಕ್ಕೆಗಳು ಗಮನಕ್ಕೆ ಬಂದವು. ಇದಾದ ನಂತರ ಮೂರು ನಾಲ್ಕು ದಿನಗಳು ಮಾತ್ರ ಕಳೆದಿದ್ದವು. ಹಳದಿ ಚಿಗುರೆಲೆ ಕ್ರಮೇಣ ಹಸಿರು ಬಣ್ಣ ಪಡೆಯುತ್ತ ಎಲೆಯಾಗಿ ಬೆಳೆಯತೊಡಗಿತ್ತು. ಆದರೆ ಈ ಚೆಲುವನ್ನು ಅಂದಗೆಡಿಸುವ ಹಾಗೆ ಗುಳ್ಳೆಗಳಿದ್ದವು. ಎಲೆಗಳಿಗಿಂತ ದಪ್ಪವಾಗಿ ಒರಟು ಕವಚ ಹೊದೆದ ಗುಳ್ಳೆಗಳು. ಊದುತ್ತಿರುವ ಬಲೂನಿನ ಹಾಗೆ ಎಲೆಗಳ ಮೇಲೆ ಬೆಳೆಯತೊಡಗಿದವು. ಈ ಮರದ ಮೊಗ್ಗು ಚಿಗುರಾಗಿ, ಎಲೆಯಾಗಿ, ಬೆಳೆಯುವುದಕ್ಕೆ ಹದಿನಾರರಿಂದ ಹದಿನೆಂಟು ದಿನ ಸಾಕು. ಎಲೆ ಬೆಳೆದು ಗಡಸುತನ ಬಂದಾಗ ಗುಳ್ಳೆಗಳು ಬಿರಿಯತೊಡಗಿದವು.



ಚಿಗುರಿನಲ್ಲಿ ಚಿಮ್ಮಿರಿ ವೃಷ್ಟಿಗಳು

ಹೂವಿನ ಹಾಗೇ ಗಂಟುಗಳು ಅರಳಿದವು. ಕಳೆದ ವರ್ಷ ನೋಡಿದ್ದ ಕೀಟದ ಪತ್ತೆಗಾಗಿ ಬೆಳೆದ ಗಂಟನ್ನು ಒಡೆದು ನೋಡಿದೆ. ಪ್ರತಿ ಗಂಟಿನೊಳಗೆ ನೊಣದ ಗಾತ್ರದ 3-4 ಕೀಟಗಳು. ಗಂಟು ಒಡೆದೊಡನೆ ಭಂಗನೆ ಜಿಗಿದು ಅವು ಹಾರಿಹೋದವು. ಗಂಟಿನ ಕವಚದ ಹೊರಮೈ ಮೇಲೆ ಸೂಕ್ಷ್ಮವಾಗಿ ಕಣ್ಣಾಡಿಸಿದೆ. ಹೊರಕವಚ ಕೊರೆದು ಈ ಕೀಟಗಳು ಒಳಸೇರಿಲ್ಲ ಎಂಬುದು ವಿಚಿತವಾಗತೊಡಗಿತು.

ಮರದ ಟೊಂಗೆಗಳು ನಿರಂತರ ಚಿಗುರುತ್ತಲೇ ಇದ್ದವು. ಇಂಥ ಒಂದು ತಾಜಾ ಚಿಗುರನ್ನು ಮತ್ತೆ ಸೂಕ್ಷ್ಮವಾಗಿ ಗಮನಿಸಿದೆ. ಮೊಗ್ಗಿನಂತೆ ಸುರುಳಿ ಸುತ್ತಿದ್ದ ಚಿಗುರು ಎಲೆಯ ಮೇಲೆ ಬರಿಗಣ್ಣಿಗೆ ತಟ್ಟನೆ ಕಾಣದಂತಹ ಚಿಕ್ಕ ಚಿಕ್ಕ ಬಿಳಿ ಮೊಟ್ಟೆಗಳನ್ನು ಇಟ್ಟು, ತಾಯಿ ಕೀಟ ನಾಪತ್ತೆಯಾಗಿತ್ತು.



ಕವಚವುಳ್ಳ ಮರಿಹುಳ

ಮೊಟ್ಟೆಯ ಜತೆ ಅದೇನು ರಸವನ್ನು ಸ್ರವಿಸಿ ಹೋಗಿತ್ತೋ ಏನೋ, ಚಿಗುರೆಲೆಯ ಪೊರೆಯೊಳಗೆ ತತ್ರಿಗಳು ಸೇರುತ್ತಿದ್ದವು. ಅಲ್ಲೇ ಅವು ಬೆಳೆದು ಕೋಶಾವಸ್ಥೆಗೆ ಬಂದ ಹಾಗೆಲ್ಲ ಎಲೆಯ ಗಂಟು ದೊಡ್ಡದಾಗುತ್ತಿತ್ತು. ಸಸ್ಯದ ಜೀವದ್ರವವನ್ನು ಹೀರುತ್ತ ಹುಳ ಬೆಳೆಯುತ್ತಿತ್ತು.

ವೃಕ್ಷವನ್ನು ಅವಲಂಬಿಸಿ ಬದುಕು ಸಾಗಿಸುವ ಈ ಕೀಟ ಯಾವುದು? ಅದನ್ನು ತಿಳಿಯಲೆಂದು ಒಂದಿಷ್ಟು ಕೀಟಗಳನ್ನು ಹಿಡಿದು ಶಿರಸಿ ಕಾಲೇಜಿಗೆ ಒಯ್ದೆ. ಕೀಟಶಾಸ್ತ್ರದ ಪ್ರಾಧ್ಯಾಪಕರಾದ ಎಂ. ವಿ. ಹೆಗಡೆ ಹಾಗೂ ಎಂ. ಪಿ.

ಶೋಧ, ಚಿತ್ರ, ಬರಹ:
ಶಿವಾನಂದ ಕಳವೆ

ಮುರಿದು ಎಲೆಗಳ ಈ ಗಂಟುಗಳನ್ನು ನಿಧಾನಕ್ಕೆ ಬೆರಳಿನಿಂದ ಒಡೆದೆ. ಶೇಂಗಾ ಒಡೆದಂತೆ ಪಟ್ಟನೆ ಒಡೆಯಿತು. ಈ ವಿಚಿತ್ರ ಕಾಯಿಯೊಳಗೆ ಬೀಜ ಗೀಜ ಇರಬಹುದು ಎಂದು ಹೊಳ್ನನ್ನು ಅರಳಿಸಿ ನೋಡಿದೆ. ಎಲಾ! ನೊಣದ ಗಾತ್ರದ ಎರಡು ಮೂರು ಕೀಟಗಳು ಪಕ್ಕನೆ ಹಾರಿಹೋದವು! ಎಲೆಯ ಗುಳ್ಳೆಯೊಳಗೆ ಈ ಕೀಟಕ್ಕೆಂತಾ ಕೆಲಸ! ರಸಗಿಸ ಜೀರಲೆಂದು ಗಂಟುಗಳನ್ನು ಕೊರೆದಿರಬೇಕು ಎಂದುಕೊಂಡೆ.

ಸುಮಾರು ಮೂವತ್ತು ಅಡಿ ಎತ್ತರದ ಈ ಮರ ಹಾಗೂ ಅದರ ಸುತ್ತಮುತ್ತ ಹುಟ್ಟಿದ್ದ ಅದೇ ಜಾತಿಯ ಚಿಕ್ಕ ಚಿಕ್ಕ ಸಸಿಗಳ ಎಲೆಗಳ ಮೇಲೆಲ್ಲಾ ಗಂಟು ಬೆಳೆದಿದ್ದವು. ಈ ಚಿಕ್ಕ ಚಿಕ್ಕ ಗಂಟುಗಳಲ್ಲೂ ಕೀಟ ಇದೆಯೆ? 'ಕೀಟ ಮೊದಲೋ ಗಂಟು ಮೊದಲೋ?' ಎಂದು ತಲೆ ಕೆರೆದುಕೊಳ್ಳುತ್ತ



ಮೊಗ್ಗಿನ ಗೊಂಚಲೆ? ಕಟುವ ಪ್ರಸೂತಿಗ್ರಹವೆ?



ಕೀಟ ಹೋದಮೇಲೆ ಕವಾಡ ಗಂಟುಗಳು

ಹೆರಿಗೆ ಮನೆ!

ಭಟ್ ಅವರಿಗೆ ತೋರಿಸಿ ಕತೆ ಹೇಳಿದೆ. ಅವರು ಕೀಟದ ಗಾತ್ರ, ಹಾರುವ ವಿಧಾನ, ರೆಕ್ಕೆಯ ಬಣ್ಣ, ಹೊಟ್ಟೆ, ತಲೆ, ಕಾಲುಗಳ ಭಾಗಗಳನ್ನೆಲ್ಲ ಸೂಕ್ಷ್ಮವಾಗಿ ವೀಕ್ಷಿಸಿದರು. ಪಾರದರ್ಶಕ ರೆಕ್ಕೆಗಳ ಮೇಲೆ ಚಿಕ್ಕಚಿಕ್ಕ ಕಪ್ಪನೆಯ ಚುಕ್ಕೆಗಳನ್ನು ನೋಡಿದರು. ಈ ಕೀಟ 'ಡಿಪ್ಟೇರಾ' (Diptera) ವರ್ಗದ್ದೆಂದೂ, ಎಲೆಗಳ ಮೇಲೆ ಗಂಟು ಮೂಡಿಸುವ ಎಸಿಲಿಡೇ (Gall Forming Asiliadae) ಕುಟುಂಬಕ್ಕೆ ಸೇರಿದ್ದೆಂದೂ ಹೇಳಿದರು.


ಕೀಟ ಗುರುತಿಸುವ ಒಂದು ಹಂತದ ಕಾರ್ಯ ಮುಗಿದಿತ್ತು. ಮಳೆಗಾಲ ಪ್ರಾರಂಭವಾಗಿ ಜೂನ್ ತಿಂಗಳಿನಲ್ಲೂ ಒಂದು ಲಾಭವಿಡಿಬೇಕು. ನಿಸರ್ಗದಲ್ಲಿ ಲಾಭವಿಲ್ಲದೆ ಯಾರೂ ಯಾರಿಗೂ ಸಹಾಯ ಮಾಡುವುದಿಲ್ಲ. ಅಂಥ ಲಾಭ ಏನಿರಬಹುದು?

ಮರ ಉತ್ತರಿಸಲಿಲ್ಲ. ಆದರೆ ತನ್ನ ಎಲೆಯಲ್ಲಿನ ಈ ಹೆರಿಗೆ ಮನೆಯ ಸೋಜಿಗವನ್ನು ನನ್ನೆದುರು ಸಕಾಲಕ್ಕೆ ತೆರೆದಿಟ್ಟಿದ್ದರಿಂದ ಈ ಗಂಧಗರಿಗೆಗೆ ಒಂದು ಲಾಭವಂತೂ ಆಯಿತು. ಆಡಿಕೆ ತೋಟವನ್ನು ವಿಸ್ತರಿಸಲು ಹೊರಟಿದ್ದ ನನ್ನ ಅಣ್ಣಂದಿರು ಈ ಮರದ ವೈಶಿಷ್ಟ್ಯವನ್ನು ಮನಗಂಡು ಅದನ್ನು ಕಡಿದುರುಳಿಸುವ ಯೋಚನೆಯನ್ನೇ ಕೈಬಿಟ್ಟರು.


ಈ ಮರವಲ್ಲಿ ಎಲೆ ಚಿಗುರುತ್ತಲೇ ಇದ್ದವು. ಗಂಟುಗಳೂ ಎಂದಿನಂತೆ ಬೆಳೆಯುತ್ತಿದ್ದವು. ಈ ಮಧ್ಯೆ ಇನ್ನೊಂದು ವಿಶೇಷ ಕಂಡುಬಂತು. ಬೆಳೆದ ಗಂಟುಗಳನ್ನು ಕೊರೆದು ಅದರೊಳಗಿದ್ದ ಕೋಶಾವಸ್ಥೆಯ ಕೀಟಗಳನ್ನು ತಿನ್ನುವುದಕ್ಕಾಗಿಯೇ ಹತ್ತಾರು ಜಾತಿಯ ಹುಳುಗಳು ಎಲ್ಲಿಂದಲೋ ಯಾತ್ರೆಗೆ ಬರಲು ತೊಡಗಿದವು. ಇನ್ನೊಂದು ಗಮನೀಯ ಸಂಗತಿ ಏನೆಂದರೆ ಬೇಸಿಗೆಯಲ್ಲಿ ಒಂದೊಂದು ಗಂಟಿನಲ್ಲಿ ಹೆಚ್ಚೆಂದರೆ ನಾಲ್ಕು ಕೀಟಗಳಿದ್ದರೆ. ಈ ಮಳೆಗಾಲದಲ್ಲಿ ಒಂದೊಂದರಲ್ಲೂ ಏಳೆಂಟು ಕೀಟಗಳಿರುತ್ತಿದ್ದವು. ಈ ಕೀಟದ ಸಂಖ್ಯಾಸ್ಫೋಟಕ್ಕೆ ಮಿತಿ ಹಾಕಲೆಂದೇ ನಿಸರ್ಗ ಈಗ ಕೀಟಭಕ್ಷಕ ಹುಳುಗಳನ್ನು ಈ ಮರಕ್ಕೆ ಕಳಿಸಿತೆ? ಅಥವಾ ಈ ಹುಳುಗಳಿಗೆ ಆಹಾರ ಸಿಗಲೆಂದೇ ಗಂಟಿನೊಳಗಿನ ಕೀಟಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿತೆ?

ಈ ಪ್ರಶ್ನೆಗಳಿಗೆ ಉತ್ತರ ಎಲ್ಲಿ ಹುಡುಕುವುದು? ಈ ಮರಕ್ಕೆ, ಈ ಕೀಟಕ್ಕೆ, ಈ ಇರುವೆಯಂಥ ಹುಳಗಳಿಗೆ ಎತ್ತಿಂದೆತ್ತಣ ಸಂಬಂಧ?

ತಲೆಯೆತ್ತಿ ಗಂಧಗರಿಗೆ ಮರವನ್ನು ಮತ್ತೊಮ್ಮೆ ನೋಡಿದೆ. ಡಿಪ್ಟೆರಾ ಹುಳುವಿನ ಹಾವಳಿಯಿಂದಾಗಿ ಮರಕ್ಕೆ ಹಾನಿಯಂತೂ ಆಟ್ಟಿಷ್ಟಲ್ಲ. ಅದರ ಬೆಳವಣಿಗೆ ಕುಂಠಿತವಾಗುತ್ತದೆ. ಅಥವಾ ಅದೂ ನಮ್ಮ ಭ್ರಮೆಯೆ? ಇಂಥ ಕೀಟಲೆ ಕೀಟಕ್ಕೆ ಈ ಮರ ಆಶ್ರಯ ಕೊಟ್ಟಿದೆಯೆಂದರೆ ಮರಕ್ಕೂ ಏನೋ



ಹಣ್ಣರಳಿ ಹೂವಾಗಿ ಹಾರಿ ಹೋಯಿತು ಕೀಟ



ಎಲೆಯ ಗಳ್ಳದಿಂದ ಡಿಪ್ಟೆರಾ ಹೊರಬಂದ ದೃಶ್ಯ


ಗಂಧಗರಿಗೆ ಎಂಬ
ಮರದ ಈ ಸೋಜಿಗ
ನೋಡಿ ಇದರ
ಎತಗಳ ಮೇಲೆ
ನಲ್ವತ್ತಾಯಿಯಂಥ
ಗಂಟುಗಳಾಗುತ್ತವೆ.
ಕ್ರಮೇಣ ಇದು
ಬೆಳೆದು, ಬಿರಿದು
ತಾಜಾ ಹೂವಿನಂತೆ
ಅರಳುತ್ತದೆ. ಕಂಬು
ಬಿಂದು ಹೊರಬಂದ
ಉಗ್ರನರಸಿಂಹನಂತೆ
ಅದರೊಳಗಿಂದ ಆರು
ಕಾಲಿನ ಕೀಟಗಳು
ಹೊರಕ್ಕೆ ನೆಗೆದು
ಪಾರಿಹೋಗುತ್ತವೆ.

ಹೊಳೆ ದಂಡೆಯ ಮೇಲೆ ಹೊಳೆಯುವ ಮಣಿ

ಡ್ರೊಸೆರಾ



'ಇರು'ವೆಗಳನ್ನು
'ಇಲ್ಲ'ವಾಗಿಸುವ
ಅದ್ಭುತ ಸಸ್ಯ



ಜಮ್ಮಂತ

ಭದ್ರಾ ನದಿಯ ದಂಡೆಯ ಮೇಲೆ ಮಾಡಲು ಬೇರೇನೂ ಕೆಲಸವಿಲ್ಲದೇ ಕಣ್ಣರಳಿಸಿ ಮಣ್ಣೆನತ್ತ ನೋಡಿದೆ. ಎರಡು ಇರುವೆಗಳು– ಒಂದರ ಹಿಂದೆ ಒಂದು ಸಾಗಿದ್ದವು. ಅವು ಹೊರಟಿದ್ದು ಆಹಾರಕ್ಕೋ– ವಿಹಾರಕ್ಕೋ! ಪ್ರತಿಯೊಂದು ಕಡೆ ಮೂತಿಯಿಟ್ಟು– ಆ ಕಡೆ ಹೇಗೆಂದು ವಿಚಾರಿಸಿ ಈ ಕಡೆ ಹೋಗುತ್ತಿದ್ದವು. ನೋಡ ನೋಡುತ್ತಿದ್ದಂತೆ ಎಷ್ಟು ದೂರ ಬಂದುಬಿಟ್ಟವು!

'ಅತಿ ಕುತೂಹಲ, ಗ್ರಹಚಾರಕ್ಕೆ ಮೂಲ' ಎಂಬ ನಮ್ಮ ಅನುಭವ ಅವುಗಳಿಗೂ ಆಯಿತೇ? ಮುಂದಿನ ಒಂದು ಇರುವೆ ಮೂತಿ ತೂರಿದಲ್ಲಿ ಮುನ್ನುಗ್ಗಿ ಸಡೆದಿದ್ದಾಗ ಆಕಸ್ಮಿಕವಾಗಿ ಕಾಲಿಗೆ ಏನೋ ಅಂಟಿಕೊಂಡಿತು. ಅದ ಬಿಡಿಸಿಕೊಳ್ಳಲು ಕೈಯಿಟ್ಟರೆ ಅದಕ್ಕೂ ತಗುಲಿಕೊಂಡಿತು. ಹಲ್ಲು ಕಚ್ಚಿ ಒಡಿದು ಬಿಡಿಸಿಕೊಳ್ಳುವಾ ಎಂದರೆ ಅಷ್ಟರಲ್ಲಿ ಇಡೀ ದೇಹವೇ ಅಂಟಾಗಿ– ಇರುವೆ ಅದರೊಳಗಿನ ಗಂಟಾಗಿಹೋಯಿತು.

ಪಾಪ! ಅದನ್ನು ಪಾಲಿಸಿಕೊಂಡು ಬಂದ ಇನ್ನೊಂದು ಇರುವೆಗೆ ಸತ್ತನೋ ಬದುಕಿದೆನೋ ಎಂದು ಓಡುವ ಆತುರ. ಆದರೆ ಸಖನೊಬ್ಬ ಗಂಡಾಂತರದಲ್ಲಿದ್ದಾಗ ಬಿಟ್ಟು ಓಡುವುದು ಮನುಷ್ಯರಿಗೆ ಮಾತ್ರ ಸಾಧ್ಯವೇನೊ! ಜೀವದ ಹಂಗು ತೊರೆದು ಗೆಳೆಯನಿಗಾಗಿ ಹೋರಾಡಲು ಅಥವಾ ಅವನೊಡನೆಯೇ ಆಹುತಿಯಾಗಲು ಆ ಇರುವೆಯೂ ನಿರ್ಧರಿಸಿರಬೇಕು. ತಾನೂ ಒಂದು ಹೆಜ್ಜೆ ಮುಂದಿಟ್ಟಿತು. ಅಂಟಿನ ನಂಟು ಬಿಡಿಸಿಕೊಳ್ಳಲು ಆಗಲೇ ಇಲ್ಲ, ಕ್ಷಣ ಮಾತ್ರದಲ್ಲಿ ಎರಡನೇ ಇರುವೆಯೂ 'ಕೆರಗೆ ಹಾರ' ವಾಯಿತು.

ಈ ಹೊಳೆ ದಂಡೆಯ ಮೇಲೆ ಎರಡು ಇರುವೆಗಳು ವಿಸ್ಮಯಕರ ರೀತಿಯಲ್ಲಿ ಕಣ್ಮರೆಯಾದ ಮೇಲೆ ಎಚ್ಚರಗೊಂಡೆ. ಅರರೆ! ಏನದು ರಹಸ್ಯ? ಸುತ್ತ ಕಣ್ಣು ಹಾಯಿಸಿದರೆ ಇರುವೆಗಳನ್ನು ಮಾಯಮಾಡಿದ ಆ ಕೆಂಪು ವಸ್ತು ನೂರಾರು ಇವೆ. ಹಸೆಯಿದ್ದಲ್ಲಿ ಕೆಂಪು ಹಸೆ ಹಾಸಿದ ಹಾಗೆ ಇವುಗಳ ಗುಂಪು. ನೆಲದೇವಿಯ ಹಣೆಗೆ ಇಟ್ಟ ಕುಂಕುಮವೋ ಎನ್ನುವ ಹಾಗೆ ಕೆಂಪು ಬಣ್ಣದ ಬೊಟ್ಟು– ಪೂರ್ಣ ಚಂದ್ರನ ರೀತಿ. ಅವುಗಳ ಮೇಲೆ ಮುತ್ತಿನ ಮಾಲೆ. ಸೂರ್ಯ ರಶ್ಮಿಗೆ ಹೊಳೆವ ಮಂಜಿನ ಮಣಿಗಳು.

ಅದುಡ್ರೊಸೆರಾ(drosera) ಎಂಬ ಕೀಟಾಹಾರಿ ಸಸ್ಯ. Droseraceae ಕುಟುಂಬಕ್ಕೆ ಸೇರಿದ್ದು. ನೋಡಲು ಚಂದ. ಮುಟ್ಟಿದರೆ ಲೋಳೆ ಲೋಳೆ. ಹಿಂಡಿದರೆ ಅಷ್ಟಿಷ್ಟೆ– ಕೆಂಪುದಾಸವಾಳದ ಕಂಪು. ಜಗತ್ತಿನಲ್ಲಿ ಇರುವೆಗಳು ಇರುವಲ್ಲೆಲ್ಲ ಈ ಸಸ್ಯ ಸಾಮಾನ್ಯವಾದರೂ ಮನುಷ್ಯನೆಂಬ ದೊಡ್ಡ ಪ್ರಾಣಿಗೆ ಸಸ್ಯಲೋಕದ ಈ ಪುಟಾಣಿ ಕಾಣದೇ ಹೋಗುವುದು ಅತಿಸಹಜ. ಆದರೆ 'Sundews' ಎಂಬ ಅದರ ಜನಪ್ರಿಯ ಹೆಸರೇ ಹೇಳುವ ಹಾಗೆ– ಕಂಪು ಭಿತ್ತಿಯ ಮೇಲೆ ಮುತ್ತು ಪೇರಿಸಿಟ್ಟಂತಿರುವ ಡ್ರೊಸೆರಾವನ್ನು ಅದರ ಸೌಂದರ್ಯಕ್ಕಾದರೂ ಗಮನಿಸದಿರಲು ಅಸಾಧ್ಯ.

ದೂರದಿಂದ ನೋಡಲು ಡೇರೆ ಹೂವಿನ ಸಣ್ಣ ಮಾದರಿಯಂತಿರುವ ಡ್ರೊಸೆರಾ ನಿಜವಾಗಿ ಹೂವಲ್ಲ. ಇಡೀ ಕೆಂಪು ಬಟ್ಟಲು– ಸಸ್ಯದ ಎಲೆ. ಈ ಎಲೆಯ ಕಡು ಅಂಚಿಗೆ ಸಹಸ್ರಾರು ಕೂದಲುಗಳು. ಇವೂ ಬರೇ ಕೂದಲಲ್ಲ, ಜೊಲ್ಲು ಸುರಿಸುವ ಗ್ರಂಥಿಗಳು ಅವು ವಿಸರ್ಜಿಸುವ ರಸವೇ ಇರುವೆಗಳ ಕಾಲಿಗೆ ಮೆತ್ತುವ ಅಂಟು. ಮತ್ತೆ 'ಇರು'ವೆಗಳನ್ನು ಕ್ಷಣಮಾತ್ರದಲ್ಲಿ 'ಇಲ್ಲ'ವಾಗಿಸುವ ಜೀರ್ಣರಸ!

ಡ್ರೊಸೆರಾ– ಕೀಟಗಳನ್ನು ಗಬಕ್ಕನೆ ಹಿಡಿದು ನುಂಗುವ ಕಪ್ಪೆಯಲ್ಲ. ಇದು. ಅದರ ಕೂದಲು ವಿಸರ್ಜಿಸುವ ರಸ ತೀವ್ರ ಅಂಟಾದ್ದರಿಂದ ಒಮ್ಮೆ ಡ್ರೊಸೆರಾಕ್ಕೆ ತಗಲಿಕೊಂಡರೆ ಇರುವೆ ಹಾಗೂ ಇರುವೆಯಂಥ ಸಣ್ಣ ಕೀಟಗಳು ಬಿಡಿಸಿಕೊಳ್ಳಲಿಕ್ಕೇ ಆಗುವುದಿಲ್ಲ. ಒಂದು ಕೂದಲಿಗೆ ಏನೋ ತಾಗಿದರೂ ಇತರ ಕೂದಲುಗಳು ಎಚ್ಚರಗೊಂಡು ತಾಗಿದ ಕೀಟವನ್ನು ಸುತ್ತುವರೆದು ಹಿಡಿದು– ಚಟ್ನಿ ಮಾಡಿ– ಬೇರು ನುಂಗಿ ಮುಗಿಸುವುದು ಎರಡೇ ನಿಮಿಷದಲ್ಲಿ!

ಸಾಮಾನ್ಯವಾಗಿ ದಕ್ಷಿಣದ ಎಲ್ಲ ನದೀ ತಟಗಳಲ್ಲಿ ಕಾಣಬೇಕಾದ ಡ್ರೊಸೆರಾ ಬದುಕಲು ವಿಪುಲ ನೀರು, ಗಾಳಿ, ಬೆಳಕು ಬೇಕೇ ಬೇಕು. ತಂಪು ನೆಲದಲ್ಲಿ ಆರೇಳು ತಿಂಗಳು ಜೀವಾವಧಿಯ ಡ್ರೊಸೆರಾವನ್ನು ದನಗಳೋ ಜನಗಳೋ ಮೆಟ್ಟಿಬಿಟ್ಟರೆ ಅದರ ಕತೆ ಮುಗಿದೇ ಹೋಯ್ತು. ಡ್ರೊಸೆರಾ ಬೀಜಗಳೆಂದಲೂ ಹುಟ್ಟುತ್ತವೆ. ಬೇರೆ ನೆಟ್ಟರೂ ಅರುಳುತ್ತದೆ. ಆದರೂ– ಮನೆಯಲ್ಲಿದ್ದರೆ ಚಂದದ ಜೊತೆ ಸದಾ ಮಕ್ಕಳ ಕುತೂಹಲಕ್ಕೆ ನಾಂದಿಯಾಗಬಲ್ಲ ಡ್ರೊಸೆರಾವನ್ನು ಹೂಳೆದಂಡೆ ಬಿಟ್ಟು ಮನೆಯಂಗಳದಲ್ಲಿ ಬೆಳೆಯುವುದು ಕಷ್ಟ!

ನಿರಂಜನ ವಾನಳ್ಳಿ

ವನಸಿರಿಯ ಗರ್ಭದಲ್ಲೊಂದು ಬೆಳ್ಳಿಯ ಧಾರೆ

ಅಗಾಧವಾದ ಕೊಡಚಾದ್ರಿಯ ಬೆಟ್ಟದ ಮೂಲೆಯಲ್ಲಿ ಅಡಗಿಕೊಂಡಿರುವ ಹಿಡ್ಲುಮನೆ ಜಲಪಾತವನ್ನು ಪ್ರಯಾಸದಿಂದ ಹುಡುಕಿ ಅದರ ಸೌಂದರ್ಯವನ್ನು ವೀಕ್ಷಿಸಿದವರ ಸ್ವಾನುಭವ ಈ ಲೇಖನದಲ್ಲಿದೆ.


ಚಿತ್ರ-ಲೇಖನ:
ಬಿ. ಸೀತಾರಾಮ ಭಟ್



ಕಲ್ಲಿನ ಕೋಟೆಯ ನಡುವೆ ಹಿಡ್ಲುಮನೆ ಜಲಪಾತದ ಒಂದು ನೋಟ

ಕೊಡಚಾದ್ರಿಯ ಬೆಟ್ಟ ಸಾಲಿಂದರೆ ಸೃಷ್ಟಿಯ ಒಂದು ಸುಂದರ ಸತ್ಕದ ಮಾಲೆ. ಸೊಗಸು ಚಿಮ್ಮುತ್ತ ಅಪರಂಪಾರವಾಗಿ ಹರಡಿರುವ ಹಸಿರು ಕಡಲಿನ ಉನ್ಮತ್ತ ಅಲೆ. ಈ ಕಡಲಿನ ಆಳವೆಂದರೆ ಒಂದು ಅದ್ಭುತಗಳ ಪ್ರಪಂಚ. ನುಗ್ಗಿದಷ್ಟೂ ಹೊಸ ಹೊಸದಾಗಿ ಬಿಚ್ಚಿಕೊಳ್ಳುವ ರಮಣೀಯ ಗಿರಿಕಂದರಗಳು. ಹುಡುಕಿದಷ್ಟೂ ಅಡಗಿ ಅಡಗಿ ಕೊನೆಗೊಮ್ಮೆ ಕಂದನೊಂದಿಗೆ ಕಣ್ಣಾಮುಚ್ಚಾಲೆಯಾಡಿ ಅದು ಸೋತು ಅಳತೊಡಗಿದಾಗ ಗೆಲಗಲ ನಗುತ್ತ ಕಾಣಿಸಿಕೊಂಡು ಅಪ್ಪಿ ಮೈದಡವಿ ಮುದ್ದಿಸಿ ಅರಳಿಕೊಳ್ಳುವ ಅಮೃತಂತೆ ಧುಗ್ಗೋಚರವಾಗುವ ಜಲಪಾತಗಳು. ಸಾವಿರ ಜಾತಿಯ ಸಸ್ಯರಾಶಿಯ ಕಾಶಿ.

ಮಳೆಗಾಲ ಬಂತೆಂದರೆ ಈ ಗಿರಿಶಿಖರ ರುದ್ರಮೋಹಕವಾಗಿ ಬದಲಿಸಿಬಿಡುತ್ತದೆ. ಎಲ್ಲೆಲ್ಲೋ ಹುಟ್ಟಿ ಎಲ್ಲೆಲ್ಲೋ ಕಂದರಗಳ ಆಳಕ್ಕೆ ಧುಮುಕಿ ಭೀಷಣವಾಗಿ ಜಲಪಾತಗಳು ಆಸ್ಫೋಟಿಸತೊಡಗುತ್ತವೆ. ಇವುಗಳಲ್ಲಿ ಬೇಸಿಗೆ ಕಾಲಿಟ್ಟಿತೆಂದರೆ ಸೊರಗಿಬಿಡುವ ಜಲಪಾತಗಳು



ಗೋಂಡಾರಣ್ಯಕ್ಕೆ ಮಾನವನ ಲಗ್ಗೆ

ಅನೇಕ. ಆದರೆ ಇನ್ನು ಹಲವು ವರ್ಷವಿಡೀ ನಿರಂತರವಾಗಿ ಮೊರೆಯುತ್ತಿರುತ್ತವೆ. ದೂರದೂರದವರೆಗೆ ನಿಗೂಢ ಸದ್ದಿನ ಅಲೆಗಳನ್ನು ರವಾನಿಸುತ್ತಿರುತ್ತವೆ– ಅಲೌಕಿಕದಿಂದ ವರ್ತಮಾನ ಲೋಕಕ್ಕೆ ಯಾರೋ ತೂರಿಬಿಟ್ಟ ಸಂದೇಶಗಳ ಹಾಗೆ.

ಅಂತಹ ಸಂದೇಶವೊಂದು ಕೊಡಚಾದ್ರಿಯ ಯಾವುದೋ ಪಾತಾಳದಿಂದ ನಮಗೆ ಬಿತ್ತರವಾದುದು ಕಳೆದ ಏಪ್ರಿಲ್ ತಿಂಗಳ ಬಿರುಬಿಸಿಲಿನ ಒಂದು ಸಂಜೆ. ನಿಟ್ಟೂರಿನ ನಿವಾಸಿಯೊಬ್ಬರು ಹಿಡ್ಲುಮನೆ ಘಟ್ಟದ ಮೂಲಕವೂ ಕೊಡಚಾದ್ರಿಗೊಂದು ದಾರಿಯಿದೆ ಎಂದು 'ಸುಧಾ'ದಲ್ಲಿ ಸೂಚಿಸಿದ್ದರು (ಜನವರಿ 12, 1992). ನಿಟ್ಟೂರಿನಿಂದ ಐದಾರು ಕಿಲೋಮೀಟರ್ ದೂರ ಕೊಡಚಾದ್ರಿಯತ್ತ ನಡೆದರೆ ಹಿರೇಮನೆಯೆಂಬ ಮೂಲೆ (ಒಂದೇ ಮನೆಯ ಕಾಡುಹಳ್ಳಿ) ಇದಿರಾಗುತ್ತದೆ. ಇಲ್ಲಿಂದ ಹಿಡ್ಲುಮನೆ ಘಟ್ಟ ಶುರುವಾಗುತ್ತದೆ. ನಾವು ಆ ದಾರಿಯಾಗಿ ಘಟ್ಟವನ್ನು ಏದುಸಿರುಬಿಡುತ್ತ ಹತ್ತುತ್ತಿದ್ದಂತೆ ಅರ್ಧದಾರಿಯಲ್ಲಿ ಬಲದಿಕ್ಕಿನ ಕಮರಿಯಿಂದ ಆ ಸಂದೇಶ ಬಿಟ್ಟುಬಿಟ್ಟು ಸುಳಿಸುಳಿಯಾಗಿ ಎದ್ದು ಬರುತ್ತಿತ್ತು. ಕಿವಿಗೊಟ್ಟು ಆಲಿಸಿದಂತೆ ಯಾವುದೋ ಪ್ರಚಂಡ ಜಲಪಾತ ಈ ಆಳದಲ್ಲಿ ಅಡಗಿ ಕೂತಿದೆ ಎಂದು ನಮಗೆ ಖಾತ್ರಿಯಾಯಿತು. ಏನಾದರಾಗಲಿ, ಇಷ್ಟು ದೂರ ಬಂದುದಕ್ಕೆ ಇಳಿದು ಶೋಧಿಸಿಯೇ ಬಿಡೋಣ ಎಂಬ ಹುಮ್ಮಸ್ಸು ಬಂದು ಬಲಕ್ಕೆ ನಾಲ್ಕಾರು ಹೆಜ್ಜೆ ನಡೆದು ಇಣುಕಿದರೆ... ಅಬ್ಬಬ್ಬಾ! ಈ ಕಿಬ್ಬಿಯ ಓರೆಯಲ್ಲಿ ಮುಗಿಲೆತ್ತರಕ್ಕೆ ಕತ್ತು ಚಾಚಿ ನಿಂತಿದ್ದ ಮರಗಳೇ ನಮ್ಮಿಂದ ಫರ್ಲಾಂಗುಗಟ್ಟಲೆ ಆಳದಲ್ಲಿದ್ದವು! ಹೆಜ್ಜೆ ಜಾರಿದರೆ ಗತಿ ಮುಗಿದಂತೆಯೇ ಎನ್ನುವುದು ಖಚಿತವಾಗಿ, ಆ ದುಸ್ಸಾಹಸಕ್ಕೆ ಇಳಿಯಲಿಲ್ಲ. ಬಹುಶಃ ಇಲ್ಲಿಂದ ಯಾರೂ ಇಳಿಯಲಾರರು. ಹಿಡ್ಲುಮನೆ, ಹಿರೇಮನೆ ಇತ್ಯಾದಿಗಳನ್ನು ಬಳಸಿ ಹಾವಿನಂತೆ ಬಳುಕಿ ಸಾಗುವ ತೊರೆಯ ಮೂಲವೇ ಇದಾಗಿರಬೇಕು ಅನಿಸಿತು. ಆ ತೊರೆಯಗುಂಟ ಸಾಗಿದರೆ ಈ ಜಲಪಾತವನ್ನು ಮೆಟ್ಟಬಹುದು. ಆಗ ನಿರಾಸೆಯಿಂದ ಮುಂದೆ ನಡೆದರೂ, ಆ ಜಲಪಾತ ನನ್ನೊಳಗೆ ಮೊರೆಯುತ್ತಲೇ ಇತ್ತು.

ಮೊನ್ನೆ ಮಳೆಗಾಲದಲ್ಲಿ ನಿಟ್ಟೂರು–ದರೆಮನೆಯ ಮಿತ್ರ ಕೃಷ್ಣಮೂರ್ತಿಗೆ "ಪತ್ರಿಸಿದೆ. ಅಕ್ಟೋಬರ್‌ನಲ್ಲಿ ಅಲ್ಲಿಂದ ಹಸಿರು ನಿಶಾನೆ ತೋರಿಬಂತು. 'ಜಲಪಾತದ ದಾರಿ ಸಿಕ್ಕಿದೆ. ಫಸ್ಟ್‌ಕ್ಲಾಸಾಗಿದೆ. ಬೇಗನೆ ಬನ್ನಿ' ಅಂತ. ಡಿಸೆಂಬರ್ ರಜೆಯಲ್ಲಿ ಕಾಲ ಕೂಡಿ ಬಂತು ಆ ದಿವ್ಯದ ದರ್ಶನಕ್ಕೆ...

✺


ಎಲುಬು ಕೊರೆಯುವ ಚಳಿಯಲ್ಲಿ ಹುಹುಹುಹು ಎಂದು ನಡುಗುತ್ತ ನಿಟ್ಟೂರಿನಿಂದ ರಾತ್ರಿಯೇ ನಡೆದೆವು. ಕುಂಬಳೆಯ ಪ್ರಭಾಕರರ ಮನೆಯಲ್ಲಿ ಒಬ್ಬೊಬ್ಬರು ಮೂರು ಮೂರು ಕಂಬಳಿ ಹೊದ್ದು, ಮೇಲೊಂದು ವಿಶಾಲವಾದ ಚಾಪೆಯನ್ನೇ ಹಾಸಿಕೊಂಡು ಚೆಂಡು ಗಾತ್ರದಲ್ಲಿ ಮುದುರಿ ಮಲಗಿದರೂ ಹೊಕ್ಕು ಇರಿಯುವ ತೀಕ್ಷ್ಣ ಚಳಿ. ಮುಂಜಾವ ಮಲೆನಾಡ ಆತಿಥ್ಯ ಸ್ವೀಕರಿಸಿ ಹಿರೇಮನೆಗೆ ನಡೆದದ್ದಾಯಿತು. ಅಲ್ಲಿ ಆ ಆನಾಮಧೇಯ ಜಲಪಾತವನ್ನು ದಟ್ಟ ಮಳೆಗಾಲದಲ್ಲೇ ಅನ್ವೇಷಿಸಿದ್ದ ಹಿರೇಮನೆ ಭಾಸ್ಕರ್ ಮತ್ತು ದರೆಮನೆ ಸೋದರರಾದ ಕೃಷ್ಣಮೂರ್ತಿ ಮತ್ತು ಸುಬ್ರಹ್ಮಣ್ಯ ನಮ್ಮನ್ನು ಕೂಡಿಕೊಳ್ಳಬೇಕು. ಒಟ್ಟಾಗಿ ಅರಣ್ಯಗರ್ಭವನ್ನು ಹೊಕ್ಕು ಜಲಧಾರೆಯನ್ನು ವೀಕ್ಷಿಸಿ ಸಂಜೆ ಹಿಂದಿರುಗಬೇಕು.

ಹಿರೇಮನೆಯಿಂದ ಒಂದೂವರೆ ಮೈಲು ದೂರ ಕೊಡಚಾದ್ರಿ ದಾರಿಯಲ್ಲೇ ಹತ್ತಬೇಕು. ಜುಳುಜುಳು ಹರಿಯುವ ಅದೇ ತೊರೆ ಮತ್ತೆ ಮತ್ತೆ ಕಾಲಿಗೆ ತೊಡರಿಕೊಂಡು ನವಿರಾದ ಕುಳಿರು ಮೂಡಿಸುತ್ತಿತ್ತು. ಒಂದು ವಿಸ್ತಾರ ಹಕ್ಕಲು ಪ್ರತ್ಯಕ್ಷವಾದಾಗ ದಾರಿಯಿಂದ ಹೊರಳಿ ಬಲಕ್ಕೆ ತಿರುಗಬೇಕು. ನೇರದಾರಿ ಹಿಡ್ಲುಮನೆ ಘಟ್ಟದ ಮೂಲಕ ಕೊಡಚಾದ್ರಿಯತ್ತ ಸಾಗುತ್ತದೆ. ಅಲ್ಲಿ ನಾಲ್ಕಾರು ಹೆಜ್ಜೆ ಹಾಕಿದಂತೆ ಹಸಲರ ನಾಲ್ಕೈದು ಹಟ್ಟಿಗಳು ಇದಿರಾದವು. ಯಾರಪ್ಪ ಇವರು ಪರಲೋಕದವರು ಎಂಬ ಬೆರಗಿನಿಂದ ಕೊಪ್ಪಕ್ಕೆ ಕೊಪ್ಪವೇ ಹೊರಗೆ ಧಾವಿಸಿ ಬೆರಗುದುಂಬಿ ದಿಟ್ಟಿಸತೊಡಗಿದಾಗ ನಮಗೇ ಮುಜುಗರವೆನಿಸಿತು. ಎತ್ತರದಲ್ಲಿಲ್ಲೋ ಹೊಳೆಯನ್ನು ತಡೆದು ತೋಡು ಮಾಡಿಕೊಂಡು ನೀರು ಹಾಯಿಸಿ ಆ ಕಾಡುಕೊಂಡೆಯಲ್ಲೂ ಗದ್ದೆಪದ್ದೆ ಮಾಡಿಕೊಂಡಿದ್ದಾರೆ. ನೆಮ್ಮದಿಯಿಂದ ಬದುಕುತ್ತಿದ್ದಾರೆ. ಆ ತೋಡಿನಲ್ಲಿಯೇ ನಡೆದು ಮೂಲ ತೊರೆಯನ್ನು ಸೇರಿದೆವು. ಇಲ್ಲಿಂದ ಅತ್ಯಂತ ದಟ್ಟ ಕಾಡು ತೊಡಗುತ್ತದೆ.

ಜಾರಿ ಬಿದ್ದಾಗ

ಇಲ್ಲಿ ಬಂಡೆಯಿಂದ ಬಂಡೆಗೆ ಹಾರುತ್ತ

ಪುಟ 38



ಮೆಲ್ಭಾಗದಲ್ಲಿ ಫಲ್ಗಾಂಗು
ದೂರ ಇಳಿದು ಬರುವ ಜಲಧಾರೆ

ನಡುನಡುವೆ ಜಾರುತ್ತ ಎತ್ತರಕ್ಕೆ ಏರುವುದು
ಒಂದು ಅಪೂರ್ವ ಅನುಭವ. ಕುಕ್ಕುಂದೂರಿನ
ಹುಡುಗ ವಿಶ್ವನಾಥ ಜಾರಿಬಿದ್ದದ್ದೇ ಬಿದ್ದದ್ದು!
ಮನುಷ್ಯ ಹೊಕ್ಕಿರದ ಕಾಡಾದ್ದರಿಂದ
ನಿಬಿಡವಾದ ಸಸ್ಯವರ್ಗ ಎರಡೂ ಕಡೆ
ಸ್ವಚ್ಛಂದವಾಗಿ ಬೆಳೆದಿದೆ. ಮುಂದೆ ಚಾಚಿದ
ಮರಗಳ ಗೆಲ್ಲುಟೊಂಗೆಗಳು ಬಂಡೆಗಳ ಮೇಲೆ
ಚಾಮರ ಬೀಸುತ್ತವೆ. ಅವುಗಳನ್ನು ಕಡಿದು
ದಾರಿ ಮಾಡಿಕೊಳ್ಳಬೇಕು. ಇದು ಏಳು
ಹಂತಗಳಲ್ಲಿ ಇಳಿದು ಬರುವ ಒಂದು
ಅಸಾಮಾನ್ಯ ಜಲಪಾತ ಎಂದರು
ಕೃಷ್ಣಮೂರ್ತಿ. ಪ್ರತಿ ಹಂತವೂ ಇಪ್ಪತ್ತರಿಂದ
ನಲವತ್ತು ಅಡಿಗಳಷ್ಟು ಎತ್ತರವಿದ್ದು,
ಐವತ್ತು-ಅರುವತ್ತು ಅಡಿಗಳ ಅಂತರದಲ್ಲಿವೆ.
ಮೊದಲ ಕಿರುಅಬ್ಬಿಯನ್ನು ಕಂಡಾಗ ಇದೇ
ಜಲಪಾತವೆಂದುಕೊಂಡೆ. ಆದರೆ
ಅನತಿದೂರದಲ್ಲೇ ಇನ್ನೊಂದು...
ಮತ್ತೊಂದು... ಅಲ್ಲಿರುವುದು ಪುಟ್ಟ ಪುಟ್ಟ
ಜಲಧಾರೆಗಳ ಮೆರವಣಿಗೆ. ಕಾಣಿದು
ಕಿರುಚಾಡುವಷ್ಟು ಸಂತೋಷವಾಗುತ್ತದೆ.
ಜಲತರಂಗದ ಸುಮಧುರ ಗಾನಕ್ಕೆ
ಸರಿದೂಗಿಯಾಗಿ ಹೆಜ್ಜೆಯ ತಾಳ ಹಾಕುತ್ತ
ಏರುತ್ತ ಏರುತ್ತ ಹೋದಂತೆ...

ಓ! ಅಲ್ಲಿ ಕಂಡೇಬಿಟ್ಟಿತು ಹಿಡ್ಲುಮನೆ
ಜಲಪಾತ! ಈ ಎಲ್ಲ ಜಲಧಾರೆಗಳ ರಾಣಿಯಂತೆ!

ಸುಮಾರು 250 ಅಡಿ ಎತ್ತರದಿಂದ
ಧುಮ್ಮಿಕ್ಕುವ ಈ ಜಲಪಾತ ಹಲವು
ರೀತಿಯಿಂದ ಅನನ್ಯ. ವರ್ಷಾಕಾಲದಲ್ಲಿ
ನುಸುಳಲು ಸಾಧ್ಯವೇ ಇಲ್ಲ ಎನ್ನುವಷ್ಟು ದಟ್ಟ
ಹಳು ಮತ್ತು ನೀರಿನ ಆವೇಶವಿರಬೇಕು.
ತೊರೆಯಗುಂಟ ಏರಿಬರುವುದು ಬಿಟ್ಟು ಇಲ್ಲಿಗೆ
ಬೇರೆ ಕಾಡುದಾರಿಯೇ ಇಲ್ಲವಾದ್ದರಿಂದ, ಆಗ

ಜಲಧಾರೆಯ ಹಿನ್ನೆಲೆಯಲ್ಲಿ ಅನ್ವೇಷಕರು

ಇದರ ದರ್ಶನ ಕಷ್ಟಸಾಧ್ಯ. ಆಗಿನ ಪ್ರಚಂಡ
ಜಲರಾಶಿಯ ಧುಮುಕನ್ನು ಊಹಿಸಿದರೇ ಎದೆ
ನಡುಗುತ್ತದೆ. ಒಂದೇ ಧಾರೆಯಾಗಿ ಆಳಕ್ಕೆ
ಧುಮುಕದೆ, ಅಲ್ಲಲ್ಲಿ ಕಲ್ಲಪಾರೆಗಳಿಗೆ ಬಡಿದು
ಚಿಮ್ಮುವುದರಿಂದ ನೀರು
ಭರತನಾಟ್ಯವಾಡುತ್ತಿರುವಂತೆ ಕಾಣುತ್ತದೆ.
ಹೊಂಡ ಅಪಾಯಕಾರಿಯೆನ್ನುವಷ್ಟು ಆಳವಿಲ್ಲ.
ಸುತ್ತಲೂ ಕೋಟೆ ಕಟ್ಟಿದಂತೆ ಕಲ್ಲುಬಂಡೆಗಳ
ದಟ್ಟಣೆಯಿದೆ. ಈ ಜಲಪಾತದ ಸುತ್ತಲ ಕಾಡು
ಎಷ್ಟು ನಿಬಿಡವಾಗಿದೆಯೆಂದರೆ,
ನಟ್ಟನಡುಹಗಲೂ ಇಲ್ಲಿಗೆ ಸೂರ್ಯನ ಬಿಸಿಲು
ಬೀಳುವುದಿಲ್ಲ. ಆದ್ದರಿಂದಲೇ ಸುತ್ತಮುತ್ತ
ಜಿಗಣೆಗಳು ಧುಮುಧುಮಿಸುತ್ತಿರುವ ಸೇವಿಗ.

ನಾವು ಪ್ರಯಾಸದಿಂದ ಬಲದಿಕ್ಕಿನ
ಬಂಡೆಕಲ್ಲುಗಳ ಗೋಡೆ ಹತ್ತಿ ಕಾಡು ಹೊಕ್ಕು
ಜಲಪಾತದ ತುದಿ ಸೇರಿದೆವು. ಕಾಡುಮಂದಿ ಕರಡಿಗಳು ಅಲ್ಲಿ
ದಾರಿ ಮಾಡಿಕೊಂಡಿವೆ. ಆ ದಾರಿಯಲ್ಲಿ ಸಾಗಿ
ಎಚ್ಚರದಿಂದ ಆ ಕಡೆ ಇಳಿಯಬೇಕು. ಇನ್ನೂ
ಆಚೆಗೆ ಹೋದರೆ ಮತ್ಯಾವುದೋ ಜಲಪಾತ
ಕಾಣಬಹುದೇನೋ ಎನ್ನುವ ಆಸೆ ನಮಗೆ. ಈ
ಹೊಳೆ ಹುಟ್ಟುವುದಾದರೂ ಎಲ್ಲಿ? ಹಾಗೆಯೇ
ಕಷ್ಟದಿಂದ ಒಂದೆರಡು ಕಿಲೋಮೀಟರ್
ಸಾಗಿದೆವು. ಒಂದು ಕಡೆ, ಫಲ್ಗಾಂಗು ದೂರ
ನಿಧಾನವಾಗಿ ಏರುತ್ತ ಹೋಗುವ, ಬಂಡೆಗಳನ್ನು
ಯಾವನೋ ಶಿಲ್ಪಿ ಕಡೆದು ನಿರ್ಮಿಸಿದಂತೆ
ತೋರುವ ಒಂದು ಕಲ್ಲಿನ ಕಾಲುವೆಯಿದೆ.
ದೈತ್ಯಗಾತ್ರದ ಮರಗಳು ದಾರಿಗಡ್ಡವಾಗಿ
ಉರುಳಿ ಸೇತುವೆ ನಿರ್ಮಿಸಿವೆ. ಇನ್ನು ಮುಂದೆ
ಸಾಗಿದ್ದರೆ ಇನ್ನಷ್ಟು ಜಲಪಾತಗಳು
ತೆರೆದುಕೊಳ್ಳುತ್ತಿದ್ದವೇನೋ...

ಇಲ್ಲಿರುವ ಬಂಡೆಗಳೂ ವಿಚಿತ್ರವಾಗಿವೆ.
ಮೋಹಕ ವಿನ್ಯಾಸಗಳಲ್ಲಿ ಒಟ್ಟಿಕೊಂಡಿವೆ.
ಕೆಳಭಾಗದಲ್ಲಿ ಕರಿಶಿಲೆಗಳಾದರೆ, ಮೇಲೆ
ಹತ್ತಿದಂತೆ ಬಳಪದ ಮಾದರಿಯ ಬಿಳುಪು
ಶಿಲಾಸ್ತರಗಳು. ನಸುಕೆಂಪುವರ್ಣದ
ಹೊಳೆಯುವ ಬೆಲೆಬಾಳುವ ಶಿಲೆಗಳೂ ಅಲ್ಲಲ್ಲಿ
ಹೊಳೆಯುತ್ತವೆ. ಕೊಡಚಾದ್ರಿಯ
ಬತ್ತಳಿಕೆಯಲ್ಲಿ ಎಂತೆಂತಹ ಅನರ್ಘ್ಯ ರತ್ನಗಳಿವೆ!

ಹಿಡ್ಲುಮನೆ ಜಲಪಾತದ ಸೌಂದರ್ಯವನ್ನು
ಸಾಕಷ್ಟು ಅನುಭವಿಸಿ, ಜಲಧಾರೆಗೆ ನೆತ್ತಿಯೊಡ್ಡಿ
ಥರಥರ ನಡುಗುತ್ತ, ಇಳಿಯತೊಡಗಿದೆವು.
ಎರಡನೆಯ ಕಿರು ಅಬ್ಬಿಯಲ್ಲಿ ಗೆಳೆಯರೊಬ್ಬರು
ಜಾರಿ ಹೆಚ್ಚು ಕಡಿಮೆ ಬಿದ್ದೇಬಿಟ್ಟಿದ್ದರು!
ಬಂಡೆಯ ಇಳಿಜಾರಿಗೆ ಬೆನ್ನು ಕೊಟ್ಟು,
ಕೈಗಳನ್ನು ಹಿಂಚಾಚಿ ಮೇಲಿನ ಒಂದು
ಪೊದರಿನ ಬುಡವನ್ನು ಗಟ್ಟಿಯಾಗಿ ಹಿಡಿದು
ಸರ್ಕಸ್ ಮಾಡುತ್ತ ಬೊಬ್ಬಿರಿದಂತೆ
ಸುಬ್ರಹ್ಮಣ್ಯ ಮತ್ತು ಪ್ರಭಾಕರ ಜೀವದ
ಹಂಗು ತೊರೆದು ಆ ಕಡೆಯಿಂದ ಜಾರಿ
ಅವರನ್ನು ಹಿಡಿದೆಳೆದು ಬದುಕಿಸಿದರು.

ಇಂಥ ಅಪಾಯಗಳು ಜಲಪಾತಗಳ
ಸೆಳೆತವನ್ನು ಮತ್ತಷ್ಟು ಆದಮ್ಯವಾಗಿಸುತ್ತವೆ.
ಹಿಡ್ಲುಮನೆ ಜಲಪಾತವಂತೂ ಅಪಾಯವನ್ನು
ಮಡಿಲಲ್ಲೇ ಅಡಗಿಸಿಕೊಂಡು ಜನರ ಕಣ್ಣಿಗೆ
ಬೀಳದೆ ಅಡಗಿಕೊಂಡಿರುವ ವಿಶಿಷ್ಟ ಜಲಪಾತ.
ಅಲ್ಲಿಗೆ ಸುಲಭವಾಗಿ ಯಾರಿಗೂ
ಹೋಗಲಾಗದು; ಹೋಗಬಾರದು ಕೂಡ!

ಕೂಗಲ ಬಳ್ಳಿಯಿಂದ ಕುಕ್ಕೆ, ಬುಟ್ಟಿ, ಬೀಸಣಿಕೆ


ಮಲೆನಾಡಿನ ಗುಡ್ಡ ಬೆಟ್ಟಗಳಲ್ಲಿ ಮನೆಯ ಮೇಲುಹಾಸಿಗೆವರೆಗೆ

ಚಿತ್ರ-ಲೇಖನ:
ಎಮ್ ಜೆ ಹಲಸಿಗೆ

ಅಳಿದುಳಿದ ಹಸಿರು ಗುಡ್ಡದ ಬುಡದಲ್ಲಿ ಹೊಸಹಳ್ಳಿ ರಾಮಚಂದ್ರಭಟ್ ಅವರ ಮನೆ. ಬೆಳಗಿನ 9 ಗಂಟೆ ಸಮಯ. ತಮ್ಮ ಮನೆಯ ಮುಂದಿನ ಸೆಗಣಿ ಹಾಕಿ ಸಾರಿಸಿದ ಅಂಗಳದ ಒಂದು ಮೂಲೆಯಲ್ಲಿ ಕೂತು ಬುಟ್ಟಿ ನೇಯುವ ಕಾಯಕದಲ್ಲಿದ್ದರು. ಸುತ್ತಮುತ್ತ ಇನ್ನೂ ಚಿಕ್ಕ-ದೊಡ್ಡ 6-8 ಬುಟ್ಟಿಗಳಿದ್ದವು. ಹತ್ತಿರಕ್ಕೆ ಹೋಗಿ ಅವರ ಈ ನೇಯ್ಗೆ ಕೆಲಸ ನೋಡಿದಾಗ ಇದು ಬಿದಿರು ಬೆತ್ತಗಳಿಂದ ಮಾಡುತ್ತಿರುವುದಲ್ಲವೆಂಬುದು ಖಚಿತವಾಯ್ತು. ಅವರ ಸುತ್ತಲೂ ಚಿಕ್ಕ ಚಿಕ್ಕ ಎಲೆಗಳು ಬಿದ್ದಿದ್ದವು. ಯಾವ ಎಲೆಗಳಿವು ಎಂದು ಭಟ್ಟರನ್ನು ಕೇಳಿದಾಗ, ಅದು 'ಕೂಗಲ ಬಳ್ಳಿ'ಯ ಎಲೆ ಎಂದು ತಿಳಿಯಿತು.


ಹಿಂದೆಲ್ಲ ಮಲೆನಾಡಿನ ಕಾಡಿನಲ್ಲಿ ಈ ಕೂಗಲಬಳ್ಳಿ ಬೇಕಾದಷ್ಟು ಸಿಗುತ್ತಿತ್ತು. ಈಗ ಈ ಬಳ್ಳಿ ಸಿಗುವುದೂ ಅಪರೂಪ. ಬಳ್ಳಿಯನ್ನು ನೇಯುವವರ ಸಂಖ್ಯೆಯೂ ವಿರಳ ಎಂದು ಅಜ್ಜ ಅಲವತ್ತುಕೊಂಡರು.

ಕೂಗಲಬಳ್ಳಿ ಬಲುಗಟ್ಟಿಯಾಗಿರುತ್ತದೆ. ಆದರೆ ಸ್ಪರ್ಶಕ್ಕೆ ಮೆದು. ಹೇಗೆ ಬೇಕೆಂದರೆ ಹಾಗೆ ಬಾಗುವ ಈ ಬಳ್ಳಿಯನ್ನು ಬಿದಿರು ಬೆತ್ತದ ಹಾಗೆ ಸೀಳಿ ನೇಯುವ ತಾಪತ್ರಯ ಇಲ್ಲ. ಬಳ್ಳಿಗಿರುವ ಎಲೆ, ಚಿಕ್ಕ ಚಿಕ್ಕ ಟಿಸಿಲುಗಳನ್ನು ಕತ್ತರಿಸಿ ಹಾಗೇ ನೇಯತ್ತಹೋದರಾಯ್ತು, ಆದರಿಂದ ತಾಂಬೂಲದ ಬುಟ್ಟಿ, ಬೀಸಣಿಕೆ, ದೇವರಿಗೆ ಹೂವು ಕೊಯ್ಯುವ ಶಿಬ್ಲು (ಹೂವಿನ ಬುಟ್ಟಿ)




ಹೇಳಲಿಕ್ಕಾಗಿರುತ್ತಿದ್ದ ಕೂಗಲಬಳ್ಳಿಯಿಂದ ಬುಟ್ಟಿ, ಕಣಜಗಳಿಂದ ಹಿಡಿದು ಮಣ್ಣಿನ ಅದಷ್ಟೋ ಉಪಯೋಗಗಳಿದ್ದವು. ಈಗ ಆ ಬಳ್ಳಿಯೇ ಅಪರೂಪ.

ಮೊದಲಾದವುಗಳನ್ನು
ಹೆಣೆಯಬಹುದು. ಅವು ಈ
ಬಳ್ಳಿಯ ನೇಯ್ಗೆಯಲ್ಲಿ
ಕಲಾತ್ಮಕವಾಗಿಯೂ ಕಾಣುತ್ತವೆ.
ಕೂಗಲಬಳ್ಳಿ ಪಶ್ಚಿಮಘಟ್ಟದ
ಅಡವಿ ಹಾಗೂ ಸುತ್ತಮುತ್ತಲ
ಗುಡ್ಡ-ಬೆಟ್ಟಗಳಲ್ಲಿ ಬೆಳೆಯುವ ಸಸ್ಯ.
ಇದಕ್ಕೆ ಸ್ಥಳೀಯವಾಗಿ ಕುಂಸಿ ಬಳ್ಳಿ
ಎಂದು ಹೇಳಲಾಗುತ್ತಿದೆ. ವೈಜ್ಞಾನಿಕ
ನಾಮಧೇಯ 'ಗ್ಯಾಮ್ಮೆಮೆ
ಸಿಲ್ವರ್‌ಟ್ರೈ' ಗಿಡ ಅಥವಾ
ಪೊದೆಗಳಿಗೆ ಹಬ್ಬಿ ಬೆಳೆಯುವ
ಕೂಗಲ ಬೋಳು ಗುಡ್ಡಗಳಲ್ಲಿ
ನೆಲಕ್ಕೇ ಹಬ್ಬಿರುತ್ತದೆ. ತಂಪು
ಅಡವಿ ಪ್ರದೇಶದಲ್ಲಿ ಸೊಂಪಾಗಿ
ಬೋಳುಗುಡ್ಡಗಳಲ್ಲಿ ಸೊರಗಿ
ಬೆಳೆಯುವ ಈ ಬಳ್ಳಿಯ ಹೂ
ಕಂದು ಬಣ್ಣದ್ದು- ಕಾಯಿ ಚಿಕ್ಕ
ಜಿಕ್ಕದಾಗಿರುತ್ತದೆ. ಇದರ





ಕೂಗಲ ಬುಟ್ಟಿಯ ಮೇಲೂ ಬಟ್ಟಲು



ಹಾಕಿ ಬರಬಹುದಾದ ಹಗುರ ಬುಟ್ಟಿಗಳು

ಕರಕೌಶಲ

ವಂಶವೃದ್ಧಿಗೆ ಬಳ್ಳಿಯನ್ನು ಗೇಣುದ್ದ ತುಂಡು ಮಾಡಿ ನೆಟ್ಟು ಬೆಳೆಸಬಹುದು. ಬಳ್ಳಿ ಹಿಡಿದು ಜಗ್ಗಾಡಿದರೂ ಹರಿಯಲಾರದು. ನೇಯ್ಗೆಗೆ ಬೆಳೆದ ಬಳ್ಳಿ ಹೆಚ್ಚು ಸೂಕ್ಷ್ಮ. ಬೇಗ ತುಂಡಾಗದ ಈ ಬಳ್ಳಿಯನ್ನು ಗ್ರಾಮೀಣ ಕುಶಲ ಕಲೆಗಾರರು ವಿವಿಧ ಉಪಯೋಗಕ್ಕೆ ಬಳಕೆ ಮಾಡಿಕೊಂಡು ಬಂದಿದ್ದರು.

ಹಿಂದೆಲ್ಲ ರೈತರು ತಮ್ಮ ಹೊಲಗದ್ದೆಗಳ ಬೇಲಿ ಕಟ್ಟಲು ಇದನ್ನು ಉಪಯೋಗ ಮಾಡುತ್ತಿದ್ದರು. ಬಡವರು ಗುಡಿಸಲುಗಳನ್ನು ಗೋಡೆ ಅಥವಾ ಅಡಿಕೆ ದಬ್ಬೆಯ ಬದಲಿಗೆ ಕೂಗಲ ಬಳ್ಳಿಯ ತಟ್ಟಿಯನ್ನು ಮಾಡಿ ನಿಲ್ಲಿಸುವ ಪದ್ಧತಿ ಇತ್ತು. ಬುಟ್ಟಿ, ಅಡಿಕೆ ಒಣಗಿಸುವ ಕಣಜ (ಚಾಪೆ) ಕವಳದ ಹಚ್ಚಿಗೆ, (ತಾಂಬೂಲದ ಬಟ್ಟಲು) ಅಕ್ಕಿ ತುಂಬುವ ಬುಟ್ಟಿಗಳೂ ಇದರಿಂದ ತಯಾರಾಗುತ್ತಿದ್ದವು. ಹೀಗೆ ತಯಾರಿಸಿದ ಬುಟ್ಟಿಯನ್ನು ಹೊಗೆ ಅಟ್ಟಕ್ಕೆ ಇಟ್ಟು ಅದು ಹೆಚ್ಚು ದಿನ ಬಾಳಿಕೆ ಬರುವಂತೆ ಮಾಡಲಾಗುತ್ತಿತ್ತು. ಅಡಿಕೆ ಒಣಗಿಸುವ ಕಣಜ ಹಾಗೂ ಅಡಿಕೆ ತುಂಬುವ ಬುಟ್ಟಿಗೂ ಅಡಿಕೆ ಚೊಗರು ತಾಗುವುದರಿಂದಾಗಿ




ಕೂಗಲ ಕಾಯಿ ಇದರ ಒಣ ಬೀಜದಿಂದ ಹೊಸ ಬಳ್ಳಿ

ಒಂದು ಕೋಟ್ ಬಣ್ಣ ಹೊಡೆದಂತಾಗಿ ಮತ್ತಷ್ಟು ಬಾಳಿಕೆ ಬರುವಂತಾಗುತ್ತಿತ್ತು. ಮಳೆಗಾಲದಲ್ಲಿ ಅಡಿಗೆ ಅರಿಸಿ ತುಂಬಲು, ಯಾಲಕ್ಕಿ ಹಣ್ಣುಗಳನ್ನು ಕೊಯ್ದು ತುಂಬಲು ಈ ಬುಟ್ಟಿ ಉಪಯೋಗಿಸಲಾಗುತ್ತಿದ್ದರೂ ಅವು 4-8 ವರ್ಷ ಹಾಳಾಗದೇ ಉಳಿದುಕೊಳ್ಳುತ್ತಿದ್ದವು ಎಂದು ರಾಮಚಂದ್ರ ಭಟ್ಟರ ಅಂಬೋಣ. ನೀರಿಗೇ ತಾಗದೆ ಇರುವ ಕವಳದ ಹಚ್ಚಿಗೆ, ಅಕ್ಕಿ ಬುಟ್ಟಿ, ಚೊಗರು ತಾಗಿದ ಕಣಜಗಳು ಬಾಳಿಕೆ 10-20 ವರ್ಷಕ್ಕಿಂತಲೂ ಹೆಚ್ಚು ಎನ್ನುತ್ತಾರವರು. ಬಪ್ಪನಕೊಡ್ಲು ಶಿವರಾಮ ಹೆಗಡೆ ಅವರು ನೇಯ್ದ ಕವಳದ ಹಚ್ಚಿಗೆಗೆ ಒಂದು ಶತಮಾನವಾಗಿದೆ ಎಂದು ಅವರ ಮೊಮ್ಮಗ ಹೆಮ್ಮೆಯಿಂದ ತೋರಿಸುತ್ತಾರೆ.

ಇಂದು ಬಿದಿರು-ಬೆತ್ತ, ಸೆಣಬುಗಳ ಬಗ್ಗೆ ಹಲಬಗೆಯ ಸಂಶೋಧನೆ ನಡೆದು ಹೊಸ ಹೊಸ ಸಾಮಗ್ರಿಗಳು ಮಾರುಕಟ್ಟೆಗೆ ಬಂದು ಬಿಕರಿಯಾಗುತ್ತಿವೆ. ಸೆಣಬಿನ ಆಕರ್ಷಕ ಬ್ಯಾಗುಗಳಂತೂ ಬಿಸಿಹೋಳಿಗೆಯಂತೆ ಮಾರುಕಟ್ಟೆಯಲ್ಲಿ ಬಿಕರಿ ಆಗುತ್ತಿವೆ. ಅಷ್ಟೇ ಏಕೆ ಮರ್ಸಿಡಿಸ್‌ಬೆಂಜ್ ಕಂಪನಿಯವರು ತಮ್ಮ ಇತ್ತೀಚಿನ ಕಾರಿನ ಬಾಗಿಲನ್ನು ಸೆಣಬಿನ ನಾರಿನಿಂದ ಮಾಡಿದ್ದಾರಂತೆ. ಕೂಗಲ ಬಳ್ಳಿಗೆ ಈ ರೀತಿಯ ಪ್ರೋತ್ಸಾಹ ಇಲ್ಲವೇ ಇಲ್ಲ.

ಅರಣ್ಯ ಇಲಾಖೆ ಈಗಾಗಲೇ ಬೆತ್ತ ಬಿದಿರುಗಳನ್ನು ತಮ್ಮ ನರ್ಸರಿಗಳಲ್ಲಿ ಬೆಳೆಸಿ ಅಡವಿಗಳಲ್ಲಿ ನೆಟ್ಟು ಯಶಸ್ವಿಯಾದಂತೆ ಕೂಗಲ ಬಳ್ಳಿಯನ್ನು ಅದರ ದಂಟಿನಿಂದ ವಂಶವೃದ್ಧಿ ಮಾಡಲು ಸಾಧ್ಯ. ಇದು ಯಶಸ್ವಿಯಾದರೆ ಕೂಗಲ ಬಳ್ಳಿಯ ಈ ಪುರಾತನ ಕಲೆಯ ಪುನರುಜ್ಜೀವನ ಸಾಧ್ಯ. ಆದರೆ ಇವೆಲ್ಲಕ್ಕಿಂತ ಮುಂಚೆ ಅರಣ್ಯ ಇಲಾಖೆ ಇದನ್ನು ಬೆಳೆಸಿ ನರ್ಸರಿಯ ಬೇಲಿ ಕಟ್ಟುವುದಕ್ಕಾದರೂ ಬಳಸಬಹುದಲ್ಲವೇ? ತಂತಿ, ಪ್ಲಾಸ್ಟಿಕ್, ಪಾಲಿಥೀನ್‌ಗಳ ಬಳಕೆ ಅಷ್ಟರ ಮಟ್ಟಿಗಾದರೂ ಕಡಿಮೆ ಆಗುವುದಿಲ್ಲವೆ?




ಬಲ್ಲ ಬೆತ್ತಗಳನ್ನು ಉಳಿಸಬಹುದಾದ ಹಿಡಿಗೆಗಳು



ಸೀಮೆಹುಲ್ಲಲ್ಲಿ ನಿರತ ರಾಮಚಂದ್ರ ಭಟ್ಟರು

ಕೋಲಾರದ ಗಣಿ :

ಮುಗಿಯದ ಚಿನ್ನ- ಮುಗಿಯದ ಮೈತಿನ್ನ



ಚಿನ್ನದ ಸುರಂಗದೆದುರು ಅನ್ನಕ್ಕಾಗಿ ಕ್ಯೂ : ಚಾಂಪಿಯನ್ ಗಣಿಯ ಬಳಿ ರೇಶನ್‌ಗಾಗಿ ನೂಕುನುಗ್ಗಲು

ಕೋಲಾರದ ಭೂದೇವಿಗೆ ಮೈತುಂಬ ರಂಧ್ರ, ಗುದ್ದಲೆತ್ತರ ದದ್ದುಗಳು. ಸದಾ ಸೋರುವ ಕೀವು. ಜಿಗಣೆಯಂತೆ ಅಂಟಿಕೊಂಡ ಜನ ಜನ ಜನ. ನಲುಗಿದ ನೆಲ.

★

ಇದು ಉತ್ಪ್ರೇಕ್ಷೆ ಎಂತೆನಿಸಿದರೆ ಎಂದಾದರೊಮ್ಮೆ ಅಲ್ಲಿ ಹೋಗಿ ನೋಡಿ. ಕೋಲಾರ ಎಂದರೆ ಕೋಲಾರ ಪೇಟೆ ಅಲ್ಲ, ಅಲ್ಲಿಂದಾಚೆ 30 ಕಿ.ಮೀ. ದೂರ ಕೆಜಿಎಫ್ ಎಂಬ ಗಣಿ ನಗರವಿದೆ. 'ಕೋಲಾರ ಗೋಲ್ಡ್ ಫೀಲ್ಡ್' ಎಂಬ ಪ್ರತ್ಯೇಕ ಬೀಡು.

ಸುಮಾರು ಒಂದು ಲಕ್ಷ ಜನ ವಸತಿ ಇರುವ ಈ ಕೆಜಿಎಫ್ ನಗರ ಹುಟ್ಟಿ 110 ವರ್ಷಗಳು ಗತಿಸಿವೆ. ನಗರ ಮುದಿಯಾಗಿದೆ. ಇದರ ನೆಲದಡಿಯಲ್ಲಿ ಚಿನ್ನಕ್ಕಾಗಿ ಸುರಂಗ ಕೊರೆದು ಕೊರೆದು ಇಡೀ ಭೂ ಸ್ತರವಲ್ಲೆಲ್ಲ ರಂಧ್ರ ರಂಧ್ರ ಜಾಲಂದ್ರಗಳಾಗಿವೆ. ಗದ್ದಲು ತುಂಬಿದ ದಿಮ್ಮಿಯ ಹಾಗೆ. ಪಾತಾಳದಲ್ಲೇ ಪೂರ್ವಕ್ಕೆ ಪಶ್ಚಿಮಕ್ಕೆ ವಾಯುವ್ಯಕ್ಕೆ ಆಗ್ನೇಯಕ್ಕೆ ಅಡ್ಡಕ್ಕೆ ಉದ್ದಕ್ಕೆ ಆಳಕ್ಕೆ ಕೊರೆದ ಎಲ್ಲ ರಂಧ್ರಗಳ ಒಟ್ಟೂ ಉದ್ದ ಅಳೆದರೆ 991 ಕಿಲೋಮೀಟರ್ ಆಗುತ್ತದಂತೆ.


ಕೋಲಾರದಿಂದ ಮುಂಬೈಗೆ ಹೋದಷ್ಟು ದೂರವನ್ನು ಈ ಕೆಜಿಎಫ್‌ನ ನೆಲದೊಳಕ್ಕೇ ಅಳೆಯಲಾಗಿದೆಯಂತೆ.

ನಗರದಲ್ಲಿ ಓಡಾಡುವಾಗ ನಮಗೆ ಇದರ ಕಲ್ಪನೆಯೂ ಬರುವುದಿಲ್ಲ. ಅಲ್ಲಲ್ಲಲ್ಲಿ ನೆಲದಿಂದ ಮೇಲೆದ್ದ ಪಿರಮಿಡ್ ಥರಾ ಲೋಹದ ಪಟ್ಟಿಗಳ ಗೋಪುರ ಕಾಣುತ್ತದೆ. ಅದರ ಮೇಲೆ ನಿಶ್ಚಲ ರಾಟೆ ಕಾಣುತ್ತದೆ. ರಾಟೆ ತಿರುಗುತ್ತಿದ್ದರೆ ಅಲ್ಲಿ ಯಾರೋ ಪಾತಾಳಕ್ಕೆ ಇಳಿಯುತ್ತಿದ್ದಾರೆ ಅಥವಾ ಪಾತಾಳದಿಂದ ಮೇಲೆದ್ದು ಬರುತ್ತಿದ್ದಾರೆ ಎಂದು ಊಹಿಸಬಹುದು. ಬಾವಿಯಂಥ ಈ ಲಂಬರಂಧ್ರಗಳಿಗೆ 'ಶಾಫ್ಟ್' ಎನ್ನುತ್ತಾರೆ. ಒಂದೊಂದು ಶಾಫ್ಟ್‌ಗೂ ಒಂದೊಂದು ಹೆಸರಿದೆ. ಗಿಫರ್ಡ್ ಶಾಫ್ಟ್, ಹೆನ್ರಿ ಶಾಫ್ಟ್, ಕ್ಯಾಫರ್ಡ್ ಶಾಫ್ಟ್, ಕೊರೊಮಾಂಡೆಲ್ ಶಾಫ್ಟ್ ಎಂದೆಲ್ಲ. ದೊಡ್ಡದಾಗಿ ಕಮಾನುಗಳ ಮೇಲೆ ಬೋರ್ಡ್ ಬರೆದು ಈ ಲೋಹವ್ಯೂಹಗಳ ಎದುರು ನಿಲ್ಲಿಸಿದ್ದಾರೆ. ಬಸ್‌ನಲ್ಲಿ ಕೂತು ನಗರ ಪ್ರವೇಶ ಮಾಡುವಾಗ ಅಲ್ಲಲ್ಲಿ ದಾರಿ ಬದಿಯಲ್ಲಿ ತುಕ್ಕು ಹಿಡಿದು ನಿಂತ ಇಂಥ ಹತ್ತಾರು ಫಲಕಗಳನ್ನು ನೋಡುತ್ತ, ಅವುಗಳ ಹಿಂದೆ ಆಕಾಶಕ್ಕೆ ಮುಖ ಮಾಡಿ ಮುಖ ಒಣಗಿಸಿ ನಿಂತ ರಾಟೆ ಕಂಬಗಳನ್ನು ನೋಡುತ್ತ ಬರಬಹುದು. ಇದು ಕೆಜಿಎಫ್‌ನ ಲಾಂಛನ.

ಕೆಜಿಎಫ್‌ಗೆ ಲಾಂಛನಾಸ್ಪದವಾದ ಇನ್ನೂ ಒಂದು ಬಗೆಯ ಪೆಗ್ಗುರುತು ಕಾಣಿಸಿಗುತ್ತದೆ. ನೆಲದಿಂದ ಮೇಲೆ ಮೂವತ್ತಡಿ- ನಾಲ್ವತ್ತಡಿ ಎತ್ತರೆತ್ತರ ದಿಬ್ಬಗಳು. ತಲೆ ಕತ್ತರಿಸಿದ ಪಿರಮಿಡ್‌ಗಳ ಹಾಗೆ. ಉದ್ದಗಲವೂ ಪಿರಮಿಡ್‌ಗಳ ಹಾಗೇ ಫರ್ಲಾಂಗ್‌ಗಟ್ಟಲೆ. ಚಿನ್ನಕ್ಕೆಂದು ಸುರಂಗ ಕೊರೆದಾಗ ಹೊರಬಿದ್ದ ಕಲ್ಲುಗಳ ನುಣ್ಣನೆ ಪುಡಿ ರಾಶಿ ಇದು. ಬೇಸಿಗೆಯ ಬಿಸಿಗಾಳಿಗೆ

'ಕನ್ನಡ ನಾಡು ಚಿನ್ನದ ಬೀಡು' ಎನ್ನುವುದೆಲ್ಲ ಬರೀ ಗಿಲೀಟಿನ ಮಾತು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಕನ್ನಡವೂ ಉಳಿದಿಲ್ಲ, ಚಿನ್ನವೂ ಉಳಿದಿಲ್ಲ. ಬ್ರಿಟಿಷರು ಚಿನ್ನವನ್ನೆಲ್ಲ ಸಾಗಿಸಿದ ಮೇಲೆ ನಮ್ಮ ಪಾಲಿಗೆ ಉಳಿದಿರುವುದು ಖಾಲಿ ಡಬರಿ, ನಂಜಿನ ರಾಡಿ, ಕೆಸರಿನ ಕೋಡಿ. ಇದನ್ನು ತೊಳೆಯಲು ಶತಮಾನಗಳೇ ಬೇಕು.

ಚಿತ್ರ-ಲೇಖನ :
ನಾಗೇಶ ಹೆಗಡೆ



ಚಿನ್ನದ ಅದುರನ್ನು ಎತ್ತಿ ಎತ್ತಿ ಸುಸ್ತಾಗಿ ಈಗ ಹಾಳು ಸುರಿಯುತ್ತಿರುವ ಪಟ್ಟಿ-ಪಾವಟಿಗೆ: ಕಳಚಿ ಮಾರಲು ಮೀನ ಮೇಷ. ಹಗಲು ರಾತ್ರಿ ಕಳ್ಳರ ಕಾಟ

ದೂಳಿರಚುತ್ತ ಮಳೆಗಾಲದ ಜಡಿ ಇಡಿಚಲಿಗೆ ಕೋಡಿ ಹರಿಯುತ್ತ ಚಿತ್ರವಿಚಿತ್ರ ಕೊರಕಲುಗಳನ್ನು ಮೈತುಂಬ ತೀರಿಕೊಂಡು ಕೆಲವೆಡೆ ವಿಕಾರವಾಗಿ, ಕೆಲವೆಡೆ ವಿಚಿತ್ರವಾಗಿ ನಿಂತಿವೆ. ಇವಕ್ಕೆ 'ಡಂಪ್' ಎನ್ನುತ್ತಾರೆ. ಕೆಲವರು 'ಸೈನೈಡ್ ಡಂಪ್' ಎನ್ನುತ್ತಾರೆ. ಏಕೆಂದರೆ ಚಿನ್ನವನ್ನು ಕಲ್ಲುಗಳಿಂದ ಬೇರ್ಪಡಿಸುವಾಗ ಕಲ್ಲು ಕುಟ್ಟಿ ನುಣ್ಣಗೆ ಪುಡಿಗೆ ಸೈನೈಡ್ ಸೇರಿಸಿ ತೊಳೆಯುತ್ತಾರೆ. ಇಂಥ ಒಂಬತ್ತು ಡಂಪ್‌ಗಳನ್ನು ಇಲ್ಲಿ ಲೆಕ್ಕ ಮಾಡಬಹುದು.

ಕೆಜಿಎಫ್‌ಗೆ ಇನ್ನೂ ಒಂದು ಪ್ರಮುಖ ಮುಖವಿಲಕ್ಷಣವಿದೆ. ಇಲ್ಲಿ ಬೀದಿಗುಂಟ ಮೊಳಕ್ಕೊಂದು ಮಾರಿಗೊಂದು ಅಂಬೇಡ್ಕರ್ ಸ್ಮಾರಕಗಳಿವೆ. ಅಂಬೇಡ್ಕರ್ ಪ್ರತಿಮೆ. ಅಂಬೇಡ್ಕರ್ ಉದ್ಯಾನ. ಅಂಬೇಡ್ಕರ್ ವೃತ್ತ. ಅಂಬೇಡ್ಕರ್ ಚೌಕ. ಅಂಬೇಡ್ಕರ್ ದಿಬ್ಬ. ಶಾಲೆ. ರಸ್ತೆ ಸಂಘ ಇದೆ. ಹೇರಳ ಬಡತನ ಇದೆ.

ನಾಲ್ಕು ತಲೆಮಾರುಗಳಿಂದ ಚಿನ್ನದ ಕಲ್ಲುಗಳನ್ನು ಅಗೆದು ಅಗೆದು ಬೆವರು ರಕ್ತ ಬಸಿದು ಬದುಕು ಸಾಗಿಸುತ್ತ ಬಂದ ಜನಕ್ಕೆ ಧಣಿ ಕೊಟ್ಟಿದ್ದು ಏನೂ ಇಲ್ಲ, ದನಿ ಕೊಟ್ಟ ಅಂಬೇಡ್ಕರ್ ಹೆಚ್ಚಿ ಹೆಚ್ಚಿಗೂ ಇದ್ದಾರೆ.

1880ರಲ್ಲಿ 'ಜಾನ್ ಟೇಯ್ಲರ್ ಅಂಡ್ ಸನ್ಸ್' ಎಂಬ ಲಂಡನ್ ಕಂಪನಿ ಇಲ್ಲಿಂದ ಚಿನ್ನ ಎತ್ತಲು ಆರಂಭಿಸಿತು. ಈ ನೂರಹತ್ತು ವರ್ಷಗಳಲ್ಲಿ 790 ಟನ್ ಚಿನ್ನ ತೆಗೆಯಲಾಗಿದೆ. ಇದರಲ್ಲಿ 700 ಟನ್ ಬ್ರಿಟಿಷರ ಪಾಲಾಗಿ ಹಡಗಿನಲ್ಲಿ ಹೋಗಿರಬೇಕು. 1956ರಲ್ಲಿ ಈ ಕಂಪನಿಯನ್ನು ರಾಷ್ಟ್ರೀಕರಣ ಮಾಡಿದರು. ಅಂದಿನಿಂದ ಇಂದಿನವರೆಗೂ ಚಿನ್ನದ ಗಣಿ ಉದ್ಯಮ ನಷ್ಟದಲ್ಲೇ ನಡೆಯುತ್ತಿದೆ. 1979–81 ರಲ್ಲಿ ಚಿನ್ನದ ಬೆಲೆ ಹಠಾತ್ ಏರಿದ್ದಾಗ, ಎರಡು ವರ್ಷ ಮಾತ್ರ ಬಿಜಿಎಮ್‌ಎಲ್ ಕಂಪನಿ (ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್) ತನ್ನ ಖರ್ಚಿಗಿಂತ ಹೆಚ್ಚಿನ ಆದಾಯ ತೋರಿಸಿತ್ತು. ಅದು ಬಿಟ್ಟರೆ ಪ್ರತಿವರ್ಷವೂ 10 ಕೋಟಿ, 12 ಕೋಟಿ, 18 ಕೋಟಿ ರೂ.ಗಳ ನಷ್ಟ, ನಷ್ಟ.

ಹಾಗೆಂದು ಗಣಿ ಕೆಲಸ ಕೈಬಿಡುವಂತಿಲ್ಲ. ಕಂಪನಿಯನ್ನು ಮುಚ್ಚುವಂತಿಲ್ಲ, ಮುಚ್ಚಿದರೆ, ಇದನ್ನೇ ನಂಬಿದ ಹನ್ನೆರಡು ಸಾವಿರ ಕಾರ್ಮಿಕರನ್ನೂ, ಅವರನ್ನೇ ನಂಬಿದ ಎಂಬತ್ತು ಸಾವಿರ ಪ್ರಜೆಗಳನ್ನೂ ಇಡೀ ಕೆಜಿಎಫ್ ನಗರವನ್ನೂ ಗಣಿಯ ಜತೆಗೇ ಮುಚ್ಚಿ ಬಿಡಲು ಸಾಧ್ಯವೆ? ಅವರೆಲ್ಲ ಎಲ್ಲಿ ಹೋಗಬೇಕು? ಹಣ ಗಳಿಕೆಗೆ ಬೇರೆ ಯಾವ (ಸುರಂಗ) ಮಾರ್ಗ ಹುಡುಕಬೇಕು?

ಬಿಜಿಎಮ್‌ಎಲ್ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಕೋಲಾರದ ಚಿನ್ನದ ಗಣಿ ಅದರ ಪಾಲಿಗೆ ಗಾಣವಾಗಿದೆ. ಮೂಗುತಿಯ ಬದಲು ಮೂಗುದಾಣವಾಗಿದೆ.

ಈಗೇನು ಮಾಡಬೇಕು? ಇನ್ನೂ ಆಳಕ್ಕೆ ಇಳಿದರೆ ಮತ್ತಷ್ಟು ಚಿನ್ನ ಸಿಕ್ಕೀತು ನಿಜ. ಆದರೆ ಈಗಾಗಲೇ ಇದು ಜಗತ್ತಿನ ಅತ್ಯಂತ ಆಳದ (3200 ಮೀಟರ್ ಅಥವಾ 10500 ಅಡಿ) ಗಣಿಯೆಂದು ದಾಖಲೆ ಮಾಡಿದೆ. ಅಲ್ಲಿನ 60 ಡಿಗ್ರಿ ಸೆಲ್ಸಿಯಸ್ ತಾಪದಲ್ಲಿ ಗಣಿ ಕಾರ್ಮಿಕರು ಸತತ ಎರಡು ತಾಸು ಕೆಲಸ ಮಾಡುವುದೂ ದುಸ್ತರ. ತಂಪು ಗಾಳಿಯನ್ನು ನಿರಂತರ ಕಳಿಸುವುದೂ ದುಬಾರಿ ಹಾಗೂ ಕಠಿಣ. ಅತಿಯಾದ ಒತ್ತಡದಲ್ಲಿ ಶಿಲೆಗಳು ಅನಿರೀಕ್ಷಿತವಾಗಿ ಸಿಡಿಯುತ್ತವೆ. ನೀರು ಹಠಾತ್ ಉಕ್ಕಿ ಮಯಗಟ್ಟುತ್ತದೆ. ಅಂಥ ಸ್ಥಳದಲ್ಲಿ ಒಂದೊಂದು ಗ್ರಾಮ್ ಚಿನ್ನ ತೆಗೆಯಲು ಹೋದರೂ ಒಂದೊಂದು ಸಾವಿರ ರೂಪಾಯಿ ವೆಚ್ಚವಾಗುತ್ತದೆ.

ಮೇಲುಸ್ತರದ ಸುರಂಗಗಳ ಅಕ್ಕಪಕ್ಕದ 'ಗೂಡೆ'ಗಳಲ್ಲಿ, 'ಕಂಬ'ಗಳಲ್ಲಿ, ಭಾವಣಿಗಳಲ್ಲಿ ಇನ್ನೂ ಉಳಿದಿರುವ ಚಿನ್ನ ತೆಗೆಯೋಣವೆ? ಅದೂ ಅಪಾಯಕಾರಿ. ಗೋಡೆಯೇ ಕುಸಿದರೆ? ಕಳೆದ ವರ್ಷ ಐದು ಮಂದಿ ಕಾರ್ಮಿಕರು ಭಾವಣಿ ಕುಸಿದು ಅಸುನೀಗಿದ್ದರು. ಅದೂ ಅಲ್ಲದೆ ಚಿನ್ನಕ್ಕೆಂದು ಸುರಂಗ ತೆಗೆಯುವಾಗ, ಸುವರ್ಣ ಖಚಿತ ಶಿಲಾ ಭಾಗವನ್ನೇ ತೆಗೆಯುತ್ತ ತೆಗೆಯುತ್ತ ಅದೇ ಸುರಂಗವಾಗಿರುತ್ತದೆ. ಇನ್ನುಳಿದ ಬರಡು ಶಿಲೆಗಳೇ ಭಿತ್ತಿ- ಭಾವಣಿಗಳಾಗಿ ಉಳಿದಿರುತ್ತವೆ. ಈಗ ಉಳಿದದ್ದೂ ಅದೇ.

ಅಲ್ಪಾಂಶ ಚಿನ್ನವಿರುವ ಇತರ ಶಿಲಾಸ್ತರಗಳನ್ನೇ ಎತ್ತಿ ತರೋಣವೆ? ಹೇಗೂ ಚಿನ್ನದ ಬೆಲೆ ಏರಿದೆ. ಅಲ್ಪಸ್ವಲ್ಪ ಸಿಕ್ಕರೂ ಅದರಲ್ಲಿ ಲಾಭವಿದೆ ತಾನೆ?

ಮೈಮೇಲೆ ನಷ್ಟ

ಲಾಭವಿಲ್ಲ, ಏಕೆಂದರೆ, ಗಣಿ ಕಾರ್ಮಿಕರ ಸಂಬಳ, ಸಿಡಮದ್ದುಗಳ ಬೆಲೆ, ಉಪಕರಣಗಳ ವೆಚ್ಚ, ರಾಸಾಯನಿಕ ಪದಾರ್ಥಗಳ ಮೌಲ್ಯ ಎಲ್ಲವೂ ಚಿನ್ನದ ಬೆಲೆಗಿಂತ ಮೇಲೇರಿವೆ. ಹಿಂದೆಲ್ಲ ಒಂದು ಟನ್ ಶಿಲೆಯಲ್ಲಿ ಕನಿಷ್ಠ ಇಪ್ಪತ್ತು ಗ್ರಾಮ್ ಚಿನ್ನ ಸಿಗುವಂತಿದ್ದರೆ ಮಾತ್ರ ಅಂಥ ಶಿಲೆಯನ್ನು ಪುಡಿ ಮಾಡುತ್ತಿದ್ದರು. ಇಂದು ನಾವು ಕೇವಲ ಮೂರು ಗ್ರಾಮ್ ಚಿನ್ನ ಸಿಗುವಂತಿದ್ದಲ್ಲೂ ಗಣಿ ತೋಡುತ್ತಿದ್ದೇವೆ. ಮೈಮೇಲೆ ನಷ್ಟ ಹಾಕಿಕೊಳ್ಳುತ್ತಿದ್ದೇವೆ.

ಹಾಗಿದ್ದರೆ ಮುಂದೇನು?

ಬಿಜಿಎಮ್‌ಎಲ್‌ನ ಮುಖ್ಯ ಭೂ ವಿಜ್ಞಾನಿ ಎಮ್.ಪಿ. ಪೆಗಡೆ ಹೇಳುವ ಪ್ರಕಾರ ಚಿನ್ನದ ಸೆಲೆ ಇರುವ ಶಿಲಾಸ್ತರಗಳಿಗಾಗಿ ಶೋಧ ನಡೆದೇ ಇದೆ. ಮೂರು ವರ್ಷಗಳ ಹಿಂದೆ ಹೊಸ ಸ್ತರವೊಂದು

ಪತ್ತೆಯಾಗಿದೆ. ಅಗೆಯುತ್ತ ಚಿನ್ನ ತೆಗೆಯುತ್ತ ಕೆಜಿಎಫ್ ಜೀವಂತವಾಗಿರಬಹುದು.

ಆದರೆ ಹನ್ನೊಂದು ಸಾವಿರ ಕಾರ್ಮಿಕರಿಗೆ ಅದು ಆಸರೆ ನೀಡಲಾರದು. ನೌಕರರ ಸಂಖ್ಯೆ ಕಡಿಮೆ ಮಾಡಬೇಕು. ಇಲ್ಲಿ ಚಿನ್ನ ಕರಗಿಸುವ ವಿಭಾಗದ ಡೆಪ್ಯೂಟಿ ಜನರಲ್ ಮ್ಯಾನೇಜರ್ ಬಿಜಿಕೆ ಬಾಳಿಗಾ ಹೇಳುವ ಪ್ರಕಾರ ವರ್ಷಕ್ಕೆ 200-300ರಂತೆ ಕೆಲಸಗಾರರನ್ನು ಕಡಿಮೆ ಮಾಡಲಾಗುತ್ತಿದೆ. ಏಳು ವರ್ಷಗಳಿಂದ ಹೊಸಬರ ನೇಮಕವನ್ನು ಸ್ಥಗಿತ ಮಾಡಲಾಗಿದೆ. ಕರ್ನಾಟಕದ ಗಡಿಯಾಚೆ ಆಂಧ್ರದ ಚಿಗರಗುಂಟಾ ಹಾಗೂ ಮಲ್ಲಪ್ಪಕೊಂಡ ಊರುಗಳಲ್ಲಿ ಕೋಲಾರದ ಶಿಲಾಸ್ತರವೇ ವಿಸ್ತರಿಸಿದ್ದು ಅಲ್ಲಿ ಚಿನ್ನ ತೆಗೆಯುವ ಕೆಲಸ ಆರಂಭವಾಗಿದೆ. ಆದರೆ ಅಲ್ಲೂ ಒಂದು ಟನ್ ಅದುರನ್ನು ಪುಡಿಮಾಡಿದರೆ ಹೆಚ್ಚೆಂದರೆ ಮೂರುವರೆ ಗ್ರಾಮ್ ಚಿನ್ನ ಸಿಗುತ್ತದೆ. ಈಗ ಅದುರನ್ನು ಪುಡಿ ಮಾಡುವ ಯಂತ್ರವನ್ನು ಅಲ್ಲೇ ರಾಮಗಿರಿಗೆ ಒಯ್ದು ಸ್ಥಾಪಿಸಲಾಗಿದೆ.

ಇಂಥ ಕ್ರಮದಿಂದ ಕೆಜಿಎಫ್‌ಗೆ ಹೊಸ ಜೀವವೇನೂ ಬಂದಂತಾಗುವುದಿಲ್ಲ. ಕಳೆದ ವರ್ಷ ಜೂನ್ ತಿಂಗಳಲ್ಲಿ ಹತ್ತಾರು ರಾಜಕೀಯ ಪಕ್ಷಗಳು ಸೇರಿ 'ಸೇವ್ ಕೆಜಿಎಫ್' ಎಂಬ ಸಮಿತಿ ಮಾಡಿಕೊಂಡು ಧರಣೀ ಸತ್ಯಾಗ್ರಹ ನಡೆಸಿದರು.


ಬಿಜಿಎಮ್‌ಎಲ್ ಕಂಪನಿಯ ಅವಸ್ಥೆ ಯಾರಿಗೂ ಬೇಡ. ಕಳೆದ ವರ್ಷ 800 ಕಿಲೊ ಚಿನ್ನದ ಇಟ್ಟಿಗೆಗಳ ರಾಶಿ ಇಟ್ಟುಕೊಂಡರೂ ಕಾರ್ಮಿಕರಿಗೆ ಹಣ (ಶಿಕ್ಷಣ ಮುಂಗಡ) ಕೊಡಲಾಗದೇ ಅಲ್ಲಿ ಇಲ್ಲಿ ಸಾಲ ಎತ್ತಲು ಹೋದದ್ದುಂಟು. ತನ್ನ ಸ್ವಿರಾಸ್ತಿಯಲ್ಲಿ ಆರುಸಾವಿರ ಎಕರೆ ಭೂಮಿಯನ್ನೇ ಮಾರಲು ಹೊರಟಿದ್ದುಂಟು. 'ನಮ್ಮ ಚಿನ್ನವನ್ನು ನಾವೇ ಮಾರಿಕೊಳ್ಳುತ್ತೇವೆ ಅನುಮತಿ ಕೊಡಿ' ಎಂದು ಸರಕಾರವನ್ನು ಅಂಗಲಾಚಿದ್ದುಂಟು.

ನಮ್ಮ ದೇಶದ ಚಿನ್ನದ ವಹಿವಾಟೂ ತುಂಬ ವಿಚಿತ್ರವಾದದ್ದು. ಇಟಲಿ ಬಿಟ್ಟರೆ ಭಾರತದಲ್ಲಿ 'ಸಿದ್ಧ'ವಾಗುವಷ್ಟು ಚಿನ್ನ ಬೇರಾವ ದೇಶದಲ್ಲೂ ಇಲ್ಲ. 1986ರಲ್ಲಿ ಭಾರತದಲ್ಲಿ ಒಂದೂವರೆ ಟನ್ ಚಿನ್ನವನ್ನು ಗಣಿಯಿಂದ ತೆಗೆದಿದ್ದರೆ. ಅದೇ ವರ್ಷ 173 ಟನ್ ಚಿನ್ನಾಭರಣ, ಫಲಕ ಪದಕ ಸಿದ್ಧವಾಗಿತ್ತು. ಪ್ರತಿವರ್ಷ ಸರಾಸರಿ 150 ಟನ್ ಚಿನ್ನ ಇಲ್ಲಿ ಬಳಕೆಗೆ ಬರುತ್ತಿದೆ. ಎಲ್ಲಿಂದ ಬರುತ್ತೊ ಸುಂಕದ ಅಧಿಕಾರಿಗಳೇ ಹೇಳಬೇಕು.

ಚಿನ್ನಕ್ಕೆ ಅಪ್ಪೆಲ್ಲ ಬೇಡಿಕೆ ಇದ್ದಾಗ, ಕೋಲಾರದ ಚಿನ್ನವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಿದ್ದರೆ ನಷ್ಟದ ಪ್ರಶ್ನೆಯೇ ಬರುತ್ತಿರಲಿಲ್ಲ. ಬಿಜಿಎಮ್‌ಎಲ್‌ಗೆ ಆ ಅಧಿಕಾರ ಇರಲಿಲ್ಲ. ದೂರದ ಲಂಡನ್ ಮಾರ್ಕೆಟ್‌ನಲ್ಲಿ ಚಿನ್ನದ ಬೆಲೆ ಎಷ್ಟಿದೆ. ನೋಡಿ, ಅದಕ್ಕೆ ತಕ್ಕಂತೆ ಬೆಲೆ ನಿಗದಿಪಡಿಸಿ ನಮ್ಮ ರಿಸರ್ವ್ ಬ್ಯಾಂಕಿಗೇ ಎಲ್ಲ ಚಿನ್ನ ಒಪ್ಪಿಸಬೇಕಾಗಿತ್ತು.

(ತಾಮ್ರ, ನಿಕೆಲ್, ಸತು ಮುಂತಾದ ಲೋಹದ ಉತ್ಪಾದನೆ ಎಷ್ಟೋ ವಾಸಿ. ಗಣಿಯಿಂದ ಅವನ್ನು ತೆಗೆದು ಶುದ್ಧ ಮಾಡಿ, ಆ ಬೆಚ್ಚದ ಮೇಲೆ ಒಂದಿಷ್ಟು ಲಾಭ ಸಿಗುವಂತೆ ಬೆಲೆ ನಿಗದಿ ಮಾಡುತ್ತಾರೆ. ಬೇಕಿದ್ದರೆ ಅದೇ ದರಕ್ಕೆ ವಿರೀದಿಸಿ. ಇಲ್ಲಾಂದರೆ ಬಿಡಿ. ಕಂಪೆನಿಗೆ ಎಂದೂ ನಷ್ಟವಿಲ್ಲ).

ಚಿನ್ನಕ್ಕೂ ಹಾಗೇ ಬೆಲೆ ನಿಗದಿ ಮಾಡೋಣ ಎಂದರೆ ಸರಕಾರ ಸಿದ್ಧವಿರಲಿಲ್ಲ. ಹೊರ ದೇಶಗಳಿಂದ ಇನ್ನಷ್ಟು ಚಿನ್ನ ಕಳ್ಳ ಸಾಗಣೆ ಮೂಲಕ ಬಂದೀತೆಂಬ ಭಯ. ಇತ್ತ ಕಳ್ಳ ಸಾಗಣೆಯೂ ನಿಂತಿಲ್ಲ.



ಪಿರಮಿಡ್‌ನಂಥ 'ದಂಪ್'ಗಳು : ಚಿನ್ನ ತೆಗೆದ ನಂತರ ಉಳಿಯುವ ಈ ಸೈನೈಡ್ ಮಿಶ್ರಿತ ಅದುರಿನ ಪುಡಿಯಲ್ಲಿ ಟಂಗ್‌ಸ್ಟನ್ ಲೋಹದ ಅಂಶ ಇದ್ದೀತೆಂಬ ಗುಮಾನಿ. ದೂಳು, ಕೆಸರು ಹಾಗೂ ರೋಗಗಳ ತವರೂರು.


ಬಿಜಿಎಮ್‌ಎಲ್ ಕಂಪೆನಿ ತನ್ನ ಕಾಲ ಮೇಲೆ ತಾನು ನಿಲ್ಲುವಂತಿಲ್ಲ.

ಕಳೆದ ವರ್ಷ ಅಳೆದೂ ಸುರಿದೂ ಕೆಜಿಎಫ್‌ನಲ್ಲೇ ಬಹಿರಂಗವಾಗಿ ಚಿನ್ನ ಮಾರಲು ಅನುಮತಿ ಸಿಕ್ಕಿತು. ಆದರೆ ಸರಕಾರ ಅಲ್ಲೂ ಒಂದು ಕೊಕ್ಕೆ ಹಾಕಿತು. ವಿರೀದಿ ಮಾಡಿದವರೇ ಮಾರಾಟ ತೆರಿಗೆಯನ್ನೂ ನೀಡಬೇಕೆಂದು ಕಟ್ಟುಪಾಡು ವಿಧಿಸಿತು. ಹಾಗಾಗಿ ವಿರೀದಿಗೆ ಯಾವ ಚಿನ್ನದ ವ್ಯಾಪಾರಿಯೂ ಬರಲಿಲ್ಲ. ಸುಸ್ತಾದ ಬಿಜಿಎಮ್‌ಎಲ್ ತಾನೇ ತೆರಿಗೆ ಕಟ್ಟುತ್ತೇನೆಂದಾಗ ಬೆರಳೆಣಿಕೆಯ ಕೆಲವರು ಚಿನ್ನ ವಿರೀದಿಗೆ ಬಂದರು. ಆದರೂ ಕೆಜಿಎಫ್ ಚೇತರಿಸಲಿಲ್ಲ. ಕಳ್ಳಸಾಗಣೆಯ ಚಿನ್ನ ಅಗ್ಗದಲ್ಲಿ ಸಿಗುವಾಗ ಕೋಲಾರದ ಚಿನ್ನ ಯಾವ ಸರಾಫರಿಗೂ ರುಚಿಸಲಿಲ್ಲ. ಇದೀಗ ಮತ್ತೆ 22 ಕ್ಯಾರೆಟ್ ಚಿನ್ನವನ್ನು ಕೆಜಿಎಫ್‌ನಲ್ಲೇ ವಿರೀದಿಸಬಹುದೆಂದು ಆಗಸ್ಟ್‌ನಲ್ಲಿ ಮತ್ತೆ ಘೋಷಿಸಲಾಗಿದೆ.

ಆಗಸ್ಟ್‌ನಲ್ಲಿ ಚನ್ನಾಗಿ ಮಳೆ ಬೀಳುವಾಗ ಕೆಜಿಎಫ್ ಸುತ್ತಮುತ್ತ ಸಹಸ್ರಾರು ಕುಟುಂಬಗಳ ಚಟುವಟಿಕೆ ಚುರುಕಾಗುತ್ತವೆ. ಗುದ್ದಲಿ, ಸಲಿಕೆ, ಬೀಜ ಗೊಬ್ಬರದ ಮೂಟೆ ಹೊತ್ತ ರೈತರು ಗದ್ದೆಗೆ ಹೊರಡುವ ಹಾಗೇ, ಮಣ್ಣಲ್ಲಿ ಚಿನ್ನ ಶೋಧಿಸುವ 'ಕೃಷಿಕ'ರೂ ಗುದ್ದಲಿ ಸಲಿಕೆ, ಚಿನ್ನದ ಮರಳಿನ ಮೂಟೆ ಹೊತ್ತು ನೀರಿನ ತಡಿಗೆ ಬರುತ್ತಾರೆ. ನೀರಿನ ಪುಟ್ಟ ಹೊಂಡ ಮಾಡಿ ಅದರಲ್ಲಿ ಚಿನ್ನದ ಮರಳನ್ನು ಕಲಕಿ ಕಲಕಿ ಮಿಲಿಗ್ರಾಮ್ ಚಿನ್ನ ತೆಗೆಯುತ್ತಾರೆ (ಮುವಿಚಿತ್ರ ನೋಡಿ). ಯಾವ ಮಣ್ಣಿನಲ್ಲಿ ಎಷ್ಟು ಚಿನ್ನ ಇದೆ ಎಂಬುದು ಇವರಿಗೆ ಗೊತ್ತಿರುತ್ತದೆ. ಬೇರೆ ಋತುಗಳಲ್ಲಿ ಕಲಕಲು ಬೇಕಾದ ನೀರು ಸಿಗದೇ ಹತಾಶರಾಗಿ ಚರಂಡಿ ಕೊಚ್ಚೆಯನ್ನೂ ಚಿನ್ನ ಸೋಸಲು ಬಳಸುತ್ತಾರೆ. ಪೊಲೀಸರನ್ನು ಕಂಡರೆ ಕಾಲು ಕೀಳುತ್ತಾರೆ. ಮಳೆಗಾಲ ಬಂದಾಗ ಇವರಿಗೆ ಸುವರ್ಣಾವಕಾಶ. ಹತ್ತಿಪ್ಪತ್ತು ಕಿಲೋಮೀಟರ್ ದೂರದಿಂದಲೂ ಚಿನ್ನಕ್ಕಾಗಿ ಬರುತ್ತಾರೆ. ಮಕ್ಕಳನ್ನೂ ಶಾಲೆಯಿಂದ ತಪ್ಪಿಸಿ ಮರಳು ಸೋಸಲು ಪಚ್ಚುತ್ತಾರೆ.

ಬರಪೀಡಿತ ಕೋಲಾರ ಜಿಲ್ಲೆಯಲ್ಲಿ ನೀರು ಸಿಕ್ಕರೆ ಚಿನ್ನ ಸಿಕ್ಕಂತೇ. ನೀರಿಲ್ಲದಿದ್ದರೆ ಚಿನ್ನದ ಪುಡಿಯೂ ಒಣ ಮಣ್ಣಿಗೆ ಸಮಾನ.

ಈ ಒಣ ಮಣ್ಣನ್ನೂ ಚಿನ್ನವನ್ನಾಗಿ ಪರಿವರ್ತಿಸಬಲ್ಲ ಸಿದ್ಧಪುರುಷರು ಇಲ್ಲಿದ್ದಾರೆ. ಕೆಜಿಎಫ್



ಬಸ್ ನಿಲ್ದಾಣದ (ರಾಬರ್ಟ್‌ಸನ್ ಪೇಟೆಯ)ಲ್ಲಿ ಚಿನ್ನ ಬೆಳ್ಳಿ ವರ್ತಕರ ಅಂಗಡಿಗಳನ್ನು ನೀವು ಲೆಕ್ಕ ಮಾಡುತ್ತ ಹೋದರೆ ಉಸಿರುಕಟ್ಟುತ್ತದೆ. ಇಪ್ಪತ್ತಾರರವರೆಗೆ ಎಣಿಸಿದಮೇಲೆ ಈ ವರದಿಗಾರನಿಗೆ ಲೆಕ್ಕ ತಪ್ಪಿಹೋಯಿತು.

ಗಣಿಯಿಂದ ತೆಗೆದ ಚಿನ್ನವನ್ನಂತೂ ಇಲ್ಲಿ ಮಾರುವುದಿಲ್ಲ, ಮರಳಿನಿಂದ ಚಿನ್ನ ಸೋಸಿ ತೆಗೆಯುವುದಂತೂ ಕಾನೂನು ಬಾಹಿರ. ಹಾಗಿದ್ದರೆ ಇಲ್ಲಿ ಇಷ್ಟೆಲ್ಲ ಸರಾಫರ ಅಂಗಡಿಗಳು ಹೇಗೆ ಬಂದವು? ರಜಾದಿನ ಅಂಗಡಿಗಳೆಲ್ಲ ಮುಚ್ಚಿದ್ದರೂ ಸಂದು ಮೂಲೆಗಳಲ್ಲಿ, ಕಟ್ಟೆ ಮೆಟ್ಟಿಲುಗಳಲ್ಲಿ ಪುಟ್ಟ ಪುಟ್ಟ ತಕ್ಕಡಿ-ಇಕ್ಕಳ-ಒರೆಗಲ್ಲುಗಳ ತಾಕಲಾಟ ಹೇಗೆ ನಡೆಯುತ್ತವೆ ?.

ಸಾವಿರ ಸುರಂಗ

ಕೋಲಾರದ ನೆಲದಡಿಯಲ್ಲಿ ಸಾವಿರ ಸುರಂಗಗಳಿದ್ದ ಹಾಗೆ. ಬಿಜಿಎಮ್‌ಎಲ್ ಕಂಪನಿಯ ಭದ್ರತಾ ವ್ಯವಸ್ಥೆಯಲ್ಲೂ ಸಾವಿರ ತೂತುಗಳಿವೆ ಎಂದು ಬಲ್ಲವರು ಹೇಳುತ್ತಾರೆ. ನೌಕರರೂ ಹೇಳುತ್ತಾರೆ. ಹಿಂದೆ ಬ್ರಿಟಿಷ್‌ರೇನೋ ಯಾರಿಗೂ ನಿಜವಾದ ಲೆಕ್ಕ ಕೊಡದೇ ಎಷ್ಟೋ ನೂರು ಟನ್ ಚಿನ್ನ ಸಾಗಿಸಿದ್ದರೆ ಈಗ ನಮ್ಮವರೇ ಎಷ್ಟೋ ನೂರು ಮಾರ್ಗಗಳಲ್ಲಿ ತುಸು ತುಸು ಚಿನ್ನ ನುಂಗುತ್ತ ಕಂಪೆನಿಗೆ ನಷ್ಟ ಮಾಡುತ್ತಿದ್ದಾರೆಂಬ ಆರೋಪವನ್ನು ಯಾರೂ ಅಲ್ಲಗಳೆಯುತ್ತಿಲ್ಲ, ಕಾರ್ಮಿಕರು ಆಡಳಿತ ವರ್ಗವನ್ನೂ, ಆಡಳಿತ ವರ್ಗದವರು ಭದ್ರತಾ ಸಿಬ್ಬಂದಿಯನ್ನೂ, ಭದ್ರತಾ ಸಿಬ್ಬಂದಿ ಕಾರ್ಮಿಕರನ್ನೂ ದೂರುತ್ತಾರೆ.

ಸರಾಫರ ಲಕಲಕ ಅಂಗಡಿಗಳ ಸಾಲಿನ ಒಂದೆ ಕೆಜಿಎಫ್‌ನ ಅನೇಕ ವಿಕಾರ ಮುಖಗಳು ಅಡಗಿವೆ. ತೋರಿಕೆಗೆ ಚಿನ್ನ ಬೆಳ್ಳಿ ಅಂಗಡಿಗಳಾಗಿದ್ದರೂ ಇವೆಲ್ಲ ಗಣಿ ಕಾರ್ಮಿಕರ ಚೊಂಬು, ತಟ್ಟೆ, ತಾಳಿ, ಉಂಗುರ ಒತ್ತೆಯಿಟ್ಟುಕೊಂಡು ಬಡ್ಡಿಗೆ ಸಾಲ ನೀಡುವ ಅಂಗಡಿಗಳಾಗಿವೆ. ನಾಲ್ಕು ತಲೆಮಾರುಗಳಿಂದ ಚಿನ್ನದ ಅದುರು ಅಗೆಯುತ್ತ ಬಂದ ಕಾರ್ಮಿಕರ ಸ್ಥಿತಿ ಇಲ್ಲಿ ತೀರ ಶೋಚನೀಯವಾಗಿದೆ. ದೇಶದ ಎಲ್ಲ ಗಣಿ ಕಾರ್ಮಿಕರ ಹಾಗೆ ಇಲ್ಲಿನ ಕಾರ್ಮಿಕರೂ ಭೂಗರ್ಭದಲ್ಲಿ ಜೀವವನ್ನು ಒತ್ತೆಯಿಟ್ಟೋ


ಕೊಳಕು ಚರಂಡಿ ನೀರಿನಲ್ಲಿ ಚಿನ್ನದ ಮಣ್ಣನ್ನು ತೊಳೆಯುವ ಸನ್ನಾಹ. ಮಳೆ ಬಿದ್ದಾಗ ಇಲ್ಲಿ ಚಿನ್ನದ 'ಫಸಲು' ತೆಗೆಯಲು ಸೂಕು ಸುಗ್ಗಲು.


ಸಾಲು ಸಾಲು ಚಿನ್ನದ ಅಂಗಡಿ.

ಜೂಜಿಗಟ್ಟೋ ದುಡಿಯುತ್ತಾರೆ. ಮೇಲೆ ಬಂದ ಮೇಲೆ ಹೆಂಡಕ್ಕಾಗಿ ಹೆಂಡತಿಯ ಗುಂಡು ತಾಳಿಯನ್ನು ಒತ್ತೆಯಿಟ್ಟಾದರೂ ಕುಡಿತ ಜೂಜುಗಳಲ್ಲಿ ಮುಳುಗುತ್ತಾರೆ. ಇಡೀ ಕುಟುಂಬವನ್ನು ಸಾಲದಲ್ಲಿ ಮುಳುಗಿಸುತ್ತಾರೆ.

ಇಂಥ ಹತ್ತು ಸಹಸ್ರ ಕುಟುಂಬಗಳು ಚಿನ್ನದ ಸುರಂಗಗಳ ಪಂದರದ ಮೇಲೆ ದಾರಿದ್ರ್ಯದ ಪರಾಕಾಷ್ಠೆಯಲ್ಲಿ ಬದುಕುತ್ತಿವೆ. ತೀರ ಇಕ್ಕಟ್ಟಾದ ಬಿದಿರಿನ ತಟ್ಟಿಕಿಯ (ಇದೀಗ ಕಲ್ಲಾರು ತಗಡಿನ) ಸಾಲು ಸಾಲು ಜೋಪಡಿಗಳು. ಒಂದೊಂದು ಜೋಪಡಿಯಲ್ಲೂ ಸಾಲು ಸಾಲು ಮಕ್ಕಳು. ಚೂರು ಪಾರು ಕಾಸಿಗಾಗಿ ಹಾಳು ಮೂಳು ಕಬ್ಬಿಣ ಚೂರು ಪಾರುಗಳಿಗೂ ಲಗ್ಗೆ ಹಾಕುವ ಹೈಕಳು.

ಇವರ ಹಾವಳಿಯಲ್ಲಿ ಯಾವುದನ್ನೂ ರಕ್ಷಿಸಿ ಇಡುವುದು ಅಸಾಧ್ಯವೆನ್ನುತ್ತಾರೆ ರಕ್ಷಣಾ ಸಿಬ್ಬಂದಿ.





ಕಳೆದ ತಿಂಗಳು ಹಳೇ ಶೆಡ್ ಒಂದನ್ನು ನೆಲಸಮ ಮಾಡಿದಾಗ ಅಲ್ಲಿ ಉಳಿದಿರಬಹುದಾದ ಹಳೇ ಮೊಳೆ, ತಗಡು, ನಟ್ ಬೋಲ್ಟ್‌ಗಳನ್ನು ಹೆಕ್ಕಲು ನಾಲ್ಕಾರು ದಿನಗಳ ಕಾಲ ನೂಕುನುಗ್ಗಲು ಎಷ್ಟಾಗಿತ್ತೆಂದರೆ ಪೊಲೀಸ್ ಪಡೆಯನ್ನು ಕರೆಸಿ ಲಾಠೀ ಚಾರ್ಜ್ ಮಾಡಬೇಕಾಯಿತು.

'ನಾವೇನು ಬಿಡಿ ಸಾರ್, ಚೂರು ಪಾರು ಎತ್ತುತ್ತೇವೆ. ಆದರೆ ಆ ಬಂಗ್ಲೆಗಳಲ್ಲಿರೋ ಸಾಹೇಬ್ರನ್ನ ನೋಡಿ– ಅವರು ಟನ್‌ಗಟ್ಟಲೆ 'ಬಾಚಿಕೊಳ್ಳುತ್ತಿದ್ದಾರೆ' ಎಂದು ಎಣ್ಣೆ ನೀರು ಕಾಣದ ತಲೆಕೆರೆಯುತ್ತ ಜೋಪಡಿ ಹೆಂಗಸರು ತಮಿಳಿನಲ್ಲಿ ಹೇಳುತ್ತಾರೆ.

ಬ್ರಿಟಿಷರು ಬಿಟ್ಟು ಹೋದ ಭೂತಾಕಾರದ ಬಂಗ್ಲೆಗಳಲ್ಲಿ ಶತಮಾನದ ವೈಭವಯುತ ಇತಿಹಾಸದ ಶಿಥಿಲ ಮುಖಗಳು ಕಾಣುತ್ತವೆ. ವಿಶಾಲ ಕಂಪೌಂಡ್‌ಗಳಲ್ಲಿ ಎತ್ತರ ಭಾವಣಿಯ ಅರಮನೆಗಳು. ಇಪ್ಪತ್ತಡಿ ಕಂಬಿಯ ಮೇಲೆ ಕುರ್ರೋ ಮರ್ರೋ ಸದ್ದು ಮಾಡುವ ಸೀಲಿಂಗ್ ಫ್ಯಾನ್‌ಗಳು. ಹತ್ತಡಿ ಉದ್ದದ ಸ್ನಾನದ ತೊಟ್ಟಿಗಳು. ಅರ್ಧರ್ಧ ಎಕರೆ ವ್ಯಾಪಿಸಿದ ಬಂಗ್ಲೆಗಳಲ್ಲಿ ಈಗ ಸರ್ಕಾರಿ ಕಚೇರಿಗಳು.


ಸೈನೈಡ್ ಪಿರಮಿಡ್‌ಗಳ ಮೇಲೆ ಕೃತಕ ಮಣ್ಣು ತುಂಬಿ ನೀಲಗಿರಿ ಬೆಳೆಸುವ ಸನ್ನಾಹ. ಅರಣ್ಯ ಇಲಾಖೆಯ ಈ ಪ್ರಯೋಗ ಕೆಲವೆಡೆ ಯಶಸ್ವಿ ಕೆಲವೆಡೆ (ಕೆಳಗಿನ ಚಿತ್ರದಲ್ಲಿ) ವಿಫಲ


ಈ ಬಂಗ್ಲೆಗಳಲ್ಲಿ ಆಡಳಿತ ವರ್ಗದ ಒರಿಯ ಅಧಿಕಾರಿಗಳು ವಾಸಿಸುತ್ತಾರೆ. ಕಂಪನಿ ನಷ್ಟದಲ್ಲಿದ್ದರೂ ಇವರಿಗೆ ಕಷ್ಟ ನಷ್ಟ ತಟ್ಟುವುದಿಲ್ಲ. ಗಣಿಯಲ್ಲಿ ಚಿನ್ನ ಖಾಲಿಯಾದರೂ ಇವರಿಗೆ ವಿಯಾಲಿ ಶೋಕಿ ಸೌಲಭ್ಯಗಳ ಕೊರತೆಯಿಲ್ಲ. ಕ್ಲಬ್, ಗಾಲ್ಫ್ ಮೈದಾನ, ಸ್ಕೇಟಿಂಗ್ ರಿಂಕ್, ಈಜುಕೊಳ ತುಂಬಿರುತ್ತದೆ. ಅಲ್ಲೇ ಆಚೆ ಕಾರ್ಮಿಕರ ಬೀದಿಯ ಒಣ ನಲ್ಲಿಯ ಸುತ್ತ ಖಾಲಿ ಕೊಡಗಳು ಕಿಕ್ಕಿರಿದು ತುಂಬಿರುತ್ತವೆ.

ಈ ವೈರುಧ್ಯಗಳಿಂದಾಗಿಯೇ ಕೆಜಿಎಫ್‌ನಲ್ಲಿ ಈಗಲೂ ಜೀವಂತಿಕೆ, ಲವಲವಿಕೆ ಕಾಣುತ್ತಿದೆ. ಇಲ್ಲಿನ ಪುಕ್ಕಟೆ ಸೌಲಭ್ಯಗಳನ್ನೂ, ಕಿಕ್ಕಿರಿದ ಜನಾರಣ್ಯವನ್ನೂ ಕಿತ್ತು ಬೇರೆಡೆ ಸಾಗಿಸುವುದು ಅಸಾಧ್ಯದ ಮಾತು. ಅದಕ್ಕೇ ಈ ಪಳೆಯುಳಿಕೆಯ ಹಂದರಕ್ಕೆ ಮತ್ತೆ ಮತ್ತೆ ಜೀವ ತುಂಬುವ ಯತ್ನ ನಡೆಯುತ್ತಿದೆ. ಇಲ್ಲಿ ಹೊಸದಾಗಿ ರಾಷ್ಟ್ರೀಯ ಮಟ್ಟದ ಗಣಿ ವಿಜ್ಞಾನ ಸಂಸ್ಥೆ ಆರಂಭವಾಗಿದೆ. ದೇಶದ ಇತರ ಗಣಿ ಕಂಪನಿಗಳಿಗೆ ಸಲಹೆ ನೀಡಬಲ್ಲ ಹೊಸದೊಂದು ಎಂಜಿನಿಯರಿಂಗ್ ಘಟಕ ಆರಂಭವಾಗಿದೆ. ಗಣಿ ಕಾರ್ಮಿಕರ ಆರೋಗ್ಯದ ಬಗ್ಗೆ ಸಂಶೋಧನೆ ಮಾಡಲೆಂದು ರಾಷ್ಟ್ರಮಟ್ಟದ ಹೊಸ ವೈದ್ಯಕೀಯ ಸಂಸ್ಥೆ ಆರಂಭವಾಗಿದೆ.

ಇದೇ ಮೇಳೆಗೆ ನೆಲದಾಳದ ಖಾಲಿ ರಂಧ್ರಗಳನ್ನೂ ವಿವಿಧ ಪ್ರಯೋಗಗಳಿಗೆ ಒಡ್ಡಲಾಗುತ್ತಿದೆ. ಇಡೀ ವಿಶ್ವದ ಅವಸಾನ ಯಾವಾಗ ಆದೀತೆಂದು ಪರೀಕ್ಷೆ ಮಾಡಲೆಂದು ನಾಲ್ಕು ಸಾವಿರ ಅಡಿ ಆಳದಲ್ಲಿ 'ಫ್ಯೂಟಾನ್ ಡಿಕೇ' ಪ್ರಯೋಗ ನಡೆಯುತ್ತಿದೆ. ಅಣುಸ್ಫಾವರಗಳಿಂದ ಹೊಮ್ಮುವ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಹೂಳಲು ಪೂರ್ವ ಸಿದ್ಧತೆಯ ಪರೀಕ್ಷೆಗಳು ನಡೆಯುತ್ತಿವೆ.

ಇದಕ್ಕಿಂತ ಅಪೂರ್ವವಾದ, ಪ್ರಪಂಚಕ್ಕೇ ಹೊಸತಾದ ಒಂದು ಪ್ರಯೋಗವನ್ನು ಇಲ್ಲಿ ಕೈಗೊಳ್ಳಬಹುದಿತ್ತು. ಹನ್ನೊಂದು ಸಾವಿರ ಅಡಿ ಕೆಳಗೆ ನಿಂತು ಇನ್ನೊಂದು ಸಾವಿರ ಅಡಿ ಆಳದ ರಂಧ್ರ ಕೊರೆದು ಅದರಲ್ಲಿ ನೀರು ಸುರಿದು ಪುಕ್ಕಟೆ ಹಬೆ ಮೇಲೆ ತಂದು ನಿರಂತರವಾಗಿ





ಕೆಸರಿನಲ್ಲಿ ಹೆಪ್ಪುಗಟ್ಟಿದ ಲಕ್ಷ್ಮೀಸಾಗರ ಕೆರೆ : ಇಪ್ಪತ್ತು ಕಿಲೊ ಮೀಟರ್‌ವರೆಗೂ ಕಿಲ್ಪಿಷದ ಧಾರೆ

ವಿದ್ಯುತ್ ಉತ್ಪಾದನೆ ಮಾಡಬಹುದಿತ್ತು ಯಾರೂ ಈ ಕೆಲಸ ಕೈಗೆತ್ತಿಕೊಂಡಿಲ್ಲ.

ಖಾಲಿ ರಂಧ್ರಗಳಲ್ಲಿ ಏನೂ ಮಾಡಬಹುದು. ಆದರೆ ಅದರಿಂದ ಹೊಮ್ಮಿದ ಕೊಳೆ ರಾಶಿಯನ್ನು ಏನು ಮಾಡಲು ಸಾಧ್ಯ? ಜೇಡಿ ಮಣ್ಣಿನಂಥ ಈ ಖನಿಜದ ರಾಡಿಯನ್ನು ಉದ್ದಕ್ಕೆ ರಾಶಿ ಹಾಕಿದ್ದಿದ್ದರೆ ಸಾವಿರ ಕಿಲೊ ಮೀಟರ್ ಉದ್ದದ ಹತ್ತಡಿ ದಪ್ಪದ ಗೋಡೆ ಕಟ್ಟಬಹುದಿತ್ತು. ವಿಕಾರ ಪಿರಮಿಡ್‌ಗಳಂತೆ ರಾಶಿ ಬಿದ್ದಿರುವ ಈ 'ಡಂಪ್'ಗಳಲ್ಲಿ ಅಲ್ಪ ಪ್ರಮಾಣದ ಚಿನ್ನ ಹಾಗೂ ಟಂಗ್‌ಸ್ಟನ್ ಲೋಹ ಇದೆಯಂತೆ. ಮುಂದೆಂದಾದರೂ ಮತ್ತೆ ಇದನ್ನೇ ಅಗೆಯಬಹುದು. ಆದರೆ ಈ ಪಿರಮಿಡ್‌ಗಳು ಅಲ್ಲೇ ನಿಲ್ಲುವುದಿಲ್ಲ. ಬೇಸಿಗೆಯಲ್ಲಿ ಬೂದಿ ರಾಶಿಯ ಹಾಗೆ ಕಾರ್ಮಿಕರ ಕಾಲೊನಿಯತ್ತ ದೂಳು ಎರಚುತ್ತವೆ. ಮಳೆಗಾಲದಲ್ಲಿ ಕೀಪು ಸುರಿಸುವ ಗಾಯದಂತೆ ಕೆಸರಿನ ಕೋಡಿ ಹರಿಸುತ್ತವೆ.

ಹೇಗಾದರೂ ಮಾಡಿ ಈ ಡಂಪ್‌ಗಳನ್ನು ಅಲ್ಲೇ ಸ್ಥಿರ ಮಾಡುವಂತೆ ಅರಣ್ಯ ಇಲಾಖೆಯ ನೆರವಿನಲ್ಲಿ ಯತ್ನ ನಡೆಯುತ್ತಿದೆ. ಆ ದಿಬ್ಬಗಳ ಮೇಲೆ ಮಣ್ಣು

ಅದುರಿನ ಪುಡಿಯೊಂದಿಗೆ ಬಂದ ಬಗ್ಗಡ : ಹಳ್ಳ ಕೊಳ್ಳ ಕೆರೆ ಕುಂಟೆಗಳಿಗೆಲ್ಲ ಸುನ್ನನ್ನ ಕೆಸರು.


ರಸಗೊಬ್ಬರ ಸುರಿದು ನೀಲಗಿರಿ, ಬಳ್ಳಾರಿ ಜಾಲಿ, ಕತ್ತಾಳೆ ಗಿಡಗಳನ್ನು ಇತ್ತೀಚಿನ ಎಂಟು ವರ್ಷಗಳಲ್ಲಿ ನೆಟ್ಟು ಬಿಗಿಯಾದ ಕಾವಲು ಹಾಕಿದ್ದಾರೆ. ಕೆಲವೆಡೆ ಹಸಿರು ತೋಪು ಪುಷ್ಟಳವಾಗಿ ಬೆಳೆದಿದೆ. ಓತಿಕ್ಯಾತ ಅಳಿಲು ಹಾವರಾಣಿಗಳಿಗೆ ಆಶ್ರಯ ನೀಡತೊಡಗಿವೆ.


ಹಸಿರು ಹೊದಿಕೆ ಇಲ್ಲದ 'ಡಂಪ್'ಗಳಿಂದ ಹಾಗೂ ಕಲ್ಲು ಕುಟ್ಟುವ ಮಿಲ್‌ಗಳಿಂದ ಸೋರುತ್ತಿರುವ ಕೆಸರು ಕೀಪು ಕೋಡಿ ಹರಿದು ಹಳ್ಳ ಕೊಳ್ಳ ಕೆರೆ ಕುಂಟೆಗಳನ್ನೆಲ್ಲ ಕಬಳಿಸುತ್ತ ಮಾದ ಮಂಗಲ, ಲಕ್ಷ್ಮೀ ಸಾಗರ, ಗಿಡಂಪಲ್ಲಿ ಸುಸೈಪಾಳ್ಯ ಬೈನಪಲ್ಲಿ ದಾಟಿ ಆಂಧ್ರ ಪ್ರದೇಶದ ಶಾಂತಿಪುರಂವರೆಗೂ ಹೋಗಿದೆ ಎಂದು ರೈತರು ಹೇಳುತ್ತಾರೆ.

ಇದನ್ನು ಪರೀಕ್ಷಿಸಲೆಂದು ಈ ವರದಿಗಾರ ಕೆಜಿಎಫ್ ನಿಂದ ಆರು ಕಿಲೊ ಮೀಟರ್ ಆಚೆ ಲಕ್ಷ್ಮೀಸಾಗರ ಎಂಬ ಊರಿಗೆ ಹೋದಾಗ ರಾಡಿಧಾರೆಯ ಸತ್ಯ ಕಣ್ಣಿಗೆ ರಾಚುತ್ತಿತ್ತು. ಮೀನು, ಮೀಂಚುಳ್ಳಿ, ಕಪ್ಪೆ, ಏಡಿ, ಕೆಂಬೂತಗಳಳ್ಳಿಥ ಸಪಸ್ಯಾರು ಜೀವಿಗಳಿಗೆ ಆಶ್ರಯ ನೀಡಬೇಕಿದ್ದ ವಿಶಾಲ ಕೆರೆ ಈಗ ಥೈಪ್ಪುಗಟ್ಟಿದ ಕಂದು ಮರುಭೂಮಿಯಾಗಿತ್ತು. ಜಲಕಳೆ, ಚೊಂಡು ಹುಲ್ಲು, ತಾವರೆಯ ಮಾತು ಹಾಗಿರಲಿ– ಬದಿಯಲ್ಲಿದ್ದ ತೆಂಗಿನ ಮರಗಳನ್ನೂ ಈ ಕೆಸರಿನ ಧಾರೆ ಅರ್ಧ ನುಂಗಿ ಫಲಹೀನ ಮಾಡಿತ್ತು. ಲಕ್ಷ್ಮೀಸಾಗರದ ಈ ಕೆಸರು ಸಾಗರದ ಮೇಲೆ ಕುರಿಗಳೂ ಅಂಜುತ್ತ ಅಂಜುತ್ತ ಹೆಜ್ಜೆ ಇಕ್ಕುತ್ತಿದ್ದವು. ರೈತ ಅನಂತ ರೆಡ್ಡಿ ಹೇಳುವ ಪ್ರಕಾರ ಕೆರೆ ಆಚೀಚಿನ ಹೊಲಗಳನ್ನೂ ಆಕ್ರಮಿಸುತ್ತ ಮುಂದೆ ಬೈನಪಲ್ಲಿ ಕೆರೆಯನ್ನೂ ಮುಚ್ಚಿಹಾಕಿದೆ.

ಈ ಬಗೆಯ ನಷ್ಟಕ್ಕೆ ನಿಸರ್ಗದ ದುರಾದೃಷ್ಟಕ್ಕೆ ಯಾವ ಪರಿಹಾರವನ್ನೂ ಚಿನ್ನದ ಕಂಪನಿ ನೀಡಲಾರದು. ಕೋಲಾರದ ಗಣಿ ಮುಚ್ಚಿದ ಮೇಲೂ ಈ ಕಿಲ್ಪಿಷ ಹರಿಯುತ್ತಲೇ ಇರುತ್ತದೆ. ಸರಳ ಗಣಿತದ ಪ್ರಕಾರ 991 ಕಿ.ಮೀ. ಉದ್ದದ ಗಣಿಯಿಂದ ಬಂದ ಕೆಸರು ಕನಿಷ್ಠ 991 ಕಿ.ಮೀ. ಉದ್ದಕ್ಕೂ ಹರಿಯುತ್ತದೆ. ರೈತರ ಮುಂದಿನ ಪೀಳಿಗೆಗೂ ಅವರದಲ್ಲದ ತಪ್ಪಿಗೆ ಜುಲ್ಮಾನೆ ವಿಧಿಸುತ್ತಲೇ ಇರುತ್ತದೆ.


ಇತ್ತ ಕೆಜಿಎಫ್ ನಗರ ಹೇಗೋ ಬಾಳಿ ಬದುಕುತ್ತದೆ. ಅಲ್ಲಿನ ಪಟ್ಟಭದ್ರ ಕಾರ್ಮಿಕ ಮುಖಂಡರು ಸುಲಭವಾಗಿ ಗಣಿ ಮುಚ್ಚಲು ಬಿಡುವುದಿಲ್ಲ, ಬರದು ಬಂಡೆಯಲ್ಲೂ ಚಿನ್ನ ಇದೆಯೆಂದು ಸಾಧಿಸುತ್ತ ಬಡ ಕಾರ್ಮಿಕರ ಕೈಯಿಂದ ಕಲ್ಲು ಎತ್ತಿಸುತ್ತ ಕುಟ್ಟಿಸುತ್ತ ಮುಂದಿನ ಶತಮಾನವನ್ನೂ ಮೆಟ್ಟುತ್ತಾರೆ. ಜಗತ್ತಿನ 'ಬೆಲೆ' ಬಾಳುವ ಚಿನ್ನವನ್ನು ಉತ್ಪಾದಿಸುತ್ತಾರೆ! ನಾವದನ್ನು ಹೆಮ್ಮೆಯಿಂದ ಹಾಡಿ ಹೊಗಳುವಂತೆ ಮಾಡುತ್ತಾರೆ. ●





ಭೈರವೇಶ್ವರ ಶಿಖರ.

ಮೋಹಿನಿ ಶಿಖರ.



"ನಮ್ಮೂರ ಮಂದಾರ ಹೂವಿನಲ್ಲಿರೋ
ಯಾಣಕ್ಕೆ ಹೋಗೋದು ಹ್ಯಾಗೇ?'

ಉತ್ತರ ಕನ್ನಡದ ಶಿರಸಿಯ
ಲಾಜಿಂಗ್‌ಗಳಲ್ಲೊ, ರಸ್ತೆಬದಿಯಲ್ಲೋ,
ಅಂಗಡಿಕಾರರನ್ನೋ, ಕುಮಟಾಮೇಟೆಯ
ಪೆದ್ದಾರಿ ಪಕ್ಕದಲ್ಲಿ ಬೊಂಡಾ (ಸೀಯಾಳ)
ಮಾರುವವರಲ್ಲೊ. ದಿನನಿತ್ಯ ಇದೇ ಪ್ರಶ್ನೆಗಳು.

'ಮಂದಾರ ಹೂವು ಸಿನ್ಮಾ ನೋಡಿದ
ಮ್ಯಾಲೆ ಯಾಣಾ ನೋಡ್ಲೆಬೇಕು ಅನಿಸ್ತು.
ಬೆಂಗಳೂರಿಂದ ಬಂದ್ವಿ... ಮೈಸೂರಿಂದ
ಬಂದ್ವಿ... 'ನಾವ್ರೀ? ದಾವಣಗೇರಿ ಕಾಲೇಜು

ಪರಿಣಾಮಕಾರಿಯಾಗಿ ಈ ಚಲನಚಿತ್ರ ಸೆರೆ ಹಿಡಿದಿದೆ. ಜನಮೆಚ್ಚುಗೆಗೆ ಪಾತ್ರವಾದ ಸಿನಿಮಾ ನೋಡಿದ ಪ್ರೇಕ್ಷಕರು ಸೌಂದರ್ಯಕ್ಕೆ ಮಾರುಹೋಗಿ ಕೌತುಕದ ಯಾಣ ಹುಡುಕಿ ನಿಸರ್ಗ ಸೌಂದರ್ಯವನ್ನು ಆಸ್ವಾದಿಸಲು ಕೈಹಿಡಿದು ಕರೆದಿದೆ. ಹಲವು ವರ್ಷಗಳಿಂದ ಶಿವರಾತ್ರಿ ಉತ್ಸವದಲ್ಲಿ ಭೈರವೇಶ್ವರ ಕ್ಷೇತ್ರದ ದರ್ಶನಕ್ಕಾಗಿ ಭಕ್ತಾದಿಗಳ ಆಗಮನ. ಬೇಸಿಗೆಯಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ. ಬೆರಳೆಣಿಕೆಯ ಚಾರಣಿಗರ ಟಿಕ್‌ಸಿಕ್ ಸ್ಪಾಟ್ ಮಾತ್ರವಾಗಿದ್ದು ವರ್ಷಕ್ಕೆ ಸೀಮಿತ ಸಂಖ್ಯೆಯ ಪ್ರವಾಸಿಗರು ಭೇಟಿನೀಡುತ್ತಿದ್ದ ಯಾಣ ಈಗ ಹಾಗಲ್ಲ.

ಪ್ರಭಾವಿ ಸಿನಿಮಾ ಮಾಧ್ಯಮದ ಬೆಳ್ಳಿತೆರೆಯಲ್ಲಿ ಹಸಿರು ಸಿರಿಯ ನಡುವಿನ ಸುಣ್ಣದ ಶಿಲೆಯ ಮನಮೋಹಕ ಶಿಖರಗಳು ಮಿಂಚಿದ ಪರಿಣಾಮವಾಗಿ ಯಾಣದ ಕೀರ್ತಿ ಗಗನಕ್ಕೇರಿತು. ಪರಿಣಾಮ ದಿನದಿನಕ್ಕೆ ಪ್ರವಾಸಿಗರ ದಂಡು.

ಇಷ್ಟೇ ಅಲ್ಲ ಪ್ರವಾಸಿಗರ ಹದ್ದುಮೀರಿದ ವರ್ತನೆಯಿಂದ ಸಮೃದ್ಧ ಯಾಣದ ನಿಸರ್ಗ ಸೌಂದರ್ಯಕ್ಕೆ ಮಾಲಿನ್ಯದ ನೋವು. ಕಾಡೊಳಗೆಲ್ಲಾ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕೊಳೆ. ಕಸದ ರಾಶಿ. ಹಾದಿಬದಿಗೆ ಗೂಡಂಗಡಿಗಳು.

ಗಣಿಗಾರಿಕೆಯಿಂದ ಯಾಣ ಉಳಿಸಲು ಯಶಸ್ವಿಯಾದ ಪರಿಸರ ವಾದಿಗಳು ಈಗ ಅನುಪಮ ಸೌಂದರ್ಯ ಆಸ್ವಾದಿಸಲು ಬರುವ



ಶಿಖರದ ಪಾದಭೂತಿಯಲ್ಲಿ ಹೆಚ್ಚುತ್ತಿರುವ ಕಸದ ರಾಶಿ.

ಸುಧಾ ಚಿತ್ರಾಲಯ

ಪ್ರವಾಸಿಗರು ಟೂರ್ ಬಂದೇವ್ರಿ...!"

ಎಲ್ಲರದ್ದು ಒಂದೇ ಪ್ರಶ್ನೆ: 'ಯಾಣ ಎಲ್ರಿ?'

ಪ್ರಕೃತಿಮಾತೆಯ ಸಂಪದ್ಭರಿತ ಸದಾ ಹಸಿರಿನ ಅರಣ್ಯ ಮಡಿಲಲ್ಲಿರುವ ಯಾಣ ನೋಡಲು ರಾಜ್ಯದ ಮೂಲೆ ಮೂಲೆಗಳಿಂದ ದಿನನಿತ್ಯ ನೂರಾರು ಪ್ರವಾಸಿಗರು ಬರುತ್ತಿದ್ದಾರೆ. ಯಾಣಕ್ಕೆ ಬರುವ ಬಹುತೇಕ ಜನಕ್ಕೆ ಇದು, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿದೆ ಎನ್ನುವುದು ಗೊತ್ತಿದೆಯೋ ಇಲ್ಲವೋ. ಆದರೆ ಸುನೀಲಕುಮಾರ್ ದೇಸಾಯಿಯವರ 'ನಮ್ಮೂರ ಮಂದಾರ ಹೂವೆ' ಸಿನಿಮಾದಲ್ಲಿದೆ ಎನ್ನುವುದು ಪಕ್ಕಾಗೊತ್ತು. ಶಿಖರದ ವೈಭವವನ್ನು

ಪಾಂಡುರಂಗ ಹೆಗಡೆ

'ನಮ್ಮೂರ ಮಂದಾರ ಹೂವೇ'
ಚಿತ್ರದಲ್ಲಿ ಯಾಣವನ್ನು ಮಜಾ
ಉಡಾಯಿಸುವ ತಾಣವೆಂಬಂತೆ
ತೋರಿಸಿದ್ದೇ ಪ್ರಮಾದವಾಗಿದೆ.
ಅಲ್ಲಿಗೆ ದಿನವೂ ಬರುವ
ಪ್ರವಾಸಿಗರಲ್ಲಿ ಅನೇಕರು
ಪರಿಸರವನ್ನು ಮಲಿನ ಮಾಡುತ್ತಿದ್ದಾರೆ.
ಸೌಂದರ್ಯೋಪಾಸನೆಯ ಹೆಸರಿನಲ್ಲಿ...!

ಪ್ರವಾಸಿಗರಿಂದ 'ಯಾಣ ಉಳಿಸಿ' ಎಂದು ಯಾಚಿಸಬೇಕಾದ ವಿಪರ್ಯಾಸ ಬೆಳೆದಿದೆ.

ಸಭ್ಯತೆಯ ಪ್ರಶ್ನೆ

ಭೈರವೇಶ್ವರ ಶಿಖರದ ಸನಿಹವಿರುವ ದೇವಾಲಯದ ಗೋಡೆಗಳ ಮೇಲೆ, ಪಕಾಸಿಗಳ ಮೇಲೆ ಎಲ್ಲೆಂದರಲ್ಲಿ ಸಭ್ಯತೆ ಮೀರಿದ ಗೋಡೆ ಬರಹಗಳು. ಇದು ದೇವಾಲಯವೊ? ಬಸ್ ತಂಗುದಾಣವೊ? ಅನುಮಾನಪಡುವಂಥ ದುಸ್ಥಿತಿ. ಶಿಖರದ ಬುಡಭಾಗ ಪ್ರವಾಸಿಗರು ಗೀಚಿದ ಹೆಸರುಗಳಿಂದ ತುಂಬಿದೆ. ಒಟ್ಟಿನಲ್ಲಿ ಯಾಣಕ್ಕೆ ಬಂದವರು ಮೂಗುಮುಚ್ಚಿ ನಡೆಯಬೇಕಾದ ಸ್ಥಿತಿ ಬೆಳೆಯುತ್ತದೆ. ಇಲ್ಲಿನ

ಭೈರವೇಶ್ವರ ಶಿಖರದ ಕತ್ತಲೆಯ ಗುಹೆಯಲ್ಲಿಂತೂ ಒಡೆದ ಗಾಜಿನ ಬಾಟಲಿಗಳ ಚೂರುಗಳು ಅಪಾಯವನ್ನು ಆಹ್ವಾನಿಸುತ್ತಿವೆ.

ಸಿನೇಮಾ ಪರಿಣಾಮದಿಂದ ಇಲ್ಲಿಗೆ ಬರುವ ಪ್ರವಾಸಿಗರಿಗೆ ಇದು ಒಂದು ಪವಿತ್ರ ತೀರ್ಥಕ್ಷೇತ್ರ ಎಂಬ ಕಲ್ಪನೆಯೆ ಇದ್ದಂತಿಲ್ಲಾ. ನಾಯಕನಟ ಶಿವರಾಜ ಕುಮಾರ್ ಹಾಡಿ ಕುಣಿದದ್ದು, ಹೋ, ಹೋ, ಹೋ ಎಂದು ಕೂಗಿದ್ದೇ ಹೆಚ್ಚು ಪರಿಣಾಮಕಾರಿಯಾಗಿ ಅದೇ ಧ್ವನಿ ಇಂದು ಪ್ರವಾಸಿಗರಿಂದ ಪ್ರತಿಧ್ವನಿಸುತ್ತಿದೆ. ಕೂಗು, ಟೇಪ್ ರೆಕಾರ್ಡರ್, ಗದ್ದಲ ಕುಡಿದು ಮತ್ತೇರಿದವರ ಆರ್ಭಟ, ಪ್ರಣಯಕೇಳಿ, ಕಾಡಿನಲ್ಲಿ ರಾತ್ರಿ ಬೆಂಕಿಯ ಬೆಳಕಲ್ಲಿ ಕುಣಿದು ಕುಪ್ಪಳಿಸುವ ವಿಯಾಲಿ. ಈ ಕೂಗಾಟ ಗದ್ದಲಗಳಿಂದ ಹಸಿರು ಸಿರಿಯ ವನ್ಯಮೃಗಗಳ ಬದುಕು ಆತಂಕದಲ್ಲಿದೆ.


ಯಾಣಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಗಮನಿಸಿದ ಕೆಲವರಿಗೆ ಯಾಣದ ಕಾಡಲ್ಲಿ ಗೂಡಂಗಡಿ ಆರಂಭಿಸುವ ಉತ್ಸುಕತೆ ಹೆಚ್ಚುತ್ತಿರುವಂತೆ ತೋರುತ್ತದೆ. ಯಾಣ ಹಾಗೂ ವಡ್ಡಿಘಟ್ಟದ ಪ್ರದೇಶದಲ್ಲಿ ನಾಲ್ಕಾರು ಅಂಗಡಿಗಳು ತಲೆಯೆತ್ತಿವೆ. ಇದಲ್ಲದೆ ಯಾಣದ ಶಿಖರದ ಮುಂಭಾಗದಲ್ಲಿ ಎರಡು ಮೂರು ಅಂಗಡಿಗಳು ತಲೆ ಎತ್ತಿ, ಯಾಣದ ಪರಿಸರಕ್ಕೆ ಪ್ಲಾಸ್ಟಿಕ್ ಕಸ ಸೇರಿಸುವ ಕಾಯಕಕ್ಕೆ ಸ್ಫೂರ್ತಿ ನೀಡಿವೆ.

ಕಾಡಿದ ಹೊಸ ಸಮಸ್ಯೆ

1990ರಲ್ಲಿ ಸಿಮೆಂಟ್ ಕಂಪನಿಯೊಂದು ಇಲ್ಲಿನ ಸುಣ್ಣದ ಕಲ್ಲುಗಳ ಮೇಲೆ ಕಣ್ಣಿಟ್ಟಾಗ ನಂತರ 1995ರಲ್ಲಿ ಒಬ್ಬ ಖಾಸಗಿ ಗುತ್ತಿಗೆದಾರ ಸುಣ್ಣದ ಶಿಲೆಗಳನ್ನು ಒಡೆದು ಸಾಗಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅನುಮತಿ ಪಡೆದಾಗ ಪರಿಸರವಾದಿಗಳು, ಪರಿಸರ ಕಾಳಜಿಯುಳ್ಳ ಹಿರಿಯ ಅಧಿಕಾರಿಗಳು ಸೇರಿ 'ಯಾಣ ಉಳಿಸಿದ್ದರು'. ಈ ಎಲ್ಲಾ ಯೋಜನೆಗಳಿಂದ ಯಾಣವನ್ನು ಬಚಾವ್ ಮಾಡಿ ನಿಟ್ಟುಸಿರು ಬಿಡುವ ಹೊತ್ತಿಗೆ ಧುತ್ತನೆ ಪ್ರವಾಸಿಗರ ಸಮಸ್ಯೆ ಎದುರಾಗಿದೆ. ಪ್ರವಾಸಿ ಮಾಲಿನ್ಯದಿಂದ ಯಾಣ ಉಳಿಸುವ ಪ್ರಯತ್ನ ನಡೆಸಬೇಕಿದೆ. ಅಷ್ಟಕ್ಕೂ ಯಾಣ ಉಳಿಸಿ, ಎಂದು ಯಾರನ್ನು ಹೇಗೆ ಕೇಳುವದು? ಹೇಳಿ, ಕೇಳಿ ಸೌಂದರ್ಯ ಆಸ್ವಾದಿಸಲು, ಸ್ವಚ್ಛಂದವಾಗಿ ವರ್ತಿಸಲು ಮಜಾ ಉಡಾಯಿಸಲು, ರಜಾ ದಿನವನ್ನು ಖುಷಿಯಿಂದ ಕಳೆಯಲು, ಗೆಳೆಯ ಗೆಳತಿಯರೊಂದಿಗೆ ಏಕಾಂತವಾಗಿ ಕಳೆಯಲು ಬಂದವರಲ್ಲಿ ಈ ಪ್ರಶ್ನೆಯನ್ನು ಹೇಗೆ ಪರಿಣಾಮಕಾರಿಯಾಗಿ ಕೇಳುವುದು?

ಅದಕ್ಕಿಂತ ಮುಖ್ಯವಾಗಿ, ಈಗ ದಿನನಿತ್ಯ ಬರುವ ನೂರಾರು ಪ್ರವಾಸಿಗರನ್ನು ಹೇಗೆ ನಿಯಂತ್ರಿಸುವದು?


ಯಾಣದ ಸುತ್ತಲಿನ ನಾಗರಿಕರೇ ಈ



ಯಾಣದ ದಾರಿಯುದ್ದಕ್ಕೂ ಗುಟ್ಕಾ ಪ್ರಿಯರ ಗೂಡಂಗಡಿಗಳು



ಭೈರವೇಶ್ವರ ಶಿಖರದ ಸುತ್ತ ನಿರ್ಮಾಣವಾಗುತ್ತಿರುವ ಕೊಳಚೆಗೇರಿ.




ಯಾಣದ ಬಳಿಯ ದೇವಾಲಯದಲ್ಲಿ ಪ್ರವಾಸಿಗರ ಗೀಚಾಟ.

ಯಾಣದ ರಕ್ಷಣೆಗೆ ಜೇನು ಮತ್ತು ಉಂಬಳಗಳ ಕೊಡುಗೆ

ಯಾಣದ ವೀಕ್ಷಣೆಗೆ ಬೇಸಿಗೆ ಸಕಾಲ. ಆದರೆ ಈ ವರ್ಷ ಚಲನಚಿತ್ರದ ಪರಿಣಾಮದಿಂದಾಗಿ ಮಳೆಗಾಲದಲ್ಲೂ ಎಂದಿಲ್ಲದ ಪ್ರವಾಸಿಗರು ಇಲ್ಲಿಗೆ ಬರತೊಡಗಿದರು. ಬೆಂಗಳೂರಿನ ಯುವಕರ ತಂಡವೊಂದು ಇಂತಹ ಒಂದು ದಿನ ಯಾಣ ನೋಡಲು ಬಂತು. ಯಾಣಕ್ಕೆ ಹೋಗುವ ಕಾಲುದಾರಿಗಳಲ್ಲಿ ಇವರ ರಕ್ತಕ್ಕಾಗಿಯೆ ಹೊಂಚು ಹಾಕಿದಂತೆ ಹರಿಯುತ್ತಿದ್ದ ಉಂಬಳಗಳು ಇವರಿಗೆ ಕಡಿಯಲಾರಂಭಿಸಿದವು. ಈ ಉಂಬಳಗಳ ಕಾಟಕ್ಕೆ ಆಂಜಿ, ದೂರದ ಬೆಂಗಳೂರಿಂದ ಬಂದ ಈ ಯುವಕರು ಯಾಣ ನೋಡದೆ ಶಿರಸಿಗೆ ವಾಪಸ್ಸಾದರು. ಇದಲ್ಲದೆ, ಕೆಲವು ಪ್ರವಾಸಿಗರು ಶಿಖರ ಭಾಗದಲ್ಲಿರುವ ಹೆಜ್ಜೇನಿನ ಕಡಿತಕ್ಕೆ ಯಾಣದಿಂದ ಕಾಲ್ತೆಗೆದ ಪ್ರಸಂಗವು ನಡೆಯಿತು

ಪ್ರವಾಸಿಮಾಲಿನ್ಯವನ್ನು ಮಾನವರಿಂದ ತಡೆಯಲಾಸಾಧ್ಯವೆಂದೊ ಏನೋ ಈ ಜೀವಜಂತುಗಳು ತಮ್ಮ ಪರಿಸರ ರಕ್ಷಣೆಯ ಕೊಡುಗೆ ನೀಡಿದವು.



ಪರಿಸರ ಪ್ರಿಯರ ಒಂದು ಮನವಿ.


ಕಾರ್ಯ ಮಾಡಬೇಕೆಂದರೆ ಪಾಪ, ವಿರಳ ಜನಸಂಖ್ಯೆಯ ದೂರ ದೂರದ ಹಳ್ಳಿಗರಿಂದ ಎಷ್ಟನ್ನು ನಿರೀಕ್ಷಿಸಬಹುದು? ಈ ಹಳ್ಳಿಗರ ಮೂಲಭೂತ ಸಮಸ್ಯೆಗಳೇ ಬೆಟ್ಟದಷ್ಟಿರುವಾಗ ಯಾಣ ಉಳಿಸುವ ನಿತ್ಯದ ಕಾಯಕಕ್ಕೆ ಅವರನ್ನು ತೊಡಗಿಸುವುದಂತೂ ಕಷ್ಟದ ಮಾತು. ಕಾಡೊಳಗೆ ಬಿದ್ದ ಪ್ಲಾಸ್ಟಿಕ್ ಬಾಟಲ್‌ಗಳನ್ನು ಸಂಗ್ರಹಿಸಿ ರಾಶಿ ಹಾಕಿ ಬೇರೆಡೆ ಸಾಗಿಸುವುದಾದರೋ ಹೇಗೆ?

ಉತ್ತರ ಕನ್ನಡದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ ಯಾಣಕ್ಕೆ ಮೂಲಭೂತ ಪ್ರವಾಸಿ ಸೌಲಭ್ಯ ಒದಗಿಸಲು ಈಗ ಸರ್ಕಾರ ಮುಂದಾಗಿದೆ. ಯೋಜನೆ ಸಿದ್ಧಗೊಳ್ಳುತ್ತಿದೆ ಎಂದು ಜಿಲ್ಲೆಯ ಉಸ್ತುವಾರಿ ಸಚಿವ ಹಾಗೂ ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಆರ್ ವಿ ದೇಶಪಾಂಡೆ ಹೇಳಿದ್ದಾರೆ. 1997ನ್ನು ಉತ್ತರ ಕನ್ನಡದ ಪ್ರವಾಸೋದ್ಯಮ ವರ್ಷ ಎಂದು ಕಳೆದ ಗಣರಾಜ್ಯೋತ್ಸವದ ದಿನ ಸಾರಿದ್ದಾರೆ. ಈಗ ಯಾಣದ ಮೂಲಭೂತ ಸೌಲಭ್ಯಗಳ ಪರಿಹಾರಕ್ಕೆ ಯೋಜನೆ ರೂಪಿಸುವ ಸರ್ಕಾರಕ್ಕೆ ಇಂದು ಯಾಣ ದಲ್ಲಿ ಬೆಳೆಯುತ್ತಿರುವ ಪ್ರವಾಸೋದ್ಯಮದ ಮೂಲಭೂತ

ಸಮಸ್ಯೆಯ ಅರಿವು ಇದ್ದಂತಿಲ್ಲ.
ಪ್ರವಾಸೋದ್ಯಮದ ಅಭಿವೃದ್ಧಿಯೆಂದರೆ ಪಂಚತಾರಾ ಹೊಟೆಲ್‌ಗಳ ನಿರ್ಮಾಣ ಎಂದೇ ತಿಳಿದ ಜನಪ್ರತಿನಿಧಿಗಳಿಂದ ಪರಿಸರ ರಕ್ಷಣೆಯಂತಹ ಉನ್ನತ ನಿರೀಕ್ಷೆ ಮಾಡುವುದಾದರೂ ಹೇಗೆ?

ಮಾಲಿನ್ಯ ತಡೆಗೆ ಯತ್ನ

ಯಾಣದ ಸುತ್ತಲಿನ ನಾಗರಿಕರು ಇತ್ತೀಚೆಗೆ ವೃಕ್ಷಲಕ್ಷ ಆಂದೋಲನದ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ್ದಾರೆ. ಪ್ರವಾಸೋದ್ಯಮದ ಹೆಸರಿನಲ್ಲಿ ಯಾಣದಲ್ಲಿ ವಸತಿಗೃಹ ನಿರ್ಮಾಣ, ಹೋಟೆಲ್ ನಿರ್ಮಾಣ ಅಥವಾ ಯಾವುದೇ ಕಟ್ಟಡ ನಿರ್ಮಾಣ ಕೈಗೊಳ್ಳುವುದನ್ನು ವಿರೋಧಿಸುವ ನಿರ್ಣಯ ಕೈಗೊಂಡಿದ್ದಾರೆ. ಯಾಣ ಪ್ರದೇಶದ ಅಭಿವೃದ್ಧಿ, ಪರಿಸರ ರಕ್ಷಣೆ ಕುರಿತಂತೆ ಶಾಸಕರು ಇತರ ಜನಪ್ರತಿನಿಧಿಗಳು ಹಾಗೂ ಅರಣ್ಯಕ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ನಡೆಸಲು ನಿರ್ಧರಿಸಿದ್ದಾರೆ. ಕಳೆದ ಶಿವರಾತ್ರಿಯ ದಿನ ಯಾಣಕ್ಕೆ ಹದಿನೈದು ಸಾವಿರ ಯಾತ್ರಿಕರು ಭೇಟಿ ನೀಡಿದ ಸಂದರ್ಭದಲ್ಲಿ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರದ ಕಾರ್ಯಕರ್ತರು ಯಾಣವನ್ನು ಮಾಲಿನ್ಯದಿಂದ ರಕ್ಷಿಸುವಂತೆ ಪ್ರವಾಸಿಗರಲ್ಲಿ ವಿನಂತಿಸುವ ವಿನೂತನ ಕಾರ್ಯಕ್ಕೆ ಗೊಂಡಿದ್ದಾರೆ.




ಮೋಹಿನಿ ಶಿವಿರದ ಎದುರು ನೋಟ.

ಕಂಡಕಂಡಲ್ಲಿ ಪ್ಲಾಸ್ಟಿಕ್, ಗಾಜಿನ ಬಾಟಲ್ ಎಸೆಯದಂತೆ, ಟೀಪರಿಕಾರ್ಡರ್ ಹಚ್ಚಿ ಗೌಜು ಗದ್ದಲ ಎಬ್ಬಿಸದಂತೆ ಕಾಡಿಗೆ ಬೆಂಕಿ ಹಾಕದಂತೆ ಚಾಕಲೇಟ್, ಗುಟ್ಕಾದ ಪ್ಯಾಕೇಟ್‌ಗಳನ್ನು ಎಸೆಯದಂತೆ ಮನವಿ ಮಾಡಿದ್ದಾರೆ. ಕರಪತ್ರ ಹಂಚಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ರಾಮ ನಾಯ್ಕರು ಯಾಣ ಪ್ರದೇಶದಲ್ಲಿ ಪ್ರವಾಸಿಗರು ಎಸೆದ ಪ್ಲಾಸ್ಟಿಕ್‌ಗಳನ್ನು ಹೆಕ್ಕಿ ಒಂದೆಡೆ ಶೇಖರಿಸುತ್ತಾ, ಭೈರವೇಶ್ವರ ತಾಣದಲ್ಲಿ ಅಪರೂಪದ ಅನುಕರಣೀಯ ಭಕ್ತಿಯ ಸೇವೆಯನ್ನು ಕಳೆದ ನಾಲ್ಕೈದು ತಿಂಗಳಿಂದ ಸಲ್ಲಿಸುತ್ತಿದ್ದಾರೆ. ಯಾಣದಲ್ಲಿ ಈಗ ನಡೆದಿರುವ ಪ್ರವಾಸಿ ಅಧ್ಯಾನಗಳ ಪಟ್ಟಿಮಾಡುತ್ತಾ, ಅಲ್ಲಿನ ನಾಗರಿಕರೊಬ್ಬರು ಹೀಗೆ ತರ್ಕಿಸುತ್ತಾರೆ. 'ಚಲನಚಿತ್ರದಲ್ಲಿ ಯಾಣವನ್ನು ಮಜಾ ಉಡಾಯಿಸುವ ತಾಣವಾಗಿ ಚಿತ್ರೀಕರಿಸಲಾಗಿದೆ. ಇದು ಭೈರವೇಶ್ವರನ ಪವಿತ್ರಕ್ಷೇತ್ರ ಎಂಬುದನ್ನು ಚಲನಚಿತ್ರದಲ್ಲಿ ತಿಳಿಸಿದ್ದರೆ ದೇವಾಲಯದೆದುರು ಆಗಬಾರದ ಕೃತ್ಯಗಳು ಆಗುತ್ತಿರಲಿಲ್ಲ' ಎನ್ನುತ್ತಾರೆ.


'ಯಾಣ ನಿಸರ್ಗ ಸೃಷ್ಟಿಯ ಮಹೋನ್ನತ ಕೊಡುಗೆ, ಈ ಪವಿತ್ರ ಕ್ಷೇತ್ರದಲ್ಲಿ ನಾವು ನೀಡಬಹುದಾದ ಮಹತ್ವ ಕಾಣಿಕೆಯೆಂದರೆ ಅದರ ಪರಿಸರವನ್ನು ಸಂರಕ್ಷಿಸುವುದು' ಎಂದು ಇಲ್ಲಿಗೆ ಭೇಟಿ ನೀಡಿದ ಪ್ರವಾಸಿಗರೊಬ್ಬರು ಯಾಣದ ದೇವಾಲಯದಲ್ಲಿರುವ ದಾಖಲಿ ಪುಸ್ತಕದಲ್ಲಿ ಅಭಿಪ್ರಾಯ ದಾಖಲಿಸಿದ್ದಾರೆ. ಇಂಥ ಅನುಕರಣೀಯ ಕಾಣಿಕೆಗಳನ್ನು ನೀಡುವ ನಾಗರಿಕ ಪ್ರಜ್ಞೆ ಪ್ರವಾಸಿಗರಲ್ಲಿ ಎಂದು ಬರುತ್ತದೊ?




ಹಸಿದ ಚಿರತೆಗಳ ಪಾರಮ್ಯ


ಚಿರತೆಗಳ ತಂಗುದಾಣವಾಗಿರುವ ತುರುವನಹಳ್ಳಿ ಗುಡ್ಡ ಮತ್ತು ಮಲ್ಲಿದೇವಿಹಳ್ಳಿ ಗುಡ್ಡ


ಂಚಲು ಕಾಡಿನ ಚುರುಕಿನ ಚಿರತೆ 'ಪ್ಯಾಂಥೆರಾ ಪಾರ್ಡಸ್'





ಪಾರದರ್ಶಿಕೆ: ಇ. ಹನುಮಂತ ರಾವ್





ಕಳೆದ ನಾಲ್ಕು ತಿಂಗಳುಗಳಿಂದ ಕಡೂರು ತಾಲ್ಲೂಕಿನಲ್ಲಿ ಮನುಷ್ಯ ಮತ್ತು ಚಿರತೆಗಳ ನಡುವ ಭಾರೀ ಸಣಸಾಟಗಳು ನಡೆಯುತ್ತಿವೆ. ಹನ್ನೊಂದು ಚಿರತೆಗಳೂ ಐದು ಮನುಷ್ಯ ಜೀವಿಗಳೂ ಅಸು ನೀಗಿದ್ದು, ಏಳು ಜನ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಈಮಧ್ಯೆ ಚಿರತೆಗಳು ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಇಬ್ಬಂದಿಗೆ ಸಿಲುಕಿಸಿವೆ. ಅವುಗಳನ್ನು ರಕ್ಷಿಸಬೇಕೆ, ಅಥವಾ ಶಿಕ್ಷಿಸಬೇಕೆ?

■ ದಿನೇಶ ಪಟವರ್ಧನ್

ಸೂರ್ಯ ಅದೇ ತಾನೆ ಬಾನಂಚಿಗೆ ಸರಿದು ಕೆಂದೂಳು ಮುಸುಕುತ್ತದೆ. ಅಂಗಡಿಗಳ ಬಾಗಿಲು ಮುಚ್ಚುತ್ತವೆ. ಜನ ಮನೆ ಸೇರುತ್ತಾರೆ. ರಸ್ತೆಗಳು ಬಿಕೋ ಎನ್ನುತ್ತವೆ. ಒಂದು ರೀತಿ ಅಘೋಷಿತ ಕರ್ಫ್ಯೂ ವಿಧಿಸಿದ ಚಿತ್ರಣ ಎದ್ದು ಕಾಣುತ್ತದೆ.

ಜನರಲ್ಲಿ ಭಯ–ಭೀತಿ–ಆತಂಕ ಮೂಡಿದೆ. ಅಂದಿನ–ಇಂದಿನ ಘಟನೆಗಳ ಚರ್ಚೆ, ಮುಂದೇನು ಎಂಬ ಪ್ರಶ್ನೆ, ಬದುಕುವುದಾದರೂ ಹೇಗೆ ಎಂಬ ಯೋಚನೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಸುಮಾರು 100 ಚದರ ಕಿಲೊಮೀಟರ್ ಅಂತರದಲ್ಲಿರುವ ಹಳ್ಳಿಗಳಲ್ಲಿ ಕಂಡುಬರುತ್ತಿರುವ ಚಿತ್ರಣ ಇದು. ಕಳೆದ ಒಂದು ವರ್ಷದ ಹಿಂದೆಯೇ ಸಮಸ್ಯೆ ಕಾಣಿಸಿಕೊಂಡಿದ್ದರೂ ಅದರ ಗಂಭೀರತೆ ಭೀತಿ. ಸೃಷ್ಟಿಯಾದದ್ದು ನಾಲ್ಕು ತಿಂಗಳ ಹಿಂದೆ.

ಕಡೂರು ತಾಲ್ಲೂಕು ಬಯಲು ಪ್ರದೇಶ. ಅಲ್ಲಲ್ಲಿ ಒತ್ತೊತ್ತಾಗಿ ನಿಂತ ಬೆಟ್ಟಗುಡ್ಡಗಳು. ಗಿಡ–ಮರಗಳಿಲ್ಲದ ಬಂಡೆ ಕಲ್ಲುಗಳು. ತೆಂಗಿನ ತೋಟಗಳ ನಡುವೆ ತರಕಾರಿ ಬೆಳೆ. ಜಾಲಿಮರದ ತೆಳ್ಳಕಾಡು. ಅಲ್ಲೊಂದು–ಇಲ್ಲೊಂದು ಗಿಡ–ಗಂಟಿ, ಬೇವಿನ ಮರಗಳು. ಇದು ಇಲ್ಲಿನ ಸಾಮಾನ್ಯ ದೃಶ್ಯ.

ತುರುವನಹಳ್ಳಿ, ದಾಸರಹಳ್ಳಿ, ಮಲ್ಲೇಶ್ವರ, ಕಲ್ಲಾಪುರ, ಮಚ್ಚೇರಿ, ಮಲ್ಲಿದೇವಿಹಳ್ಳಿ, ಕಾನಗೊಂಡನಹಳ್ಳಿ, ಬಿಳುವಲ, ಹಿರೇನಲ್ಲೂರು, ಮೇಲನಹಳ್ಳಿ, ಆಲಗಟ್ಟಿ, ನಂಜಪ್ಪನಹಳ್ಳಿ, ತಂಗಲಿ, ಇವು ಕಡೂರಿಗೆ ಸೇರಿದ ಪ್ರದೇಶಗಳು. ಸಮಸ್ಯೆಯ ತಾಣಗಳು. ತುರುವನಹಳ್ಳಿ ಸಮಸ್ಯೆಯ ಕೇಂದ್ರ ಬಿಂದು.

ಬಂಡೆಕಲ್ಲುಗಳಿಂದ ಆವರಿಸಿದ ಗುಡ್ಡಗಳು ಚಿರತೆ ವಾಸಿಸಲು ಪ್ರಶಸ್ತವಾದ ಸ್ಥಳಗಳು. ಅದರಂತೆ ಕಳೆದ 10–15 ವರ್ಷಗಳಿಂದ ಈ ಭಾಗದಲ್ಲಿ 20 ಕ್ಕೂ ಅಧಿಕ ಚಿರತೆಗಳು ನೆಲೆಸಿವೆ. ಅವುಗಳಿಗೆ ಬೇಕಾದ, ವನ್ಯಮೃಗಗಳು ಇಂದು ಈ ಭಾಗದಲ್ಲಿ ಸಿಗುತ್ತಿಲ್ಲ. ನಾಯಿ, ದನಕರು, ಕುರಿಗಳನ್ನು ತಿಂದೇ ಬದುಕಬೇಕು.


ಹಳಿಯಂಚಿಗೆ ಯಮದೂತ

ತುರುವನಹಳ್ಳಿಯ ಸಮೀಪ ನಿರ್ವಾಣ ಸ್ವಾಮಿ ಬೆಟ್ಟದಲ್ಲಿ ಕಳೆದ ಎರಡು ವರ್ಷಗಳಿಂದ ಕಲ್ಲು ಬಂಡೆ ಒಡೆದು ಸಾಗಿಸುವ ಕೆಲಸ ನಿರಂತರ ನಡೆಯುತ್ತಿದೆ. ರೈಲ್ವೆ ಹಳಿ ಪರಿವರ್ತನೆ ಕೆಲಸಕ್ಕೆ ತಮಿಳುನಾಡಿನಿಂದ ಸಾಕಷ್ಟು ಸಂಖ್ಯೆಯಲ್ಲಿ ಕೆಲಸಗಾರರು ಬಂದಿದ್ದು, ಈಗ ಕೆಲವರು ಈ ಹಳ್ಳಿಗಳಲ್ಲೇ ನೆಲೆಸಿದ್ದಾರೆ.

ಕೆಲಸ ನಡೆಯುತ್ತಿದ್ದ ದಿನಗಳಲ್ಲಿ ಒಂದು ವರ್ಗದ ಜನ ವೈದ್ಯಾಪ್ಯ, ರೋಗ ರುಜಿನಗಳಿಂದ ಸತ್ತ ಜನರ ಮೃತದೇಹವನ್ನು ಸರಿಯಾಗಿ ಸುಡದೆ, ಹೂಳದೆ ತೆರೆದ ಜಾಗದಲ್ಲಿ ಬಿಸಾಡುವ ಪದ್ಧತಿ ಇತ್ತಂತೆ. ಈರೀತಿ ಬಯಲಲ್ಲಿ ದೊರೆತ ಶವಗಳು ಚಿರತೆಗಳಿಗೆ ಆಹಾರ ಆಗುತ್ತಿತ್ತು. ಮನುಷ್ಯ ಮಾಂಸದ ರುಚಿ ಗೊತ್ತಾಗಿರಬೇಕು. ಆ ಮಧ್ಯೆ ಹಳ್ಳಿಗಳಿಗೆ ದಾಳಿ ಇಟ್ಟು ಕುರಿ, ದನಗಳನ್ನು ಚಿರತೆಗಳು ತಿಂದ ನಿದರ್ಶನಗಳೂ ಇದೆ. ಆದರೆ ಸಮಸ್ಯೆ ಗಂಭೀರವಾಗಿದ್ದು ಈ ಕೆಲವು ಚಿರತೆಗಳು ಮನುಷ್ಯನ ಮೇಲೆ ದಾಳಿ ಇಡಲು ಆರಂಭಿಸಿದ ಮೇಲೆ. ಅಂದರೆ 1995ರ ಜನವರಿಯಿಂದ.

ಚಿರತೆ ಜನರ ಮೇಲೆ ದಾಳಿ ನಡೆಸುತ್ತಿರುವ ವಿಚಾರ ಅರಣ್ಯ ಇಲಾಖೆಗೆ ಆಗಲೇ ಮುಟ್ಟಿದ್ದರೂ ಅದನ್ನು ಅವರು ನಂಬಿರಲಿಲ್ಲ. ಬೇರೆ ಪ್ರಾಣಿಗಳ ಉಪಟಳ ಇರಬಹುದು ಎಂದು ಶಂಕಿಸಿದ್ದರು. ದೂರುಗಳು ಬರುತ್ತಲೇ ಇದ್ದವು. 1995ರ ನವೆಂಬರ್ 19 ರಂದು ನಡೆದ ಘಟನೆ ಅರಣ್ಯ ಇಲಾಖೆಯ ಎಚ್ಚೆತ್ತು ಕೂರುವಂತೆ ಮಾಡಿತು.

ಕಲ್ಲು ಬಂಡೆ ಒಡೆಯಲು ಬಂದು' ತುರುವನ ಹಳ್ಳಿಯಲ್ಲಿ ನೆಲೆಸಿರುವ ನಾಗರಾಜ್‌ರವರ ಐದು ವರ್ಷದ ಬಾಲಕಿಯನ್ನು ರಾತ್ರಿ ಏಳು ಗಂಟೆ ಸಮಯದಲ್ಲಿ ಚಿರತೆ ಅಪಹರಿಸಿದ ಘಟನೆ ಜನರಲ್ಲಿ ಭಯದ ಬೀಜಬಿತ್ತಿತು. ಬಾಲಕಿ ತೊಟ್ಟ ಉಡುಗೆ ದೊರೆಯಿತೆ ಹೊರತು ಶವ ಸಿಗಲೇ ಇಲ್ಲ. ಪರಿಸ್ಥಿತಿಯ ಭೀಕರತೆ ಅರಿತ ಅರಣ್ಯ ಅಧಿಕಾರಿಗಳು ಬನ್ನೇರುಘಟ್ಟದಿಂದ 5 ಬೋನು ತರಿಸಿ ಆಯ್ದ



ಚಿರತೆಗಳಿಗೆ ಕಿರುಕುಳ: ಗ್ರಾಸೈಟ್ ಗಣಿಗಾರಿಕೆ

ಸ್ಥಳಗಳಲ್ಲಿ ಇಟ್ಟರು. ನಾಯಿ, ಆಡು, ಕಟ್ಟಿ ಚಿರತೆ ಬರುತ್ತದೆಂದು ಕಾದು ಕುಳಿತರು. ಚಿರತೆ ಈ ಸಂಚಿಗೆ ಬಲಿಯಾಗಲಿಲ್ಲ. ಡಾ. ಪ್ರಫುಲ್ ಚಂದ್, ಸುಶೀಲ್ ಕುಮಾರ್, ಇಕ್ಷುಧನ್ಯ, ಸವ್ಯಸಾಚಿ ಇವರನ್ನು ಒಳಗೊಂಡ ಬೇಟೆ ತಂಡವನ್ನು ಇಲಾಖೆ ರಚಿಸಿತು. ಒಂದೆರಡು ದಿನದಲ್ಲಿ ಕಾರ್ಯಾಚರಣೆ ಮುಗಿಯಬಹುದೆಂದು ಯೋಚಿಸಿತ್ತು ಈ ತಂಡ. ಆದರೆ ಆ ರೀತಿ ಆಗಲೇ ಇಲ್ಲ.

ತಾಯಿಗೆ ಬದಲು ಮರಿ ಬಲಿ

ಕಳೆದ ಡಿಸೆಂಬರ್ 8ರಂದು ವೃದ್ಧೆಯೊಬ್ಬಳನ್ನು ಚಿರತೆ ಕೊಂದುಹಾಕಿತು. ಈ ಘಟನೆ ನಡೆದ 10 ಇಲ್ಲವೆ ತೀವ್ರ ಗಾಯವಾಗಿ ಘಾಸಿಗೊಂಡಾಗ, ಇವು ಈ ರೀತಿ ವರ್ತಿಸುತ್ತವೆ. ಸಾಮಾನ್ಯವಾಗಿ ತನಗೆ ಎಳೆದೊಯ್ಯಲು ಸಾಮರ್ಥ್ಯ ಇರುವ, ಕಡಿಮೆ ತೂಕದ ಮನುಷ್ಯರ ಮೇಲೆ ಇವು ಹೆಚ್ಚಾಗಿ ದಾಳಿ ಇಡುತ್ತವೆ. ಕುತ್ತಿಗೆ ಮೇಲೆ ಹಠಾತ್ ಎರಗಿದಾಗ ತಪ್ಪಿಸಿಕೊಳ್ಳುವುದು ಹಾಗಿರಲಿ ಕಿರುಚಾಡಿ ಇತರರ ಗಮನ ಸೆಳೆಯುವುದೂ ಅಸಾಧ್ಯವಾಗುತ್ತದೆ.

ಉದ್ರಿಕ್ತ ಜನರ ದಾಳಿ

ಜನವರಿ 14ರಂದು ಸಂಕ್ರಾಂತಿಯ ದಿನ ಒಬ್ಬ ಬಾಲಕನನ್ನು ಚಿರತೆ ಸಾಯಿಸಿದಾಗ, ಜನರ ಸಿಟ್ಟು,

ಚಿರತೆ ದಾಳಿಯ ಚರಿತೆ

ಕಳೆದ ನವಂಬರ್ 19ರಂದು (ಶ್ರೀಮತಿ ಇಂದಿರಾ ಗಾಂಧಿಯವರ ಜನ್ಮ ದಿನದಂದು) ಚಿಕ್ಕಮಗಳೂರಿನ ಕಡೂರು ತಾಲ್ಲೂಕಿನಲ್ಲಿ ಮೊದಲ ಬಾರಿಗೆ ಚಿರತೆ ಮನುಷ್ಯರನ್ನು ಬಲಿ ತೆಗೆದುಕೊಳ್ಳಲು ಆರಂಭಿಸಿತು. ಅದಕ್ಕಿಂತ ಮೊದಲು ತುರುವನ ಹಳ್ಳಿಯ ವೃದ್ಧೆ ವೆಂಕಟಮ್ಮನ ಮೇಲೆ ಮತ್ತು ಜೂನ್ 18ರಂದು ಅದೇ ಊರಿನ ನಿರಂಜನ ಮೂರ್ತಿ ಎಂಬ ನಾಲ್ಕು ವರ್ಷದ ಹಸುಳೆಯ ಮೇಲೆ ಚಿರತೆ ಎರಗಿತ್ತಾದರೂ ಪ್ರಾಣಾಪಾಯವಾಗಿರಲಿಲ್ಲ. ಇಲ್ಲಿ ಕೇವಲ ಜೀವ ತೆತ್ತವರ ವಿವರಗಳನ್ನಷ್ಟೆ ಪಟ್ಟಿ ಮಾಡಲಾಗಿದೆ:

■ ನವಂಬರ್ 19, 1995: ತುರುವನಹಳ್ಳಿ ಗ್ರಾಮ. ಸಂಜೆ ಏಳು ಗಂಟೆಗೆ 5 ವರ್ಷದ ಕವಿತಾ ಕಕ್ಕಸ್ಸಿಗೆ ಹೋಗಬೇಕೆಂದಳು. ತಾಯಿ ಪಾಪಮ್ಮ ಮಗುವನ್ನು ಕೊಳವೆ ಬಾವಿ ಬಳಿ ತಂದು ಕೂರಿಸಿದಳು. ಮಬ್ಬು ಕತ್ತಲಲ್ಲಿ ನಾಯಿ ಬಂದಂತಾಯಿತು. ತಾಯಿಯ ಎದುರೇ ಮಗುವಿನ ಕತ್ತಿಗೆ ಚಿರತೆ ಬಾಯಿ ಹಾಕಿ ಎಳೆದೊಯ್ದಿತು. ಪಾಪಮ್ಮ ಹೌಹಾರಿ ಜ್ಞಾನತಪ್ಪಿ ಕುಸಿದು ಬಿದ್ದಳು. ಜನ ಬಂದು ನೋಡಿದಾಗ 50 ಮೀಟರ್ ದೂರದಲ್ಲಿ ಚಿಡ್ಡಿ ಸಿಕ್ಕಿತು. ಮಗುವಿನ ಶವ ಮಾತ್ರ ದೊರಕಲೇ ಇಲ್ಲ.

■ ಡಿಸೆಂಬರ್ 8, 1995: ಕಡೂರಿನ ಲಕ್ಷ್ಮಮ್ಮ ತುರುವನಹಳ್ಳಿ ತೆಂಗಿನ ತೋಟದ ಅವರೆಕಾಯಿ ಫಸಲು ಕಾಯುತ್ತ ಬೆಳಗಿನ ಛಳಿ ಕಾಯಿಸುತ್ತಾ ಕುಳಿತಿದ್ದರು. ಅಕ್ಕ-ಪಕ್ಕದ ಹೊಲಗಳಲ್ಲೂ ಜನ ಇದ್ದು, ಚಿರತೆ ಅತ್ತ ಬರುವುದನ್ನು ನೋಡಿ ಕೂಗಿದ್ದರು. ಆದರೆ ಅಜ್ಜಿಗೆ ತಿಳಿಯಲಿಲ್ಲ. ಚಿರತೆ ಎಗರಿ ಲಕ್ಷ್ಮಮ್ಮನನ್ನು ಎಳೆದೊಯ್ದಿತು. ರಕ್ತದ ಕಲೆ ಆಧರಿಸಿ ಹುಡುಕಿದಾಗ 50 ಅಡಿ ದೂರದಲ್ಲಿ ಅರೆ ತಿಂದ ಶವ ಪತ್ತೆ ಆಯಿತು.

■ ಜನವರಿ 7, 1996: ಕಡೂರು-ಬೀರೂರು ಬಿ.ಹೆಚ್. ರಸ್ತೆ. ಮುಖ್ಯ ರಸ್ತೆಯಿಂದ 100 ಅಡಿ ದೂರದಲ್ಲಿ ಮೂರು ಮನೆಗಳು. ರಾತ್ರಿ 7-15ರ ಸಮಯ. ವಿದ್ಯುತ್ ಇರಲಿಲ್ಲ. ಮನೆಗೆ ಬಂದಿದ್ದ ಅಕ್ಕ ಶಾರದಮ್ಮನನ್ನು ಕಳುಹಿಸಲು 12 ವರ್ಷದ ಮುದಿಯಪ್ಪ, 5 ವರ್ಷದ ಗಿರಿಯಪ್ಪ ಒಟ್ಟಾಗಿ ಹೊರಟರು. ಮನೆಯಿಂದ 10 ಹೆಜ್ಜೆ ನಡೆದಿರ ಬಹುದು. ಹಿಂದೆ ಇದ್ದ ಗಿರೀಶ, ಅಣ್ಣನನ್ನು ಹಿಂದೆ ತಳ್ಳಿ ಮುಂದೆ ಬಂದಿದ್ದ. ಹೊಂಚು ಹಾಕಿ ಕುಳಿತಿದ್ದ ನರಭಕ್ಷಕ ಚಿರತೆ ಹಠಾತ್ ಎರಗಿತು. ಗಿರೀಶ 'ಅಣ್ಣಾ' ಎಂದದ್ದಷ್ಟೇ ಕೇಳಿತು. ಮುದಿಯಪ್ಪ ಕೂಗಿಕೊಂಡ. ಜನ ಬಂದರು. ಹುಡುಕಿದರು. 50 ಮೀಟರ್ ದೂರದ ಕಣಿವೆ ಬಳಿ ಜಾಲಿಮರದ ಪೊದೆಯಲ್ಲಿ, ಶವ ಒಗೆದು ಚಿರತೆ ಓಡಿತ್ತು.

■ ಜನವರಿ 14, 1996: ಸಂಜೆ 7 ಗಂಟೆ. ಬೀರೂರು ಬಳಿ ಅಜ್ಜಂಪುರ ರಸ್ತೆಯಲ್ಲಿನ ಸ್ಮಶಾನದ ಬಳಿ ಸಾಮೂಹಿಕ ಒಕ್ಕಲಾಟ ನಡೆದಿತ್ತು. ಮನೆಯಲ್ಲಿ ರಾಗಿ ಕಾಯಲೆಂದು ತಮ್ಮ 13 ವರ್ಷದ ಮಗ ಶ್ರೀನಿವಾಸನನ್ನು ಬಿಟ್ಟು, ಶಿವಾಜಿನಗರದ ವಿಠೋಜಿರಾವ್ ಪತ್ನಿಯೊಂದಿಗೆ ಆಟಕ್ಕೆ ಬಂದರು. ಚಿರತೆ ಬಂದು ಬಾಲಕನನ್ನು ತನ್ನ ಊಟಕ್ಕಾಗಿ ಎಳೆದೊಯ್ದಿತ್ತು. ಎಂಟು ಗಂಟೆಗೆ ಬಂದು ತಂದೆ ನೋಡಿದಾಗ ಮಗ ನಾಪತ್ತೆ: ಬೆಳಿಗ್ಗೆ ಶೋಧಿಸಿದಾಗ ಕಾಲುವೆಯೊಂದರ ಪೊದೆಯಲ್ಲಿ ಶವ ಸಿಕ್ಕಿತು.

■ ಫೆಬ್ರುವರಿ 10, 1996: ಯಗಡಿ ಬಳಿಯ ಆಲಗಟ್ಟ. ರಾತ್ರಿ 1-30. ಏನೋ ಪ್ರಾಣಿ ಬಂದಂತಾಯಿತು. ತಂದೆ ಲಾಲ್ಯಾ ನಾಯ್ಕ ಗಾಬರಿಯಿಂದ ಎದ್ದಾಗ ಚಿರತೆ ಭುಜಕ್ಕೇ ಬಾಯಿ ಹಾಕಿತು. ತಕ್ಷಣ ಕಿರುಚಿದ. ಒಳಗೆ ಮಲಗಿದ್ದ ಮಗ ತಿಮ್ಮಾನಾಯ್ಕ ಹೊರಬಂದಾಗ ಆತನ ಕಾಲಿಗೆ ಬಾಯಿ ಹಾಕಿತು. ಜೋರಾಗಿ ಕೂಗಿದಾಗ ಜನ ಬಂದರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದರು. ಅದೇ ತಿಂಗಳ 26ರಂದು ವೃದ್ಧ ಲಾಯ್ಲನಾಯ್ಕ ಅಸುನೀಗಿದ.

■ ಫೆಬ್ರುವರಿ 22, 1996. ಹಾಡು ಹಗಲು. ಮಲ್ಲಿದೇವಿ ಹಳ್ಳಿ. ಕುರಿಕಾಯಲು ಗಂಗಾಧರ (12) ಹೋಗಿದ್ದಾಗ ದಾಳಿ ನಡೆಸಿದ ಚಿರತೆ ಆತನ ಕಿವಿ ಹರಿದು, ಮುಖಕ್ಕೆ ತಿವಿದಿದೆ. ಕಬ್ಬಿನ ಗದ್ದೆಯಲ್ಲಿ, ಇದ್ದ ಜನ ಕೂಗಿದಾಗ ಚಿರತೆ ಪರಾರಿ ಆಗಿದೆ.

ಇದಾಗಿ ಎರಡೇ ಗಂಟೆಗಳ ನಂತರ ಮಚ್ಚೇರಿಯ ಬೇಲೂರಪ್ಪ ಸೈಕಲ್ ಮೇಲೆ ಹೋಗುತ್ತಿದ್ದಾಗ ಮುಸ್ಸಂಜೆ ಚಿರತೆ ಎಗರಿ ಗಾಯಗೊಳಿಸಿತು. ಮಾರ್ಚ್ 1ರಂದು ಮಧ್ಯಾಹ್ನ 3 ಗಂಟೆಗೆ ಮೇಗಲಹಳ್ಳಿ ಬಳಿ ಭೈರಪ್ಪ (35)ನವರ ಮೇಲೆ ಹಿಂಬದಿಯಿಂದ ಚಿರತೆ ಜಿಗಿದು ಗಾಯಗೊಳಿಸಿದೆ.

ಒಟ್ಟು 5 ಜನರನ್ನು ಕೊಂದಿರುವ ಚಿರತೆ 7 ಮಂದಿಗೆ ಗಾಯಗೊಳಿಸಿದೆ. ಸತ್ತವರಲ್ಲಿ ಮೂವರು ಮಕ್ಕಳು; ಇನ್ನಿಬ್ಬರು ವೃದ್ಧರು. ಮೃತರ ಕುಟುಂಬಕ್ಕೆ ಅರಣ್ಯ ಇಲಾಖೆ ತಲಾ 25 ಸಾವಿರ ರೂಪಾಯಿ ಪರಿಹಾರ ನೀಡಿದ್ದರೆ, ಗಾಯಗೊಂಡವರಿಗೆ ತಲಾ 1000 ರೂಪಾಯಿ ಕೊಟ್ಟಿದೆ.


ನದಲ್ಲಿ ಬೇಟೆಗಾರರ ತಂಡಕ್ಕೆ ಮೊದಲ ಯಶ ಸ್ಸಿತು. ಎರಡು ವರ್ಷದ ಮರಿಗಳಿರಡು ತಮ್ಮ ಯಿಯೊಂದಿಗೆ ಆಲಿದಾಡುತ್ತಿದ್ದಾಗ 'ಶಿಕಾರಿ' ಡ ಹೆಣ್ಣು ಚಿರತೆಗೆ ಗುರಿ ಇಟ್ಟಿತು. ಗುರಿ ಯಿಗೆ ಬದಲು ಮರಿಗೆ ಬಿದ್ದು ಅದು ಪ್ರಾಣ ಬಿಟ್ಟಿತು. ಜನವರಿ ಐದರಂದು ಜಾಮೂನು ಳುಗುದ್ದದ ಬಳಿ 10 ವರ್ಷ ಪ್ರಾಯದ, ಬೇಟೆ ಮರ್ಥ್ಯ ಇಲ್ಲದ ಮತ್ತೊಂದು ಗಂಡು ರತೆಯನ್ನು ಕೊಂದರು.

ಒಂದೆಡೆ ಜನರನ್ನು ಕಳ್ಳ ಚಿರತೆ ಹೊಂಚು ಹಾಕಿ ಣಕ್ಷ್ಮತನದಿಂದ ಬಲಿ ತೆಗೆದುಕೊಳ್ಳುತ್ತಾ ಹೋದರೆ, ಮತ್ತೊಂದೆಡೆ ಶಿಕಾರಿ ತಂಡವೂ ಚಿರತೆಗಳನ್ನು ಹತ್ಯೆ ಮಾಡುತ್ತಾ ಸಾಗಿತು. ಇದೊಂದು ರೀತಿ ದಾಳಿ-ಪ್ರತಿದಾಳಿ ನಡೆಯಿತು. ಮಾರ್ಚ್ ತಿಂಗಳ ಮಧ್ಯಭಾಗದ ವೇಳೆಗೆ 5 ಮರಿ ಸೇರಿದಂತೆ 11 ಚಿರತೆ ಹತ್ಯೆಗೆ ಒಳಗಾದರೆ, ಇದೇ ಅವಧಿಯಲ್ಲಿ ಐದು ಮಂದಿ ಅಮಾಯಕರು ಸತ್ತು, ಮತ್ತೆ ಏಳು ಜನ ಗಾಯಗೊಂಡರು. ಸತ್ತವರಲ್ಲಿ ಮಕ್ಕಳೇ ಅಧಿಕ.

ಅರಣ್ಯ ಇಲಾಖೆಯ ಪರಿಣತರ ಪ್ರಕಾರ, ಚಿರತೆಗಳು ನರಭಕ್ಷಕ ಆಗುವುದು ವಿರಳ. ತೀರಾ ವಯಸ್ಸಾಗಿ ಬೇಟೆ ಸಾಮರ್ಥ್ಯ ಕಳೆದುಕೊಂಡಾಗ, ಆಕ್ರೋಶ ಸ್ಫೋಟವಾಯಿತು. ಮರುದಿನ ಶಿವಮೊಗ್ಗದಿಂದ ಬರುತ್ತಿದ್ದ ಉಪ ಅರಣ್ಯ ಸಂರಕ್ಷಣಾಧಿಕಾರಿ ನಾರಾಯಣ ಸ್ವಾಮಿಯವರ ಮೇಲೆ ಜನ ದಾಳಿ ಮಾಡಿದರು. 200ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದ ಅವರು ಕಾರನ್ನು ತಡೆದು ಚಕ್ರದ ಗಾಳಿಬಿಟ್ಟರು. ಆ ಉದ್ರಿಕ್ತ ಸ್ಥಿತಿಯಲ್ಲಿ ತುಂಬ ಸಂಯಮದಿಂದ ವರ್ತಿಸಿದ ಈ ಅಧಿಕಾರಿ ಜನ ಪ್ರತಿನಿಧಿಗಳ ಸಹಕಾರದಿಂದಲೇ ಗುಂಪಿನಿಂದ ಹೊರಬಂದು ಪೊಲೀಸರಿಗೆ ಸುದ್ದಿ ಮುಟ್ಟಿಸಿದರು. ಪರಿಸ್ಥಿತಿ ಪ್ರಕ್ಷುಬ್ಧವಾಗಿತ್ತು. ಇಬ್ಬರು ಸಿಬ್ಬಂದಿ ಜನರ ಸಿಟ್ಟಿಗೆ ಬಲಿಯಾಗಿ ಪೆಟ್ಟುತಿಂದರು.

ಅರಣ್ಯಾಧಿಕಾರಿಗಳೂ ಪೊಲೀಸರೂ ವನ್ಯರಕ್ಷಣಾ ನಿಯಮವನ್ನು ಸಡಿಲಿಸಿದರು. ಬಂದೂಕು ಹೊಂದಿರುವ ರೈತರು ಚಿರತೆ ಕಂಡರೆ ಗುಂಡಿಕ್ಕಿ ಕೊಲ್ಲಬಹುದು ಎಂದು ಆದೇಶಿಸಿದರು. ಮರುದಿನ ಬೆಳಿಗ್ಗೆ ಶಿಕಾರಿ ತಂಡ ಬಾಲಕನನ್ನು ಕೊಂದ ಸ್ಥಳದಿಂದ ಸ್ವಲ್ಪವೇ ಅಂತರದಲ್ಲಿ ಎರಡು ಹೆಣ್ಣು ಚಿರತೆಗಳನ್ನು ಕೊಂದುಹಾಕಿತು. ಈ ಫಲಿತಾಂಶ ಜನರಲ್ಲಿದ್ದ ಆಕ್ರೋಶವನ್ನು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡಿತು. ಅರಣ್ಯ ಇಲಾಖೆ ಏನೂ ಮಾಡುತ್ತಿಲ್ಲ ಎಂಬ ಆರೋಪವೂ ತಣ್ಣಗಾಯಿತು.

ಮೊದಲ ಚಿರತೆಯನ್ನು ಕೊಂದಾಗ ಕಡೂರಿನಲ್ಲಿ ಶಾಸಕರ ನೇತೃತ್ವದಲ್ಲಿ ನೂರಾರು ಜನ ಮೆರವಣಿಗೆ ನಡೆಸಿ, ಚಿರತೆಗೆ 'ರಾಜ ಮಾರ್ಯಾದೆ' ಮೂಲಕ ಅಂತಿಮ ನಮನ ಸಲ್ಲಿಸಿದ್ದರು. ಆದರೆ ಈ ಬಾರಿ ಶಾಂತಿ– ಸುವ್ಯವಸ್ಥೆ ದೃಷ್ಟಿಯಿಂದ ಅಧಿಕಾರಿಗಳು



ಅಧಿಕಾರಿಗಳ ಗುಂಡಿಗೆ ಗುಂಡಿಗೆ ಒಡ್ಡಿ ಸತ್ತ ಚಿರತೆ


ಅದಕ್ಕೆ ಅವಕಾಶ ನೀಡಲಿಲ್ಲ.

ಗುಂಡಿಗೆಯ ಬಿಸಿ ರಕ್ತವಿದಕೋ

ಜನ ಇನ್ನಷ್ಟು ಚಿರತೆಗಳ ಬಲಿ ಕೇಳುತ್ತಿದ್ದರು. ಆದರೆ ಕೊಲ್ಲುವ ಬದಲು ಜೀವಂತ ಹಿಡಿದರೆ ಹೇಗೆ? 'ಚಿರತೆ ಹಿಡಿಯಬೇಕೆಂಬುದೆ ನಮ್ಮ ಬಯಕೆ; ಆದರೆ ಜನರ ಒತ್ತಡದ ಮುಂದೆ ನಿಸ್ಸಹಾಯಕರಾಗಿದ್ದೇವೆ. ಒಂದೆಡೆ ಜನರ ಪ್ರಾಣ ಉಳಿಸಬೇಕು, ಮತ್ತೊಂದೆಡೆ ಚಿರತೆಗಳ ಸಂತತಿ ರಕ್ಷಿಸಬೇಕು- ಈ ಸಂದಿಗ್ಧ ಸ್ಥಿತಿ ನಮ್ಮದು' ಎಂದು (ಪ್ರಾದೇಶಿಕ) ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಎನ್. ನಾರಾಯಣಸ್ವಾಮಿ ಅನಿವಾರ್ಯವಾಗಿ ಚಿರತೆ ಕೊಲ್ಲುವ ಕೆಲಸಕ್ಕೆ ಕೈ ಹಾಕಿದ್ದೇವೆ ಎಂದು ನೊಂದು ಹೇಳುತ್ತಾರೆ.

ಹಿಡಿಯಬಯಸಿದರೂ ಹಿಡಿಯುವುದು ಹೇಗೆ? ಚಿತ್ರದುರ್ಗದಿಂದ ಕರಡಿ ಹಿಡಿಯುವ 20 ಜನರ ತಂಡವೊಂದು ಬಂತು. ಎರಡು ವಾರಗಳ ಕಾಲ ಅವರು ಬೀಡುಬಿಟ್ಟಿದ್ದರು. ಬಲೆಬೀಸಿ ಸಾಕಷ್ಟು ಪ್ರಯತ್ನ ನಡೆಸಿದರು. ಒಂದು ದಿನ ಚಿರತೆಯನ್ನು ಅದರ ಗುಹೆ ಬಳಿ ಜೀವಂತ ಹಿಡಿಯಬೇಕೆಂದು ಈ ತಂಡ ಬಯಸಿತ್ತು. ಗುಹೆಯ ಬಾಯಿಗೆ ಘಾಟು ಹೊಗೆ ತುಂಬಿದರು. ಚಿರತೆ ಹೊರಕ್ಕೆ ಬಂದು ಬೋನಿನೊಳಕ್ಕೆ ಜಿಗಿಯುವ ಬದಲು ಒಳಕ್ಕೇ ಉಸಿರುಗಟ್ಟಿ ಪ್ರಾಣ ಬಿಟ್ಟಿತು.

"ಎಲ್ಲ ಚಿರತೆಗಳನ್ನು ಮನಬಂದಂತೆ ಕೊಲ್ಲುವ



ಚಿರತೆ ಹತ್ಯೆಗಳ ಚರಿತೆ

ಮೂರು ತಿಂಗಳಲ್ಲಿ ಹನ್ನೊಂದು ಬಲಿ

■ ಡಿಸೆಂಬರ್ 18, 1995: ತುರುವನಹಳ್ಳಿ ಗುಡ್ಡದ ಬಳಿ ಎರಡು ವರ್ಷದ ಮರಿಗಳ ಜೊತೆ ಹೆಣ್ಣು ಚಿರತೆ ಆಟ ಆಡಿಕೊಂಡಿತ್ತು. ತಾಯಿಗೆ ಇಟ್ಟು ಗುರಿ ಎರಡು ವರ್ಷದ ಮರಿಯನ್ನು ಬಲಿ ತೆಗೆದು ಕೊಂಡಿತು.

■ ಜನವರಿ 1, 1996: ಜಾಮೂನುಕಲ್ಲು ಗುಡ್ಡದ ಬಳಿ ಹೆಣ್ಣು ಚಿರತೆಯೊಂದಿಗೆ ಗಂಡು ತಿರುಗಾಡುತ್ತಿತ್ತು. ಗುರಿ ಇಟ್ಟಾಗ 10 ವರ್ಷ ಪ್ರಾಯದ ಗಂಡು ಸಾವಪ್ಪಿತು. ಹಲ್ಲು, ಉಗುರು ಸವೆದಿತ್ತು. ಗುಂಡಿನ 32 ಚರೆಗಳು ದೊರೆತಿದ್ದು ಹಿಂದೆ ಇದಕ್ಕೆ ಗಾಯವಾದ ಲಕ್ಷಣ ಕಂಡು ಬಂದಿತು.

■ 15–2–1996 ಬೀರೂರು ಸ್ಮಶಾನದ ಬಳಿ ತೆಂಗಿನ ತೋಟದಲ್ಲಿ ಬೆಳಗಿನ ಜಾವ ಅರ್ಧಗಂಟೆ ಅಂತರದಲ್ಲಿ ಸುಮಾರು ಆರು ವರ್ಷದ ಎರಡು ಹೆಣ್ಣು ಚಿರತೆಗಳನ್ನು ಗುಂಡಿಕ್ಕಿ ಕೊಲ್ಲಲಾಯಿತು.

■ ಫೆಬ್ರುವರಿ 21. 1996. ಮರಿಯೊಂದಿಗೆ ಆಟ ಆಡಿಕೊಂಡಿದ್ದ ತಾಯಿಗೆ ಗುರಿ ಇಟ್ಟಾಗ ಎರಡು ವರ್ಷದ ಮರಿ ಅಸು ನೀಗಿತು. ತಾಯಿ ಪರಾರಿ.

■ ಫೆಬ್ರುವರಿ 26, 1996: ಹುಲ್ಲೇಹಳ್ಳಿಯ ತೆಂಗಿನತೋಟ. ರಾತ್ರಿ 10–30ರ ಸಮಯ. ಎರಡು ಮರಿಗಳು ಆಟವಾಡುತ್ತಿದ್ದವು. ಜನಕ್ಕೆ ಸುಳಿವು ಸಿಕ್ಕಿತ್ತು. ಲೋಕೇಶ್ ಎಂಬಾತ ದೊಣ್ಣೆಯಿಂದ ಒಂದು ವರ್ಷದ ಚಿರತೆ ಮರಿಯ ತಲೆಗೆ ಬಡಿದು ಕೊಂದುಹಾಕಿದ. ಹೇಗೊ ಮತ್ತೊಂದು ತಪ್ಪಿಸಿಕೊಂಡಿತು.

■ ಫೆಬ್ರುವರಿ 27, 1996: ಅದೊಂದು ಅಮಾನುಷ ಘಟನೆ. ಹಾಡು ಹಗಲು. ಏಳರ ನಡು ಪ್ರಾಯದ ಹೆಣ್ಣು ಚಿರತೆ ಗುಹೆಯಲ್ಲಿತ್ತು. ಬೇಟೆ ಗಾರರು ಗುಹೆ ಬಾಗಿಲಿಗೆ ಬಲೆ ಬಿಗಿದು ಬೆರಣಿ ಇಟ್ಟು ಬೆಂಕಿ ಹಾಕಿ ಮೆಣಸಿನಕಾಯಿ ಸುರಿದರು. ಘಾಟಿನ ಹೊಗೆ ತಾಳದೆ ಚಿರತೆ ಉಸಿರುಗಟ್ಟಿ ಮೃತಪಟ್ಟಿತು.

■ ಮಾರ್ಚ್ 4, 1996: ಜಾಮೂನುಕಲ್ಲು. ಗುಡ್ಡದ ಬಳಿ 7 ವರ್ಷದ ಗಂಡು ಚಿರತೆಯನ್ನೂ, ಎರಡು ದಿನಗಳ ನಂತರ ಅಂಥದೇ ಮತ್ತೊಂದು ಚಿರತೆಯನ್ನು ಕಾನಹಳ್ಳಿ ಗುಡ್ಡದ ಬಳಿಯೂ ಕೊಲ್ಲಲಾಯಿತು.

ಈ ಮಧ್ಯೆ ನಾಲ್ಕು ತಿಂಗಳ ಹಿಂದೆ ಎರಡು ಪುಟ್ಟ ಚಿರತೆ ಮರಿಗಳನ್ನು (ಒಂದು ತಿಂಗಳ ಹಸುಳೆಗಳು) ಹಿಡಿದು ತ್ಯಾವರೇಕೊಪ್ಪಕ್ಕೆ ಸಾಗಿಸಲಾಗಿತ್ತು. ಅವೂ ಸಾವಪ್ಪಿವೆ.

ಒಟ್ಟು ಸತ್ತ ಚಿರತೆಗಳು 11. ಇವುಗಳಲ್ಲಿ 5 ಮರಿಗಳು, 3 ಗಂಡು, 3 ಹೆಣ್ಣು.

ನರಭಕ್ಷಕವೊ, ನಿರಪರಾಧಿಯೊ?

ಬದಲು 'ನರಭಕ್ಷಕ'ನನ್ನು ಗುರುತಿಸಿ ಕೊಂದರೆ ಹೇಗೆ? ವಾದವೇನೋ ಸರಿ, ಆದರೆ ಚಿರತೆಗಳಲ್ಲಿ ಯಾವುದು ನರಭಕ್ಷಕ ಎಂದು ಪತ್ತೆ ಹಚ್ಚುವುದು ದೊಡ್ಡ ಸಮಸ್ಯೆ. ಹೆಜ್ಜೆ ಗುರುತು ಆಧರಿಸಿ ಅಥವಾ ಬೇರೆ ಮೂಲಗಳಿಂದಲೂ ಈ ಕೆಲಸ ಮಾಡುವುದು ಸುಲಭವಲ್ಲ ಎನ್ನುತ್ತಾರೆ ಅರಣ್ಯ ಇಲಾಖೆ ಅಧಿಕಾರಿಗಳು.

ಬೋನು, ಹೊಗೆ ಇತ್ಯಾದಿ ಹಳೇ ತಂತ್ರ ಬಿಟ್ಟು, ಆರಿವಳಿಕೆ ಮದ್ದು ಕೊಟ್ಟು ಹಿಡಿಯಬಹುದಲ್ಲ? ಈ ಪ್ರಶ್ನೆಗೆ ಡಾ. ಪ್ರಫುಲ್ಲಚಂದ್ರ ಹೇಳುವುದು ಈ ರೀತಿ 'ಚಿರತೆ ಚುರುಕು ಪ್ರಾಣಿ. ಅದು ಹಚ್ಚೆಂದರೆ 2 ರಿಂದ 10 ಸೆಕೆಂಡ್ ಕಣ್ಣಿಗೆ ಕಾಣಬಹುದು. ಆ ಮಿಂಚಿನ ಕ್ಷಣದಲ್ಲಿ ಅದರ ಗಾತ್ರ ಆಧರಿಸಿ ಎಷ್ಟು ಔಷಧಿ ಕೊಡಬೇಕು ಎಂಬುದನ್ನು ನಿರ್ಧರಿಸಬೇಕು. 10 ಕೆ.ಜಿ. ತೂಕದ ಪ್ರಾಣಿಗೆ ಒಂದು ಎಂ.ಎಲ್. ಕೆಟಮಿನ್, 0.3 ಎಂ.ಎಲ್. ರೆಂಪ್ಯುಲೇಟ್ ಬಳಸಬೇಕು. ಹೆಚ್ಚು ಬಳಸಿದರೆ ಪ್ರಾಣಿ ಸಾಯುತ್ತದೆ. ಈ ಔಷಧಿ, ಅವಧಿ 20 ನಿಮಿಷ. ಆರಿವಳಿಕೆ ಚುಚ್ಚುಮದ್ದು ಹೊಡೆದ ಬಳಿಕ ಗುಹೆ ಒಳಗೆ ಹೋಗಿ ಕುಳಿತರೆ...?'

ಕೃಷಿ ಕೆಲಸಕ್ಕೆ ಅಡಚಣೆ

1993ರ ಗಣತಿಯಂತೆ ಚಿಕ್ಕಮಗಳೂರು, ಕಡೂರು ತಾಲ್ಲೂಕಿನಲ್ಲಿ 68 ಚಿರತೆಗಳಿದ್ದವು. ಈಗ ಅದು ದ್ವಿಗುಣ ಆಗಿರುವ ಸಾಧ್ಯತೆಗಳು ಇವೆ. ಈ ಭಾಗದ ಚಿರತೆಗಳು ಮಾತ್ರ (ಎಲ್ಲವೂ ಅಲ್ಲ) ನರಭಕ್ಷಕ ಆಗಲು ಕಾರಣ ಏನು ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಕ್ಕಿಲ್ಲ. ಒಟ್ಟಿನಲ್ಲಿ ಈ ಭಾಗದ ಜನರ ಪಾಲಿಗೆ ಚಿರತೆಗಳು 'ಸಿಂಹಸ್ವಪ್ನ'ವಾಗಿದೆ. ಸಂಜೆ ಆಯಿತೆಂದರೆ ಜನ ಮನೆ ಬಿಟ್ಟು ಹೊರ ಬರಲು ಹೆದರುತ್ತಾರೆ. ಒಬ್ಬೊಬ್ಬರಾಗಿ ಬರುವಂತೆಯೇ ಇಲ್ಲ. ರಾತ್ರಿವೇಳೆ ಬೆಳೆ ರಕ್ಷಣೆ, ಪಂಪ್‌ಸೆಟ್ ಮೂಲಕ ನೀರಾವರಿ ಇತ್ಯಾದಿ ಎಲ್ಲ ಕೆಲಸಗಳೂ ನಿಂತಿವೆ.

ಚಿರತೆ ಕಡೂರು ಪಟ್ಟಣ, ದೇವನೂರು ರೈಲ್ವೆನಿಲ್ದಾಣ, ಬೀರೂರು ರೈಲ್ವೆ ಹಳಿಗಳ ಮೇಲೂ ಕಾಣಿಸಿಕೊಂಡಿವೆ. ಇದರಿಂದ ರೈಲು ಸಂಚಾರಕ್ಕೂ ಕೆಲವೊಮ್ಮೆ ಅಡಚಣೆ ಆಗಿದೆ. ಫೆಬ್ರವರಿ ತಿಂಗಳ ಬಳಿಕ ಚಿರತೆ ಯಾರನ್ನೂ ಕೊಂದಿಲ್ಲ. ಆದರೆ ದಾಳಿ ನಿಲ್ಲಿಸಿಲ್ಲ. ಹಗಲುವೇಳೆ ದಾಳಿ ಆರಂಭಿಸಿರುವುದು ಮತ್ತಷ್ಟು ಆತಂಕದ ವಿಷಯವಾಗಿದೆ. ಹಗಲಲ್ಲೂ ಜನ ಒಬ್ಬೊಬ್ಬರಾಗಿ ಓಡಾಡುವುದು ದುಸ್ತರವಾಗುತ್ತಿದೆ.

ಚಿರತೆಗಳನ್ನು ಕೊಲ್ಲುವ ಕಾರ್ಯಾಚರಣೆಗೆ ತಾತ್ಕಾಲಿಕ ತೆರೆ ಬಿದ್ದಿದೆ. ಹಿಡಿದು ಸಾಗಿಸುವ ಪ್ರಯತ್ನ ಮುಂದುವರಿದಿದೆ. ಜಾಣ ಚಿರತೆಗಳು ಬಲೆಗೆ, ಬೋನಿಗೆ ಬೀಳದೆ ತಪ್ಪಿಸಿಕೊಳ್ಳುತ್ತಲೇ ಇವೆ. ಒಂದೇ ಕಡೆ ನೆಲೆಸದೆ ಅವು ಅಡ್ಡಾಡುತ್ತವೆ. ನಾಲ್ಕೈದು ತಿಂಗಳಿನಿಂದ ಅರಣ್ಯ ಇಲಾಖೆಯ ಸಿಬ್ಬಂದಿಗೆ ಬಿಡುವಿಲ್ಲದ ಕೆಲಸ. ಜನರ ಒತ್ತಡ; ಸೂಕ್ಷ್ಮವಾದ ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದೆಂಬ ಚಿಂತೆ. ಬೇಟೆ ಕಾರ್ಯಾಚರಣೆ ಇನ್ನೆಷ್ಟು ದಿನ? ಚಿರತೆ ಬಾಯಿಗೆ ಇನ್ನೆಷ್ಟು ಜನ? ಇದಕ್ಕೆ ಶಾಶ್ವತ ಪರಿಹಾರ ಏನು? ಹೀಗೆ ಪ್ರಶ್ನೆಗಳು ಕಾಡುತ್ತಿವೆ.

ಮುಳ್ಳುಪಕ್ಕಿಯ ಕೊನೆಯ ದಿನಗಳು

ಅತಿಥಿಯಾಗಿ ಬಂದ
ಈ ಅಪರೂಪದ
ಪಕ್ಷಿಯನ್ನು
ಅಂಧಶ್ರದ್ಧೆಯ ಮಂದಿ
ದೊಣ್ಣೆ ಬೀಸಿ
ಕೆಡವಿದರು.
ಮುಗ್ಧ ಹಳ್ಳಿಜನರು
ಉಪಚರಿಸಿ
ಸಲಹಿದರು.
ಪೇಟೆಯ
ಪ್ಯಾಂಟಿನ ಮಂದಿ
ಇದರ ತಿಥಿ
ಮಾಡಿದರು.



ಚಿತ್ರ-ಲೇಖನ: **ಗೋಪಾಲಕೃಷ್ಣ ಕುಂಟಿನ**

ದೂರದ ಊರಿಂದ ಬಂದ ಸರದಾರ. ಜರತಾರಿ ಸೀರೆ ಮಾತ್ರ ಇರಲಿಲ್ಲ. ಗೆಳೆಯರ ಗುಂಪಿನಲ್ಲಿ ಕಲರವ ಎಬ್ಬಿಸುತ್ತಾ ಅಪರೂಪಕ್ಕೆ ಊರ ಮೇಲೆ ಹಾದು ಹೋಗುವವನಿದ್ದ. ಯಾಕೋ ಬೇಜಾರು ಎಂದೋ, ದಣಿವು ಎಂದೋ, ಬಾಯಾರಿಕೆ ಎಂದೋ ಹಳ್ಳಿಯಲ್ಲಿ ಕಿರುದಾರಿಯಾಚೆಗೆ ತಂಗಿದ. ಗುಂಪಿನಲ್ಲಿ ಗೋವಿಂದ ಎಂದ ಮೇಲೆ ಕೇಳಬೇಕೆ, ಅದೆಂಥದೋ ಸಂಭಾಷಣೆ, ಮಾತುಕತೆ ಚರ್ಚೆ. ಇದನ್ನು ಕೇಳಿ, ನೋಡಿ ಯಾರೋ ಬಂದರು. ಬಂದವರು ಹುಲುಮಾನವರು. ದೊಣ್ಣೆ ಬೀಸಿದರು.

ಸರದಾರನೀತ ಬಿದ್ದ. ಉಳಿದವರು ಎದ್ದು ಹಾರಿದರು. ಅವರೆಲ್ಲ ಅತ್ತ ಏಳು ಹೊಳೆ, ಏಳು ಹಳ್ಳ, ಏಳು ಕೋಟಿ, ಏಳು ಸಮುದ್ರದಾಚೆಯ ಊರಿಗೆ ಹೋಗಿಯೇಬಿಟ್ಟರು.

ಈ ಬರಹದಲ್ಲಿ ಪ್ರಧಾನ ಪಾತ್ರ ವಹಿಸಿರುವ ಈ ಬಿಳಿ ಮೈಯ, ಗಂಭೀರ ನಿಲುವಿನ, ಕೆಂಪು ಕಾಲ್ಗಳ ಈ ಸರದಾರ ಆಲ್ಲೇ ಮುದುರಿಬಿದ್ದ.

ಈ ಸರದಾರನ ವಂಶದ ಹೆಸರು 'ವೈಟ್ ಸ್ಟಾರ್ಕ್' (White stork). ಅಚ್ಚ ಕನ್ನಡದಲ್ಲಿ 'ಬಿಳಿ ಕೊಕ್ಕರೆ' ಎನ್ನಬಹುದು. ವಿಜ್ಞಾನಿಗಳು ತಮ್ಮ ಪರಿಭಾಷೆಯಲ್ಲಿ ಹೇಳುವುದು *ಸಿಕೊನಿಯಾಸಿಕೊನಿಯಾ(ciconia ciconia)*. ಹಿಂದಿಯಲ್ಲಿ 'ಲಾಗ್ಲಾಗ್'. ಪ್ಯಾಲೆಸ್ತೀನಿಯರ ಬಾಯಲ್ಲಿ 'ಹಾಜಿ'.

ಕೆಂಪಿಗೆ ಕೆಂಪಿನ ಓಕುಳಿ:

ಯಾರು ಹೇಗೆಂದು ಕರೆದರೇನಂತೆ ಎಂಬ ಹಾಗೆ ಇವನ ವ್ಯಕ್ತಿತ್ವ. ಎತ್ತರ ಎರಡೂವರೆ- ಮೂರು ಅಡಿ. ನಿಲುವು ಆಕರ್ಷಕ. ಮೈಬಣ್ಣ ಅಚ್ಚ ಬಿಳಿ. ದೃಷ್ಟಿಗೆ ಬೊಟ್ಟು ಎಂಬ ಹಾಗೆ ಪುಚ್ಚ ಪೂರ್ತಿ ಕಪ್ಪು; ನೀಳ ಕಾಲುಗಳು. ಕಾಲುಗಳಿಗೆ ಕೆಂಬಣ್ಣದ ಲೇಪನ. ಉದ್ದ ಕೊಕ್ಕು. ಕೊಕ್ಕಿಗೂ ಉಂಟು ಬಣ್ಣಪಿಡೀ ಕೆಂಪು. ಕೊಂಕು. ಮೈಯಾರದ ಛಾಪಿನ ಕೊರಳು. ಹಳ್ಳಿ ಮೈದನ ದೊಣ್ಣೆ ಏಟಿನಿಂದ ತಲೆಭಾರ, ಒಂದು ಕಣ್ಣು ನಾಶ. ಒಟ್ಟಾರೆ ಮೈ ಹುಶಾರಿಲ್ಲ.

ವೈಟ್ ಸ್ಟಾರ್ಕ್ ಎಂಬ ಈ ಬಿಳಿಕೊಕ್ಕರೆಯಿದು ಈ ಭಾಗದಲ್ಲಿ ಅಪರೂಪ. ಪಶ್ಚಿಮ ಏಷ್ಯಾ, ಉತ್ತರ ಆಫ್ರಿಕಾ, ಮಧ್ಯ ಏಷ್ಯಾಗಳ ಎತ್ತರದ ಪ್ರದೇಶಗಳಲ್ಲಿ ಗೂಡು. ಪ್ಯಾಲೆಸ್ತಿನ್, ಇರಾನ್, ಇರಾಕ್‌ಗಳ ಮಸೀದಿಗಳ ಎತ್ತರದ ಗುಮ್ಮಟಗಳಲ್ಲೂ ಗೂಡು. ಗೂಡಿನಲ್ಲಿ ಸಂಸಾರ. ಮೊಟ್ಟೆ, ಮರಿ ಪಾಲನೆ ಪೋಷಣೆ ಇತ್ಯಾದಿ.

ಗೂಡು ಬಿಟ್ಟು ಚಳಿಗಾಲದಲ್ಲಿ ಒಂದು ಯಾನ. ದಾರಿ ದೂರ. ಪಶ್ಚಿಮ ಪಾಕಿಸ್ತಾನ, ವಾಯುವ್ಯ ಭಾರತ, ನೇಪಾಳದಾಚೆ ಆಗಮನ. ವಸಂತ ಕಾಲದವರೆಗೆ ಈ ಭಾಗಗಳಲ್ಲಿ ಊಟ, ವಿಹಾರ. ವಸಂತದ ಮುಕ್ತಾಯಕ್ಕೆ ಮರಳಿ ಗೂಡಿಗೆ. ವಸಂತಕಾಲದಲ್ಲಿ ಯಾರೂ ಸಂತರಲ್ಲವಂತೆ. ಆದರೆ ಅನೇಕ ದೇಶಗಳ ಜನರಿಗಿದು ಸಂತನೇ ಅಂತೆ. ಶುಭಶಕುನದ ಸಂಕೇತವಂತೆ.

ಮಸೀದಿಯಲ್ಲಿ ವಾಸಿಸುವ ಹಕ್ಕಿ ಎಂದು ಪಶ್ಚಿಮ ಏಷ್ಯಾದ ಮುಸ್ಲಿಮರಿಗೆ ಇದರಲ್ಲಿ ಗೌರವ. ಪ್ಯಾಲೆಸ್ತಿನ್ ಜನಕ್ಕೋ ಇದು ವರ್ಷವೂ ಮೆಕ್ಕಾದ ಹಾದಿಯಲ್ಲಿ ಹಾರಿ ಹೋಗುವುದು ಕಂಡು ಹಜ್ ಯಾತ್ರೆಯ ನೆನಪಾಗಿ ಹಾಜಿ ಹಕ್ಕಿ ಎಂದು ಆದರ.


ದಕ್ಷಿಣ ಭಾರತದಲ್ಲಿ ಈ ಮಹಾಮಹಿಮ ಬಿಳಿಕೊಕ್ಕರೆ ಕಂಡದ್ದು ಕಮ್ಮಿ. ಎಂದಿನಂತೆ ಮೈಸೂರು, ತಿರುನೇಲ್ವಿ, ಮದ್ರಾಸುಗಳಲ್ಲಿ ಕಂಡ ಶುಭವಾರ್ತೆ ಬಂದಿದ್ದರೂ, ಇದು ಬಹುತೇಕ ಅಪೂರ್ವವೇ ಎಂದು ಪಕ್ಷಿತಜ್ಞರ ಅಭಿಪ್ರಾಯ.

ವೇಗದ ಸರದಾರನ ವೇಗ ಬಲ್ಲಿರಾ? ಜರ್ಮನಿಯಲ್ಲಿ ಇಂಥ ಒಂದು ಬಿಳಿಕೊಕ್ಕರೆಯ ಕಾಲಿಗೆ ಉಂಗುರ ತೊಡಿಸಿ ಬಿಟ್ಟರು. ನಾಲ್ಕು ಸಾವಿರ ಮೈಲು ದೂರದಲ್ಲಿನ ರಾಜಸ್ತಾನದ ಬಿಕಾನೇರಿನಲ್ಲಿ ಅದು ಬಂದಿಳಿಯಿತೆಂಬ ದಾಖಲೆ ಇದೆ. ಮೊದಲ ಮಹಾಯುದ್ಧದ ದಿನಗಳಲ್ಲಿ ರಾಯಲ್ ಏರ್‌ಫೋರ್ಸಿನ ಪೈಲಟ್‌ಗಳು ಮೆಸಪೊಟೇಮಿಯಾದಲ್ಲಿ ಈ ಸರದಾರನ ವೇಗ ಅಳೆದು, ಇವನ ಓಟ ಅಂಥಿಂಥದ್ದಲ್ಲ, ಗಂಟೆಗೆ ಎಪ್ಪತ್ತೇಳು ಕಿಲೊಮೀಟರ್ ಎಂದು ದಾಖಲಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು



ಕ್ರೌರ್ಯ



ತಾಲ್ಲೂಕಿನ ಭೂಪಟಕ್ಕೆ ಮಾತ್ರಾ 'ಹಳೇ ನೇರಂಕಿ' ಎಂಬ ಊರು ಗೊತ್ತು. ಬೇರೆ ಯಾರಿಗೂ ಗೊತ್ತಿಲ್ಲ. ಅಂಥ ಊರಲ್ಲಿ ಇಂಥ ಹನ್ನೆರಡು ಬಿಳಿಕೊಕ್ಕರೆಗಳು ಈ ವರ್ಷದ ಗಣರಾಜ್ಯೋತ್ಸವದಂದು ಬಂದಿಳಿದಿದ್ದವು. ಯಾರೋ ಈ ಗಜಗಾತ್ರದ ಹಕ್ಕಿಗಳು 'ಮಕ್ಕಳನ್ನು ಎತ್ತಿಕೊಂಡು ಹೋಗುವ ಉಪ್ಪಪಕ್ಷಿಗಳು' ಎಂದು ಗುಂಪಿನತ್ತ ದೊಣ್ಣೆ ಬೀಸಿ ಎಸೆದರು. ದೊಣ್ಣೆ ಏಟಿಗೆ ಬಿದ್ದ ಈ ಸರದಾರನ ಪುಣ್ಯ! ಯಾರ ಕಾವಲಿಯಲ್ಲೂ ತುಪ್ಪದೊಂದಿಗೆ ಹುರಿಸಿಕೊಂಡು, ಜಿಹ್ವಾಗ್ರದಲ್ಲಿ ಕರಗಲಿಲ್ಲ.

ಅಷ್ಟೇ ಅವನ ಅದೃಷ್ಟ. ಯಾರೋ ಸಿದ್ಧಾರ್ಥನ ಕುಲದವರು ಎತ್ತಿ ಪಕ್ಕದ ಊರಿನ ಕೊಯ್ನಾದ ಪಶು ಸಂಗೋಪನಾ ಕೇಂದ್ರಕ್ಕೆ ತಂದರು. ಕೇಂದ್ರದ ವೈದ್ಯಾಧಿಕಾರಿ ಡಾ. ಪ್ರಸನ್ನ ತುರ್ತು ಚಿಕಿತ್ಸೆ ನೀಡಿದರು. ಇನ್ಯಾರೋ ಅಧಿಕಾರಿ ಇದು 'ಆಸ್ಟ್ರೇಲಿಯಾದ ಅಪ್ಟಿಚ್' ಎಂದು ಘೋಷಿಸಿದರು! ಊರಿನ ಪತ್ರಿಕೆಗಳು ಬೇರೆ ಅಂತೆ ಇಂತೆ ಬರೆದು ಸಮ್ಮನಾದವು.

ಕೊಯ್ನಾದ ಈ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಕಲ್ಯಾಡಿ ಎಂಬ ಹಳ್ಳಿಯ ಪೊಡಿಯನಿಗೆ ಈ 'ಮಲ್ಲಪಕ್ಕಿ'(ದೊಡ್ಡ ಹಕ್ಕಿ)ಯ ಮೇಲೆ ಅದೆಂಥದ್ದೋ ಆತ್ಮೀಯತೆ ಒಡಮೂಡಿತು. ಡಾ. ಪ್ರಸನ್ನರ ಸಲಹೆಯಂತೆ ಅದನ್ನಾತ ತನ್ನ ಮನೆಗೆ ಒಯ್ದ. ಕಪ್ಪೆ, ಮೀನು, ಆಮೇಲೆ ಕುಚ್ಚಿಲಕ್ಕಿಯ ಅನ್ನ ಮಾಡಿ ಅದರ ಕೊಕ್ಕನ್ನಗಲಿಸಿ ನುಂಗಿಸಿದ. ವೈದ್ಯರ ಉಪಚಾರ, ದಲಿತ ಪೊಡಿಯನ ಷೋಡಷೋಪಚಾರಗಳ ಮಧ್ಯೆ ದಿನದಿಂದ ದಿನಕ್ಕೆ ಚೇತರಿಸಿದ ಬಿಳಿ ಕೊಕ್ಕರೆ ಯಾವ ವಿಜ್ಞಾನಿಗಳ ಕೈಗೂ ಸಿಗದೆ ಬಚಾವಾಯಿತು.

ಪೊಡಿಯನ ಮನೆಯಲ್ಲಿ ಅದಕ್ಕೆಂದೇ ಒಂದು ಕೊಠಡಿ. ಅಲ್ಲಿ ಅನ್ನ, ನೀರು, ತಕ್ಕಷ್ಟು ಗಾಳಿ, ಬೆಳಕು. ಸಂಜೆ ಪೊಡಿಯನ ಮಕ್ಕಳು ಶಾಲೆಯಿಂದ ಬಂದಮೇಲೆ ಅವರ ಜೊತೆ ಗದ್ದೆ, ತೋಟ, ಕೆರೆಗಳಲ್ಲಿ ಈ 'ಮಲ್ಲಪಕ್ಕಿ'ಗೆ ಸಣ್ಣ ವಿಹಾರ.

ಪೊಡಿಯನಿಗೆ ನಾಲ್ಕು ಮಕ್ಕಳು. ಅವನ ಹೆಂಡತಿ ಹೇಳುತ್ತಿದ್ದಳು: "ಇವ ಐದನೆಯವ".

ಹವ್ಯಾಸಿ ಪಕ್ಷಿ ಸಂಶೋಧಕ ಹೊಂತಿಲ ವೆಂಕಟೇಶ್ವರ ಇದರ ಕಾಲಿಗೊಂದು ಉಂಗುರ ತೊಡಿಸಿದ್ದರು. ನೆನಪಿನುಂಗುರದೊಂದಿಗೆ ಈ ಅಚ್ಚ ಬಿಳಿ ಮೈಯ ಕೆಂಗಾಲು, ಕೆಂಕೊಕ್ಕಿನ ಒಂಟಿ ಕಣ್ಣಿನ ಸರದಾರ ಮುಂದಿನ ಪ್ರಯಾಣಕ್ಕೆ ಸಜ್ಜಾಗಿದ್ದ...


ಹೀಗಿರಲು ಒಂದು ದಿನ...

ಹೀಗಿರುತ್ತಾ ಏನಾಯಿತು ಎಂದರೆ, ಒಂದು ದಿನ ಯಾವುದೋ ಕಾರಿನಲ್ಲಿ ಮೂರ್ನಾಲ್ಕು ಮಂದಿ ದೊಗಲೆ ಪ್ಯಾಂಟಿನ, ಮೂಗಿನಲ್ಲಿ ಕನ್ನಡಕ ಇಟ್ಟ ಮಂದಿ ಪೊಡಿಯನ ಮನೆಗೆ ಬಂದರು. ಆಗ ಪೊಡಿಯ ಕೆಲಸಕ್ಕೆ ಹೋಗಿದ್ದ; ಮಕ್ಕಳು ಶಾಲೆಗೆ ಹೋಗಿದ್ದವು. ಕಾರಿನಲ್ಲಿ ಬಂದವರು ಠಾಕುಠೀಕಾಗಿ, "ನಾವು ಮೈಸೂರಿನವರು" ಎಂದರು. "ನಮಗೆ ಮಲ್ಲಪಕ್ಕಿಯನ್ನು ತರಲು ಸರಕಾರ ಹೇಳಿದೆ" ಎಂದರು. ಅವರ ಗತ್ತುಗೈರತ್ತಿಗೆ ಪೊಡಿಯನ ಹೆಂಡತಿ ದಂಗಾದಳು. ಸರದಾರನನ್ನು ಬಾಚಿ ತಬ್ಬಿ ಕೊಟ್ಟೇಬಿಟ್ಟಳು. ಅವರದನ್ನು ಕಾರಿನಲ್ಲಿ ಹಾಕಿಕೊಂಡು ಬುರ್ರೋ ಎಂದು ಹೋದರು.

ಹಳೆನೇರಂಕಿಯ ಹಲ್ಲಿಗಾರ, ಕೊಯ್ನಾದ ವೈದ್ಯರು, ಕಲ್ಯಾಡಿಯ ಪೊಡಿಯ ಎಲ್ಲರನ್ನೂ ಬಿಟ್ಟು, ಮಾತು ಬಾರದ ಮಲ್ಲಪಕ್ಕಿ ಕಾರನ್ನೇರಿ ಹೋಽಽಯಿತು. ಯಾರ ಬಾಣಲೆಯಲ್ಲಿ ಬೆಂದು, ಯಾರ ಬಾಯಲ್ಲಿ ನೀರಾಯಿತೋ, ಯಾರಿಗೆ ಗೊತ್ತು?

ಪೊಡಿಯನ ಮಕ್ಕಳಿಗೆ ಮಾತ್ರಾ ಅಂದಿನ ಸಂಜೆ ಸಂಜೆಯಾಗಿರಲಿಲ್ಲ. ಬರೀ ಕಗ್ಗತ್ತಲಾಗಿತ್ತು. ✚






ಕೆಲವೊಮ್ಮೆ ಯಾವುದೋ ರೂಪದಲ್ಲಿ ನಿಮ್ಮ ತ್ವಚೆಯು ನಿಮ್ಮ ವಯಸ್ಸನ್ನು ಹೊರಗೆಡವುತ್ತದೆ.





ನಿಮ್ಮ ತ್ವಚೆಯು ಸುಂದರ ಸುಕೋಮಲ ಚಿರತಾರುಣ್ಯದಿಂದ ಕೂಡಿರಲು, ಮ್ಯಾನೆಕ್ವಿನ್ಸ್ ವಿಟಮಿನ್ 'ಇ' ಸ್ಕಿನ್ ಆಯಿಲ್‌ನಿಂದ ನಿರಂತರವಾಗಿ ಮ್ಯಾಸಾಜ್ ಮಾಡಿರಿ– ಈ ತೈಲವು ದೇಹ ಮುಖಕ್ಕೆ ಸೂಕ್ತವಾಗಿರುವುದಲ್ಲದೇ, ಹಿಗ್ಗಿದ ಚರ್ಮದ ಸುಕ್ಕನ ಗೆರೆ, ನಿಗೆಗಳನ್ನು ನಿವಾರಿಸುವ ಭಾರತದ ಸುಪ್ರಸಿದ್ಧ ಮ್ಯಾಸಾಜ್ ಆಯಿಲ್ ಆಗಿದೆ.

ವೈದ್ಯರು, ಸ್ಕಿನ್‌ರೋಗ ತಜ್ಞರೂ ಸಹ ಈ ತೈಲವನ್ನು ಶಿಫಾರಸ್ಸು ಮಾಡಿರುತ್ತಾರೆ.




manneQuin's
VITAMIN E
SKIN OIL

ಇದೋ ಇಲ್ಲಿದೆ – ನಿಮ್ಮ ಚಿರಯೌವ್ವನದ ರಹಸ್ಯ.

ವ್ಯಾಪಾರಿ ವಿಚಾರಣೆಗಳಿಗಾಗಿ ಜಾಹೀರಾತುದಾರರನ್ನು ಸಂಪರ್ಕಿಸಿ:– ಮಾಸ್ ಕನ್‌ಸ್ಯೂಮರ್ ಲಿಂಕ್ಸ್, ಮಂತ್ರಿ ಕಾರ್ನರ್, ನೆಲ ಅಂತಸ್ತು, ಎಲ್ಫಿನ್‌ಸ್ಟನ್ ರಸ್ತೆ, ಮುಂಬಯಿ– 400025 ಫೋನ್: 4379560.

ಕಕಾಪೊ ಗಿಳಿಯ ಕೊನೆಯ ದಿನಗಳು





ಕಳೆದ ಫೆಬ್ರುವರಿ ತಿಂಗಳಲ್ಲಿ ಹೀತರ್ ಹೆಸರಿನ ಒಂಬತ್ತು ವರ್ಷದ ಕಕಾಪೊ ಗಿಳಿ ಮೊದಲ ಬಾರಿಗೆ ಮೊಟ್ಟೆ ಇಟ್ಟಾಗ ಇಡೀ ನ್ಯೂಜಿಲ್ಯಾಂಡ್‌ಗೆ ಅದು ಸಂಭ್ರಮದ ವಾರ್ತೆಯಾಯಿತು. ರೇಡಿಯೊದಲ್ಲಿ ಬಿತ್ತರವಾದ ಈ ಸುದ್ದಿಯನ್ನು ದೇಶ ವಿದೇಶಗಳ ಪತ್ರಿಕೆಗಳು ರಂಜಿತವಾಗಿ ವರ್ಣಿಸಿದವು. ಬ್ರಿಟನ್ನಿನ 'ನ್ಯೂ ಸೈಂಟಿಸ್ಟ್' ಪತ್ರಿಕೆಯಂತೂ ಪೃಥ್ವಿಯ ಆ ಇನ್ನೊಂದು ಮಗ್ಗುಲಿಗೆ ವರದಿಗಾರರನ್ನು ಕಳಿಸಿ ವಿಶೇಷ ಲೇಖನ ಪ್ರಕಟಿಸಿತು.

ಏನಿದು ಕಕಾಪೊ ಗಿಳಿಯ ವಿಶೇಷ? ಅವುಗಳ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗುತ್ತ ಆಗುತ್ತ ಇಡೀ ಸಂತಾನವೇ ಭೂಮಿಯಿಂದ ಕಣ್ಮರೆಯಾಗುತ್ತಲಿದೆ. ನಿಸರ್ಗ ಅದರ ರಕ್ಷಣೆಯ ಆಸೆಯನ್ನು ಕೈಬಿಟ್ಟಿದೆ.

ಪಾಪ, ಗೂಬೆ ಮುಖದ ಈ ಪೆದ್ದು ಪಕ್ಷಿಗೆ ಕಳೆದ ಎರಡು ಶತಮಾನಗಳಿಂದ ಎಲ್ಲ ಕಡೆಯಿಂದ ಅಶುಭ ಚಿನ್ಹೆಯೇ ಕಾಣಬರುತ್ತಿದೆ. ಗಿಳಿಗಿಂತ ತುಂಬ ದೊಡ್ಡದಾದ, ಮೂರೂವರೆ ಕೇಜಿಯಷ್ಟು ತೂಕದ ಈ ಪಕ್ಷಿಗೆ ಹಾರಲು ಬರುವುದಿಲ್ಲ, ಇತರ ಪ್ರಾಣಿ ಪಕ್ಷಿಗಳ ಮೇಲೆ ಎಗರಿ ಬೆದರಿಸುವುದೂ ಗೊತ್ತಿಲ್ಲ. ಯಾರಾದರೂ ದಾಳಿಗೆ ಬಂದರೆ ಹಸಿರು ಹುಲ್ಲಿನ ಮೇಲೆ ಮೈಮುದುರಿ ಕೂರುತ್ತದೆ. ವೈರಿಯ ಕಣ್ಣಿಗೆ ತನ್ನ ಚುಕ್ಕಿ ಹಸಿರಿನ ಮೈ ಕಾಣಲಾರದೆಂದು ಆಶಿಸುತ್ತದೆ.

ಕಕಾಪೊ ಗಿಳಿ ಗೂಬೆಗೆ ಮರಿಗಳ ರಕ್ಷಣೆಯೂ ಗೊತ್ತಿಲ್ಲ. ನೆಲದ ಮೇಲೆ ಮೊಟ್ಟೆ ಇಟ್ಟು ಕಾವು ಕೊಡುತ್ತದೆ. ಈ ಕೆಲಸದಲ್ಲಿ ಗಂಡೂ ನೆರವಿಗೆ ಬರುವುದಿಲ್ಲ. ಮೊಟ್ಟೆ ಒಡೆದಾಗ ಮರಿಗಳಿಗೆ ತಕ್ಷಣ

ಸುಂತೆ ಕಾಣುವ ಈ ಮುದ್ದು
ಬೆಗಳ ಸಂಖ್ಯೆ ದಿನದಿನಕ್ಕೆ
ಳಿಯುತ್ತಿದೆ. ಇದರ
ರಕ್ಷಣೆಗೆಂದು ಕೈ ಇಕ್ಕರೆ ಕಷ್ಟ; ಕೈ
ಬಿಟ್ಟರೆ ಇನ್ನೂ ಕಷ್ಟ.

ಓಡಾಡಲು ಬರುವುದಿಲ್ಲ. ಮೊದಲ ಮೂರು ತಿಂಗಳಕಾಲ ಅಮ್ಮ ತಂದು ಕೊಟ್ಟಿದ್ದನ್ನೇ ತಿನ್ನುತ್ತ ಭಾರೀ ಗಲಾಟೆ ಮಾಡುತ್ತ ವೈರಿಗಳಿಗೆ ಆಮಂತ್ರಣ ಕೊಡುತ್ತಿರುತ್ತವೆ. ಇದೂ ಸಾಲದೆಂಬಂತೆ, ಕಕಾಪೊ ಹೆಣ್ಣು ಪ್ರತಿ ವರ್ಷ ಮೊಟ್ಟೆ ಇಡುವುದಿಲ್ಲ, ನಾಲ್ಕು ಅಥವಾ ಐದು ವರ್ಷಗಳಿಗೊಮ್ಮೆ ಗಂಡಿನೊಂದಿಗೆ ಇದರ ಮಿಲನವಾಗುತ್ತದೆ.

ಇನ್ನೊಂದು ದೌರ್ಬಲ್ಯವನ್ನು ನಿಸರ್ಗ ಬೇರೆ ಯಾವ ಪಕ್ಷಿಗೂ ಕೊಟ್ಟಿರಲಿಲ್ಲ– 'ಡೊಡೊ' ಎಂಬ ಪಕ್ಷಿ ಬಿಟ್ಟರೆ. ಆದರೆ ಡೊಡೊ ಈಗ ಇಲ್ಲ. 'ಡೆಡ್ ಲೈಕ್ ಡೊಡೊ' ಎಂಬ ಇಂಗ್ಲಿಷ್ ನಾಣ್ನುಡಿಯಲ್ಲಿ ಮಾತ್ರ ಅದರ ಹೆಸರು ಉಳಿದಿದೆ. ಕಕಾಪೊ ಕೂಡಾ ಹಾಗಾದೀತೆ?

ನ್ಯೂಜಿಲ್ಯಾಂಡ್‌ನ ದುರ್ಗಮ ಅರಣ್ಯಗಳಲ್ಲಿ, ಹಾಗೂ ಆಚೀಚಿನ ದ್ವೀಪಗಳಲ್ಲಿ ಕಕಾಪೊ ಪಕ್ಷಿಗೆ ಅಷ್ಟಾಗಿ ವೈರಿಗಳೇ ಇರಲಿಲ್ಲ. ಅವು ಹಾಯಾಗಿ ಬದುಕುತ್ತಿದ್ದವು. ಇನ್ನೂರು ವರ್ಷಗಳ ಹಿಂದೆ ಯುರೋಪಿನ ವಲಸೆಗಾರರು ಬಂದರು. ಈ ಗಿಳಿಗೂಬೆಯ ಮಾಂಸ ತುಂಬ ರುಚಿಯೆಂದು ಕಂಡುಕೊಂಡರು. ಗಿಡಗಂಟಿಯಲ್ಲಿ ನುಗ್ಗಿ ಆಗಾಗ ಬೇಟೆಯಾಡುತ್ತ ಬಂದರು. ಕ್ರಮೇಣ ಬೇಸಾಯ, ಗೋಮಾಳ ಮಾಡಲೆಂದು ಗಿಡಗಂಟಿಗಳನ್ನು ಕಡಿದು ಕಾಡಿಗೆ ಬೆಂಕಿ ಇಟ್ಟರು. ವಲಸೆ ಬಂದ ಜನರ ಜತೆ ನಾಯಿ, ಬೆಕ್ಕು, ಫೆರೆಟ್‌ಗಳೂ ಬಂದಿದ್ದರಿಂದ ಅವೂ ಕಕಾಪೊ ಮೊಟ್ಟೆ ಮಾಂಸದ ಚಪಲ ಬೆಳೆಸಿಕೊಂಡವು.

ನೂರು ವರ್ಷಗಳ ಹಿಂದೆಯೇ ಕಕಾಪೊ ಬಗ್ಗೆ ಜನಕ್ಕೆ ಚಿಂತೆ ಆರಂಭವಾಗಿತ್ತು. ರಿಚರ್ಡ್ ಹೆನ್ರಿ ಎಂಬಾತ ಸುಮಾರು 300 ಗಿಳಿಗೂಬೆಗಳನ್ನು ಜನಸಂಪರ್ಕ ಇಲ್ಲದ ಒಂದು ದ್ವೀಪಕ್ಕೆ ಸಾಗಿಸಿದ್ದ. ಅವು ಅಲ್ಲಿ ಹಾಯಾಗಿ ಬದುಕುತ್ತವೆಂದು ಆಶಿಸಿದ್ದ.

ಆದರೆ ಹಾಗಾಗಲಿಲ್ಲ. ಸಮುದ್ರದ ಮಟ್ಟ ಕಡಿಮೆ ಇರುವ ಸಮಯ ನೋಡಿ ಕೆಲವು ಬೆಕ್ಕುಗಳು ಅಲ್ಲಿ ಈಜಿ ಹೋದವು. ಅವುಗಳ ಸಂತತಿ ಹೆಚ್ಚುತ್ತ ಹೋಗಿ, ಕಕಾಪೊ ಸಂತತಿ ಅಲ್ಲಿ ಪೂರ್ತಿ ನಶಿಸಿತು.

ಕಕಾಪೊ ಬಗ್ಗೆ ಕಳವಳ ಹೆಚ್ಚಾಗುತ್ತಲೇ 1974 ರಲ್ಲಿ ಪಕ್ಷಿಪ್ರೇಮಿಗಳು ನ್ಯೂಜಿಲೆಂಡ್‌ನ ಎಲ್ಲ ದ್ವೀಪಗಳಲ್ಲೂ ಗಿಳಿ ಗಣತಿಗೆ ಯತ್ನಿಸಿದರು. ಸ್ವಂತ ಓಡಾಡಿ ಗಿಡಗಂಟಿ ತಡವಿ ಹುಡುಕುವುದು ಕಷ್ಟವೆಂದು ವಿಶೇಷ ತಳಿಯ ನಾಯಿಗಳಿಗೆ ತರಬೇತಿ ನೀಡಿ ಹುಡುಕಿಸಿದರು. ಒಟ್ಟು 217 ಕಕಾಪೊ ಪತ್ತೆಯಾದವು; ಆದರೆ ಹೆಣ್ಣು ಪಕ್ಷಿಗಳ ಸಂಖ್ಯೆ ಮಾತ್ರ ಗಾಬರಿ ಹುಟ್ಟಿಸುವಷ್ಟು ಕಡಿಮೆ ಇದ್ದವು. ಅವುಗಳಲ್ಲಿ ಕೆಲವಕ್ಕೆ ಬೆನ್ನಿಗೆ ರೇಡಿಯೋ ಪ್ರೇಷಕಗಳನ್ನು ಜೋಡಿಸಿ, ಚಲನವಲನ ಹಾಗೂ ಬದುಕುವ ಬಗೆಯನ್ನು ಅಧ್ಯಯನ ಮಾಡುವ ಯತ್ನ ನಡೆಯಿತು.

ಕಾಡಿಗೆ ಸೇರಿದ ಬೆಕ್ಕುಗಳಿಂದಾಗಿಯೇ ಪ್ರತಿ ವರ್ಷ ಅರ್ಧಕ್ಕರ್ಧ ಕಕಾಪೊ ಸಂತತಿ ಕಡಿಮೆಯಾಗುತ್ತಿದೆ ಎಂದು ತಿಳಿದುಬಂದಾಗ, ಬೆಕ್ಕಿನ ನಾಶಕ್ಕೆ ವಿಸ್ತೃತ ಯೋಜನೆ ರೂಪಿತವಾಯಿತು. ಒಂದೊಂದು ದ್ವೀಪದಲ್ಲೂ ಒಂದೊಂದು ಬೆಕ್ಕುಬೇಟೆ ತಂಡದ ಕಾರ್ಯಾಚರಣೆ ನಡೆಯಿತು.

1982 ರಲ್ಲಿ ಮತ್ತೊಮ್ಮೆ ಕಕಾಪೊ ಸರ್ವೆ ನಡೆಸಿದಾಗ ಆಘಾತ ಕಾದಿತ್ತು. ಈ ಗಿಳಿ ಗೂಬೆಗಳ ಸಂಖ್ಯೆ ಐವತ್ತಕ್ಕೆ ಇಳಿದಿತ್ತು.

ಈಗ ಸಮರ ಸಿದ್ಧತೆಯಲ್ಲಿ. ಕಕಾಪೊ ರಕ್ಷಣಾ ಕಾರ್ಯ ನಡೆಯಬೇಕಿತ್ತು. ಮಾನವನ ನೇರ ಹಸ್ತಕ್ಷೇಪ ಆಗಕೂಡದೆಂಬ ನಿಯಮವನ್ನೂ ಧಿಕ್ಕರಿಸಿ, ಬೆಕ್ಕುಗಳ ಹಾವಳಿಯಿಂದ ಪೂರ್ತಿ ಮುಕ್ತವಾದ ಚಿಕ್ಕ 'ಲಿಟ್ಲ್ ಬ್ಯಾರಿಯರ್' ದ್ವೀಪಕ್ಕೆ 21 ಪಕ್ಷಿಗಳನ್ನು ಸಾಗಿಸಲಾಯಿತು.

ಇಂದು ಇಡೀ ನ್ಯೂಜಿಲೆಂಡ್‌ನಲ್ಲಿ ಒಟ್ಟೂ 43 ಕಕಾಪೊಗಳಿವೆ. ಅವುಗಳನ್ನು ಒಂದೆಡೆ ಕೂಡಿಟ್ಟು ಸಾಕೋಣವೆಂದರೆ ಅವುಗಳ ಜೀವನ ಚಕ್ರದ ಬಗ್ಗೆ ಈಗಲೂ ಸಾಕಷ್ಟು ಮಾಹಿತಿ ಸಂಗ್ರಹವಾಗಿಲ್ಲ. ಅವುಗಳ ನಿಖರ ಆಯಸ್ಸು, ಬೆದೆ ಬರುವ ವಯಸ್ಸು, ಮೊಟ್ಟೆ ಇಡುವ ಅವಧಿ, ಆಹಾರ ವಿಧಾನ ಇವೆಲ್ಲವನ್ನೂ ಸಮಗ್ರ ಅಧ್ಯಯನ ಮಾಡಿದ ಹೊರತೂ ಕೃತಕ ಸಾಕಾಣಿಕೆ ಮಾಡುವಂತಿಲ್ಲ. ಒಂದಿಷ್ಟು ಕಕಾಪೊಗಳ ಸಾಕಾಣಿಕೆ ಮಾಡಿದ ಹೊರತೂ ಈ ಮಾಹಿತಿ ಸಿಗುವಂತಿಲ್ಲ. ಒಂದಿಷ್ಟು ಪಕ್ಷಿಗಳನ್ನು ಹಿಡಿದು ಸಾಕಿ ನೋಡೋಣವೆಂದರೆ ಅಂಥ ರಿಸ್ಕ್ ತೆಗೆದುಕೊಳ್ಳಲು ಬೇಕಾದಷ್ಟು ಕಕಾಪೊ ಉಳಿದಿಲ್ಲ.

ಈಗೇನೋ ಈ ಗಿಳಿಗೂಬೆಗಳಿಗಾಗಿ ಪುಷ್ಕಳ ಆಹಾರ ನೀಡುವ ವ್ಯವಸ್ಥೆಯಾಗಿದೆ. ಹೆಗ್ಗಣ, ಮುಂಗುಸಿ, ಅಳಿಲು ಮುಂತಾದವು ಬಾರದಂತೆ ವಿಶೇಷ ಪಾತ್ರೆಗಳಲ್ಲಿ ಭಕ್ಷ್ಯ ಭೋಜ್ಯ ಇಡಲಾಗುತ್ತಿದೆ. ಅವಕ್ಕೆ ಯಾವುದು ಇಷ್ಟವೆಂದು ನೋಡಲು ವಿಡಿಯೋ ಕ್ಯಾಮರಾ ಇಟ್ಟು ಪರೀಕ್ಷಿಸಲಾಗುತ್ತಿದೆ. ಹೇಗಾದರೂ ಮಾಡಿ ಆಹಾರ ಇದ್ದಲ್ಲಿಗೆ ಅವುಗಳನ್ನು ಆಕರ್ಷಿಸುವ ಯತ್ನ ನಡೆಯುತ್ತಿದೆ. ಕಕಾಪೊ ಪುರಿಗಳಿಗೆ ಕಂಟಕಪ್ರಾಯವಾದ ಹೆಗ್ಗಣಗಳನ್ನು ಸಾಯಿಸುವ ಯತ್ನ ನಡೆಯುತ್ತಿದೆ. ಆದರೆ ಆಹಾರದಲ್ಲಿ ವಿಷ ಸೇರಿಸುವಂತಿಲ್ಲ, ಬಲೆಗಳನ್ನೋ ಬೋನನ್ನೋ ಹೂಡುವಂತಿಲ್ಲ.

ಈ ವರ್ಷ ಎರಡೇ ಎರಡು ಕಕಾಪೊ ಮೊಟ್ಟೆ ಇಟ್ಟವು. ಹೀತರ್ ಇಟ್ಟ ಮೊಟ್ಟೆಯಿಂದ ಮರಿ ಹೊರಬಂತು. ಆದರೆ ಮ್ಯಾಗಿ ಎಂಬ ಮತ್ತೊಂದು ಕಕಾಪೊ ತನ್ನ ಮೊಟ್ಟೆಗೆ ಕಾವು ಕೊಡದೇ ಹೊರಟುಹೋಯಿತು. ಪ್ರಾಯಶಃ ಅದು ಬರಡು ಮೊಟ್ಟೆಯೆಂದು ಗೊತ್ತಾಗಿರಬೇಕು.


ಕಕಾಪೊ ರಕ್ಷಣಾ ಪಡೆಯ ವಿಜ್ಞಾನಿಗಳು ತುಂಬಾ ನೊಂದುಕೊಂಡರು.

ಪಾಪ ಇನ್ನೊಂದು ಕಕಾಪೊ ಮೊಟ್ಟೆ ಇಡಲಿಕ್ಕೆ ಇನ್ನೆಷ್ಟು ವರ್ಷ ಕಾಯಬೇಕೋ.

ಕ್ಷಣಕ್ಷಣಕ್ಕೆ ಕಾಲ ಮಿಂಚುತ್ತಿದೆ. ಹೆಣ್ಣು ಪಕ್ಷಿಗಳ ಸಂಖ್ಯೆ 11ಕ್ಕೆ ಇಳಿದಿದೆ. ಪ್ರತಿ ವರ್ಷ ಶೇಕಡಾ 10 ರಷ್ಟು ಕಕಾಪೊ ಪಕ್ಷಿಗಳು ಸಾಯುತ್ತಿವೆಯೆಂದು ಅಂದಾಜು ಮಾಡಿದರೆ ಇನ್ನು ಕೇವಲ ಏಳೆಂಟು ವರ್ಷಗಳಲ್ಲಿ ಅವುಗಳ ಸಂತತಿ ಸಂಪೂರ್ಣ ನಶಿಸಿಹೋಗಬಹುದು. ಎಲ್ಲೋ ದಟ್ಟಡವಿಯಲ್ಲಿ ನಾಲ್ಕಾರು ಪಕ್ಷಿಗಳು ಬದುಕುಳಿದರೂ ಅವೆಲ್ಲವೂ ಗಂಡೇ ಆಗಿದ್ದರೆ? ಅಥವಾ ಸಂತಾನದ ವಯಸ್ಸು ಮೀರಿದವಾಗಿದ್ದರೆ?

ಹಾಗಿದ್ದರೆ ಈಗಲೇ ಎಲ್ಲವನ್ನೂ ಹಿಡಿದು ತಂದು ಸಾಕೋಣವೆ? ಹಾಗೆ ಮಾಡಿದರೆ ಅದು ಕಕಾಪೊ ಸಂತಾನವೃದ್ಧಿಯ ಮಾರ್ಗವಾದೀತೆ– ಅಥವಾ ಅವುಗಳ ಉಳಿವಿನ ಕೊಟ್ಟಕೊನೆಯ ಆಸರೆಯನ್ನೂ ಚಿವುಟಿದಂತಾದೀತೆ?

ದ್ವಂದ್ವ ಗಡಬಾಗುತ್ತಿದೆ. ಈ ಮಧ್ಯೆ ಹೀತರ್ ಅಪ್ಪೆಲ್ಲಾ ಸಂಭ್ರಮದಿಂದ ಜನ್ಮಕೊಟ್ಟ ಮರಿ ಅಸುನೀಗಿದೆ. ●




ರೇಡಿಯೊ ಪ್ರೇಕ್ಷಕ ಜೋಡಿಸಿಕೊಂಡ ಕಕಾಪೊ.

ನ್ಯೂಜೆಲ್ಯಾಂಡ್‌ನ ಈ ಜಂಗಲ್‌ನಲ್ಲಿ ಕಕಾಪೊ ಒಂದೆರಡಾದರೂ ಉಳಿದಿವೆಯೆ ? ಉಳಿದಾವೆಯೆ ?



ಮಳೆಗಾಲದಲ್ಲಿ ಭೋರ್ಗರೆದು ಹರಿದು ಹೋಗುವ ನೀರನ್ನು ಗುಜರಾತಿನ ರೈತನೊಬ್ಬ ಬಾವಿಯ ಕಡೆ ತಿರುಗಿಸಿದ. ಏನಾಶ್ಚರ್ಯ! ಬೇಸಿಗೆಯಲ್ಲಿ ಅವನ ಬಾವಿ ಬತ್ತಲೇ ಇಲ್ಲ. ಈ ವಿಧಾನದಿಂದ ಅಂತರ್ಜಲವನ್ನು ಮರುಭರ್ತಿ ಮಾಡುವ ಕಾರ್ಯ ಈಗ ಇಡೀ ಗುಜರಾತಿಗೂ ದೂರದ ರಾಜ್ಯಗಳಿಗೂ ಹಬ್ಬುತ್ತಿದೆ. ನಗರಗಳಲ್ಲೂ ತಾರಸಿಯ ನೀರನ್ನು ಬಾವಿಗೆ ತುಂಬುವ ಆಂದೋಳನವೇ ಆರಂಭವಾಗಿದೆ.



ಮಳೆ ಬಂದಾಗ ಜೀವಜಲ ತುಂಬಿಕೊಂಡಿತು ಇಳೆ... ಬಾವಿಗಳಿಂದ ಸೌರಾಷ್ಟ್ರದ ಬದುಕು ಹಸಿರಾಗುತ್ತಿದೆ.



ಜನಾಂದೋಳನವಾದ

ಭಾರತದ ಭೂಪಟದಲ್ಲಿ ಎದ್ದು ಕಾಣುವ ಭಾಗ ಯಾವುದೆಂದು ನಿಮಗೆ ಗೊತ್ತಿರಬೇಕಲ್ಲ? ಕಚ್ಛದ ರಣದ ಪಕ್ಕದಲ್ಲಿ ಮುಂಬೈಗಿಂತ ತುಸು ಮೇಲೆ, ಬೋಗುಣಿಯಂತಿರುವ ಭಾಗ? ಅದೇ ಗುಜರಾತಿನ ಸೌರಾಷ್ಟ್ರ. ಅಲ್ಲಿನ ರೈತರು ಇಡೀ ದೇಶಕ್ಕೆ ಎದ್ದು ಕಾಣುವಂಥ ಮಾದರಿಯ ಕೆಲಸವೊಂದನ್ನು ಸಾಧಿಸಿ ತೋರಿಸಿದ್ದಾರೆ.

ಕಛ್-ಸೌರಾಷ್ಟ್ರ, ಗುಜರಾತ್ ರಾಜ್ಯದ ಅತ್ಯಂತ ಬರಪೀಡಿತ ಪ್ರದೇಶ. ಆಕಾರದಲ್ಲಿ ಮಗುಚಿಟ್ಟ ತಾಸರನ್ನು ಹೋಲುವ ಸೌರಾಷ್ಟ್ರಕ್ಕೆ ಪಾಪ, ಪ್ರತಿ ವರ್ಷದರಲ್ಲಿ 2-3 ವರ್ಷ ಭಣಭಣ. ಪರಿಸ್ಥಿತಿ ಸುಧಾರಿಸಲು ರಾಜ್ಯ ಸರಕಾರ ನಡೆಸುವ ಭಗೀರಥಯತ್ನ ಹಿಲ್ಲರೆ ವಿರ್ಚಿನದಲ್ಲ. ಆಜೆ ಅಣೆಕಟ್ಟಿಗೆ ಆದಷ್ಟೋ ದೂರದಿಂದ ಟ್ಯಾಂಕರಿನಲ್ಲಿ ನೀರು ತರಿಸಿ ಸುರಿದದ್ದು, ರಾಜಧಾನಿ ಗಾಂಧೀನಗರದಿಂದ ನವಹಿ ನೀರಿನ ಟ್ರೈನುಗಳನ್ನು ಓಡಿಸಿದ್ದು...

ಕಡು ಬೇಸಿಗೆಯಲ್ಲಿ ನೀರಿಗೆ ಲೀಟರಿಗೆ 60 ೈಸೆಯಿಂದ ಒಂದು ರೂಪಾಯಿ ಕಕ್ಕಬೇಕು. ಾಜ್‌ಕೋಟ್ ನಗರಪಾಲಿಕೆಯ ಹೊರವಲಯದ ಯಾ, ಮಾನ, ಕಾಲವಾಡ್‌ಗಳ ಸ್ಥಿತಿ ಇನ್ನೂ ಸ್ತರ. ಪ್ರತಿ ಕುಟುಂಬ ದಿನಕ್ಕೆ ನೀರಿಗಾಗಿಯೇ ರೂಪಾಯಿ ಸುರಿಯಬೇಕಾದ ಅನಿವಾರ್ಯತೆ. ್ಯಾಂಕರಿನಲ್ಲಿ ಬರುವ ನೀರು.

ಸೌರಾಷ್ಟ್ರದಲ್ಲಿ ಹನ್ನೆರಡೂ ತಿಂಗಳು ಹರಿಯುವ ನದಿಗಳಿಲ್ಲ. ತೆರೆದ ಬಾವಿಯೇ ಇಲ್ಲಿ ಕೃಷಿಗೆ ಮುಖ್ಯ ನೀರಾಶ್ರಯ. ಪ್ರತಿಯೊಂದೂ ಮೂರೂವರೆ ಯಿಂದ 4 ಲಕ್ಷ ನೀರು ಹಿಡಿಸುವ ದೊಡ್ಡ ಬಾವಿ. ಸೌರಾಷ್ಟ್ರದ ಆರು ಜಿಲ್ಲೆಗಳಲ್ಲಿ ಸುಮಾರು ಏಳು ಲಕ್ಷ ಬಾವಿಗಳಿವೆ.

ಅಭೂತಪೂರ್ವ ಕ್ಷಾಮ


1985ರಿಂದ 87ರವರೆಗಿನ ಪ್ರಕೃತಿಯ ರೌದ್ರ ಮುಖವನ್ನು ಯಾವ ಸೌರಾಷ್ಟ್ರಿಗನೂ ಮರೆಯಲಾರ. "ಅದೊಂದು ಭಯಾನಕ ಕನಸು. ರಾಜ್ಯ ಕಂಡ ಅತಿ ಕೆಟ್ಟ ಬರಗಾಲ" ಎಂದು ಪತ್ರಕರ್ತ ನಟವರ್‌ಸಿನ್ಹ ಚೌಹಾಣ್ ವಿವರಿಸುತ್ತಾರೆ. "ಜನ ಸ್ನಾನದ ನೀರನ್ನು ಮರುಬಳಸಲು ಕಲಿತರು. ಕುಡಿಯುವ ನೀರನ್ನು 300 ಕಿಲೋ ಮೀಟರ್ ದೂರದ ಗಾಂಧಿನಗರದಿಂದ ತರಬೇಕಾಯಿತು. ಸಾವಿರಾರು ಕುಟುಂಬಗಳು ದಕ್ಷಿಣ ಗುಜರಾತ್ ಮತ್ತಿತರ ಕಡೆ ವಲಸೆ ಹೋದವು. ಮೇವನ್ನು ವಿಶೇಷ ರೈಲುಗಳಲ್ಲಿ ಮಹಾರಾಷ್ಟ್ರ, ಮಧ್ಯಪ್ರದೇಶ ಗಳಿಂದ ತಂದೊದಗಿಸಬೇಕಾಯಿತು. ಆಳಿದುಳಿದ ಮರದ ಹಸಿರು ರೆಂಬೆಗಳನ್ನುಣಿಸಿ ಕೆಲವರು ತಮ್ಮ ಜಾನುವಾರುಗಳನ್ನುಳಿಸಿಕೊಂಡರು. ಇನ್ನುಳಿದವು ಪ್ರಾಣ ಬಿಟ್ಟವು. ಯಾವುದೇ ಹಳ್ಳಿಗೆ ಹೋದರೂ ಜಾನುವಾರುಗಳ ಅಸ್ಥಿಪಂಜರ. ಆ ದಾರುಣ ದೃಶ್ಯ ಜೀವಮಾನವಿಡೀ ಮರೆಯದಂಥದ್ದು. ನೆನೆದರೆ ಈಗಲೂ ಮೈ ಜುಮ್ಮೆನ್ನುತ್ತದೆ."

ನೆಲಗಡಲೆ, ಹತ್ತಿ ಮತ್ತು ನವಣೆ ಇಲ್ಲಿನ ಮುಖ್ಯ ಬೆಳೆಗಳು. ಶ್ರಮಜೀವಿಗಳಾದ ಇಲ್ಲಿನ ರೈತರು ಕೃಷಿಗೆ ಬೇಕಾದಷ್ಟು ನೀರು ಪಡೆದರೆ ಉತ್ಪಾದನೆ ನಿಶ್ಚಿತ. 20-25 ದಿನಗಳಲ್ಲಿ 300-500 ಮಿಲಿಮೀಟರ್ ಮಳೆಯಷ್ಟೇ ಸುರಿಯುತ್ತದೆ. ಅದೂ ನಸೀಬು ಚೆನ್ನಾಗಿರುವ ವರ್ಷಗಳಲ್ಲಿ.

85ರಿಂದ 87ರ ನಡುವೆ ಸೌರಾಷ್ಟ್ರದ ಬಹುತೇಕ ಬಾವಿಗಳು ಬತ್ತಿದವು. ನೀರಿಗಾಗಿ ಹೆಂಗಳೆಯರು ಪಟ್ಟ ಪಾಡು ಹೇಳತೀರದು. 1988ರಲ್ಲಿ ಮಳೆ ಬಿದ್ದಿತು.

ದಾರಿ ತೋರಿದ ರೈತ

ಸರಕಾರ ಬೀಸುವ ದೊಣ್ಣೆಯಿಂದ ತಪ್ಪಿಸುವಂತಹ ತಾತ್ಕಾಲಿಕ ಪರಿಹಾರದಲ್ಲಿ ಮಾತ್ರ ಸಂತೃಪ್ತವಾಗಿದ್ದಾಗ, ಧೊರಾಜಿಯ ರೈತನೊಬ್ಬನಿಗೆ ಹೊಸದೊಂದು ಯೋಚನೆ ಬಂತು. ಮಳೆಗಾಲದಲ್ಲಿ ಹರಿದು ಬರುವ ಮಳೆ ನೀರನ್ನು ಕೂಡಲೆ ತನ್ನ ಬಾವಿಗೆ ತುಂಬುವ ವ್ಯವಸ್ಥೆ ಮಾಡಿದ. ಸುತ್ತಲಿನ ಹಳ್ಳಿಗರಿಂದ ಎಚ್ಚರಿಕೆ. 'ನಿನ್ನ ಬಾವಿ ಮಣ್ಣು ತುಂಬಿ ಮುಚ್ಚೀತು' 'ಆದದ್ದಾಗಲಿ', ಎಂದು ರೈತ ರಾಮ್‌ಜಿ ಭಾಯ್ ಮನ್‌ಜಿ ಭಾಯ್ ಹೇಳಿದ.



ಸೌರಾಷ್ಟ್ರ ಲೋಕ ಮಂಚದ ಜಲಸಂಚಯನ ಅಭಿಯಾನ ಸಭೆ: ನೀರು ಯಾರಿಗೆ ಬೇಡ?

ಜಲ ಮರುಪೂರಣ

"ಕಳೆದ ಮೂರು ವರ್ಷ ನೀರಿಗಾಗಿ ಬಂದ ಕಷ್ಟ ಅದೆಷ್ಟು! ಈ ಪ್ರಯೋಗ ನೋಡಿಯೇಬಿಡುತ್ತೇನೆ" ಏನಾಶ್ಚರ್ಯ! ಮುಂದಿನ ಬೇಸಗೆಯಲ್ಲಿ ಸುತ್ತಲಿನ ಬಾವಿಯಲ್ಲಿ ನೀರಿಲ್ಲ ರಾಮ್‌ಜಿ ಭಾಯಿಯ ಬಾವಿಯಲ್ಲಿ ಸಮೃದ್ಧ ನೀರು.

ಯಾವುದೇ ಜಲಸಂರಕ್ಷಣಾ ಪಠ್ಯ ಪುಸ್ತಕದ

ಒರಿಸ್ಸಾಕ್ಕೂ ಹಬ್ಬಿದ ಜಲ ಮರುಪೂರಣ ಪ್ರಜ್ಞೆ. ರಾಜಕೀಯ ನಾಯಕ ನವೀನ ಪಟ್ನಾಯಕ್, ರಾಂಘಾದ ರಾಜಮಾತೆ ಸುಗುಣ ಕುಮಾರಿ ದೇವಿ ಮತ್ತು ಸಬ್ ಕಲೆಕ್ಟರ್ ಚಿತ್ರಾ ಅರುಮುಗಂ ಜೊತೆ ಜಲಸಂರಕ್ಷಣೆಯ ಹರಿಕಾರ ಅಂಟಾಲಾ ಅವರು ಒರಿಸ್ಸಾದ ಮುಕುಂದಪುರ ಗ್ರಾಮದಲ್ಲಿ.



ವಿಧಾನ ಇದಲ್ಲ, ಆದರೆ ಫಲಕಾರಿ. ಈ ಚಟುವಟಿಕೆ ಗಮನಿಸಿದ ಊರ ಹಿರಿಯರೊಬ್ಬರ ಮೇಲೆ ಅದು ತುಂಬಾ ಪ್ರಭಾವ ಬೀರಿತು. ಆ ಹಿರಿಯರೇ ಶ್ಯಾಮ್‌ಜಿ ಭಾಯಿ ಅಂಟಾಲಾ. ಗುಜರಾತಿ ದಿನ ಪತ್ರಿಕೆಯೊಂದರ ಪ್ರಸಾರ ಪ್ರಬಂಧಕ. ಪ್ರತಿವರ್ಷ ದೂರದಿಂದ ಬರುವ ಟ್ಯಾಂಕರ್ ನೀರನ್ನು ಆಶ್ರಯಿಸುವ ಅಮಿತ ವೆಚ್ಚದ ವಿಧಾನಕ್ಕೆ ಬದಲು ಈ ಅಲ್ಪ ಯತ್ನ ಗುಜರಾತಿಗೆ ಬೇಕು- ಎಂದು ಅವರಿಗೆ ಅನಿಸಿತು. ಮಿತ್ರರೊಂದಿಗೆ ಚರ್ಚಿಸಿದಾಗ ಈ ಬಾವಿ 'ಮರುಪೂರಣ' ವಿಧಾನ ಸುಧಾರಿತ ರೂಪವನ್ನು ಪಡೆಯಿತು. ನೀರಾವರಿ ಬಾವಿಗಳಿಗೆ ಮಾತ್ರ ಈ ವಿಧಾನ ಸೂಕ್ತವಾಗಿದೆ.

ಬಾವಿಗೆ ಬರುವ ನೀರು ಮರಳು, ಕಲ್ಲು, ಕಸ ಕಡ್ಡಿ ಹೊತ್ತು ತರಬಾರದು. ಇದಕ್ಕಾಗಿ ಬಾವಿಯ ಪಕ್ಕದಲ್ಲೇ ಒಂದು ಆರಡಿ ಚೌಕದ ಹೊಂಡ. ಈ ಹೊಂಡದ ತಳಭಾಗದ ಸ್ವಲ್ಪ ಮೇಲಿನಿಂದ ಬಾವಿಗೆ ಪೈಪು ಸಂಪರ್ಕ. ಹೊಂಡದಲ್ಲಿ ಕಸಕಡ್ಡಿ ಮರಳು ತಡೆಯಲು ವಿವಿಧ ಗಾತ್ರದ ಕಲ್ಲು, ಹರಳುಕಲ್ಲುಗಳು ಮೂರ್ನಾಲ್ಕು ಪದರ. ಭೂಮಿಯ ಮೇಲ್ಭಾಗದಿಂದ ಹರಿದು ಬರುವ ಮಳೆ ನೀರು ನೇರ ಪುಟ್ಟ ಹೊಂಡಕ್ಕೆ ಬರುವಂತೆ ಕಣಿಗಳು. ಈ ಏರ್ಪಾಡಿಗೆ ತಗಲುವ ಖರ್ಚು ಗರಿಷ್ಠ ಸಾವಿರ ರೂಪಾಯಿ.

ಹತ್ತಿರವೇ ಹೊಳೆ, ನದಿಗಳಿದ್ದರೆ ಅಲ್ಲಿಂದ ಒಂಬತ್ತು ಇಂಚು ವ್ಯಾಸದ ಪೈಪು ಸಂಪರ್ಕ. ಹೇಗಿದ್ದರೂ ಮಳೆಗಾಲದಲ್ಲಿ ನಾಲ್ಕು ಬಾರಿ ನದಿ ಉಕ್ಕಿ ಹರಿಯುತ್ತದೆ. ಆಗೆಲ್ಲ ನೀರು ಪೈಪುಗಳಲ್ಲಿ ಹರಿದು ಬಾವಿ ತುಂಬಿಸಿದರೆ ಸಾಕು.

ಕರಪತ್ರ ಮುದ್ರಿಸಿ ಚೀಲದಲ್ಲಿ ಹಾಕಿ ರಜೆಗಳಲ್ಲಿ ರೈತರ ಸಂಪರ್ಕ ಮಾಡಿದರು. ಸುಲಭದಲ್ಲಿ ಮಳೆ ನೀರಿಂಗಿಸುವ ಉಪಾಯ ತಿಳಿಹೇಳಿದರು. ಎಲ್ಲಾ ಕೇಳಿದ ಮೇಲೆ ರೈತರು ಹಾಕಿದ ಪ್ರಶ್ನೆ: 'ಎಲ್ಲಾ ಸರಿ, ನಮ್ಮ ಬಾವಿಗಳಿಗೆ ಮಳೆ ನೀರು ತುಂಬುವ ಏರ್ಪಾಡು ಮಾಡಿದರೆ ಎಷ್ಟು ಸಬ್ಸಿಡಿ ಸಿಗ್ತದೆ?'

ಅಂಟಾಲಾರ ಸಾಮೂಹಿಕ ಚಿಂತನೆ ಇಂಥ ಚಿಕ್ಕ ವೈಫಲ್ಯಗಳಿಂದ ಕರಗಿ ಹೋಗದಷ್ಟು ಗಾಢ. ಕೃಷಿ ಕಾರ್ಮಿಕ ಕುಟುಂಬದಲ್ಲಿ ಹುಟ್ಟಿ ಶಾಲಾ ಮೆಟ್ಟಿಲು ಹತ್ತದಿದ್ದರೂ, ಸ್ವಪ್ರಯತ್ನದಿಂದ ಜೀವನದ ಏಣಿ ಮೆಟ್ಟಿ, ಪಳಗಿದ ವ್ಯಕ್ತಿ. ಸಮಾನಾಸಕ್ತರನ್ನು ಒಂದುಗೂಡಿಸಿ ಅವರು 'ಸೌರಾಷ್ಟ್ರ ಲೋಕಮಂಚ ಟ್ರಸ್ಟ್' (ಸೌಲೋಮ) ರೂಪಿಸಿದರು. ಗ್ರಾಮಾಭಿವೃದ್ಧಿ, ಅದರಲ್ಲೂ ಜಲಸಂರಕ್ಷಣೆ ಮೊದಲ ಗುರಿ. ಸೌಲೋಮ ಮೊದಲು ಸಂಪರ್ಕಿಸಿದುದು ಧಾರ್ಮಿಕ ಮುಖಂಡರನ್ನು. ಧರ್ಮಗುರುಗಳಿಂದ ಸ್ಪಂದನ. "ಇವರು ಹೇಳುವುದನ್ನು ಅನುಸರಿಸದಿದ್ದರೆ ಸೌರಾಷ್ಟ್ರ ಮರುಭೂಮಿಯಾದೀತು". ಅವರು ಅನುಯಾಯಿಗಳನ್ನು ಎಚ್ಚರಿಸಿದರು.

ಮದುವೆ ವೇಳೆ ಮಾರ್ಗದರ್ಶನ

ಇದೇ ಸಂದರ್ಭದಲ್ಲಿ ಗುಜರಾತಿನಲ್ಲಿ ಮದುವೆಗಳ ದುಂದುವೆಚ್ಚದಿಂದ ಜನರು ಬೇಸತ್ತಿದ್ದರು. ಸಾಮೂಹಿಕ ವಿವಾಹಗಳತ್ತ ಒಲವು ಮೂಡಿತ್ತು. ಸೌಲೋಮ ಪ್ರತಿನಿಧಿಗಳು ಪ್ರತಿ ಸಾಮೂಹಿಕ ಮದುವೆಗಳಲ್ಲಿ ಹಾಜರು. ಶಾಮಿಯಾನ ಹಾಕಿ

"ಬಾವಿ ಮರುಪೂರಣ"ದ ಮಾದರಿ ಎದುರಿಟ್ಟು ಜನರಿಗೆ ಮಾರ್ಗದರ್ಶನ. 1994-95ರಲ್ಲಿ ಸೌರಾಷ್ಟ್ರದಲ್ಲಿ ನಡೆದ ಸಾಮೂಹಿಕ ವಿವಾಹ 42. ಇನ್ನೂರು ವಧೂವರರಿಗೆ ಕಲ್ಯಾಣ ಯೋಗ. ಪ್ರತಿ ಮದುವೆ ಸಮಾರಂಭದಲ್ಲಿ 20ರಿಂದ 25,000 ಅತಿಥಿಗಳು. ಒಂದೇ ವರ್ಷದಲ್ಲಿ ಮದುವೆಗೆ ಹೋದ ಎಂಟು ಲಕ್ಷ ಮಂದಿ ಮರುಪೂರಣದ ಬಗ್ಗೆ ಅರಿತರು.

ಧರ್ಮಗುರುಗಳೇ ಒತ್ತಿ ಹೇಳತೊಡಗಿದ ನಂತರ ಹಳ್ಳಿಗರ ಮಾನಸಿಕ ತಡೆಗಳು ಕುಗ್ಗಿದವು. "ನೋಡಿಯೇ ಬಿಡೋಣ" ಎಂದು ಒಂದಷ್ಟು ಜನ ಮಳೆನೀರು ಇಂಗಿಸುವ ವ್ಯವಸ್ಥೆ ಮಾಡಿಕೊಂಡರು. ಪರಿಣಾಮ ಆಶ್ಚರ್ಯಕರ. ಬಾಯಿಯಿಂದ ಬಾಯಿಗೆ ಸುದ್ದಿ. ಸದ್ದಿಲ್ಲದ ಆಂದೋಲನಕ್ಕೆ ನಾಂದಿ.

ಅಂಟಾಲಾ ಬೆಟ್ಟು ಮಾಡುತ್ತಾರೆ. 'ಈ ಮಳೆ ನೀರಿಂಗಿಸುವ ವಿಧಾನ ಜನರ ಬಳಿ ಇರುವ ಅಗ್ಗದ ಉಪಾಯ. ಮಳೆನೀರು ಸಮುದ್ರ ಸೇರುವುದನ್ನು ತಪ್ಪಿಸದೇ ಸ್ಥಿತಿ ಸುಧಾರಿಸುವುದು ಅಸಾಧ್ಯ.'

ಈಗ ಸೌಲೋಮದ ಬಳಿ ಜಲಮರುಪೂರಣದ ಬಗ್ಗೆ ಸಾಮೂಹಿಕ ಪ್ರಜ್ಞೆ ಮೂಡಿಸುವ ಹಲವು ಅಸ್ತ್ರಗಳಿವೆ. ಅಧ್ಯಯನ ಶಿಬಿರ, ಸರಪಂಚ ಸಮ್ಮೇಳನ, ಮಹಿಳಾ ಶಿಬಿರ, ಸರಕಾರಿ ಶಿಕ್ಷಣ ಘಟಕ, ಮಕ್ಕಳಿಗಾಗಿ ಫಿಲ್ಮ್ ಶೋ, ಜಲಸಂಚಯನಾ ಮೋರ್ಚಾ ಇತ್ಯಾದಿ. ಆಗಾಗ ವಾರ್ತಾಪತ್ರಗಳನ್ನು ಹೊರತರಲಾಗುತ್ತದೆ. ಇವುಗಳ ಜೊತೆಗೆ ಗ್ರಾಮ, ತಾಲೂಕು ಜಿಲ್ಲಾ ಮಟ್ಟದ ಸಮ್ಮೇಳನ.


ಜಾಮ್‌ನಗರ ಜಿಲ್ಲೆಯ ಶೇಖ್‌ಪಾಟ್ ಗ್ರಾಮದ ಮಂಗಳ ಸಿನ್ಹ ಸೋಧಾ ಜಮೀನಿನ ಕಥೆ ಕೇಳಿ. ಊರಲ್ಲಿ ಇವರು ಪ್ರಭಾವೀ ರೈತರು. ಚಿಕ್ಕೇರಿ ಸಹಕಾರಿ ಸಂಘದ ಅಧ್ಯಕ್ಷ. ಅವರ ವಿನಂತಿ ಮೇರೆಗೆ ಸೌಲೋಮ ಚಿಕ್ಕೇರಿಯಲ್ಲಿ ಸಭೆ ನಡೆಸಿತು. ರೈತರಿಗೆ ಈ ಪ್ರಯೋಗ ಮಾಡುವ ಹುಮ್ಮಸ್ಸಾಯಿತು.

ಮಂಗಳ ಸಿನ್ಹರದು 80 ಅಡಿ ಆಳದ ಬಾವಿ. ಇದ್ದದ್ದು ಎರಡಡಿ ನೀರು. 95ರಿಂದ ಮರುಪೂರಣ ಯತ್ನ. ಒಂದೇ ವರ್ಷದಲ್ಲಿ ನೀರ ಮಟ್ಟ ಎಂಟು ಅಡಿಗೇರಿತು. ಮರು ವರ್ಷ 20 ಅಡಿ. ವರ್ಷದಲ್ಲಿ 20,000 ಹೆಚ್ಚುವರಿ ಆದಾಯ ಬಂದಿತು.


ಗುಂಡಸಾರ ಗ್ರಾಮದಲ್ಲಿ 277 ಬಾವಿಗಳಿವೆ. ಇದರಲ್ಲಿ 210 ಬಾವಿಗಳೂ ಇಂದು ಪುನರುಜ್ಜೀವನ ಹೊಂದಿವೆ. ಹೆಚ್ಚುವರಿ ನೆಲಗಡಲೆ ಬೆಳೆಯಿಂದ 18 ಲಕ್ಷ ರೂಪಾಯಿ ಆದಾಯವಾಯಿತು.

ಮಳೆನೀರನ್ನು ಬಾವಿಗೆ ಮರಳಿಸುವ ಈ ವಿಧಾನ ನೀರಾವರಿಯ ಬಾವಿಗಳಿಗೆ ಮಾತ್ರ ಸೂಕ್ತ. ಬಾವಿಯಲ್ಲಿ ಎಷ್ಟು ನೀರು ವೃದ್ಧಿಯಾಗುತ್ತದೆ ಎಂಬುದನ್ನನುಸರಿಸಿ ರೈತರು ಈಗ ಎರಡು ಅಥವಾ ಮೂರು ಬೆಳೆ ತೆಗೆಯತೊಡಗಿದ್ದಾರೆ.


ಯಾವುದೇ ಸರಕಾರೀ ಗ್ರಾಮಾಭಿವೃದ್ಧಿ ಯೋಜನೆ ಗಳಿಸದಂತಹ ಒಲವು ಮತ್ತು ಅಲ್ಪಾವಧಿಯಲ್ಲೇ ಸಾಲ್ವೆಸೆಗಳಿಗೆ ಹಬ್ಬಿದ ಕಂತ್ರಜ್ಞಾನ ಈ ಜನಪ್ರಿಯತೆಗೆ ಕಾರಣ. ಮಳೆನೀರು ಬಿದ್ದಲ್ಲೇ ಇಂಗಿಸುವ ಅಗ್ಗದ, ಶ್ರೀಸಾಮಾನ್ಯ ರೈತರಿಗೆ ಎಟಕುವ, ಅವರೇ ಮಾಡಿಕೊಳ್ಳಬಹುದಾದ ವಿಧಾನ.



ಜಲ ಮರುಪೂರಣ ವಿಧಾನ. ಸೋಸು ಹೊಂಡದಲ್ಲಿ ಹರಳುಕಲ್ಲಿನ ಪದರ ತುಂಬಿರುವುದನ್ನು ಗಮನಿಸಿ.



ಮನೆ ಚಾವಣಿಯಿಂದ ಬಿದ್ದ ಮಳೆನೀರಿನಿಂದ ಕೊಳವೆ ಬಾವಿಯ ಮರುಪೂರಣ.



'ಸೌಲೋಮ' ಕಾರ್ಯಕರ್ತರಿಂದ ಸಾಮೂಹಿಕ ವಿವಾಹಗಳಲ್ಲಿ ಮಳೆ ನೀರು ಇಂಗಿಸುವ ವಿಧಾನದ ವಿವರ.

ಬೇರುಬಿಟ್ಟ ಆಂದೋಳನ

ಮರುಪೂರಣದಿಂದಾದ ಲಾಭ ತಿಳಿದು ಜನರ ಒಲವು ಹೆಚ್ಚುತ್ತಾ ಹೋಯಿತು. 1992-93ರಲ್ಲಿ 3,000 ಬಾವಿಗಳಿಗೆ ಮಳೆನೀರು ಹರಿಯಬಿಟ್ಟರೆ, ಮುಂದಿನ ವರ್ಷ ಈ ಸಂಖ್ಯೆ 10,000ಕ್ಕೆ ಏರಿತು. 1994-95ರಲ್ಲಿ ಆರು ಜಿಲ್ಲೆಗಳಲ್ಲಿ ಬತ್ತಿದ್ದ ಏಳು ಲಕ್ಷ ಬಾವಿಗಳಲ್ಲಿ ಒಂದು ಲಕ್ಷ ಬಾವಿಗಳನ್ನು ಪುನಶ್ಚೇತನಗೊಳಿಸುವುದು ಸೌಲೋಮದ ಗುರಿಯಾಗಿತ್ತು. ಆದರೆ ನಿರೀಕ್ಷೆ ಮೀರಿದ ಫಲಿತಾಂಶ ಸಿಕ್ಕಿತು. "ನಮ್ಮ ಅಂದಾಜಿನ ಪ್ರಕಾರ ಮೂರು ಲಕ್ಷ ಬಾವಿಗಳಿಗೆ ಮರುಪೂರಣ ನಡೆದಿದೆ, ನಡೆಯುತ್ತಿದೆ" ಎನ್ನುತ್ತಾರೆ ಶ್ಯಾಮ್‌ಜೀ ಭಾಯಿ.


ಒಂದು ಅಂದಾಜಿನ ಪ್ರಕಾರ, ಈ ವರೆಗೆ ಜನರೇ ಮಾಡಿಕೊಂಡ ಜಲವೃದ್ಧಿಯಿಂದ ಮೂರು ಲಕ್ಷ ಹೆಕ್ಟೇರ್ ಜಾಗದಲ್ಲಿ ಕೃಷಿ ಸಾಧ್ಯವಾಗಿದೆ. ಅಂದರೆ, 150 ಕೋಟಿ ಹೆಚ್ಚುವರಿ ವರಮಾನ. ಸಾರ್ವಜನಿಕ ಬೊಕ್ಕಸಕ್ಕೆ ಚಿಕ್ಕಾಸು ಖರ್ಚಿಲ್ಲದೆ!

ಅಲ್ಲ, ಬಾವಿ ತುಂಬ ನೀರು ತುಂಬಿಸಿದರೆ, ಅದರಿಂದ ಜಲವೃದ್ಧಿಯಾಗುವುದು ಹೇಗೆ?

ಮಳೆಗಾಲದಲ್ಲಿ ನದಿ ನೀರು ಅಥವಾ

ಹರಿದಿಳಿಯುವ ಮಳೆನೀರಿನಿಂದ ಬಾವಿಗಳು ತುಂಬಿಕೊಳ್ಳುತ್ತವೆ. ಹೀಗೆ ತುಂಬಿದ ನೀರು 2-3 ದಿನಗಳಲ್ಲಿ ತಗ್ಗುತ್ತದೆ. ಏಕೆಂದರೆ ಬಾವಿಯ ಸುತ್ತಲಿನ ಭೂಮಿ ಅದನ್ನು ಹೀರುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕಾರು ಬಾರಿ ಈ ಕ್ರಿಯೆಯು ನಡೆಯುತ್ತದೆ. ಕ್ರಮೇಣ ಜಲ ಮಟ್ಟ ಏರುತ್ತದೆ. ಮಳೆಗಾಲಾನಂತರ ಒಂದು ಮಟ್ಟದಲ್ಲಿ ನೀರು ನಿಂತಿರುತ್ತದೆ. ಈ ನೀರನ್ನು ಎತ್ತಿದಂತೆಲ್ಲಾ ಸುತ್ತಲಿನ ಮಣ್ಣು ಹೀರಿಕೊಂಡ ನೀರು ನಿಧಾನವಾಗಿ ಬಾವಿಗಿಳಿಯುತ್ತದೆ. ಇಡೀ ಊರಿಗೆ ಊರೇ ಮರುಪೂರಣ ಏರುತ್ತಾ ಹೋಗುವ ಜಲಮಟ್ಟ ಸಾಮೂಹಿಕ ಪ್ರಯೋಜನ ನೀಡುತ್ತದೆ. ವರ್ಷದಿಂದ ವರ್ಷಕ್ಕೆ ಜಲಮಟ್ಟ ಹಾಗೂ ಬಾವಿಯ ಕನಿಷ್ಠ ಮಟ್ಟ ಏರುತ್ತಲೇ ಹೋಗುತ್ತದೆ.

ನೀರಿನ ಅತಿ ಬಳಕೆ, ಮುನಿಯುತ್ತಿರುವ ಮಳೆರಾಯನಿಂದಾಗಿ ಗುಜರಾತಿನ ಅಂತರ್ಜಲದ ಮಟ್ಟ ವರ್ಷೇವರ್ಷೇ ಇಳಿಯುತ್ತದೆ. ತೆರೆದ ಬಾವಿಗಳಲ್ಲದು 70-80 ಅಡಿಗಿಳಿದರೆ ಕೊಳವೆ



ಉಳಿಸಿದ ನೀರಿನಿಂದ ಬೆಳೆಸಿದ ಬೆಳೆ.

ಬಾವಿಗಳನ್ನು 700 ರಿಂದ 1000 ಅಡಿ ವರೆಗೆ ಕೊರೆಸಬೇಕಾಗಿದೆ.

ಜಾಮ್‌ನಗರಗಳಂತಹ ಕರಾವಳಿ ಜಿಲ್ಲೆಗಳಲ್ಲಿ ಇಳಿದ ಸಿಹಿನೀರಿನ ಮಟ್ಟದಿಂದಾಗಿ ಉಪ್ಪು ನೀರಿನ ಆಕ್ರಮಣ ನಡೆದಿದೆ. ಕಡಲ ತೀರದ 7 ರಿಂದ 15 ಕಿಲೊ ಮೀಟರ್‌ಗಳಷ್ಟು ಒಳನಾಡು ಪ್ರದೇಶ ನಿಷ್ಪ್ರಯೋಜಕವಾಗಿದೆ. 1975 ರಲ್ಲಿ ಆಳ ಅಧ್ಯಯನ ಮಾಡಿದ ಗುಜರಾತಿನ ಭೂಗರ್ಭ ವಿಜ್ಞಾನಿಗಳು ಯುದ್ಧ ಸಿದ್ಧತೆಯಲ್ಲಿ ಪರಿಹಾರ ಯತ್ನ ಮಾಡದಿದ್ದರೆ ಈ ಶತಮಾನದ ಅಂತ್ಯಕ್ಕೆ ಕಛ್-ಸೌರಾಷ್ಟ್ರಗಳು ಮರುಭೂಮಿ ಆಗುವ ಭಯವಿದೆ ಎಂದು ಎಚ್ಚರಿಸಿದರು. 1978ರಲ್ಲಿ ಸರಕಾರ ಉಪ್ಪುನೀರು ಆಕ್ರಮಣ ತಡೆಯಲು 475 ಕೋಟಿ ರೂಪಾಯಿಗಳ 4 ಹಂತಗಳ ಯೋಜನೆ ಆರಂಭಿಸಿತು. 18 ವರ್ಷಗಳಲ್ಲಾದ ವೆಚ್ಚ 100 ಕೋಟಿ. ಫಲ? ಪರಿಹಾರ ಯತ್ನಗಳ ಫಲಿತಾಂಶಕ್ಕಿಂತ ವೇಗದಲ್ಲಿ ಉಪ್ಪುನೀರು ಒಳನುಗ್ಗುತ್ತಿದೆ.

ನೆರೆ ರಾಜ್ಯಗಳಲ್ಲೂ ಪರಿಣಾಮ

ಕಛ್-ಸೌರಾಷ್ಟ್ರಗಳ ಹಳ್ಳಿಹಳ್ಳಿಗಳಲ್ಲಿಂದು ಸೌಲೋಮದ ಕಾರ್ಯಕರ್ತರಿದ್ದಾರೆ. ಇಲ್ಲಿನ ಯಶಸ್ಸಿನ ಪ್ರಭಾವದಿಂದ ನೆರೆಯ ರಾಜಸ್ಥಾನದ ಶೇಖಾವತ್ ಸರಕಾರ ದೊಡ್ಡ ಯೋಜನೆ ರೂಪಿಸಿತು. ದಿನಪತ್ರಿಕೆಗಳ ಮುಖಪುಟದಲ್ಲಿ ಜಾಹೀರಾತು ನೀಡಿತು. ಸೌರಾಷ್ಟ್ರ ವಿಧಾನದ ಬಾವಿಯ ಮರುಪೂರಣಕ್ಕೆ ಚಿಕ್ಕ ರೈತರಿಗೆ 1800 ರೂ; ಇತರರಿಗೆ 1,200 ಸಬ್ಸಿಡಿ. ಅಲ್ಲಿನ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ನೀಡುವ ಮಾಹಿತಿ ಪ್ರಕಾರ 95-96 ರಲ್ಲಿ 17,421 ಬಾವಿಗಳು ಈರೀತಿ ಪುನರುಜ್ಜೀವನ ಪಡೆದಿವೆ.

ತಮಿಳುನಾಡಿನ ಜಯಲಲಿತಾ ಸರಕಾರ, ಒರಿಸ್ಸಾದ ನವೀನ್ ಪಟ್ನಾಯಕ್, ಕೇಂದ್ರ ಸರ್ಕಾರದ ಹೆಚ್ಚುವರಿ ಕಮಿಷನರ್, ಹೀಗೆ ಜಲ ಸಂರಕ್ಷಣೆಯ ಆಂದೋಳನದ ಅಧ್ಯಯನಕ್ಕಾಗಿ ಸೌರಾಷ್ಟ್ರಕ್ಕೆ ಭೇಟಿ ನೀಡುವ ನಾಯಕರ, ಅತಿ ಮುಖ್ಯ ವ್ಯಕ್ತಿಗಳ ಪಟ್ಟಿ ಬೆಳೆಯುತ್ತಿದೆ. ಗುಜರಾತ್ ಸರಕಾರದ ವಿನಂತಿ ಮೇರೆಗೆ ಅಲ್ಲಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯ ಈ ಆಂದೋಳನದ ಬಗ್ಗೆ ಸಮೀಕ್ಷೆ ನಡೆಸಿ ಸರಕಾರಕ್ಕೆ ವರದಿ ಸಲ್ಲಿಸಿದೆ.

ಅಂಟಾಲಾ ಕಳೆದ ವರ್ಷಾಂತ್ಯದಲ್ಲಿ ತಮ್ಮ ಹುದ್ದೆಯಿಂದ ನಿವೃತ್ತರಾಗಿದ್ದಾರೆ. ಆದರೆ ಆತ್ಮ ಸಂತೋಷದ 'ಜಲವಿಮೆ'ಯ ಚಟುವಟಿಕೆ ಹೆಚ್ಚಿದೆ. "ನನ್ನ ಭವಿಷ್ಯದ ಬದುಕೆಲ್ಲಾ ಇದಕ್ಕೆ ಮೀಸಲು" ಎಂದು ಅವರು ಹೇಳುತ್ತಾರೆ.

ಕೆಲವು ಹಳ್ಳಿಗಳಲ್ಲಂತೂ 'ಅಂಟಾಲಾಜೀ' ದೇವಸಮಾನ. ಅವರ ಭಕ್ತಿಭಾವದ ಮಾತಿಗೆ ನಸುನಗುವ ಶ್ಯಾಂಜಿ ಭಾಯ್ ಅಂಟಾಲಾ ಹೇಳುವುದು ಇಷ್ಟೆ "ಕ್ಷಣಕಾಲ ಸರ್ಕಾರವನ್ನು ಮರೆತುಬಿಡಿ. ಅದು ನಿಮಗೇನು ಮಾಡಿತೆಂದು ಕೇಳಲೇಬೇಡಿ. ಸ್ವಾವಲಂಬಿಗಳಾಗಿ. ನಿಮ್ಮ ನೀರಿನ ಸಮಸ್ಯೆಗೆ ಪರಿಹಾರ ನಿಮ್ಮಲ್ಲೇ ಇದೆ...

ಸೌಲೋಮ ತನ್ನ ಯಾವುದೇ ಚಟುವಟಿಕೆಗೆ ಸರಕಾರ ಅಥವಾ ವಿದೇಶಿ ಮೂಲಗಳಿಂದ ಹಣ ಪಡೆಯುತ್ತಿಲ್ಲ. ಎಳವೆಯಲ್ಲೇ ರಾಜಕಾರಣದಲ್ಲಿ ಹೊಕ್ಕು ಮನಸ್ಸಿಗೆ ಹಿಡಿಸದೆ ಹೊರಬಿದ್ದ ಅಂಟಾಲಾ ಅಂದೋಳನಕ್ಕೆ ರಾಜಕಾರಣಿಗಳನ್ನು ಸ್ವಾಗತಿಸುತ್ತಾರೆ. ಆದರೆ ಎಚ್ಚರಿಕೆಯೊಂದಿಗೆ: "ನಾವು ರಾಜಕಾರಣಿಗಳನ್ನು ದೂರ ಮಾಡುವುದಿಲ್ಲ. ಆದರೆ ನಮ್ಮ ಕೆಲಸದ ರಾಜಕೀಯ ಲಾಭ ಅವರು ತೆಗೆಯದಂತೆ ಎಚ್ಚರವಹಿಸುತ್ತೇವೆ."

ಹಳ್ಳಿಗರ ಚಟುವಟಿಕೆ

"ನಿಮ್ಮಲ್ಲಿ ಜಲಮಟ್ಟ ಏರಿದ—ಬಗ್ಗೆ ಅಂಕಿ-ಸಂಖ್ಯೆಗಳಿವೆಯೇ?" ಪ್ರಶ್ನಿಸಿದರೆ ಸೌಲೋಮ ಕಾರ್ಯದರ್ಶಿ ನಟವರ್ ಸಿನ್ಹ ಚೌಹಾಣ್ ಕೈ ಚೆಲ್ಲುತ್ತಾರೆ. "ಈ ಚಟುವಟಿಕೆ ನಡೆಸುವವರು ಹಳ್ಳಿಗರು. ಅವರಲ್ಲಿ ಆಗಿರುವ ಜಲವೃದ್ಧಿಯನ್ನಳೆಯಲು ಬೇಕಾದ ಉಪಕರಣ ಇಲ್ಲ. ಹಾಗಾಗಿ ಅಂಕಿ-ಅಂಶ ನಮ್ಮಲ್ಲಿಲ್ಲ. ಆದರೆ ಕೃಷಿ ಉತ್ಪಾದನೆಯಲ್ಲಾದ ಹೆಚ್ಚಳವನ್ನು ಕಣ್ಣಾರೆ ಕಾಣಬಹುದು: ಕೇಳಿ ಒರೆಗೆ ಹಚ್ಚಬಹುದು."

ಬಾವಿಗೆ ನೀರು ತುಂಬಿಸಿ ಇಂಗಿಸುವುದೊಂದೇ ಸೌಲೋಮದ ಅಸ್ತ್ರವಲ್ಲ. ಆದರಿದು ಮುಖ್ಯ ಅಸ್ತ್ರ. ಉಳಿದಂತೆ ತಡೆಗಟ್ಟ, ಬೋಳುಜಾಗದಲ್ಲಿ ಗಿಡ ನಾಟಿ, ಇಂಗು ಕೊಳ ವಿಧಾನಗಳಿಗೂ ಅದು ಪ್ರಚಾರ ನೀಡುತ್ತಿದೆ. ಗಮನಾರ್ಹ ಅಂಶವೆಂದರೆ ಈ ಇಡೀ ಆಂದೋಳನ ಸರಕಾರದ ಮಣ್ಣು-ನೀರು ಸಂರಕ್ಷಣ ಇಲಾಖೆಯ ಸಹಭಾಗಿತ್ವ ಅಥವಾ ಪಠ್ಯ ಪುಸ್ತಕ ತಂತ್ರಜ್ಞಾನದ ಅನುಷ್ಠಾನ ಇಲ್ಲದೆಯೇ ಅಭೂತಪೂರ್ವ ಯಶಸ್ಸು ಕಂಡಿದೆ. ದೇಶವಿದೇಶದ ಟಿವಿ ಚಾನೆಲ್‌ಗಳು ಈ ಬಗ್ಗೆ ಬೆಳಕು ಬೀರಿವೆ.

"ನಮ್ಮ ಟ್ರಸ್ಟಿನಲ್ಲಿ ರೈತರೂ ಸೇರಿದಂತೆ ಹಲವು ವೃತ್ತಿಯವರಿದ್ದಾರೆ ನಾವು ಕೆಲವು ಪತ್ರಕರ್ತರು. ಮಾಧ್ಯಮಗಳ ಸಂಪರ್ಕದಿಂದ ಹೆಚ್ಚು ಆರ್ಥಿಕಬಲ ಇಲ್ಲದೆಯೆ ಆಂದೋಳನದ ಮಾಹಿತಿ ಮತ್ತು ಜಲ ಸಂರಕ್ಷಣಾ ಪ್ರಜ್ಞೆ ಹಬ್ಬಿಸುವಲ್ಲಿ ನಮಗೆ ತುಂಬ ಉಪಕಾರವಾಗಿದೆ" ಚೌಹಾಣ್ ನೆನೆಯುತ್ತಾರೆ.

ನಗರಗಳೂ ಈ ಕಾಳಜಿಯಿಂದ ದೂರ ಉಳಿದಿಲ್ಲ. ರಾಜಕೋಟ್ ಪಟ್ಟಣ ಒಂದರಲ್ಲೇ ಹೆಚ್ಚು ಕಮ್ಮಿ 8,000 ಮನೆಗಳಲ್ಲಿ ತಾರಸಿ ನೀರನ್ನು ಪೈಪು ಮೂಲಕ ಕೊಳವೆ ಬಾವಿಗೆ ಸಂಪರ್ಕಿಸಿ ಮರುಪೂರಣ ನಡೆಸಲಾಗುತ್ತಿದೆ.

ನಿಕಟ ಭವಿಷ್ಯದಲ್ಲಿ ದೇಶ ಮಟ್ಟದ ಜಲ ಸಂರಕ್ಷಣ ರ್ಯಾಲಿ ನಡೆಸುವುದು ಸೌಲೋಮದ ಮುಂದಿನ ಗುರಿ. ಈಗಾಗಲೇ ದೇಶದ 12 ರಾಜ್ಯಗಳ 99 ಬರಪೀಡಿತ ಜಿಲ್ಲೆಗಳನ್ನು ಗುರುತಿಸಿದೆ. ಈ ಪಟ್ಟಿಯಲ್ಲಿ ಕರ್ನಾಟಕದ ಗುಲ್ಬರ್ಗಾ, ರಾಯಚೂರು, ವಿಜಾಪುರಗಳೂ ಸೇರಿವೆ.

'ನಮ್ಮಲ್ಲಿಗೆ ಬನ್ನಿ, ಮಾರ್ಗದರ್ಶನ ನೀಡಿ' ಎಂಬ ಕರೆಗಳು ಮಧ್ಯಪ್ರದೇಶ, ಒರಿಸ್ಸಾ, ಮಹಾರಾಷ್ಟ್ರದಿಂದ ಸೌಲೋಮ ಪದಾಧಿಕಾರಿಗಳಿಗೆ ಬರುತ್ತಿವೆ.

ಸೌರಾಷ್ಟ್ರದ ಮಟ್ಟಿಗೆ ಅಂಟಾಲಾ ಭಗೀರಥನ ಉತ್ತರಾಧಿಕಾರಿ. ಆ ಪುರಾಣ ಪುರುಷ ಶಿವನ ಜಟೆಯಿಂದ ಮಹಾ ಸಾಹಸ ಮಾಡಿ ಗಂಗೆಯನ್ನು ಭೂಮಿಗೆ ಇಳಿಸಿದರೆ ಈ ಶ್ರೀ ಸಾಮಾನ್ಯ ಬಿದ್ದ ನೀರೆಲ್ಲಾ ಸಮುದ್ರ ಪಾಲಾಗುವುದನ್ನು ಜನ ಯತ್ನದಿಂದ ತಡೆಗಟ್ಟಿದ ಜಲವಿಮೆಗಾರ.

ಆದರೆ... ಈ ದೇಶದಲ್ಲಾಗುವ ನೆಲಜಲದ ಅವನತಿಗೆ ತಡೆಹಾಕಲು ಇನ್ನೆಷ್ಟು ಅಂಟಾಲಾ, ಸೌಲೋಮಗಳು ಹುಟ್ಟಿ ಬರಬೇಕೋ.

ಬೊಮ್ಮನ ಅಳಿಲು – 'ಅಳಲು'

ಅರಣ್ಯದಲ್ಲಿ ಕೆಲಸ ಮಾಡುವ ಬೊಮ್ಮ ಸ್ವಾಭಾವಿಕವಾಗಿ ಪ್ರಕೃತಿತಜ್ಞ. ಒಮ್ಮೆ ಮಳೆಯ ಆರ್ಭಟಕ್ಕೆ ಸಿಕ್ಕಿ ಪ್ರಾಣಾಪಾಯದಲ್ಲಿದ್ದ ಮರಿ ಅಳಿಲನ್ನು ಮನೆಗೆ ತಂದು ರಕ್ಷಿಸಿದ. ಮರಿಅಳಿಲು– ಬೊಮ್ಮನ ಪ್ರೀತಿ ಸಂಬಂಧ ಎಷ್ಟು ಗಾಢವಾಯಿತೆಂದರೆ ಅದು ತನ್ನ ಸಾಕು ತಂದೆಯನ್ನು ಬಿಟ್ಟು ಕಾಡಿಗೆ ಹೋಗಲೊಲ್ಲೆ ಎಂದಿತು. ಆದರೆ ನಾಗರಿಕ ಸಮಾಜ ಈ ಪ್ರಾಣಿ–ಮಾನವ ಸಹಬಾಳ್ವೆಯನ್ನು ಸಹಿಸೀತೆ?



ಬೊಮ್ಮನ ಹೆಗಲು ಈ ಅಳಿಲಿಗೆ ಸುಖದ ಸುಪ್ಪತ್ತಿಗೆ

ಚಿತ್ರ– ಲೇಖನ

● ಕೃಪಾಕರ ಸೇನಾನಿ

ಮುಂದಿನ ಭೀಕರ ರಾತ್ರಿಗೆ ಅಂದು ಸಂಜೆಯೇ ಮುನ್ಸೂಚನೆಗಳು ಕಾಣತೊಡಗಿದ್ದವು. ಸಂಜೆಯ ಸೂರ್ಯ ಪಡುವಣದತ್ತ ಧಾವಿಸುತ್ತಿರುವಾಗಲೇ ಕಪ್ಪು ಮೋಡಗಳ ಗುಂಪು ಭೂಮಿ ಆಕಾಶಗಳ ನಡುವೆ ಕರಿಚಾಮರ ಹಿಡಿದು ನಿಂತಿದ್ದವು. ಕಗ್ಗತ್ತಲ ರಾತ್ರಿಯ ಹೆಪ್ಪುಗಟ್ಟಿದ ಮೌನವನ್ನು ಮಧ್ಯರಾತ್ರಿಯ ವೇಳೆಗೆ ಭುಗಿಲೆದ್ದ ಬಿರುಗಾಳಿ ಒಡೆಯಿತು. ಗುಡುಗು ಮಿಂಚಿನ ಆರ್ಭಟದೊಂದಿಗೆ ವರ್ಷಧಾರೆ ಕಾಡನ್ನು ಲಯಬದ್ಧವಾಗಿ ಕುಟ್ಟುತ್ತಿತ್ತು. ಮರಗಿಡಗಳು ಬೆದರಿ ಮೇಲಾದವು. ಕುರುಬರ ಪಟ್ಟಿಯ ಛಾವಣಿಗಳು ಇಲ್ಲವಾದವು. ಮುದುಮಲೈ ಕಾಡಿನಲ್ಲಿ ಮಳೆಗಾಲದ ಒಂದು ದಿನದ ಮಾದರಿ ಇದಷ್ಟೇ.

ಹಿಂದಿನ ದಿನವಷ್ಟೇ ನಾವು ಛಾಯಾಚಿತ್ರಣಕ್ಕೆ ಅಟ್ಟಣಿಗಳನ್ನು ನಿರ್ಮಿಸಿ ಬಂದಿದ್ದೆವು. ಅವುಗಳ ಗತಿ ನೋಡಿ ಬರಲು ಮುಂಜಾನೆಯೇ ಎದ್ದು ಕಾಡಿಗೆ ಹೊರಟಿವು. ಅಷ್ಟು ಹೊತ್ತಿಗಾಗಲೇ ಕಾಡು ಕುರುಬ ಬೊಮ್ಮ ಎದುರಿನಿಂದ ಬರುತ್ತಿದ್ದ. ತೇಗದ ಎಲೆಯ ದೊನ್ನೆಯನ್ನು ಬುಡಮೇಲು ಹಿಡಿದು ಏನನ್ನೊ ಮುಚ್ಚಿ ತರುತ್ತಿದ್ದ.


ಬಹುಶಃ ಜೇನು ಇರಬಹುದೆಂದು ಚಿಂತಿಸುತ್ತಿರುವಾಗಲೇ ಹತ್ತಿರ ಬಂದು ಎಲೆಯನ್ನು ಎತ್ತಿದ. ಕೆಂಪು ಪ್ಲಾಸ್ಟಿಕ್ ಚೀಲದಂತೆ ಇದ್ದ, ಇನ್ನೂ ಕಣ್ಣು ಬಿಡದ ಕೆಂಪು ಅಳಿಲು ಮರಿಯೊಂದು ಚಳಿಗೆ ನಡುಗಿ ಮಲಗಿತ್ತು. ಅಳಿಲಿನ ಗೂಡಿದ್ದ ಮುದಿಮರವೊಂದು ರಾತ್ರಿಯ ಮಳೆಗೆ ನೆಲಕ್ಕುರುಳಿದ್ದರಿಂದ ಈ ಮರಿ ಹೊರಕ್ಕೆಸೆಯಲ್ಪಟ್ಟಿತ್ತು. ಬೊಮ್ಮ ಅತ್ತ ಹೋದಾಗ ಇನ್ನೂ ಜೀವಂತವಿದ್ದ ಆ ಪುಸಿಮರಿಯನ್ನು ಇರುವೆಗಳು ಆಗಲೇ ಮುತ್ತಿದ್ದವು. ಕನಿಕರದಿಂದ ಇರುವೆಗಳಿಂದ ಪಾರುಮಾಡಿ ಅದನ್ನು ತಂದಿದ್ದ.

ಮಳೆಯ ಆರ್ಭಟದಲ್ಲೂ ಜೀವ ಹಿಡಿದಿದ್ದ ಆ ಪುಸಿ ಮರಿ ಬದುಕುಳಿಯುವ ಸಂಭವವೇ ಇರಲಿಲ್ಲ. ಮುದುಮಲೈ ಅರಣ್ಯದಲ್ಲಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸಂಸ್ಥೆಯ ವಿಜ್ಞಾನಿಗಳಿಗೆ ಅಡುಗೆ, ಗುಡಿಸುವ ಕೆಲಸದಿಂದ ಹಿಡಿದು ಕಾಡಿನ ಚಾಡು ತೋರಿಸುವವರೆಗೆ ಕಾರ್ಯ ನಿರ್ವಹಿಸುವ ಬೊಮ್ಮ ಸ್ವಾಭಾವಿಕವಾಗಿ ನ್ಯಾಚುರಲಿಸ್ಟ್, ಪ್ರಕೃತಿ ತಜ್ಞ, ಕಾಡಿನ ಅಂತರಂಗವೆಲ್ಲಾ ಅವನಿಗೆ ಕರತಲಾಮಲಕ. ತಬ್ಬಲಿ ಕೆಂಪು ಅಳಿಲನ್ನು ಹೇಗೋ ಜೋಪಾನ ಮಾಡಿ ಬದುಕಿಸಿದ. ಇನ್‌ಕ್ಯುಬೇಟರ್ ಇತ್ಯಾದಿ ಆಧುನಿಕ ಸೌಲಭ್ಯಗಳಿರುವ ಪ್ರಯೋಗಶಾಲೆಯಲ್ಲೂ ಅದು ಬದುಕುಳಿಯುವ ನೆಚ್ಚಿಗೆ ಇರಲಿಲ್ಲ. ಪುಸಿ ಮೈಮೇಲೆ ಒಂದೆರಡು ಗಾಯಗಳಿದ್ದುದ್ದರಿಂದ ಗ್ರಾಂಥಿಕ ಜ್ಞಾನದ ನಾವು. ಸೆಪ್ಟಿಕ್ ಆಗಿ ಅದರ ಮರಣವನ್ನೇ ಎದುರು ನೋಡುತ್ತಿದ್ದೆವು. ಆದರೆ ಬೊಮ್ಮನ ಆರೈಕೆಯಲ್ಲಿ ಅಳಿಲು ಮರುಜನ್ಮ ಪಡೆದದ್ದು ವಿಸ್ಮಯ ತಂದಿತು. ಮೈಮುರಿಯುವ ಕೆಲಸದ ನಡುವೆಯೂ ಬೊಮ್ಮ ಅದಕ್ಕೆ ನಿಯತವಾಗಿ ಹಾಲು ಕುಡಿಸಿ ತನ್ನ ಕಂಬಳಿಯನ್ನೆ ಹೊದಿಸಿ ಬೆಚ್ಚಗಿಡುತ್ತಾ ಆರೈಕೆ ಮಾಡಿದ. ಅಳಿಲು ಚೇತರಿಸಿಕೊಂಡು ಬೆಳಿಯತೊಡಗಿತು. ಬೊಮ್ಮನಿಗೆ ಹೊಂದಿಕೊಳ್ಳತೊಡಗಿತು.

ಬದಲಾವಣೆ

ಆದರೆ ಈ ಕಾಡಿನ ಜೀವವೊಂದು

ಪುಟ 56



ಭಾವಣೆ ಮೇಲೆ ಠಿಕಾಣಿ ಹೂಡಿದ ಅಳಿಲಿಗೆ ಬೊಮ್ಮನಿಂದ ಆಹಾರ ನೀಡಿಕೆ.

ಮನುಷ್ಯನ ಜಗತ್ತಿಗೆ ಪ್ರವೇಶ ಮಾಡಿದ ಮೇಲೆ ಅನೇಕ ಬದಲಾವಣೆಗಳು ಪ್ರಾರಂಭವಾದವು. ಈ ಪ್ರಾಣಿಯ ಗೃಹಪ್ರವೇಶ ಬೊಮ್ಮನ ಬದುಕಿನ ಮೇಲೆ ಹಾಗೂ ಮನೆಯ ನಿತ್ಯದ ಆಗುಹೋಗುಗಳ ಮೇಲೆ ಪರಿಣಾಮ ಬೀರತೊಡಗಿತು.


ಕಾಡಿನ ಜೀವಿ ನಾಗರಿಕ ಪ್ರಪಂಚಕ್ಕೆ ಬಂದರೂ ಅದು ಮನುಷ್ಯನ ನಾಗರಿಕ ನಿಯಮಗಳಿಗೆ ಎಳ್ಳಷ್ಟೂ ಬೆಲೆ ಕೊಡದ ಉದ್ಧಟತನ ಮೆರೆಯುತ್ತಿತ್ತು. ಹಾಲು ಬೇಕೆನಿಸಿದಾಗ 'ಚಿಪ್ ಚಿಪ್' ಎಂದು ಸದ್ದು ಮಾಡಿ ಬೊಮ್ಮನನ್ನು ಕರೆಯುತ್ತಿತ್ತು. ಮಲಗಿ ಬೇಸರವೆನಿಸಿದಾಗ ಕೊಠಡಿಯಿಂದ ಕೊಠಡಿಗೆ ಜಾಗಿಂಗ್ ಮಾಡುತ್ತಾ, ಯಾರೂ ಇಲ್ಲದಿದ್ದರೆ ಎಲ್ಲರ ಮೇಜು, ಡ್ರಾಯರ್‌ಗಳನ್ನು ಕೂಲಂಕಶವಾಗಿ ತನಿಖೆ ಮಾಡುವ ಕೆಲಸ ಪ್ರಾರಂಭಿಸುತ್ತಿತ್ತು. ಸದ್ಯ ಅದಕ್ಕೆ ಅಕ್ಷರ ಜ್ಞಾನವಿಲ್ಲದ್ದರಿಂದ ಅನೇಕ ಖಾಸಗಿ ಅಭಿವ್ಯಕ್ತಿಗಳು ಪ್ರಸಾರವಾಗುವ ಭಯವಿರಲಿಲ್ಲ. ಈ ಚೇಷ್ಟೆಯ ನಡುವೆ ದಣಿವಾದರೆ ಯಾವುದೋ ಗುಪ್ತ ಸ್ಥಳವನ್ನು ಹುಡುಕಿ ನಿದ್ರಿಸಿಬಿಡುತ್ತಿತ್ತು. ಆಗಂತೂ ಎಲ್ಲರಿಗೂ ಅದು ತಲೆನೋವಿನ ಕೆಲಸ. ಬೊಮ್ಮನನ್ನು ಶಪಿಸುತ್ತಾ ಹುಡುಕಿ ಸಾಕಾಗುತ್ತಿದ್ದರು. ನಿದ್ರೆ ಮುಗಿದ ನಂತರ ಕಸದ ಬುಟ್ಟಿಯಿಂದಲೋ ಯಾರದೋ ಬೂಟ್‌ನಿಂದಲೋ ಅಥವಾ ಯಾವುದೋ ಡ್ರಾಯರ್‌ನಿಂದಲೋ ಚಿಪ್ ಚಿಪ್ ಎನ್ನುತ್ತಾ ಹೊರ ಜಿಗಿದು ತನ್ನ ಅಸ್ತಿತ್ವ ಸಾರುತ್ತಿತ್ತು.

ಮೂರು ತಿಂಗಳು ತುಂಬಿದ ಬಳಿಕವಂತೂ ಅಳಿಲಿನ ಕಾಟ ದಿನೇ ದಿನೇ ಏರತೊಡಗಿತು. ಮನುಷ್ಯರ ವಸ್ತುಗಳನ್ನು ಕಂಡರೆ ಅದಕ್ಕೆ ಇನ್ನಿಲ್ಲದ ಅನಾದರ. ಆ ವಸ್ತುಗಳ ಆಕಾರವನ್ನು ತಿರುಚುವುದೆಂದರೆ ಇನ್ನಿಲ್ಲದ ಆನಂದ. ಮಾನವ ನಿಯಮಗಳಿಗೆ ಅದು ತೋರುತ್ತಿದ್ದ ತಾತ್ಸಾರದಿಂದ ಎಲ್ಲರ ಮೈಉರಿಯುತ್ತಿತ್ತು. ಎಲ್ಲರ ಪೆನ್ನು ಪೆನ್ಸಿಲ್‌ಗಳು ಕೆಲವೊಮ್ಮೆ ಎರಡಾಗಿ, ಮೂರಾಗಿ, ಸಂಖ್ಯೆಯಲ್ಲಿ ವೃದ್ಧಿಯಾಗುತ್ತಾ ಆಕಾರ ಕಳೆದುಕೊಳ್ಳತೊಡಗಿದವು. ದರ್ಜಿ ಇರಿಸಿದ ಪ್ಯಾಂಟು ಜೇಬುಗಳು ಎರಡು ನಾಲ್ಕಾಗುತ್ತಿದ್ದವು. ಕೆಲವೊಮ್ಮೆ ಬೂಟ್‌ಗಳ ಮೂಗುದಾರಗಳೇ ಅದೃಶ್ಯವಾಗುತ್ತಿದ್ದವು. ಅನಂತರ ಅದರ ದೃಷ್ಟಿ ಗಾಜಿನ ವಸ್ತುಗಳ ಮೇಲೆ ತಿರುಗಿತು. ಗಾಜಿನ ವಸ್ತುಗಳ ಸಂಖ್ಯೆ ಇದರ ಉಪಚಾರದಿಂದ ಎಣಿಕೆಗೆ ಸಿಗದಷ್ಟು ಸಂಖ್ಯೆಯಲ್ಲಿ ವಿಘಟಿತವಾಗುತ್ತಿದ್ದವು. ಅನಂತರ ಮನೆಯಲ್ಲಿ, ಒಪ್ಪ ಓರಣವಾಗಿ ಇರಿಸಿದ್ದ ಒಡೆಯಲಾರದ ವಸ್ತುಗಳು ಸ್ಥಾನಪಲ್ಲಟಗೊಳ್ಳುತ್ತಿದ್ದವು. ಕಾಡಿನಿಂದ ಬಂದ ಈ ಜೀವಿ ಎಲ್ಲಿ ಮಲಗಬೇಕೆಂಬ ನಿಯಮ ಕಲಿತಿರಲಿಲ್ಲ, ಯಾವ ವಸ್ತುವನ್ನು ಹೇಗೆ ನೋಡಬೇಕು; ಅದರ ಬೆಲೆ ಎಷ್ಟು ಎಂಬ ಪರಿಜ್ಞಾನವಿರಲಿಲ್ಲ, ಆಗೆಲ್ಲಾ ಬೊಮ್ಮ ಅಪರಾಧಿಯಂತೆ ಕೈಕಟ್ಟಿ ಕೂರುತ್ತಿದ್ದ.

ಕೊನೆಗೂ ಬಚಾವ್

ಅಳಿಲಿನ ಈ ವಿಷ್ಣು ಸಂತೋಷವನ್ನು ಎಲ್ಲರೂ ಹೇಗೋ ಸಹಿಸಿಕೊಂಡಿದ್ದರು. ಆದರೆ ಒಂದು ದಿನ ದೊಡ್ಡ ರಾದ್ಧಾಂತ ನಡೆಯಿತು. ಪರೀಕ್ಷಣೆಗೆಂದು ಮುಂಬಯಿಯಿಂದ ಬಂದಿದ್ದ ಹಿರಿಯ ವಿಜ್ಞಾನಿಗಳು ರಾತ್ರಿ ಕಳಚಿಟ್ಟಿದ್ದ ಕೃತಕ ಹಲ್ಲುಗಳೇ ಮಂಗಮಾಯವಾದವು. ಅವರು ಇದ್ದಷ್ಟು ದಿನವೂ ಸರಿಯಾಗಿ ಊಟ ಮಾಡಲಾಗದೇ ಬೊಮ್ಮನನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿದ್ದರು. ಅದು ಆ ಹಲ್ಲುಗಳನ್ನು ಎಲ್ಲಿ ಬಚ್ಚಿಟ್ಟಿತೋ ಏನೋ. ಅಂತೂ ಅವರು ಹೊರಡುವ ಹಿಂದಿನ ದಿನ ಹಲ್ಲುಗಳು ಹೇಗೋ ಪ್ರತ್ಯಕ್ಷವಾದವು. ಅಂತೂ ಬೊಮ್ಮ ಬಚಾವಾದ.

ಇಷ್ಟೆಲ್ಲಾ ರಂಪಗಳಾಗುತ್ತಿದ್ದರೂ, ಕಾಡಿನ ಏಕಾಂಗಿತನಕ್ಕೆ ಸಂಶೋಧನೆಯಲ್ಲೇ ನಿರತರಾಗಿ ಜಡ್ಡುಗಟ್ಟಿದ್ದ ಮನಕ್ಕೆ ಮನರಂಜನೆ ಒದಗಿಸುತ್ತಿತ್ತು ಬೊಮ್ಮನ ಅಳಿಲು. ಅದರ ರಂಪಾಟವನ್ನು ಯಾರೂ



ಮಳೆ ಬಿಲಿಗೆ ಮೈಯೊಡ್ಡಿ ಬಾಗಿಲಲ್ಲಿ ಬೆಕ್ಕ



ಬೊಮ್ಮನ ಜೊತೆ ಸಂತಗೆ ಪಯಣ



ಈಗ ಮೂವತ್ತರ ಸಂಬಂಧ ಅಳಿಯ-ಮೂರ

ದೂಷಿಸುತ್ತಿರಲಿಲ್ಲ. ಆದರೆ ಅದನ್ನೆ ನೆಪ ಮಾಡಿಕೊಂಡು ಬೊಮ್ಮನ ಮೇಲೆ ಎಲ್ಲರೂ ರೇಗುತ್ತಿದ್ದೆವು. ಅಗೆಲ್ಲಾ ಬೊಮ್ಮ ನಕ್ಕು ನಿರ್ಲಿಪ್ತತೆ ಮೆರೆಯುತ್ತಿದ್ದ.

ದೈಹಿಕವಾಗಿ ಅಳಿಲು ಪ್ರಾಣಾವಸ್ಥೆ ತಲುಪಿದ ನಂತರ ಅದು ತನ್ನ ಜೀವನಕ್ರಮವನ್ನೆ ಬದಲಿಸಿಕೊಂಡಿತು.

ನಾಗರಿಕ ಪ್ರಪಂಚದ ವಿಲಾಸೀ ಬದುಕು ಅದಕ್ಕೆ ಪ್ರಿಯವೆನಿಸತೊಡಗಿತು. ಮೇಜಿನ ಮೇಲೆ ಊಟಮಾಡುವುದು; ಜೇಪು ಕಾಡಿಗೆ ಹೊರಡುವ ಸೂಚನೆ ಕಂಡರೆ ತಕ್ಷಣ ಚೆಂಗನೆ ಹಾರಿ ಸ್ಕೀರಿಂಗ್ ಅನ್ನು ಒಂದು ಬಾರಿ ತಿರುಗಿಸಿ ಅನಂತರ ಹಿಂಬದಿ ಕುಳಿತು ಟಾರ್ಪಾಲ್ ಕಿಂಡಿಯಿಂದ ಕಾಡನ್ನು ಅಚ್ಚರಿಯಿಂದ ನೋಡುವ ಪರಿಪಾಠ ಅಭ್ಯಾಸವಾಯಿತು.

ಇದರ ಜತೆಗೆ ಬೊಮ್ಮ-ಅಳಿಲಿನ ನಡುವೆ ವಿಚಿತ್ರ ಸಂಬಂಧವೇರ್ಪಟ್ಟಿತ್ತು.

ಬೊಮ್ಮನ ಬೆನ್ನು ಅದರ ಖಾಯಂ ಸ್ಥಳವಾಯಿತು. ಮುಂಜಾನೆಯಿಂದ ಸಂಜೆಯವರೆಗೆ ಅದು ಬೊಮ್ಮನ ಬೆನ್ನೇರಿ ಕುಳಿತುಬಿಡುತ್ತಿತ್ತು. ಹೀಗಾಗಿ ಹಾಲು ತರಲು ಹೋದಾಗ, ಇಲ್ಲವೇ ಮಸನಗುಡಿಗೆ ರೇಷನ್ ತರಲು ಹೋದಾಗ ಬೊಮ್ಮನ ಬೆನ್ನಮೇಲೆ ಅಳಿಲು ಕುಳಿತೇ ಇರುತ್ತಿತ್ತು. ಕ್ರಮೇಣ ಬೆನ್ನಮೇಲೆ ಅಳಿಲಿಲ್ಲದ ಬೊಮ್ಮನನ್ನು ಗುರುತು ಹಿಡಿಯುವುದೇ ಕಷ್ಟವಾಯಿತು.

ಆದರೆ ಅಳಿಲಿನ ಈ ಅತಿಪ್ರೇಮ ಬೊಮ್ಮನಿಗೆ ಹಿಡಿಸುತ್ತಿರಲಿಲ್ಲ. ಅಳಿಲು ಬೊಮ್ಮನ ದೇಹದ ಒಂದು ಭಾಗವೆಂತೆ ಕಾಣುತ್ತಿರುವಾಗ ಮಕ್ಕಳ ಗುಂಪು ಅವನನ್ನು ಹಿಂಬಾಲಿಸುತ್ತಿತ್ತು.

ಬೊಮ್ಮನಿಗೆ, ಬೊಮ್ಮನಹಳ್ಳಿಯ ಕಿಂದರಿಜೋಗಿ ಪಾತ್ರ ಹಿಡಿಸುತ್ತಿರಲಿಲ್ಲ. ಅವಮಾನ ಕೀಳರಿಮೆಯಿಂದ ಕುದಿಯುತ್ತಿದ್ದ. ಹೀಗಾಗಿ ಹೊರಹೋಗುವಾಗ ಕೊಠಡಿಯಲ್ಲಿ ಕೂಡಿ ಹಾಕುವ ಅಭ್ಯಾಸ ಮಾಡಿಕೊಳ್ಳಲು ಯತ್ನಿಸಿದ. ಆದರೆ ಬೊಮ್ಮನ ಈ ಪರಿವರ್ತನೆ ಬಗ್ಗೆ ಬೇಸರ ತಾಳಿದ ಅಳಿಲು ಉಣ್ಣುವುದನ್ನೇ ಬಿಡುತ್ತಿತ್ತು. ಹೊರ ಹೋಗುವ ಸೂಚನೆ ಂದ ತಕ್ಷಣ ಕಾಲು ಹಿಡಿದು ದಮ್ಮಯ್ಯ ಹೇಳಿ ಹೆಗಲೇರಿ ಕಿವಿಯಲ್ಲಿ ಪಿಸುಗುಡುತ್ತಿತ್ತು. ಹುಡುಗರ ಗೇಲಿಯನ್ನು ಮರೆತ ಬೊಮ್ಮ ಅದನ್ನು ಕೂರಿಸಿಕೊಂಡು ಹೋಗುತ್ತಿದ್ದ. ಅಂತೂ ಅವರ ಪ್ರೀತಿ- ದ್ವೇಷದ ಸಂಬಂಧ ಮುಂದುವರಿಯುತ್ತಲೇ ಇತ್ತು.

ಒಮ್ಮೆ ಮುದುಮಲೈಗೆ ಹತ್ತಿರದ ಗೂಡಲೂರು ಸಂತೆಗೆ ಹೋದ ಬೊಮ್ಮ ಮಧ್ಯಾಹ್ನವೇ ಬರಬೇಕಾದವನು ಸಂಜೆ, ರಾತ್ರಿಯಾದರೂ ಬರಲಿಲ್ಲ. ಮುದುಮಲೈ ಅತಿಥಿ ಗೃಹದ ಮೇಟಿ ವೇಲಾಯುಧನ್ ರಾತ್ರಿ ಬಂದು ಗೂಡಲೂರಿನ ಪೊಲೀಸರು ಬೊಮ್ಮನನ್ನು ಮಧ್ಯಾಹ್ನವೇ ಎಳೆದೊಯ್ದರೆಂದು ಹೇಳಿದ. ಆದರೆ ವಿವರ ಹೇಳಲಿಲ್ಲ.

ಏನೊ ತಪ್ಪಾಗಿದೆಯೆಂದು ಭಾವಿಸಿದ ನಾವು ಆ ರಾತ್ರಿಯಲ್ಲೇ ಜೀಪಿನಲ್ಲಿ ಗೂಡಲೂರಿಗೆ ಬಂದೆವು. ಪೊಲೀಸ್ ಠಾಣೆಯಲ್ಲಿ ಇಬ್ಬರು ಕಾನ್ಸ್‌ಟೇಬಲ್‌ಗಳು ಕುಳಿತಿದ್ದರು. ಅವರ ಜತೆ ಮಾತನಾಡಿದ ನಂತರ ಒಳಕ್ಕೆ ಕರೆದೊಯ್ದರು. ಲಾಕಪ್‌ನಲ್ಲಿ ಬೊಮ್ಮ ತಲೆತಗ್ಗಿಸಿ ಕೂತಿದ್ದ, ಮತ್ತೊಂದು ಮೂಲೆಯಲ್ಲಿ ಅಳಿಲು ಮಲಗಿತ್ತು.

ಅಪರಾಧ

ಪೊಲೀಸರ ಜತೆ ನಮ್ಮ ಚರ್ಚೆ ಮುಂದುವರಿಯುತ್ತಿದ್ದಂತೆ ಬೊಮ್ಮನ 'ಅಪರಾಧ' ಸ್ಪಷ್ಟವಾಯಿತು. ಹಿರಿಯ ಕಾನ್ಸ್‌ಟೇಬಲ್ ಹೇಳಿದ್ದು "ಇದರಲ್ಲಿ ನಮ್ಮದೇನೂ ತಪ್ಪಿಲ್ಲ, ಗೂಡಲೂರಿನ ಸಂತೆಯಲ್ಲಿ ಇವನು ಕೆಂದಳಿಲು ಮಾರುತ್ತಿದ್ದದ್ದನ್ನು ಕಂಡ ಅರಣ್ಯ ಸಿಬ್ಬಂದಿ ವನ್ಯಜೀವಿ ಕಾಯ್ದೆಯ ಮೇರೆಗೆ ಬಂಧಿಸಿ ಕಾನೂನು ಕ್ರಮ ಜರುಗಿಸುವಂತೆ ಹೇಳಿದ್ದಾರೆ. ನೀವು ಹೇಳುವಷ್ಟು ಸಭ್ಯನಲ್ಲ ಇವನು.

ಮಧ್ಯಾಹ್ನದಿಂದ ತಪ್ಪೇ ಒಪ್ಪಿಕೊಂಡಿಲ್ಲ ನೋಡಿ" ಎಂದರು. ಮಾಡದ ತಪ್ಪನ್ನು ಒಪ್ಪಿಕೊಳ್ಳುವವನೇ ಸಭ್ಯಸ್ಥನೆಂಬುದು ಅವರ ವ್ಯಾಖ್ಯಾನವಾಗಿತ್ತು.

ಪೊಲೀಸರ ಜತೆ ನಾವು ಎಷ್ಟೇ ವಾಗ್ವಾದ ಮಾಡಿದರೂ ಫಲಕಾರಿಯಾಗಲಿಲ್ಲ. ಕೊನೆಗೆ ಅವನು ಅನತಿದೂರದಲ್ಲಿದ್ದ ಮನೆಯೊಂದನ್ನು ತೋರಿಸಿ ಅಲ್ಲಿ ಇನ್ಸ್‌ಪೆಕ್ಟರ್ ಇದ್ದಾರೆಂದು, ಅವರು ಆದೇಶ ನೀಡಿದರೆ ಕರೆದುಕೊಂಡು ಹೋಗಬೇಕೆಂದು ಹೇಳಿದ.

ಇನ್ಸ್‌ಪೆಕ್ಟರ್ ನಿದ್ರೆಯಲ್ಲಿದ್ದರು.

ಎದ್ದು ಬಂದಾಗ ನಾವು ಬಾಂಬೇ ನ್ಯಾಚುರಲ್ ಹಿಸ್ಟರಿ ಸಂಸ್ಥೆಯ ವಿಜ್ಞಾನಿಗಳೆಂದೂ, ಬೊಮ್ಮ ನಮ್ಮ ಸಿಬ್ಬಂದಿಯೆಂದೂ, ಅಳಿಲು ಅವನು ಸಾಕಿರುವ ಮುದ್ದು ಪ್ರಾಣಿಯೆಂದೂ ಹೇಳಿದೆವು. ಆದುದರಿಂದ ಅವನು ಅಪರಾಧಿಯಲ್ಲವೆಂದು ಶ್ರುತಪಡಿಸಲು ಯತ್ನಿಸಿದೆವು. ಮಧ್ಯರಾತ್ರಿಯಲ್ಲಿ ನಿದ್ರಾಭಂಗವಾದದ್ದರಿಂದ ಇನ್ಸ್‌ಪೆಕ್ಟರ್ ಕೆರಳಿದರೂ ನಮ್ಮ ಸಭ್ಯ ಮಾತುಕತೆ ಕಂಡು ಅಷ್ಟೇನೂ ರೇಗಲಿಲ್ಲ. "ಏನ್ರೀ ಅದೆಂಥಾ ನ್ಯಾಚುರಲಿಸ್ಟ್ಸ್. ನೀವೆ?

ಒಂದು ಕಡೆ ಸಂರಕ್ಷಣೆ ಅಂತಾ ಬಡುಕೊಳ್ತೀರಾ ಅಪರಾಧೀನ ಹಿಡಿದ್ರೆ ಬಿಡಿಸ್ಕೊಳ್ಳೋಕೆ ಬರ್ತೀರಾ. ನಿಮ್ಮ ಗೊಂದಲ ಏನ್ರೀ ಇದು" ಎಂದು ಹೌಹಾರಿ ಕೊನೆಗೆ ಜತೆಯಲ್ಲಿ ಬಂದಿದ್ದ ಪೊಲೀಸ್ ಕಾನ್ಸ್‌ಟೇಬಲ್‌ಗೆ ಬೊಮ್ಮನನ್ನು ಬಿಡುವಂತೆ ಆದೇಶಿಸಿದರು.

ಜೇಪು ಏರಿದ ಬೊಮ್ಮ ತಲೆತಗ್ಗಿಸಿ ಕುಳಿತಿದ್ದ, ಅಳಿಲೂ ತನ್ನ ತುಂಟಾಟವನ್ನೆಲ್ಲ ಕಳೆದುಕೊಂಡಂತಿತ್ತು. ಮುದುಮಲೈಗೆ ಬಂದ ತಕ್ಷಣ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ ಅಂಗಿ ಬಿಚ್ಚಿದ.

ಬೆನ್ನಮೇಲೆ ನಾಲ್ಕೈದು ಬಲವಾದ ಲಾಟಿಯ ಮುದ್ರೆಗಳಿದ್ದವು. ನೋವು ನಿವಾರಕ ಮಾತ್ರೆ ನೀಡಿ ಮಲಗಿಸಿದೆವು.

ಮರುದಿನ ಬೊಮ್ಮನನ್ನು ಕರೆಸಿ ಅಳಿಲನ್ನು ಕಾಡಿಗೆ ಬಿಡಲು ಹೇಳಿದೆವು.

ಅದು ಈಗ ತಂದಿರುವ ಅನಾಹುತವೇ ಸಾಕು ; ಇನ್ನೆಲ್ಲಿಯಾದರೂ ಸಿಕ್ಕಿ ಕೇಸು ಗೀಸು ಹಾಕಿದರೆ ಮುಂದೆ ಒದಗಬಹುದಾದ ಕಾನೂನು ಜಟಿಲತೆ, ಕೋರ್ಟ್ ಕಚೇರಿ ಅಲೆದಾಟದ ಬಗ್ಗೆ ಹೇಳಿದೆವು. ಬೊಮ್ಮ ಅರೆ ಮನಸ್ಸಿನಿಂದ ಒಪ್ಪಿದ. ತಾನು ಒಪ್ಪಿದ, ತನಗೆ ಒಗ್ಗಿದ ಜೀವಿಯೊಂದರ ಜತೆ ಸಹಬಾಳ್ವೆ ನಡೆಸಲೂ ಕಾನೂನಿನ ಗೋಡೆ ತರುವ ನಾಗರಿಕ ಸಮಾಜದ ತಣ್ಣನೆಯ ಕ್ರೌರ್ಯಕ್ಕೆ ಬಿಕ್ಕಿದ.

ಅಳಿಲನ್ನು ಕಾಡಿಗೆ ಬಿಟ್ಟದ್ದಾಯಿತು. ಆದರೆ ಎರಡೇ ದಿನದಲ್ಲಿ ಮನೆಯ ಹಿಂದಿನ ಮಾವಿನ ಮರಕ್ಕೆ ಪಾಪಸ್ಸಾಯಿತು. ತನ್ನಿಂದಾಗಿ ಬೊಮ್ಮನಿಗೊದಗಿದ ಸಂಕಷ್ಟ ಅಳಿಲಿಗೆ ಮನದಟ್ಟಾಯಿತೋ ಏನೋ? ಅಥವಾ ಸ್ವತಂತ್ರವಾಗಿ ಕಾಡಿನ ತನ್ನ ಪರಿಸರದಲ್ಲಿ ಬದುಕಬೇಕೆಂಬ ಜವಾಬ್ದಾರಿ ಕುರಿತು ಚಿಂತಿಸಿರಬಹುದು. ಅದು ಈಗ ಮನೆಗೆ ಬರುವುದಿಲ್ಲ, ಬೊಮ್ಮನ ಬೆನ್ನು ಬಿಟ್ಟು ಈಗ ಮಾವಿನ ರೆಂಬೆಯನ್ನು ಆಶ್ರಯಿಸಿದೆ. ಅಲ್ಲಿಯೇ ರಾತ್ರಿ ಮಲಗುತ್ತದೆ. ಆದರೂ ಈಗ ಅದಕ್ಕೆ ಹಿಂದಿನ ವಾಸನೆ ಹಾಗೆಯೇ ಉಳಿದಿದೆ.

ಅದೇ ಬೆಳಿಗಿನ ಬ್ರೇಕ್‌ಫಾಸ್ಟ್. ಈಗಲೂ ಪ್ರತಿನಿತ್ಯ ಬೆಳಗ್ಗೆ ಎಂಟಕ್ಕೆ ಸರಿಯಾಗಿ ಹಾಜರಾಗಿ ಬೊಮ್ಮನಿಂದ ಬ್ರೆಡ್‌ಪೀಸ್ ಪಡೆದು ಕಾಡಿಗೆ ಹಿಂದಿರುಗುತ್ತದೆ.

ಟರ್ಮಿನೇಟರ್ ತಳಿ ತಂತ್ರಜ್ಞಾನ:

ಬೀಜಕ್ಕೋ ಬಂಜೆತನದ ಅಭಿಶಾಪ?

'ಟರ್ಮಿನೇಟರ್!' ವಿನಾಶಕ! ಅಂತಕಾರಿ! ಹೆಸರೇ ಆತಂಕಕಾರಿ. ಈ ಹೆಸರು ಕೇಳಿದಾಕ್ಷಣ ನೆನಪಾಗುವದು ಅರ್ನಾಲ್ಡ್ ಶ್ವಾಜ್‌ನೆಗ್ಗರ್ ನಾಯಕತ್ವದ ಪ್ರಸಿದ್ಧ ಸಿನೆಮಾ ಸರಣಿ. ದಷ್ಟಪುಷ್ಟ ಶರೀರದ ಸ್ನಾಯು, ಖಿಂಡಗಳನ್ನು ಕುಣಿಸುವ ನಾಯಕ, ದುಷ್ಟಶಕ್ತಿಗಳನ್ನು ಸಂಹರಿಸುವ ರೋಮಾಂಚಕ ಕಥಾನಕ!

ದುರುಳ ದಮನಕ್ಕೂ, ಕೃಷಿಯ ಜೀವಾಳವಾದ ಬೀಜಕ್ಕೂ ಎಲ್ಲಿಂದೆಲ್ಲಿಯ ಸಂಬಂಧ? ಆದರೂ ತನ್ನ ಅಂತ್ಯಕ್ಕೆ ತಾನೇ ಕಾರಣವಾಗಬಲ್ಲ ಆರೋಪಿ ಬೀಜವೊಂದಕ್ಕೆ 'ಟರ್ಮಿನೇಟರ್ ಬೀಜ' ಎಂದು ಹೆಸರಿಡಲಾಗಿದೆ.

'ಅಮೆರಿಕಾದ ಬೀಜ ಕಂಪನಿಯೊಂದು ಸ್ವವಿನಾಶಿ ಬೀಜ ಸೃಷ್ಟಿಸುವ ವಿಧಾನ ರೂಪಿಸಿದ್ದು ಅದಕ್ಕೆ ಪೇಟೆಂಟ್ (ಸನ್ನದು ಅಥವಾ ವಿಕಸ್ವಾಮ್ಯ) ಪಡೆದಿದೆ.'

'ಭವಿಷ್ಯದಲ್ಲಿ ಈ ಬೀಜದೊಳಗಿನ ಆತ್ಮಘಾತುಕ ಗುಣ ಇತರ ಬೆಳೆಗಳಿಗೆ ಹಬ್ಬಿ ಅವುಗಳ ಬೀಜಗಳನ್ನು ಬರಡಾಗಿಸುವ ಅಪಾಯವಿದೆ.'

'ಈ ತಂತ್ರಜ್ಞಾನ ಅಭಿವೃದ್ಧಿಶೀಲ ದೇಶಗಳ ಬಡ ರೈತರಿಗೆ ಮುಳುವಾದೀತು. ತಮ್ಮ ಬೆಳೆಯಿಂದ ಉಳಿಸಿದ ಕಾಳನ್ನು ಬೀಜವಾಗಿ ಬಳಸುವ ಅವರ ಸ್ವಾತಂತ್ರ್ಯವನ್ನು ಕಸಿದು, ಪ್ರತಿಬಾರಿ ಬೀಜ ಕಂಪನಿಗಳಿಂದಲೇ ಭೀಜ ಖರೀದಿಸಬೇಕಾದ ಅನಿವಾರ್ಯ ಅವಲಂಬನೆಯ ಅಪಾಯಕ್ಕೆ ತಳ್ಳೀತು' ಇತ್ಯಾದಿ ವರದಿಗಳು. ಇನ್ನೂ ಏನೇನೋ ಊಹಾಪೋಹಗಳು, ಕಲ್ಪನೆಗಳು, ಕಪೋಲ ಕಲ್ಪಿತ ಸಾಧ್ಯತೆಗಳು!

ಏನಿದು ಟರ್ಮಿನೇಟರ್ ಬೀಜ?

ಸದ್ಯಕ್ಕೆ ಕಾಲ್ಪನಿಕವಾಗಿರುವ ಈ ಅಂತಕಾರಿ ಬೀಜದ ಭೀತಿ ಮೊಳೆತದ್ದು ಇದೇ ವರ್ಷ ಮಾರ್ಚ್‌ನಲ್ಲಿ. -ಅಮೆರಿಕಾದ ಕೃಷಿ ಇಲಾಖೆ (USDA) ಮತ್ತು ಅಮೆರಿಕನ್ ಡೆಲ್ಟಾ ಆ್ಯಂಡ್ ಪೈನ್‌ಲ್ಯಾಂಡ್ (D&PL) ಕಂಪನಿ ಜಂಟಿಯಾಗಿ 'ಸಸ್ಯ ಜೀನಿ (ಗುಣಾಣು) ಅಭಿವ್ಯಕ್ತಿಯ ನಿಯಂತ್ರಣ' ಹೆಸರಿನ ಪ್ರಯೋಗ ತಂತ್ರಕ್ಕೆ ಪೇಟೆಂಟ್ ಪಡೆದಾಗ. ಈ ತಂತ್ರಜ್ಞಾನ ಸಸ್ಯಗಳನ್ನು ಅನುವಂಶೀಯವಾಗಿ ಮಾರ್ಪಡಿಸಿ, ಮುಂದಿನ ಪೀಳಿಗೆಯಲ್ಲಿ ಅವುಗಳ ಬೀಜ ಮೊಳೆಯುವಿಕೆಯನ್ನು ತಡೆಯುತ್ತದೆ. ಇಂಥ ಬೀಜ ಖರೀದಿಸಿದ ರೈತರು ಅವುಗಳಿಂದ ಒಂದು ಫಸಲು ಬೆಳೆಯಬಹುದು. ಆದರೆ ಆ ಫಸಲಿನಿಂದ ಬೀಜ ಉಳಿಸಿ ಮರುವರ್ಷ

■ ಡಾ. ಶರಣ ಬಸವೇಶ್ವರ ಅಂಗಡಿ
ಡಾ. ಎಚ್ ಈ ಶಶಿಧರ್

ಬಿತ್ತಲಾಗದು. ಬದಲಾಗಿ ಬಿತ್ತನೆ ಬೀಜವನ್ನು ಪ್ರತಿವರ್ಷ ಬೀಜ ಕಂಪನಿಗಳಿಂದಲೇ ಕೊಳ್ಳಬೇಕು. ತಂಬಾಕು ಮತ್ತು ಹತ್ತಿಗಾಗಿ ಅಭಿವೃದ್ಧಿತ ಈ ತಂತ್ರಜ್ಞಾನಕ್ಕೆ ಬೀಜದಿಂದ ವಂಶಾಭಿವೃದ್ಧಿ ಗೊಳ್ಳುವ ಎಲ್ಲಾ ಬೆಳೆಗಳಿಗೂ ಅನ್ವಯಿಸುವ ಸಾಮರ್ಥ್ಯವಿದೆ.

ಸಸ್ಯ ಜೀನಿ ಅಭಿವ್ಯಕ್ತಿಯ ಅಧ್ಯಯನಕ್ಕೆಂದು ರೂಪಿತ ಈ ಹೊಸ ವಿಧಾನ ಭವಿಷ್ಯದಲ್ಲಿ ಮುಖ್ಯವಾಗಿ ತಂತ್ರಜ್ಞಾನದ ಪುಕ್ಕಟೆ ಉಪಯೋಗ ತಡೆಯುವ 'ತಂತ್ರಜ್ಞಾನ ರಕ್ಷಣಾ ವ್ಯವಸ್ಥೆ'ಗಳನ್ನು ರೂಪಿಸಲು ಸಹಾಯಕವಾದೀತೆಂಬ ಆಶಯ ಇದರ ಜನಕರದು.

ಇಂಥ ಜೈವಿಕ ರಕ್ಷಣೆ ಅಗತ್ಯವೇ?

'ಹೌದು, ಅತ್ಯಗತ್ಯ. ನಾವು ಅಪಾರ ವೆಚ್ಚದಲ್ಲಿ ಅತ್ಯಾಧುನಿಕ ಜೀವತಂತ್ರಜ್ಞಾನ (ಬಯೋ ಟೆಕ್ನಾಲಜಿ) ಬಳಸಿ ಹೊಸ ತಳಿ ಸೃಷ್ಟಿಸುತ್ತೇವೆ. ಅದನ್ನು ಕನಿಷ್ಠ ಕೆಲವು ವರ್ಷಗಳಾದರೂ ಮಾರಿ ನಾವು ಹೂಡಿದ ಬಂಡವಾಳದ ಮೇಲೆ ಲಾಭ ಗಳಿಸಬೇಡವೇ? ಬದಲಿಗೆ ಒಮ್ಮೆ ಈ ತಳಿ ಬೀಜ ಕೊಂಡ ರೈತರು ಅವನ್ನೇ ಪುನಃ ಪುನಃ ಬಳಸಿದರೆ ನಮ್ಮ ಗತಿಯೇನು? ಈ ಜೈವಿಕ ರಕ್ಷಣೆ ನಮ್ಮ ತಳಿ ಬೀಜಗಳ ಪುನರ್ ಬಳಕೆಯನ್ನು ಪರಿಣಾಮಕಾರಿಯಾಗಿ ತಡೆದು ಲಾಭ ಗಳಿಕೆಗೆ ಸಹಾಯಕವಾಗುತ್ತದೆ' ಎಂಬುದು ಬೀಜ ಕಂಪನಿಗಳ ಮತ್ತು ಅಲ್ಲಿನ ತಳಿ ತಜ್ಞರ ಅಭಿಮತ.

ಬೀಜಕಂಪೆನಿಗಳ ಹಿತಾಸಕ್ತಿ

ಸಂಕರ ತಳಿ ಅಥವಾ ಹೈಬ್ರಿಡ್ ಬೀಜ ಮಾರಾಟ ಉದ್ಯಮವಾದಾಗಿಂದ ತಳಿಗಳ ಒಡೆತನ ರಕ್ಷಣೆ ಹಾಗೂ ಅವುಗಳಿಂದ ಲಾಭಗಳಿಕೆ ಬೀಜ ಕಂಪನಿಗಳ ಹಿತಾಸಕ್ತಿಯಾಗಿದೆ. 'ಬೀಜೋ ರಕ್ಷತಿ ರಕ್ಷಿತಃ' ಅವುಗಳ ಮೂಲ ಮಂತ್ರವಾಗಿದೆ. ಸೂರ್ಯಕಾಂತಿ ಮೆಕ್ಕೆಜೋಳದಂಥ ಬೆಳೆಗಳಲ್ಲಿ ಪರಕೀಯ ಪರಾಗಸ್ಪರ್ಶ (ಒಂದು ಸಸ್ಯದಲ್ಲಿನ ಅಂಡಾಣುಗಳು ಬೇರೊಂದು ಸಸ್ಯದ ಪುರುಷಾಣುವಿನಿಂದ ಫಲಿತ ಗೊಳ್ಳುವದು) ಕಡ್ಡಾಯ. ಇವುಗಳಲ್ಲಿ ಬೀಜ ಕಂಪನಿಗಳು ಸಂಶೋಧನೆಯಿಂದ ತಯಾರಿಸಿದ ತಳಿಗಳ ತಾಯಿ, ತಂದೆ ಸಸ್ಯ ಬೀಜಗಳ ಮೇಲೆ ಸ್ವಾಮ್ಯ ಪಡೆದಿರುತ್ತವೆ. ಪ್ರತಿವರ್ಷ ಈ ಬೀಜದಿಂದ ಶಕ್ತಿಮಾನ್ ತಳಿ ಬೀಜ ಉತ್ಪಾದಿಸಿ ಮಾರುವ ಮೂಲಕ ಲಾಭವನ್ನು ದೃಢಪಡಿಸಿಕೊಳ್ಳುತ್ತವೆ. ಈ ಹೈಬ್ರಿಡ್‌ಗಳ ಸಂಕರ ಬೀಜದ ಸಂತತಿ (ಇದನ್ನು F1 ಅಥವಾ First Filial Generation ಎನ್ನುತ್ತಾರೆ) ಯಿಂದಷ್ಟೇ ತಳಿಯ ಸಂಪೂರ್ಣ ಲಾಭ (ಏಕರೂಪತೆ, ಅಧಿಕ ಇಳುವರಿ) ಲಭ್ಯ. ಅದರ ಬೀಜವನ್ನು ಪುನಃ ಬಿತ್ತಿದರೆ (ಇದು F2 ಅಥವಾ Second Filial Generation) ಅಷ್ಟೇನೂ ಪ್ರಯೋಜನವಾಗಲಾರದು. ಇದರ ಅರಿವಿರುವ ರೈತರು ಪ್ರತಿವರ್ಷ ಹೈಬ್ರಿಡ್ ಬಿತ್ತನೆ ಬೀಜವನ್ನೇ ಕೊಳ್ಳುತ್ತಾರೆ. ಇಲ್ಲಿ ಸಂಕರಣ ಕ್ರಿಯೆಯೇ ಬೀಜ ಕಂಪನಿಗಳಿಗೆ ರಕ್ಷಣೆಯೊದಗಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, ಸ್ವಕೀಯ ಪರಾಗಸ್ಪರ್ಶದ ನಿಯಮವುಳ್ಳ ಗೋಧಿ ಅಕ್ಕಿ, ಅವರೆ (ಬೀನ್ಸ್)ಗಳಲ್ಲಿ ಸಂಕರ ತಳಿ ಅಭಿವೃದ್ಧಿ ಸಾಧ್ಯವಾದರೂ ಕೆಲ ತಾಂತ್ರಿಕ ತೊಂದರೆಗಳಿಂದಾಗಿ ಅವುಗಳಿಗೆ ಆರ್ಥಿಕ ಆಕರ್ಷಣೆಯಿಲ್ಲ. ಇಲ್ಲಿ ತಳಿ ಸುಧಾರಣೆಯೆಂದರೆ ಶುದ್ಧ (ಬೆರಕೆಯದಲ್ಲದ) ತಳಿ ರೂಪಿಸುವದು. ಈ ತಳಿಗಳು ಹಲವು ಪೀಳಿಗೆಗಳ ನಂತರವೂ ತಮ್ಮ ಉತ್ಕೃಷ್ಟತೆಯನ್ನುಳಿಸಿಕೊಳ್ಳುವದರಿಂದ ರೈತರು ಒಮ್ಮೆ ಕೊಂಡ ಬೀಜವನ್ನೇ ಮತ್ತೆ ಮತ್ತೆ ಬೆಳೆದು ಲಾಭ ಪಡೆಯಬಹುದು. ಇದರಿಂದ ಕಂಪನಿಗಳಿಗೆ ಲಾಭವಿಲ್ಲ. ಆದ್ದರಿಂದ ಬೀಜ ಕಂಪನಿಗಳಿಗೆ ಸದ್ಯಕ್ಕೆ ಈ ಬೆಳೆಗಳ ಸಂಕರ ತಳಿ ಅಭಿವೃದ್ಧಿಯಲ್ಲಿ



ಅಮೆರಿಕದ ಪೇಟೆಂಟ್ ಇಲಾಖೆ ಕಳೆದ ಮಾರ್ಚ್ 3ರಂದು 5, 723,765ನೇ ಸನದನ್ನು ಡೆಲ್ಟಾ ಅಂಡ್ ಪೈನ್‌ಲ್ಯಾಂಡ್ (ಡಿಅಂಡ್ ಪಿಎಲ್) ಕಂಪೆನಿಗೆ ನೀಡಿದ ದಿನದಿಂದ ವಿಶ್ವಾದ್ಯಂತ ಕೃಷಿ ವಲಯದಲ್ಲಿ ದೊಡ್ಡ ಕೋಲಾಹಲವೇ ಎದ್ದಿದೆ. ಈ ಸನದು ಡಿ ಅಂಡ್ ಪಿಎಲ್ ಕಂಪೆನಿಗೆ 'ಟರ್ಮಿನೇಟರ್' ಎಂಬ ಹೆಸರಿನ, ಒಂದೇ ಬೆಳೆಗೆ ಬರಡಾಗುವ ಬೀಜೋತ್ಪಾದನೆಯ ಏಕಸ್ವಾಮ್ಯವನ್ನು ನೀಡಿದೆ. ಯಾವುದೇ ಬೆಳೆಯ ಬೀಜವಿರಲಿ, ಅದರ ಮೊಳೆಯುವ ತಳಿತಂತುಗಳನ್ನು ಕಿತ್ತುಹಾಕುವುದೇ 'ಟರ್ಮಿನೇಟರ್ ಜೀನ್' ತಂತ್ರಜ್ಞಾನ. ನಾಳೆ ಈ ತಳಿಯ ಬತ್ತ, ಗೋಧಿ, ಬಾರ್ಲಿ, ಜೋಳದ ಬೀಜಗಳು ಮಾರುಕಟ್ಟೆಗೆ ಬಂದಲ್ಲಿ ರೈತ ಪ್ರತಿಸಲವೂ ಬೀಜಕ್ಕಾಗಿ ಬಹುರಾಷ್ಟ್ರೀಯ ಕಂಪೆನಿಗಳ ಬಾಗಿಲು ತಟ್ಟಬೇಕಾಗುತ್ತದೆ. ತನ್ನ ಬೆಳೆಯಲ್ಲೇ ಸ್ವಲ್ಪ ಭಾಗವನ್ನು ಬೀಜಾಭಿವೃದ್ಧಿಗೆ ಉಳಿಸಿಕೊಳ್ಳುವ ರೈತನ ಸ್ವಾತಂತ್ರ್ಯವನ್ನೇ ಇದು ಕಸಿದುಕೊಳ್ಳಲಿದೆ ಎಂದು ರೈತಪರ ಚಿಂತಕರು ಹೇಳುತ್ತಿದ್ದರೆ, ಅದು ಬರೀ ಕುತರ್ಕದ ಮಾತು ಎನ್ನುತ್ತಾರೆ ಈ ತಳಿಯ ಜನಕರು. ಹಾಗಿದ್ದರೆ ನಿಜವಾದ ಹಕೀಕತ್ತೇನು?

ಆಸಕ್ತಿಯಿಲ್ಲ. ಜೈವಿಕ ರಕ್ಷಣೆ ತಂತ್ರ ಈ ಪರಿಸ್ಥಿತಿಯನ್ನು ಬದಲಿಸಬಹುದು, ಈ ಬೆಳೆಗಳಲ್ಲಿ ಹೈಬ್ರಿಡ್ ತಳಿ ರೂಪಿಸಲು ಪ್ರೋತ್ಸಾಹಕ ವಾಗಬಹುದು.

ಹಾಗಿದ್ದರೆ ಈ ಉಪಯುಕ್ತ ತಂತ್ರಜ್ಞಾನಕ್ಕೆ 'ಟರ್ಮಿನೇಟರ್' ಎಂಬ ಸಲ್ಲದ ಅಡ್ಡ ಹೆಸರೇಕೆ?

ಈ ಹೆಸರಿಟ್ಟ ಕೀರ್ತಿ ಕೆನಡಾದ RAFI (Rural Advancement Foundation International) ಎಂಬ ಅಂತರರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಸಲ್ಲಬೇಕು. ಈ ಸಂಸ್ಥೆಯ ಅಧ್ಯಯನದ ಪ್ರಕಾರ, ಅಭಿವೃದ್ಧಿಶೀಲ ದೇಶಗಳ ಒಟ್ಟು ಬಿತ್ತನೆ ಬೀಜದ ಅವಶ್ಯಕತೆಯಲ್ಲಿ ಶೇಕಡಾ ಎಂಬತ್ತರಷ್ಟನ್ನು ರೈತರು ತಮ್ಮ ಹೊಲದ ಬೆಳೆಯಿಂದ ಉಳಿಸಿದ ಬೀಜವೇ ಪೂರೈಸುತ್ತದೆ. ಈ ತಂತ್ರಜ್ಞಾನದಿಂದ ಬಡರಾಷ್ಟ್ರಗಳ ಸೂರಾರು ಕೋಟಿ ಸಂಪನ್ಮೂಲ ಹೀನ ರೈತರ ಬೀಜವುಳಿಸುವ ಸ್ವಾತಂತ್ರ್ಯ ಅಂತ್ಯಗೊಂಡು ಅವರ ಆಹಾರ ಭದ್ರತೆಗೆ ಧಕ್ಕೆಯಾಗುತ್ತದೆ.

'ಬಡ ದೇಶಗಳ ಬೆಳೆಗಾರರಿಗೆ ತಮ್ಮ ಸಾಂಪ್ರದಾಯಿಕ ತಳಿಗಳ ಬೀಜ ಉಳಿಸಿಕೊಳ್ಳುವ ಅಥವಾ ಈ ತಂತ್ರಜ್ಞಾನದಿಂದ ರಕ್ಷಿತ ಹೊಸ ತಳಿಗಳನ್ನು ಕೊಳ್ಳುವ ಆಯ್ಕೆಯಿರುತ್ತದಲ್ಲ' ಎನ್ನುವ D&PL ಕಂಪನಿಯ ಹ್ಯಾರಿ ಕೊಲ್ಲಿನ್ಸ್ ಮುಂದುವರಿದು 'ಈ ಹೊಸ ಬೆಳವಣಿಗೆಯಿಂದ ಅಧಿಕ ಇಳುವರಿ ನೀಡುವ ಗೋಧಿ, ಅಕ್ಕಿ, ಅವರೆಯ ಹೊಸ ತಳಿಗಳು ದೊರೆತು ರೈತರ ಲಾಭ ಹೆಚ್ಚುತ್ತದೆ' ಎನ್ನುತ್ತಾರೆ.

'ತಳಿ ವೈವಿಧ್ಯಕ್ಕೆ ಆಪತ್ತು'

'ಜೊತೆಗೆ ಹೊಸತಳಿ ಅಭಿವೃದ್ಧಿಗೆ ಸಿಗುವ ಪ್ರೋತ್ಸಾಹದಿಂದ ಬಹಳಷ್ಟು ಮುಖ್ಯ ಬೆಳೆಗಳಲ್ಲಿ ತಳಿ ವೈವಿಧ್ಯ ಹೆಚ್ಚುತ್ತದೆ'ನ್ನುವ ಕೊಲ್ಲಿನ್ಸ್‌ರ ವಾದವನ್ನು ಯುರೋಪ್‌ನ Genetic Resources Action International (GRAIN) ಅಥವಾ ಅಂತರರಾಷ್ಟ್ರೀಯ ಅನುವಂಶೀಯ ಸಂಪನ್ಮೂಲ ಕಾರ್ಯಸಂಸ್ಥೆ ಖಂಡಿಸುತ್ತದೆ. 'ತಳಿ ವೈವಿಧ್ಯವನ್ನು

ಸಂಕರ ತಳಿಗಳಲ್ಲಿ ಸಂರಕ್ಷಿಸಿಡಲಾಗದು. ಬಿತ್ತನೆ ಬೀಜವನ್ನು ತಮ್ಮ ಅವಶ್ಯಕತೆಗನುಗುಣವಾಗಿ ಅನುಗೊಳಿಸಲು ರೈತರು ಬೀಜ ಉಳಿಸಲೇಬೇಕು. ಇದರಿಂದ ಅವರು ತಮ್ಮ ಹೊಲಗಳಲ್ಲಿ ತಳಿ ವೈವಿಧ್ಯವನ್ನು ವಿಕಾಸಗೊಳಿಸಿ, ಪೋಷಿಸಿದಂತಾಗುತ್ತದೆ' ಎನ್ನುವದು ಗ್ರೇನ್‌ನ ಅಭಿಪ್ರಾಯ.

'ಟರ್ಮಿನೇಟರ್'ಗುಣ ಪರಾಗ (Pollen)ದ ಮೂಲಕ ಸಾಮಾನ್ಯ ತಳಿಗಳಿಗೆ, ಇತರ ಬೆಳೆಗಳಿಗೆ ಹರಡಿ ಅವುಗಳ ಬೀಜ ಬರಡಾದರೆ ರೈತರ ಸ್ವಂತದ ಬೀಜ ಉಳಿತಾಯಕ್ಕೂ ಸಂಚಕಾರವೊದಗಬಹುದು'. ಎಂಬುದು ಮತ್ತೊಂದು ಭೀತಿ.

ಈ ತಂತ್ರಜ್ಞಾನದ ಸಂಶೋಧಕರು ಪ್ರಪಂಚದ ಸುಮಾರು 78 ದೇಶಗಳಲ್ಲಿ ಪೇಟೆಂಟ್ ಕೋರಿದ್ದಾರೆ. ಮತ್ತು ತಂತ್ರಜ್ಞಾನವನ್ನು ಲೈಸೆನ್ಸ್ ಒಪ್ಪಂದಗಳ ಮೂಲಕ ಹಲವಾರು ಬೀಜ ಕಂಪನಿಗಳಿಗೆ ಕೊಡುವುದಾಗಿ ಘೋಷಿಸಿದ್ದಾರೆ.

ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ತಂಬಾಕು ಸಸ್ಯವನ್ನು ಮಾದರಿಯಾಗಿ ಬಳಸಿದ್ದರೂ ಆರಂಭದಲ್ಲಿ ಹತ್ತಿ ಬೆಳೆಯಲ್ಲಿ ಇದನ್ನು ವಾಣಿಜ್ಯೀಕರಿಸುವ ನಿರೀಕ್ಷೆಯಿದೆ. ಬೀಜ ಉಳಿತಾಯದ ವಿರುದ್ಧ ರಕ್ಷಿತ ಮೊತ್ತ ಮೊದಲ ಹತ್ತಿ ಹೈಬ್ರಿಡ್‌ಗಳನ್ನು ಕ್ರಿ.ಶ. 2004 ರಲ್ಲಿ ಮಾರುವ ಆಶಯ D&PL ಕಂಪನಿಯದು. ಕಳೆದ ವರ್ಷ 183 ದಶಲಕ್ಷ ಡಾಲರ್ (ಸುಮಾರು 787 ಕೋಟಿ ರೂಪಾಯಿ) ಮೌಲ್ಯದ ಹತ್ತಿ ಬೀಜ ಮಾರಿದ D&PL ಪ್ರಪಂಚದ ಅತಿದೊಡ್ಡ ಹತ್ತಿ ಬೀಜದ ಉತ್ಪಾದಕ ಕಂಪೆನಿ.

ಅಂತರರಾಷ್ಟ್ರೀಯ ಸ್ತರದಲ್ಲಿ ಜಾಗತಿಕ ಆಹಾರ ಮತ್ತು ಕೃಷಿ ಸಂಸ್ಥೆ (FAO) ಇನ್ನೂ ಅಧಿಕೃತವಾಗಿ ಈ ತಂತ್ರಜ್ಞಾನದ ಗುಣ ದೋಷವಿಮರ್ಶೆ ಮಾಡಿಲ್ಲ. ಆದರೆ ಮೇ ತಿಂಗಳಲ್ಲಿ ನಡೆದ ಜೀವವೈವಿಧ್ಯದ ವಿಶ್ವಸಂಸ್ಥೆ ಸಭೆ ಈ ವಿಷಯ ಚರ್ಚಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ಅತೀ ಬಡರೈತರ ಏಳಿಗೆಯ ಕೃಷಿ ಸಂಶೋಧನೆಯನ್ನು ಪ್ರೋತ್ಸಾಹಿಸುವ ಧ್ಯೇಯದ ಅಂತರರಾಷ್ಟ್ರೀಯ ಕೃಷಿ ಸಂಶೋಧನಾ ಸಲಹಾ ಮಂಡಳಿ- Consultative Group on International Agricultural Research (CGIAR) 'ಈ ತಂತ್ರಜ್ಞಾನ ಸಂಪನ್ಮೂಲರಹಿತ ಬಡ ರೈತರನ್ನು ಬಾಧಿಸಬಲ್ಲದು. ಬರಲಿರುವ ಹೊಸ ತಳಿಗಳೆಲ್ಲವುಗಳ ಬೀಜ ಬರಡಾದರೆ ಪ್ರತಿವರ್ಷ ಬೀಜ ಕೊಳ್ಳಲಾಗದ ರೈತರು ಅವುಗಳ ಲಾಭಗಳಿಂದ ವಂಚಿತರಾಗುತ್ತಾರೆ' ಎಂದಿದೆ.

ಅಮೆರಿಕದಂಥ ಔದ್ಯೋಗೀಕೃತ ದೇಶಗಳ ಖಾಸಗಿ ಬೀಜೋದ್ಯಮಕ್ಕೆ ನೀಡಿರುವ ಪ್ರೋತ್ಸಾಹದಿಂದ ಅಭಿವೃದ್ಧಿಶೀಲ ಜಗತ್ತಿನ ರೈತರಿಗೆ ಲಾಭವಾದೀತೇ? ಎನ್ನುವ ಪ್ರಶ್ನೆಗೆ ಹಲ ಪ್ರತಿಕ್ರಿಯೆಗಳಿವೆ.

ಬೀಜ ರಕ್ಷಣೆಯಿಂದ, ಸಸ್ಯ ತಳಿ ಅಭಿವೃದ್ಧಿಯಲ್ಲಿ ಖಾಸಗಿ ಕಂಪನಿಗಳು ಧೈರ್ಯವಾಗಿ ಅಧಿಕ ಹಣ ಹೂಡಬಹುದು. ಅದರಿಂದ ಇದರಿಂದ ಅಭಿವೃದ್ಧಿಶೀಲ ದೇಶಗಳಿಗೆ ಲಾಭವಾಗುತ್ತದೆನ್ನಲಾಗದು. ಖಾಸಗಿ ಕಂಪನಿಗಳು ತಾವು ಈಗಾಗಲೇ ವಾಣಿಜ್ಯೀಕರಿಸಿರುವ ತಳಿಗಳ ರಕ್ಷಣೆಗೆ ಜೈವಿಕ ರಕ್ಷಣಾ ವಿಧಾನ ಬಳಸುವ ಸಾಧ್ಯತೆ ಅಧಿಕ. ಅವುಗಳಲ್ಲಿ ಬಹಳಷ್ಟಕ್ಕೆ ಕಳೆ ನಾಶಕ ನಿರೋಧಕ ಶಕ್ತಿಯಂಥ ಗುಣಗಳಿವೆಯೇ ಹೊರತು ಪ್ರತಿಕೂಲ ಹವೆ ಅಥವಾ ಬರ ನಿರೋಧಕ ಶಕ್ತಿಯುಳ್ಳ ತಳಿಗಳು ಕಡಿಮೆ. ಹೊಸ ತಳಿ ರೂಪುಗೊಂಡರೂ ಔದ್ಯೋಗೀಕೃತ ದೇಶಗಳ ಮಾರುಕಟ್ಟೆಯ ಆಕರ್ಷಣೆಯೇ ಹೆಚ್ಚಾಗಿ ಬಡರಾಷ್ಟ್ರಗಳಿಗೆ ಅವು ದೊರೆಯುವವೇ ಅನುಮಾನಕರ.

ಬರಡು ಬೀಜ ಹೊಂದಿದ ಅಥವಾ ಸಾಧಾರಣ ಬೀಜದ ತಳಿಗಳನ್ನು ಆಯ್ದುಕೊಳ್ಳಲು ರೈತರಿಗಿರುವ ಸ್ವಾತಂತ್ರ್ಯ ಇಂದೋ ನಾಳೆಯೋ ಅದೃಶ್ಯವಾಗಲಾರದಾದರೂ ದೀರ್ಘಾವಧಿಯಲ್ಲಿ ಪರಿಣಾಮಗಳು ಸ್ಪಷ್ಟಗೊಳ್ಳುತ್ತವೆ. ಈ ಕಂಪನಿಗಳಿಂದ ಸುಧಾರಿತ ಯಾ ನವೀನ ತಳಿ ಮೂಲ (Germplasm) ಪಡೆಯಬಯಸುವ ಸಾರ್ವಜನಿಕ ಮತ್ತು ಖಾಸಗಿ ಸಂಕರಣ ತಜ್ಞರು ಲೈಸೆನ್ಸ್ ಪಡೆಯಲು ಮುಂದೆ ಬೀಜ ಬಂಜೆತನವನ್ನು ಒಪ್ಪಿಕೊಳ್ಳಲೇಬೇಕಾಗಬಹುದು.

ಬೀಜ ಪೂರೈಕೆಗಾಗಿ ಕಂಪನಿಗಳನ್ನವಲಂಬಿಸಬೇಕಾದ ರೈತರು ಹಲ ವಿಧದ ಗೊಂದಲಗಳಿಗೀಡಾಗಬಹುದು.

ಹೀಗೆ 'ಭಸ್ಮಾಸುರ' ಬೀಜ ಸೃಷ್ಟಿಯ ಸಾಧ್ಯತೆ, ಬಹಿರಂಗವಾದ ಕೆಲವೇ ತಿಂಗಳುಗಳಲ್ಲಿ ಸಾಕಷ್ಟು ವಾದ ವಿವಾದ, ವ್ಯಾಪಕ ಚರ್ಚೆಗಳಿಗೆ ಗ್ರಾಸವಾಗಿದೆ.

ಈ ವಿಷಯ ಕೃಷಿಯ ಮೂಲಭೂತ ಅವಶ್ಯಕತೆಯಾದ ಬೀಜಕ್ಕೆ ಸಂಬಂಧಿಸಿರುವದು. ಈ ತಂತ್ರಜ್ಞಾನದ ಪೇಟೆಂಟ್ ಪಡೆದಿರುವ ಕಂಪನಿಯ ಬೃಹತ್ ಗಾತ್ರ ಮತ್ತು ಇದರಲ್ಲಿ ಅಮೆರಿಕ ಸರಕಾರದ ಕೃಷಿ ಇಲಾಖೆಯ ಆಸಕ್ತಿಯಿಂದಾಗಿ ತೀವ್ರ ಗಮನ ಸೆಳೆದಿದೆ.

ಈ ಮಧ್ಯೆ ಭಾರತದಲ್ಲಿ ಕಾರ್ಯಾಚರಣೆ ಆರಂಭಿಸಿ, ಕಾಯಿಕೊರಕ ನಿರೋಧಕ ಶಕ್ತಿಯುಳ್ಳ ಟ್ರಾನ್ಸ್‌ಜೆನಿಕ್ ಹತ್ತಿ ತಳಿಯನ್ನು ಮಾರುವ ಸಿದ್ಧತೆಯಲ್ಲಿರುವ ಮೊನ್‌ಸಾಂಟೋ ಕಂಪನಿ ಮೇ ತಿಂಗಳಲ್ಲಿ D&PL ಕಂಪನಿಯನ್ನು ಖರೀದಿಸುವುದಾಗಿ ಘೋಷಿಸಿತು.

ಇನ್ನು ಆರು ವರ್ಷಗಳಲ್ಲಿ ಮಾರುಕಟ್ಟೆಗೆ ಬರಲಿರುವ ಈ ಬೀಜದ ಬಗ್ಗೆ ಭಾರತಕ್ಕೆ ಅತೀವ ಭೀತಿ. ದೇಶದೊಳಕ್ಕೆ ಇದರ ಪ್ರವೇಶ ತಡೆಯಲು ಸೂಕ್ತ ಹೊಸ ಮಾರ್ಗಸೂಚಿ ಸಲಹೆಗಳನ್ನು ಬಂದರು ಹಾಗೂ ವಿಮಾನ ನಿಲ್ದಾಣಗಳಲ್ಲಿರುವ ಕ್ವಾರಂಟೈನ್ (ಸಾಂಕ್ರಾಮಿಕ ರೋಗ, ಅಂಟು ಜಾಡ್ಯಗಳನ್ನು ಹರಡಬಹುದಾದ ಸಸ್ಯಬೀಜ ಹಾಗೂ ಭಾಗಗಳು, ಅಥವಾ ರೋಗದ ಸೋಂಕಿರುವ ಸಸ್ಯಭಾಗ ಯಾ ಬೀಜಗಳನ್ನು ಪ್ರತ್ಯೇಕಿಸಿಡುವ ಮತ್ತು ಕೆಲ ಅವಧಿಯವರೆಗೆ ಸಂಪರ್ಕ ನಿಷೇಧಿಸುವದು) ಕೇಂದ್ರಗಳಿಗೆ ನೀಡಲಾಗಿದೆ. ಆಮದಿತ ಬೀಜಗಳಲ್ಲಿ ಗುಣವಿದೆಯೇ ಎಂಬುದರ ತಪಾಸಣೆಗೆ ಸೂಕ್ತ ವಿಧಾನಗಳನ್ನು ರೂಪಿಸಲು ವಿಜ್ಞಾನಿಗಳಿಗೆ ಕರೆ ನೀಡಲಾಗಿದೆ.

'ಇದೆಲ್ಲವೂ ಮುಂಜಾಗ್ರತಾ ಕ್ರಮ' ಎಂದಿದ್ದಾರೆ ಜೀವತಂತ್ರಜ್ಞಾನ ಇಲಾಖೆ (Department of Bio Technology ಅಥವಾ DBT)ಯ ಕಾರ್ಯದರ್ಶಿ ಡಾ. ಮಂಜುಶರ್ಮ.

'ಟರ್ಮಿನೇಟರ್ ಜೀನ್ (ಗುಣಾಣು) ಇನ್ನೂ ಕಲ್ಪನಾ ಹಂತದಲ್ಲಿದೆ ಅಷ್ಟೆ. ಈ ಗುಣಾಣು ರಕ್ಷಕ ತಂತ್ರಜ್ಞಾನ (GPT) ಕಲ್ಪನೆಗೆ ಪೇಟೆಂಟ್ ದೊರಕಿದೆ' ಎನ್ನುತ್ತಾರೆ ಮೊನ್‌ಸಾಂಟೊದ ರಾಷ್ಟ್ರೀಯ ಮಾರ್ಕೆಟಿಂಗ್ ಮ್ಯಾನೇಜರ್ ಮಾರ್ಕ್ ವೆಲ್ಸ್.

ಸದ್ಯದ ತನ್ನ ತಳಿಗಳಲ್ಲಿ GPT ಬಳಕೆಯಿಲ್ಲ ವೆಂದಿದೆ ಮೊನ್‌ಸಾಂಟೊ. 'ಇದನ್ನು ಭಾರತ ಸರ್ಕಾರ ನಿಷೇಧಿಸುತ್ತದೆ. ಅಥವಾ ದೇಶದ ನಿಯಂತ್ರಕ ವ್ಯವಸ್ಥೆ ಇದನ್ನು ಅನುಮತಿಸಿದೆ ಎಂಬ ಭಯ ಅನಗತ್ಯ. ಇದು ಅಸ್ತಿತ್ವದಲ್ಲೇ ಇಲ್ಲ. ಜೊತೆಗೆ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಯಾವುದೇ ತಂತ್ರಜ್ಞಾನಕ್ಕೆ ಅನುಮತಿ ಅಸಾಧ್ಯ' ಎನ್ನುವ ವೆಲ್ಸ್ ಹೇಳುವಂತೆ:

'ಈ ದೇಶದ ತಳಿ ಪ್ರವೇಶ ನಿಯಂತ್ರಕ ವಿಧಿ ವಿಧಾನಗಳು, ಅವನ್ನು ಜಾರಿಗೊಳಿಸುವ ಅಧಿಕಾರಿವರ್ಗ ಮತ್ತು ಕ್ವಾರಂಟೈನ್ ಕುರಿತು ನಮಗೆ ಸಂಪೂರ್ಣ ಗೌರವವಿದೆ. ಅವುಗಳ ಸಮರ್ಪಕ ನಿರ್ವಹಣೆಗೆ ಅಗತ್ಯವಾದ ಎಲ್ಲ ಸಹಕಾರವನ್ನೂ ನೀಡುತ್ತೇವೆ. ನಮ್ಮ ನವೀನ ರೈತ ಮಿತ್ರ ತಂತ್ರಜ್ಞಾನದ ಯಶಸ್ಸಿಗೆ ಇದು ಅತ್ಯಗತ್ಯ' ಹಾಗೂ

'ಯಾವುದೇ ತಂತ್ರಜ್ಞಾನದಿಂದ ರೈತರ ಹಿತಾಸಕ್ತಿ ಬಾಧಿತಗೊಳ್ಳುವಂತಿದ್ದರೆ ಅದನ್ನು ರೈತರೇ ತಿರಸ್ಕರಿಸುತ್ತಾರೆ. ರೈತರಿಗೆ ಸ್ವೀಕಾರಾರ್ಹವಲ್ಲದ ಏನನ್ನೂ ಇಲ್ಲಿ ಬಲವಂತವಾಗಿ ಮಾರುವ ಉದ್ದೇಶ ನಮಗಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ ಇವರಿಗೆ ಒಳಿತನ್ನುಂಟುಮಾಡುವ, ಪರಿಸರ ಸ್ನೇಹಿ, ಸುರಕ್ಷಿತ ತಳಿಗಳನ್ನಷ್ಟೇ ಇಲ್ಲಿ ಮಾರುವ ಆಶಯ ನಮ್ಮದು' ಮತ್ತು

'ಯಾವುದೇ ಪ್ರಾಯೋಗಿಕ ಆಧಾರವಿಲ್ಲದೇ ಈ ತಂತ್ರಜ್ಞಾನವನ್ನು ದೂಷಿಸುವದು ಸರಿಯಲ್ಲ. ಅಪಾಯ ಸಂಭವಗಳ ಕಲ್ಪನೆಗಳಿಗೆ ನೀಡಿರುವ ಪ್ರಾಶಸ್ತ್ಯದಿಂದ ಹಬ್ಬಿರುವ ಅಪಖ್ಯಾತಿಯನ್ನು ಸೂಕ್ತ ಅಧ್ಯಯನಗಳಿಂದ ದೂರೀಕರಿಸಬಹುದು. ಸರಿಯಾದ ಸಂಶೋಧನೆ ಮತ್ತು ಪ್ರಯೋಗಗಳಿಂದ ಇದರ ಸತ್ಪರಿಣಾಮಗಳು ದೃಢಪಟ್ಟ ಮೇಲಷ್ಟೇ ಇದನ್ನು ವಾಣಿಜ್ಯೀಕರಿಸುತ್ತೇವೆ' ಎನ್ನುತ್ತಾರೆ ವೆಲ್ಸ್.

'ಬೇಕು: ನೈತಿಕ ಲಕ್ಷ್ಮಣರೇಖೆ'

ದೇಶದ ಪ್ರಮುಖ ಕೃಷಿ ತಜ್ಞ ಡಾ. ಎಂ ಎಸ್ ಸ್ವಾಮಿನಾಥನ್‌ರವರು 'ವಿಜ್ಞಾನ ನಮಗೆ ಅಗಾಧ ಅಧಿಕಾರ ನೀಡುತ್ತದೆ. ಆ ಅಧಿಕಾರ ಚಲಾವಣೆಗೆ

ನೈತಿಕ ನಿಯಮಾವಳಿ ಅಗತ್ಯ' ಎಂದಿರುವದು ಸಮಯೋಚಿತವಾಗಿದೆ.

ಈ ಎಲ್ಲ ವ್ಯಾಪಕ ಚರ್ಚೆ, ಸರಕಾರದ ಮುಂಜಾಗ್ರತಾ ಕ್ರಮ, ಪತ್ರಿಕಾ ಮಾಧ್ಯಮದ ಕಾಳಜಿ ಮುಂತಾದವುಗಳಿಂದ ಬೀಜ ರಕ್ಷಣಾ ತಂತ್ರಜ್ಞಾನದ ಸ್ಪಷ್ಟ ಚಿತ್ರ ಮೂಡುವಂತಾದರೆ

ರೂಪಿಸಿದ ತಂತ್ರಜ್ಞಾನದ ದುರುಪಯೋಗದಿಂದ ಕೆಡುಕೂ ಆದೀತು. ಆದ್ದರಿಂದ ಅಪಾಯ ಸಂಭವ ಗಳನ್ನರಿತು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳಿಂದ ಅವನ್ನು ತಡೆದು ಲಾಭ ಸಾಧ್ಯತೆಗಳ ಪ್ರಯೋಜನ ಪಡೆಯುವುದು ಜಾಣತನ.

ಒಲೆ ಹೊತ್ತಿಸುವ ಬೆಂಕಿ ಮನೆಯನ್ನು

ಅಂಕುರದ ಮೇಲೆ ಅಂಕುಶ

ಮೊಳಕೆ ನಿಯಂತ್ರಕ ತಂತ್ರಜ್ಞಾನದಲ್ಲಿ ಸಸ್ಯ ಜೀವಕೋಶವೊಂದನ್ನು ಪ್ರತ್ಯೇಕಿಸಿ ಅದರ ಅನುವಂಶೀಯ ರಚನೆ (Genetic Makeup) ಬದಲಿಸುತ್ತಾರೆ. ಈ ಮಾರ್ಪಟ್ಟ ಜೀವಕೋಶ ದಿಂದ ಪುನರ್ ಸೃಷ್ಟಿಗೊಂಡ ಸಸ್ಯಗಳಲ್ಲಿ ಕಟ್ಟುವ ಕಾಳು ಮೊಳೆಯುವದಿಲ್ಲ. ಈ ತಂತ್ರಜ್ಞಾನದಲ್ಲಿ ಬೀಜ ಮೊಳೆತವನ್ನು ಮೂರು ಗುಣಾಣುಗಳು ನಿಯಂತ್ರಿಸುತ್ತವೆ.

ಮೂರು ಗುಣಾಣುಗಳಲ್ಲಿ ಮೊದಲನೆಯದು ವಿಷದ ಗುಣಾಣು. ಭ್ರೂಣ ಹಂತಕ ವಿಷ ತಯಾರಿಸಬಲ್ಲ ಈ ಜೀನಿಗೆ ಅಂಟಿಕೊಂಡು ಇದರ ಕಾರ್ಯ ತಡೆಯುವ ಭಾಗವೊಂದಿರುತ್ತದೆ.

ಲೊಕ್ಸ್ ಹೆಸರಿನ ಎರಡನೆ ಜೀನಿ ಮೊದಲ ಜೀನಿಗಂಟಿದ ತಡೆ ಭಾಗವನ್ನು ಕತ್ತರಿಸಬಲ್ಲದು.

ರಿಪ್ರೆಸರ್ ಎಂಬ ಮೂರನೆಯ ಜೀನಿ (ರಿ. ಜೀನಿ) ಲೊಕ್ಸ್ ಜೀನನ್ನು ಅದುಮಿಟ್ಟಿರುತ್ತದೆ.

ವಿಷಜೀನಿಯ ಕಾರ್ಯ ತಡೆಯುವ ಭಾಗ

1. ವಿಷದ ಜೀನಿ 2. ಲೋಕ್ಸ್ ಜೀನಿ
3. ರಿಪ್ರೆಸರ್ ಜೀನಿ

ಸಾಮಾನ್ಯವಾಗಿ ರಿ. ಜೀನಿ ಚುರುಕಾಗಿದ್ದು ಲೊಕ್ಸ್ ಜೀನಿಯನ್ನು ಅದುಮಿಟ್ಟಿರುತ್ತದೆ. ಇದರಿಂದ ವಿಷ ಜೀನಿಯ ಕಾರ್ಯ ತಡೆಗಡೆಯ ಭಾಗ ಅಖಂಡವಾಗಿದ್ದು ಬೆಳೆ/ಬೀಜ ಫಲವತ್ತಾ ಗಿರುತ್ತದೆ. ಈ ಸಸ್ಯದ ಬೀಜವನ್ನು ರಾಸಾಯನಿಕ ಟ್ರಿಗ್ಗರ್‌ನಿಂದ ಉಪಚರಿಸಿದಾಗ ಮಾತ್ರ ರಿ. ಜೀನಿ ತೆಪ್ಪಗಾಗಿ ಲೊಕ್ಸ್ ಜೀನಿ ಬಾಲ ಬಿಚ್ಚುತ್ತದೆ. ವಿಷ ಜೀನಿಯ ತಡೆ ತೆಗೆಯುತ್ತದೆ. ಅಂಕೆ ತಪ್ಪಿದ ವಿಷ ಜೀನಿ ಉತ್ಪಾದಿಸುವ ವಿಷದಿಂದ ಭ್ರೂಣ ಮೊಳೆ ಯುವದಿಲ್ಲ. ಪರಿಣಾಮ ಬಂಜೆ ಬೀಜ.

ಇದು ಒಂದು ವಿಧದ ವಿಷಕಂಠ ವ್ಯವಸ್ಥೆ. ಶಿವನ

ಕತ್ತಿನಲ್ಲಿರುವ ವಿಷ ನಿರಪಾಯಕರವಾಗಿರುವಂತೆ ಇಲ್ಲಿ ವಿಷದ ಜೀನಿಯನ್ನು ನಿಗ್ರಹಿಸಿಟ್ಟಷ್ಟೂ ಕಾಲ ಅಪಾಯವಿಲ್ಲ. ವಿಷ ಕತ್ತಿನಿಂದ ಕೆಳಗಿಳಿದರೆ ಜೀವಕ್ಕೇ ಕುತ್ತು. ಹಾಗೆಯೇ ನಿಯಂತ್ರಣ ತಪ್ಪಿದ ವಿಷ ಜೀನಿಯಿಂದ ಭ್ರೂಣಕ್ಕೆ ವಿಪತ್ತು.

ಈ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಜೈವಿಕ ನಿರೋಧಕ (Antibiotic) ಟೆಟ್ರಾ ಸೈಕ್ಲಿನ್ ಅನ್ನು ರಾಸಾಯನಿಕ ಟ್ರಿಗ್ಗರ್ ಎಂದು ಆರಿಸಿಕೊಂಡರು. ಈ ರಾಸಾಯನಿಕ ನಿಸರ್ಗದಲ್ಲಿ ಅಲಭ್ಯವಾದ್ದರಿಂದ ಆಕಸ್ಮಿಕವಾಗಿ ಬೀಜ ಬರಡಾಗುವ ಭಯವಿಲ್ಲ.

ಈ ತಂತ್ರಜ್ಞಾನವನ್ನು ವಾಣಿಜ್ಯಮಟ್ಟದ ಬೀಜೋತ್ಪಾದನೆಗೆ ಬಳಸಲು ಬೆಳೆಗಳನ್ನು ರಾಸಾಯನಿಕ (ಟೆಟ್ರಾಸೈಕ್ಲಿನ್)ದಿಂದ ಉಪಚ ರಿಸದೇ ಬೆಳೆಯುತ್ತಾರೆ. ಕೊಯ್ಲು ಮಾಡಿದ ಬೀಜವನ್ನು ರೈತರಿಗೆ ಮಾರುವ ಮುನ್ನ ಟ್ರಿಗರ್ ಪದಾರ್ಥ (ಟೆಟ್ರಾಸೈಕ್ಲಿನ್) ಲೇಪಿಸುತ್ತಾರೆ.

ಸಸ್ಯ ಭ್ರೂಣ ಬೆಳವಣಿಗೆಯ ನೈಸರ್ಗಿಕ ನಿಯಮಾನುಸಾರ ರಾಸಾಯನಿಕ ಲೇಪದಿಂದ ವಿಷ ಉತ್ಪಾದನೆಯಾಗಿ ನಂತರದ ಹಂತದಲ್ಲಿ ಭ್ರೂಣಕ್ಕೆ ಮಾರಕವಾಗುತ್ತದೆ. ಇದರಿಂದ ಸಸ್ಯ ಬೆಳವಣಿಗೆ, ಕೊಯ್ಲು ಮತ್ತು ಇಳುವರಿ ಆಬಾಧಿತ.

ಇದಕ್ಕೆ ಪರ್ಯಾಯವಾದ ಹಾಗೂ ಪ್ರಾಯಶಃ ಅಧಿಕ ಸುಸ್ಥಿರವಾದ ವಿಧಾನವೆಂದರೆ ರಾಸಾಯನಿಕ ಟ್ರಿಗ್ಗರ್‌ಗೆ ಬದಲಾಗಿ, ಎರಡು ಜನ್ಮದಾತ ಸಸ್ಯಗಳ ಸಂಕರಣದಿಂದ ಮೇಲೆ ವಿವರಿಸಿದ ಮೂರು ವಿಭಿನ್ನ ಜೀನಿಗಳನ್ನು ಪೂರೈಸುವದು. ಇಲ್ಲಿ ರಿ. ಜೀನಿ ಮೊದಲ ಪೀಳಿಗೆಯ ಸಂತಾನದಲ್ಲಷ್ಟೇ ಪ್ರಕಟ ಗೊಳ್ಳುತ್ತದೆ. ಆದರೆ ನಂತರದ ಪೀಳಿಗೆಯ ಬೀಜ ಬರಡಾಗುತ್ತದೆ.

ಈ ತಂತ್ರಜ್ಞಾನದ ಪೇಟೆಂಟ್ ಅತಿ ವಿಶಾಲ ರಕ್ಷಣೆ ಕೋರಿದೆ. ಮೇಲೆ ವಿವರಿಸಿದ ಗುಣಾಣು ಕೂಟವನ್ನೊಳಗೊಂಡ ಯಾವುದೇ ಪ್ರಭೇದದ ಸಸ್ಯ ಜೀವಕೋಶ, ಅಂಗಾಂಶ, ಬೀಜ ಮತ್ತು ಇಡೀ ಸಸ್ಯಗಳಿಗೂ ಈ ರಕ್ಷಣೆ ಅನ್ವಯಿಸುತ್ತದೆ.

ಆದೊಂದು ಆರೋಗ್ಯಕರ ಬೆಳವಣಿಗೆ ಯಾಗುತ್ತದೆ.

ಹೊಸ ಸಮಸ್ಯೆಗಳಿಗೆ ಹೊಸ ಪರಿಹಾರಗಳು ರೂಪುಗೊಳ್ಳುತ್ತಲೇ ಇರುತ್ತವೆ. ತಂತ್ರಜ್ಞಾನದ ಮುನ್ನಡೆಗಳು ಸಮಯ ಮತ್ತು ನೀರ ತೆರೆಗಳಿದ್ದಂತೆ. ಅವು ಯಾರಿಗೂ ಕಾಯುವದಿಲ್ಲ. ಒಳಿತಿಗೆಂದು

ಸುಡಬಹುದು. ಹಾಗೆಂದು ಬೆಂಕಿಯನ್ನೇ ಬೇಡವೆನ್ನಲಾದೀತೇ? ಈವರೆಗೆ ವಾಹನಾಪಘಾತ ಗಳಿಂದ ಸತ್ತವರ ಸಂಖ್ಯೆ ಮಹಾಯುದ್ಧಗಳಲ್ಲಿ ಮಡಿದವರಿಗಿಂತಲೂ ಅಧಿಕ. ಈಗಲೂ ವರ್ಷಂಪ್ರತಿ ಸಹಸ್ರಾರು ಜನರನ್ನು ಸಾಯಿಸುತ್ತದೆ. ಅಪಾರ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ ಯೆಂದು ವಾಹನ ತಂತ್ರಜ್ಞಾನವನ್ನೇ ಬೇಡ

ವೆನ್ನುವದು ಸಾಧ್ಯವೇ?

ಕ್ಯಾನ್ಸರ್ ಚಿಕಿತ್ಸೆಗೆ ವರದಾನವಾಗಿರುವ, ರೇಡಿಯಂ ತನ್ನ ಸಂಶೋಧಕಿ ಮೇರಿ ಕ್ಯೂರಿಗೆ ಮಾರಕವಾಯಿತು. ಆದರೂ ನಾವು ಅದನ್ನು ಚಿಕಿತ್ಸೆಗೆ ಬಳಸುತ್ತಿದ್ದೇವಲ್ಲ.

ಹಾಗೆಯೇ ಬೀಜ ರಕ್ಷಕ ತಂತ್ರಜ್ಞಾನದಿಂದಲೂ ಹಲವು ಲಾಭಗಳಿವೆ. ನಮ್ಮ ದೇಶದಲ್ಲಿ ಈವರೆಗೆ ಗೋಧಿ, ರಾಗಿ, ನೆಲಗಡಲೆ, ಎಳ್ಳು ಮತ್ತು ಬೇಳೆಕಾಳು ಬೇಳೆಗಳಲ್ಲಿ ಆಗಿರುವ ತಳಿಸುಧಾರಣೆ, ಮೆಕ್ಕೆ ಜೋಳ, ಸೂರ್ಯಕಾಂತಿ, ಹತ್ತಿ, ಬೆಳೆಗಳಿಗೆ ಹೋಲಿಸಿದರೆ ತೀರಾ ಕಡಿಮೆ. ಇದಕ್ಕೆ ಮೊದಲೇ ವಿವರಿಸಿದಂತೆ ಹಲ ತಾಂತ್ರಿಕ ತೊಂದರೆಗಳು ಕಾರಣ. ಜೊತೆಗೆ ಇವುಗಳ ಬೀಜ ಮಾರಾಟ ಅಷ್ಟೊಂದು ಲಾಭದಾಯಕವಲ್ಲವೆಂದು ಖಾಸಗಿ ಬೀಜ ಕಂಪನಿಗಳೂ ಈ ಬೆಳೆಗಳನ್ನು ಕಡೆಗಣಿಸಿವೆ. ಬೀಜರಕ್ಷಣಾ ತಂತ್ರಜ್ಞಾನದಿಂದ ಈ ಬೆಳೆಗಳ ತಳಿ ಅಭಿವೃದ್ಧಿಗೆ ಪ್ರೋತ್ಸಾಹ ದೊರೆತರೆ ರೈತರಿಗೆ ಲಾಭವಾಗುತ್ತದೆ.


ಈ ಗುಣ ಇತರ ತಳಿಗಳಿಗೆ ಹರಡಿ ಅವುಗಳನ್ನು ನಿರ್ನಾಮಗೊಳಿಸುವ ಸಾಧ್ಯತೆಯನ್ನು ಅಲಕ್ಷಿಸ ಲಾಗದು. ಈ ವಿಷಯವನ್ನು ವಿಷದವಾದ ಪ್ರಯೋಗಗಳ ಮೂಲಕ ಅಭ್ಯಸಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ರೂಪಿಸಬೇಕು. ಸದ್ಯಕ್ಕಂತೂ ಇದೊಂದು ವಿಪರೀತ ಕಲ್ಪನೆಯೆನ್ನಲಾಗುತ್ತದೆ. ಈ ಗುಣ ಪರಾಗ ಸ್ಪರ್ಶದ ಮೂಲಕ ಸುಲಭವಾಗಿ ಸಸ್ಯದಿಂದ ಸಸ್ಯಕ್ಕೆ ಹರಡಬಲ್ಲದಾದರೆ ಅದರಿಂದ ಬೀಜ ಕಂಪನಿಗಳಿಗೂ ಅಪಾಯವಿದೆ.

ಈಗ ವರದಾನವಾಗಿ ಕಾಣುತ್ತಿರುವ ಈ ವಿಧಾನ ಮುಂದೆ ಅಭಿಶಾಪವಾಗಬಹುದು. ಸರಿಯಾದ ನಿಯಂತ್ರಣ ಪದ್ಧತಿಯಿಲ್ಲದೇ ಇದನ್ನು ನಿಸರ್ಗದಲ್ಲಿ ಬಿಟ್ಟರೆ ನಂತರ ಅದನ್ನು ನಿಗ್ರಹಿಸುವದು ಕಷ್ಟ. ಆಗ ಅದು ಕಂಪನಿಯ ಇತರ ತಳಿಗಳಿಗೆ ಕುತ್ತು ತರಬಹುದು. ಅಥವಾ ಪ್ರತಿಸ್ಪರ್ಧಿ ಕಂಪನಿ ಅದನ್ನು ಬಳಸಿ ಆ ಕಂಪನಿಯ ವ್ಯವಹಾರವನ್ನು ಹಾಳು ಮಾಡಬಹುದು.

ಹೀಗೆ ಮುಂದೆ ತನಗೇ ಮುಳುವಾಗಬಲ್ಲ ಯಾವುದೇ ವಿಧಾನವನ್ನು ಯಾವ ಕಂಪನಿಯೂ ಬಳಸುವದಿಲ್ಲವಾದ್ದರಿಂದ ಈ ಕುರಿತ ತಲ್ಲಣ ಅನಗತ್ಯ.

ದೇಶವೊಂದರ ಪ್ರಗತಿಗೆ ಕೇವಲ ಕೆಲ ಬುದ್ಧಿ ಜೀವಿಗಳ ನಿರ್ಧಾರಕ್ಕಿಂತ, ಸಾಮುದಾಯಿಕ ಬುದ್ಧಿಶಕ್ತಿ, ಚಿಂತನೆ ಅಗತ್ಯ. ಆದ್ದರಿಂದ ಈ ಹೊಸ ತಂತ್ರಜ್ಞಾನದ ಬಗ್ಗೆ ಸಾಮಾಜಿಕ ಅರಿವನ್ನುಂಟು ಮಾಡಲು ವ್ಯಾಪಕ ಪ್ರಯತ್ನ ನಡೆಯಬೇಕು. ಇದರ ಒಳಿತು, ಕೆಡುಕುಗಳ ಸರಿಯಾದ ವಿಶ್ಲೇಷಣೆಯಾಗಬೇಕು. ಅಪಾಯ ಸಾಧ್ಯತೆಗಳನ್ನು ತಡೆಯುವ ಸೂಕ್ತ ಕ್ರಮಗಳನು ರೂಪಿಸಿ ಜನತೆಗೆ ಅವುಗಳ ತಿಳಿವಳಿಕೆ ನೀಡಬೇಕು. ಈ ಪೂರ್ವ ಸಿದ್ಧತೆಗಳಿಂದ ತಂತ್ರಜ್ಞಾನ ಲಾಭ ಪಡೆದರೆ ನಮ್ಮ ಆಹಾರೋತ್ಪಾದನೆ ಹೆಚ್ಚಿಸಲು ಹೊಸ ಪ್ರೇರಣೆ ದೊರಕಿದಂತಾದೀತು.

ತಿಮಿಂಗಿಲಗಳ ಆತ್ಮಹತ್ಯೆ?



▲ ಹಾಡಬಲ್ಲ 'ಹಂಪ್‌ಬ್ಯಾಕ್' ತಿಮಿಂಗಿಲ



'ಫಿನ್' ತಿಮಿಂಗಲದ ಮೃತದೇಹದೊಳಕ್ಕೆ ಗಣಿಗಾರಿಕೆ


ಕಾರವಾರದ ಮಾಜಾಳಿಯ ಬಳಿ ಮೀನುಗಾರರೇ ವಾಸಿಸುವ ದಂಡೆಬಾಗ್ ಎಂಬ ಊರಿದೆ. ಹಗಲಿಡೀ ಸಮುದ್ರದಲ್ಲಿ ಬಲೆ ಬೀಸಿ, ಮೀನು ಹಿಡಿದು ದಣಿದು ಬರುವ ಅವರಿಗೆ ಕೂತರೆ ನಿಂತರೆ ಮೀನುಗಳದೇ ಕನಸು. ಕೂತರೆ ನಿಂತರೆ ಮೀನಿನದೇ ಮಾತು. ಅದರದೇ ವಾಸನೆ.

ಸೆಪ್ಟೆಂಬರ್ ಮೊದಲ ವಾರದಲ್ಲಿ ಅವರ ಅತ್ಯಂತ ದೊಡ್ಡ ಕನಸನ್ನೂ ಮೀರಿಸಬಲ್ಲ ಘಟನೆಯೊಂದು ನನಸಾಯಿತು. ಎದ್ದು ಕಣ್ಣುಜ್ಜಿ ನೋಡಿದರೆ ಮನೆ ಬಾಗಿಲಲ್ಲೇ 53 ಅಡಿ ಉದ್ದದ ಮೀನೊಂದು ಮಲಗಿತ್ತು. ತಿಮಿಂಗಿಲ!

ಪಾಪ, ಅದು ಸತ್ತು ಹೋಗಿತ್ತು. ಗಂಡೋ ಹೆಣ್ಣೋ ಎಂಬುದು ಕೂಡ ಗೊತ್ತಾಗದ ಹಾಗೆ ಅದರ ದೇಹ ಭಗ್ನವಾಗಿತ್ತು. ಬೆಸ್ತರ ಮಕ್ಕಳಿಗೂ ವಾಕರಿಕೆ ತರಿಸುವ್ಟು ಗಬ್ಬು ನಾತ ಬೀರುತ್ತಿತ್ತು. ಆದರೂ ಊರ ಜನ ಓಡೋಡಿ ಬಂದರು. ಬೆಕ್ಕಸ ಬೆರಗಾಗಿ ಈ ದೈತ್ಯಗಾತ್ರದ ಮೀನನ್ನು ನೋಡಿದರು. ಇಂಥದೊಂದು ಜೀವಂತವಾಗಿ ತಮ್ಮ ಬಲೆಗೆ ಬಿದ್ದಿದ್ದೇ ಆದರೆ, ತಾವು ಜೀವಂತ ಉಳಿದೇವೆಯೇ ಎಂದು ಕಲ್ಪಿಸಿದರು.

ದಂಡೆಬಾಗದ ದೊಡ್ಡವರಿಗೆ, ಮಕ್ಕಳಿಗೆ ಇದು ಹೊಸ ಅನುಭವವಾದರೂ, ಉತ್ತರ ಕನ್ನಡದ ಕಡಲ ತೀರದ ಜನರಿಗೆ ತಿಮಿಂಗಿಲಗಳ ನೋಟ ಹೊಸದೇನಲ್ಲ. ಇಲ್ಲಿಗೆ ಪದೇ ಪದೇ ಒಂದಲ್ಲ ಒಂದು ಕಡೆ ಒಂದಲ್ಲ ಒಂದು ಜಾತಿಯ ತಿಮಿಂಗಿಲ

ಕಾರವಾರದ ಕಡಲತೀರಕ್ಕೆ ಆಗಾಗ ತಿಮಿಂಗಿಲಗಳು ದಿಕ್ಕಿ ಹೊಡೆದು ಅಸುನೀಗುತ್ತವೆ. ಇದು ಆತ್ಮಹತ್ಯೆಯೋ ಅಪಮೃತ್ಯುವೊ? ಸಾಗರಲೋಕದ ಸಭ್ಯದೈತ್ಯನ ಈ ವಿಚಿತ್ರ ವರ್ತನೆಯ ಬಗ್ಗೆ ವಿಜ್ಞಾನಿಗಳು ಒಂದೆಡೆ ಜಿಜ್ಞಾಸೆ ನಡೆಸುತ್ತಿದ್ದಾರೆ; ಇನ್ನೊಂದೆಡೆ, ಕ್ರೂರ ಮಾನವನ ಕೂರಂಬುಗಳಿಗೆ ಸಿಕ್ಕಿ ಇವು ಸಾವಿರ ಸಾವಿರ ಸಂಖ್ಯೆಯಲ್ಲಿ ಸಾಯುತ್ತಿವೆ. ಈ ವರ್ಷದ 'ವನ್ಯಜೀವಿ ಸಪ್ತಾಹ'ದ ಅಂಗವಾಗಿ ಒಂದಿಷ್ಟು ಚಿಂತನೆ ಇಲ್ಲಿದೆ.



1989ರಲ್ಲಿ ಕಾರವಾರದ ಅಲಿಗದ್ದೆಯ ಬಳಿ ತೇಲಿ ಬಂದ ತಿಮಿಂಗಿಲ

ತೇಲಿ ಬಂದು ಬೇಳುತ್ತದೆ. 1972ರಲ್ಲಿ ಕಾರವಾರದಲ್ಲಿ ಸ್ಪರ್ಮ್ ವ್ಹೇಲ್ ಬಂದು ಬಿದ್ದಿತ್ತು. 1975ರಲ್ಲಿ ಭಟ್ಕಳದಲ್ಲಿ ಬ್ಲೂ ವ್ಹೇಲ್ ದಡ ತಲುಪಿ ಅಸು ನೀಗಿತ್ತು (ಇದರ ಅಸ್ಥಿ ಪಂಜರವನ್ನು ಕೋಡಿಬಾಗದ ಸಾಗರೋತ್ತರ ಜೀವ ವಿಜ್ಞಾನ ಸಂಗ್ರಹಾಲಯದಲ್ಲಿ ಇಡಲಾಗಿದೆ). 1987ರಲ್ಲಿ ಹೊನ್ನಾವರ ತಾಲ್ಲೂಕಿನ ಹೊಲನಗದ್ದೆ ಬಳಿ, 1989ರಲ್ಲಿ ಕಾರವಾರದ ಅಲಿಗದ್ದಾ ತೀರದಲ್ಲಿ ತಿಮಿಂಗಿಲ ಬಂದು ಬಿದ್ದಿದ್ದವು. ಈ ದಶಕದಲ್ಲೇ 1990ರ ಏಪ್ರಿಲ್ ತಿಂಗಳಲ್ಲಿ ಭಟ್ಕಳ ತಾಲ್ಲೂಕಿನ ಹೊನ್ನಗದ್ದೆಯ ತೀರಕ್ಕೆ ಭಾರೀ ಗಾತ್ರದ ತಿಮಿಂಗಿಲದ ಶವವೊಂದು ಬಂದು ಬಿದ್ದು ಊರಿಗೆಲ್ಲ ದುರ್ನಾತ ಬೀರಿತ್ತು.

ಪಾಶ್ಚಾತ್ಯ ಜಗತ್ತಿನಲ್ಲಂತೂ ಇವು ದಡಕ್ಕೆ ಬಂದು ಬಿದ್ದರೆ ಭಾರೀ ಕೋಲಾಹಲವೇ ಏಳುತ್ತದೆ. ಅವುಗಳ ಸಹಾಯಕ್ಕೆಂದು ಜನ ಜಾತ್ರೆ ನೆರೆಯುತ್ತದೆ. ಅನೇಕರು ಈಜಿ ಹೋಗಿ, ನೌಕೆ ಏರಿ, ಇಲ್ಲವೆ ಹೆಲಿಕಾಪ್ಟರ್ ಏರಿ, ಧಾವಿಸುತ್ತಾರೆ. ದಡಕ್ಕೆ ಬಿದ್ದು ಒದ್ದಾಡುವ ಇದನ್ನು ಮತ್ತೆ ಸಮುದ್ರಕ್ಕೆ ತಳ್ಳಲು ಯತ್ನಿಸುತ್ತಾರೆ. ತಳ್ಳಲು ಸಾಧ್ಯವಾಗದಿದ್ದರೆ, ಅದರ ಮೈ ಹಸಿಯಾಗಿರಲೆಂದು ಬಕೆಟ್‌ಗಳಲ್ಲಿ ನೀರು ಸುರಿಯುತ್ತಿರುತ್ತಾರೆ. ಇವರ ಈ ಯತ್ನವನ್ನು ರೇಡಿಯೊ ಟಿವಿಗಳಲ್ಲಿ ಬಿತ್ತರಿಸುತ್ತಾರೆ. ರನ್ನಿಂಗ್ ಕಾಮೆಂಟರಿ ಕೂಡ ಕೊಡುತ್ತಾರೆ.

ಕೊನೆಗೂ ಆ ತಿಮಿಂಗಿಲ ಮತ್ತೆ ನೀರಿಗೆ ಮರಳಿದರೆ, ಅದೆಷ್ಟೊ ದೂರ ಅದರ ಜತೆ ಹೋಗಿ ವಿದಾಯ ಹೇಳುತ್ತಾರೆ. ಕೆಲವೊಂದು ಬಾರಿ ಎಷ್ಟೇ ಯತ್ನ ನಡೆಸಿದರೂ ಅದು ನೀರಿಗೆ ಹಿಂದಿರುಗಿ ಹೋಗಲೊಪ್ಪದೆ, ದಡದಲ್ಲೇ ಸಾವಪ್ಪುತ್ತದೆ. ಆಗ ಇಡೀ ಊರಿಗೆ ಊರೇ ಮಮ್ಮಲ ಮರುಗಿ ಶೋಕಾಚರಣೆ ಮಾಡುತ್ತದೆ.

ಭಟ್ಕಳದಲ್ಲೂ 1982ರಲ್ಲಿ ದಡಕ್ಕೆ ಬಂದಿದ್ದ ಭಾರೀ ತಿಮಿಂಗಿಲವನ್ನು ಹೇಗೋ ಒತ್ತಾಯಿಸಿ ಮತ್ತೆ ಆಳ ಸಮುದ್ರಕ್ಕೆ ಕಳುಹಿಸಲಾಯಿತು. ಆದರೆ ಅದು ಮತ್ತೆ ಕೆಲವೇ ದಿನಗಳ ನಂತರ ಕುಂದಾಪುರದ ಸಮೀಪ ಬಂದು ಬಿದ್ದಿತು.

ಯಾಕೆ ಪದೇಪದೇ ಇಲ್ಲೇ ಬಂದು ದಡಕ್ಕೆ ಢಿಕ್ಕಿ ಹೊಡೆಯುತ್ತವೆ? ಈ ದೈತ್ಯಗಾತ್ರದ ಸ್ತನಿಗಳಿಗೆ ದಾರಿ ಗೊತ್ತಾಗುವುದಿಲ್ಲವೆ? ಅದೂ ಹೆಚ್ಚಾಗಿ ಕಾರವಾರದ ತೀರಕ್ಕೇ ಏಕೆ ಬರಬೇಕು? ರತ್ನಾಗಿರಿ, ಕೊಚ್ಚೀನ್ ಅಥವಾ ಪೂರ್ವ ಕರಾವಳಿಯ ಯಾವುದೇ ಬೀಚಿಗೆ ಸಾಗಿಬಂದು ಏಕೆ ಅವು ಅಪ್ಪಳಿಸುವುದಿಲ್ಲ? ಅವು ಹೀಗೆ ಅಸಹಾಯಕ ಸ್ಥಿತಿಯಲ್ಲಿ ಬಿದ್ದಾಗ, ಹೊಡೆದು ಕೊಲ್ಲುವ ಬದಲು ಜನರು ಪ್ರೀತಿಯಿಂದ ಅದರ ನೆರವಿಗೆ ಏಕೆ ಧಾವಿಸುತ್ತಾರೆ?

ಏಕೆಂದರೆ, ಉಳಿದೆಲ್ಲ ಸಾಗರ ಜೀವಿಗಳಿಗೆ ಹೋಲಿಸಿದರೆ ತಿಮಿಂಗಲು ಮತ್ತು ಡಾಲ್ಫಿನ್‌ಗಳು ತೀರಾ ಸಭ್ಯಜೀವಿಗಳು. ಶಾರ್ಕ್‌ಗಳ ಹಾಗೆ ಅವು ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ. ಡಾಲ್ಫಿನ್‌ಗಳಾದರೋ ಮನುಷ್ಯರ ಸಮೀಪ ಬಂದು ಚಕ್ಕಂದ ಆಡುತ್ತವೆ. ಮುಳುಗಲಿರುವ ವ್ಯಕ್ತಿಯನ್ನು ಎತ್ತಿ ಬದುಕಿಸಲು ಯತ್ನಿಸುತ್ತವೆ. ತಿಮಿಂಗಿಲ ಮತ್ತು ಪ್ಲಾಪಾಯಿಸ್ ಎಂಬ ಜಲಜೀವಿಗಳು ಕೊಂಚ ಭಿನ್ನ. ಅವು ಮನುಷ್ಯರ ಬಳಿ ಸುಳಿಯುವುದು ಕಡಿಮೆ. ತಮ್ಮ ಪಾಡಿಗೆ ತಾವು ತಲೆ ಮೇಲೆತ್ತಿಕೊಂಡು ಈಜುತ್ತಿರುತ್ತವೆ. ಮೀನುಗಾರರು ಇವುಗಳಿಂದ ತೊಂದರೆಗೊಳಗಾದ ಒಂದು ಉದಾಹರಣೆಯೂ ಇಲ್ಲ. ನಾಡದೋಣಿಗಳ ಮೀನುಗಾರರು ತಿಮಿಂಗಿಲ ಕಂಡೊಡನೆ 'ದೇವರ ಮೀನು' ಎಂದು ಉದ್ಗಾರ ತೆಗೆದು ಕೈಮುಗಿಯುತ್ತಾರೆ.

ದಂಡೆಬಾಗದ ಬೆಸ್ತರು ತಮ್ಮ ಅಂಗಳಕ್ಕೆ ಬಂದು ಬಿದ್ದ ತಿಮಿಂಗಿಲದ ದೇಹದಿಂದ ಟನ್‌ಗಟ್ಟಲೆ ಕೊಬ್ಬನ್ನು ತೆಗೆದು ಕರಗಿಸಿ ಎಣ್ಣೆ ತೆಗೆಯಬಹುದಿತ್ತು. ಆದರೆ 'ದೇವರ ಮೀನು' ಎಂಬ ಕಾರಣಕ್ಕಾಗಿ ಅದನ್ನು ಮುಟ್ಟಲಿಕ್ಕೂ ಹೋಗಲಿಲ್ಲ.

'ಸಿಟೇಶಿಯಾ' ಗುಂಪಿಗೆ ಸೇರಿದ ಈ ಸ್ತನಿ ವರ್ಗದ ತಿಮಿಂಗಿಲಗಳು: ಮೂಲತಃ ಸಮುದ್ರದ ಪ್ರಾಣಿ ಅಲ್ಲವೇ ಅಲ್ಲ. ಸುಮಾರು 60 ದಶಲಕ್ಷ (ಆರು ಕೋಟಿ) ವರ್ಷಗಳ ಹಿಂದೆ, ತಿಮಿಂಗಿಲಿನ ಪೂರ್ವಜರು ನಾಲ್ಕು ಕಾಲುಗಳ ಕರಡಿಯ ಗಾತ್ರದ ಪ್ರಾಣಿಗಳಾಗಿದ್ದವು. ನೆಲದಲ್ಲಿ ಆಹಾರದ ಅಭಾವ ಆಗಿದ್ದಾಗ ಸಮುದ್ರದ ದಂಡೆಗೆ ಬಂದು ಮೀನು, ಶೇಗಡಿ ಹಿಡಿಯಲು ಕಲಿತವು. ಕ್ರಮೇಣ ಈ ಆಹಾರವೇ ಅದಕ್ಕೆ ಹೆಚ್ಚು ಪ್ರಿಯವಾಯಿತು. ಮುಂಗಾಲುಗಳು ಈಜುರೆಕ್ಕೆಯಾಗಿ (ಫ್ಲಿಪರ್ಸ್) ಮಾರ್ಪಟ್ಟಿತು. ಹಿಂಗಾಲುಗಳು ಮಾಯವಾದವು. ಮೂಗು ನೆತ್ತಿಯನ್ನು ಸೇರಿತು. ದೇಹ ದೈತ್ಯ ಗಾತ್ರದ್ದಾಗುತ್ತ ಕ್ರಮೇಣ ಇಂದಿನಂತಾಯಿತು.


ಐದು ಕೋಟಿ ವರ್ಷಗಳ ಹಿಂದಿನ ಈ ಅರೆಬರೆ ತಿಮಿಂಗಿಲದ ಪಳೆಯುಳಿಕೆಗಳು ಇಂದಿನ ಪಾಕಿಸ್ತಾನದಲ್ಲಿ ಸಿಕ್ಕಿವೆ. ಇವಕ್ಕೆ ಪಾಕಿ ಸಿಟಸ್ ಎಂದು ವಿಜ್ಞಾನಿಗಳು ಹೆಸರಿಟ್ಟಿದ್ದಾರೆ. ಅವುಗಳ ಹಿಂಗಾಲು ಕ್ರಮೇಣ ಮೊಟಕಾಗಿ ಶರೀರದೊಳಕ್ಕೆ ಸೇರಿ ಹೋದುವಲ್ಲ? ಆಗಿನ ಕಾಲದ (ನಾಲ್ಕು ಕೋಟಿ ವರ್ಷಗಳ ಹಿಂದಿನ) ತಿಮಿಂಗಿಲದ 243 ಪಳೆಯುಳಿಕೆಗಳು ಈಜಿಪ್ತಿನ ರುಖೂಗ್ಲಡಾನ್ ಕಣಿವೆಯಲ್ಲಿ ಒಂದೇ ಕಡೆ ಪತ್ತೆಯಾಗಿವೆ.

ಇಂದಿನ ತಿಮಿಂಗಿಲಗಳಲ್ಲಿ ಹತ್ತು ಪ್ರಭೇದಗಳಿವೆ. ಇವುಗಳಲ್ಲಿ ನೀಲಿ ತಿಮಿಂಗಿಲ ಅತಿದೊಡ್ಡದು. ಇದು 25 ಮೀಟರ್ ಉದ್ದ ಬೆಳೆದು 150 ಟನ್ ತೂಗುತ್ತದೆ. ಇದರ ನಾಲಿಗೆಯೇ ಮೂರು ಮೀಟರ್ ಉದ್ದವಿದ್ದು, ಒಂದು ಆನೆಯಷ್ಟು ತೂಕ ಇದಕ್ಕಿರುತ್ತದೆ. ಕೆಲವು ರಕ್ತನಾಳಗಳಲ್ಲಿ ಚಿಕ್ಕ ಮಕ್ಕಳು ಸಲೀಸಾಗಿ ಈಸಬಹುದು.

ಒಂದು ತಿಮಿಂಗಿಲಕ್ಕೆ ದಿನಕ್ಕೆ ಸರಾಸರಿ 4100 ಕೇಜಿಯಷ್ಟು ಆಹಾರ ಬೇಕು. ಕೆಲವಕ್ಕೆ ಮೀನು, ಸ್ಕ್ವಿಡ್‌ಗಳು ಆಹಾರವಾದರೆ, ಇನ್ನು ಕೆಲವಕ್ಕೆ ನೀರಿನಲ್ಲಿ ತೇಲಾಡುವ ಪ್ಲವಕಗಳೇ (ಪ್ಲಾಂಕ್ಟನ್) ಆಹಾರ. ಜಗತ್ತಿನ ಅತಿದೊಡ್ಡ ಪ್ರಾಣಿ ನೀಲಿ ತಿಮಿಂಗಿಲಿನ ಆಹಾರ ಮಾತ್ರ, ಹೆಬ್ಬೆಟ್ಟು ಗಾತ್ರದ ಕ್ರಿಲ್‌ಗಳು! ಮಣಗಟ್ಟಲೆ ನೀರನ್ನು ಬಾಯಿಂದ ಸೇದಿ, ಹೊರಗೆ ಉಗುಳುವಾಗ ದವಡೆಯಲ್ಲಿನ ಬಾಚಣಿಗೆಯಂಥ 'ಬಲೀನ್ ಪ್ಲೇಟ್'ಗಳಲ್ಲಿ ಸಿಕ್ಕಿ ಕೊಂಡ ಕ್ರಿಲ್‌ಗಳನ್ನು ಗುಳುಂ ಮಾಡುತ್ತದೆ.

ತಿಮಿಂಗಿಲಗಳು ಗುಂಪು ಗುಂಪಾಗಿ ಆಹಾರವನ್ನು ಅರಸುತ್ತಾ ಸಾಗುವದು ಸಾಮಾನ್ಯ ದೃಶ್ಯ. ತೊಂದರೆ ಸಮಯದಲ್ಲಿ ಒಂದು ಮತ್ತೊಂದರ ಸಹಾಯಕ್ಕೆ ಧಾವಿಸುತ್ತದೆ. ಗುಂಪಿನ ಒಂದಕ್ಕೆ ಕಾಯಿಲೆಯಾದರೆ, ಅಥವಾ ಅದು ಗಾಯಗೊಂಡರೆ ಇನ್ನುಳಿದವು ಎಂಥ ಸ್ಥಿತಿಯಲ್ಲೂ ಅಲ್ಲಿಂದ ಕದಲದೇ, ತಮ್ಮ ಬಂಧುವನ್ನು ಬೆನ್ನ ಮೇಲೆ

ಸಾಗರವಿಜ್ಞಾನ ಸಂಸ್ಥೆಯಲ್ಲಿ ಕಾದಿರಿಸಿದ ಅಸ್ಥಿ ಪಂಜರ



ಹೊತ್ತುಕೊಂಡು ಉಸಿರಾಡಲು ನೆರವಾಗುತ್ತವೆ.

ಹನ್ನೊಂದು ತಿಂಗಳ ಗರ್ಭದ ನಂತರ ಆಳ ಸಾಗರದ ಬೆಚ್ಚನೆಯ ಭಾಗದಲ್ಲಿ ಹೆಣ್ಣು ಈಯುತ್ತದೆ. ಆ ವೇಳೆಗೆ ಇತರ ಹೆಣ್ಣು ತಿಮಿಂಗಿಲಗಳು ಸುತ್ತುವರೆದು, ಮರಿ ನೀರಲ್ಲಿ ಮುಳುಗದ ಹಾಗೆ ಎತ್ತಿ ಹಿಡಿದು, ತಾಯಿ ಮತ್ತು ಮರಿಗೆ ಶಾರ್ಕ್‌ನಿಂದ ರಕ್ಷಣೆ ಕೊಡುತ್ತವೆ. ಇತರ ಸ್ತನಿಗಳಂತೆ ಹುಟ್ಟಿದ ಮರಿಗಳಿಗೆ ಮೊಲೆ ಹಾಲೇ ಊಟ, ತಿಂಡಿ ಎಲ್ಲ. ಮರಿಗಳು ಬಹಳ ಹೊತ್ತು ನೀರಲ್ಲಿ ಮುಳುಗಿ ಕೆಚ್ಚಲಿಗೆ ಬಾಯಿ ಹಾಕಿ ಸೀಬಲಾರವು. ಆಗೆಲ್ಲ ತಾಯಿ ತನ್ನ ಹಾಲಿನ ಪಿಚಕಾರಿಯನ್ನೇ ಮರಿಯ ಬಾಯಿಗೆ ಹಾರಿಸುತ್ತದೆ. ನೀಲಿ ತಿಮಿಂಗಿಲಿನಿಂದ ದಿನಕ್ಕೆ ಸುಮಾರು 500 ಲೀಟರ್ ಹಾಲನ್ನು ಹಿಂಡಬಹುದು. ಅದನ್ನು ಹೀರುತ್ತ ಮರಿ ದಿನಕ್ಕೆ ಐದು ಸೆ.ಮೀ. ಉದ್ದ ಬೆಳೆದು, 80 ಕೇಜಿ ತೂಕ ಹೆಚ್ಚಿಸಿಕೊಳ್ಳುತ್ತದೆ!


ತಾಯಿ ತನ್ನ ಮರಿಗೆ ಶಿಸ್ತು ಕಲಿಸಲು, ಅದನ್ನು ಮುದ್ದು ಮಾಡಲು ರೆಕ್ಕೆಗಳನ್ನು ಕೈಗಳಂತೆ ಉಪಯೋಗಿಸುತ್ತದೆ. ಜಾಕ್ಯು ಕೊಸ್ಟಿಯಾ ಅವರು ಬರೆದ 'ದಿ ವೇಲ್ಸ್: ಮೈಟಿ ಮೊನಾರ್ಕ್ ಆಫ್ ದಿ ಸೀ' ಪುಸ್ತಕದಲ್ಲಿ ಒಂದು ಉಲ್ಲೇಖ ಬರುತ್ತದೆ. ಹಿಂದಿನಿಂದ ವೇಗವಾಗಿ ಬಂದ ತಾಯಿ ಹಡಗಿನಡಿಯಲ್ಲಿ ಸಿಕ್ಕಿ ಅಪ್ಪಚ್ಚಿಯಾಗಲಿದ್ದ ಮರಿಯನ್ನು ಅನಾಮತ್ ಎತ್ತಿ ಆಚೆ ಎಸೆಯುತ್ತದೆ. ನಂತರ ರೆಕ್ಕೆಯಿಂದ ಮರಿಗೆ ಅನೇಕ ಸಾರಿ ಹೊಡೆಯುತ್ತದೆ. ಹಡಗಿನ ತಳಭಾಗ ಮತ್ತು ತಾಯಿಯ ಹೊಟ್ಟೆಯ ವ್ಯತ್ಯಾಸವನ್ನು ಅರಿಯದ ಮರಿಗೆ ಆ ಏಟು 'ಗಣಿತ ಮಾಸ್ತರರ ಛಡಿ ಏಟಿನಂತೆ ಇರುತ್ತದೆ'.

ತಿಮಿಂಗಿಲಗಳಿಗೆ ತೀಕ್ಷ್ಣ ದೃಷ್ಟಿ ಇಲ್ಲ. ಅವು ಧ್ವನಿ ತರಂಗ ಹೊಮ್ಮಿಸಿ, ಆ ಮೂಲಕವೇ ದೂರದ ವಸ್ತುಗಳನ್ನು ಗುರುತಿಸುತ್ತವೆ. ಗೂನು ಬೆನ್ನಿನ (ಹಂಪ್‌ಬ್ಯಾಕ್) ತಿಮಿಂಗಿಲಗಳ ಹಾಡು ತುಂಬಾ ಪ್ರಸಿದ್ಧ. ಅಮೆರಿಕದ ಎಮ್‌ಐಟಿ ಮತ್ತು ಕಾರ್ನೆಲ್ ವಿಶ್ವ ವಿದ್ಯಾಲಯಗಳ ತಜ್ಞರು ಇದರ ಸಾವಿರಾರು 'ಹಾಡು'ಗಳನ್ನು ರೆಕಾರ್ಡ್ ಮಾಡಿದ್ದಾರೆ. ಅವುಗಳ ಸ್ವರ, ಲಯಗಳು ಅತ್ಯಂತ ಶಾಸ್ತ್ರೀಯವಂತೆ. ಧ್ವನಿ ವರ್ಧಕ ಇಲ್ಲದೆಯೂ ಇವುಗಳ ಹಾಡುಗಳನ್ನು ನೂರು ಕಿರೊಮೀಟರ್ ದೂರದವರೆಗೆ ಕೇಳಬಹುದು. ಗಂಡುಗಳೇ, ಅದರಲ್ಲೂ ವಿಶೇಷವಾಗಿ ಬೆದೆ ಕಾಲದಲ್ಲಿ ಹಾಡುತ್ತವೆ. ಹೆಣ್ಣನ್ನು ಆಕರ್ಷಿಸಲಿಕ್ಕೆ ಹಾಗೂ ಪ್ರತಿಸ್ಪರ್ಧಿಯನ್ನು ದೂರ ಇಡಲಿಕ್ಕೆ ಇವು ಹಾಡುತ್ತವೆ ಎಂದು 'ಡಿಸ್ಕವರ್' ಪತ್ರಿಕೆ ಬರೆದಿದೆ. ಆದರೂ, ಕೆಲವು ಬಾರಿ ಹೊಸ ಹಾಡನ್ನು ಇವು ಗುಂಪು ಗುಂಪಾಗಿ ಏಕೆ ಹಾಡುತ್ತವೆ ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಕ್ಕಿಲ್ಲ.

ಹಕ್ಕಿಗಳ ಹಾಗೆ ಹಾಡಬಲ್ಲ ತಿಮಿಂಗಿಲುಗಳು ಹಕ್ಕಿಗಳ ಹಾಗೆ ವಲಸೆ ಹೋಗುತ್ತವೆ. ಚಳಿಗಾಲದಲ್ಲಿ ಇವು ದಕ್ಷಿಣ ದಿಕ್ಕಿಗೆ ವಲಸೆ ಬಂದು, ಮರಿ ಮಾಡಿ, ಕೊಬ್ಬು ಕರಗಿಸಿಕೊಂಡು, ಮತ್ತೆ ಬೇಸಿಗೆಗೆ ಉತ್ತರ ಧ್ರುವದ ಕಡೆ ಹೋಗುತ್ತವೆ. ಅಲ್ಲಿ ಭರ್ಜರಿ ಸಿಗುವ ಆಹಾರ ತಿಂದು ಮತ್ತೆ ಕೊಬ್ಬಿ ಅಲ್ಲಿನ ನೀರು ಹೆಪ್ಪುಗಟ್ಟುವ ತುಸು ಮುಂಚೆ ಮತ್ತೆ ದಕ್ಷಿಣಕ್ಕೆ ಬರುತ್ತವೆ. ಬೂದು ತಿಮಿಂಗಿಲಗಳು ಪ್ರತಿ ವರ್ಷ ಹೀಗೆ ಸುಮಾರು 10–12 ಸಹಸ್ರ ಕಿಲೊ ಮೀಟರ್ ಪ್ರಯಾಣ ಮಾಡುತ್ತವೆ. ತಮ್ಮ ಪಯಣದ ದಿಕ್ಕನ್ನು ಗುರುತಿಸಲು ಇವುಗಳ ಮಿದುಳಿನಲ್ಲಿ ಅಯಸ್ಕಾಂತೀಯ ನರ ಮಂಡಲ ಇರುತ್ತದೆಂದು ವಿಜ್ಞಾನಿಗಳು ಹೇಳುತ್ತಾರೆ.

ಈ ಬಗೆಯ ನಿರಂತರ ಪಯಣದಲ್ಲಿ ಮಧ್ಯೆ ಮಧ್ಯೆ ಕೆಲವು ತಿಮಿಂಗಿಲಗಳು ಕಡಲ ತೀರಕ್ಕೆ ಬಂದು ಅಪ್ಪಳಿಸುವುದು ಏಕೆ?

ಈ ಪ್ರಶ್ನೆಗೆ ನಿರ್ದಿಷ್ಟ ಉತ್ತರ ಇನ್ನೂ ಸಿಕ್ಕಿಲ್ಲ. ಕೆಲವು ಬಾರಿ ಇವು ತಂತಮ್ಮಲ್ಲಿ ಜಗಳ ಕಾಯುತ್ತವೆ. ಮೈಕೈ ಗಾಯ ಮಾಡಿಕೊಂಡು ಸೋತು ಸುಣ್ಣವಾದ ತಿಮಿಂಗಿಲವು ಗುಂಪಿನಿಂದ ಹೊರಕ್ಕೆ ಉಳಿಯುತ್ತದೆ. ಕೇಳರಿಮೆ ಕೂಡ ಆವರಿಸಬಹುದು. ಗಾಯದಿಂದ ಬಳಲಿ, ಇಲ್ಲವೆ ನಾಚಿಕೆಯಿಂದ ಇವು ಅನ್ನ ನೀರು ಬಿಟ್ಟು ದಡಕ್ಕೆ ಬಂದು ಅಸು ನೀಗಬಹುದು. ಕಾರವಾರದ ಸಾಗರ ವಿಜ್ಞಾನ ಸಂಶೋಧನ ಕೇಂದ್ರದ ಸಹಾಯಕ ವಿಜ್ಞಾನಿಯಾಗಿದ್ದ ವಿ.ಎಸ್. ಕಾಕತಿ 20 ವರ್ಷಗಳ ಹಿಂದೆ ಕೆಲಸ ಮಾಡುತ್ತಿದ್ದಾಗ ಕಿಟಕಿಯಿಂದ



ಫೋಟೊ: 'ಆಗಾಹಿ ಹಿಮುರ್'

ಜಪಾನಿನ ಒಕಿನಾವಾ ದ್ವೀಪದಲ್ಲಿ ಪ್ರವಾಸಿಗರಿಗೆ ಮನರಂಜನೆ ನೀಡುವ ಚುಕ್ಕೆ ತಿಮಿಂಗಿಲ

ಮೃತ್ಯುತಾಂಡವದ ತಿಮಿಂಗಿಲ ಬೇಟೆ

ಹನ್ನೆರಡನೇ ಶತಮಾನದಲ್ಲಿ ಒಂದು ಸಾಹಸ ಕಾರ್ಯವೆಂಬಂತೆ ಆರಂಭವಾದ ತಿಮಿಂಗಲ ಬೇಟೆ 1920ರ ನಂತರ ಹೊಸ ಹೊಸ ತಂತ್ರಜ್ಞಾನಗಳಿಂದಾಗಿ ಒಂದು ಲಾಭಕರ ಉದ್ಯಮವಾಯಿತು.

ಇಂದು ತಿಮಿಂಗಿಲದ ಮಾಂಸವನ್ನು ಧನಿಕರು ಕಿಲೊಕ್ಕೆ 100 ಡಾಲರ್ (ರೂ. 3000) ಕೊಟ್ಟು ಖರೀದಿಸುತ್ತಾರೆ. ಕೊಬ್ಬನ್ನು ಸಾಬೂನು ಮತ್ತು ಸುಗಂಧ ತಯಾರಿಕೆಗೆ, ನಿರ್ನಾಳ ಗ್ರಂಥಿಗಳನ್ನು ವೈದ್ಯಕೀಯ ಉದ್ದೇಶಗಳಿಗೆ ಬಳಸಲಾಗುತ್ತದೆ. (ಸ್ಪರ್ಮ್ ತಿಮಿಂಗಿಲದ ತಲೆ ಬುರುಡೆಯಲ್ಲಿ ತೈಲದ ಒಂದು ತೊಟ್ಟಿಯೇ ಇರುತ್ತದೆ.) ಪಿಟ್ಯುಟರಿ, ಥೈರಾಯ್ಡ್, ಮೇದೋಜೀರಕ ಗ್ರಂಥಿಗಳಿಂದ ಹಾರ್ಮೋನು, ಕಿಣ್ವಗಳು ಸಿಗುತ್ತವೆ. ಮೂಳೆಗಳನ್ನು ಪುಡಿಮಾಡಿ ವ್ಯಾಣ ಗೊಬ್ಬರ ತಯಾರಿಸಲಾಗುತ್ತದೆ. ಹೊಳೆಯುವ ಉಡುಪುಗಳಿಗೆ ಚರ್ಮ ಉಪಯುಕ್ತ.

ಬೇಟೆಯಬಗೆ: ಬೃಹತ್ ಹಡಗುಗಳ ಮೂತಿಗೆ ಈಟಿಯಂಥ ಚೂಪು ಕ್ಷಿಪಣಿಯನ್ನು (ಹಾರ್ಪೂನ್) ಕೂರಿಸಲಾಗುತ್ತದೆ. ಈ ಈಟಿಯ ತುದಿಯಲ್ಲಿ ಬಾಂಬ್ ಸಿಕ್ಕಿಸಿರುತ್ತಾರೆ. ಸ್ಪ್ರಿಂಗ್‌ನಂತೆ ನೆಗೆಯಬಲ್ಲ ಈ ಈಟಿಯ ಇನ್ನೊಂದು ತುದಿಗೆ ನೈಲಾನ್ ಹಗ್ಗ ಕಟ್ಟಿರುತ್ತಾರೆ.

ಉಸಿರಾಟಕ್ಕಾಗಿ ತಿಮಿಂಗಿಲ ಸಮುದ್ರದ ಮೇಲ್ಮಟ್ಟಕ್ಕೆ ಬಂದು ನೀರು ಚಿಮ್ಮಿಸುವಾಗ, ಬೇಟೆಗಾರರಿಗೆ ತಿಮಿಂಗಲದ ಸುಳಿವು ಸಿಗುತ್ತದೆ (ಈಗೀಗ ಹೆಲಿಕಾಪ್ಟರ್‌ಗಳಿಂದ. ಉಪಗ್ರಹಗಳಿಂದ ತಿಮಿಂಗಿಲಗಳ ಗುಂಪನ್ನು ಪತ್ತೆ ಮಾಡುತ್ತಾರೆ). ಚಾಲಾಕಿನ ಈಡುಗಾರ ಗುರಿಯಿಟ್ಟು ಕ್ಷಿಪಣಿಯನ್ನು ಚಿಮ್ಮುತ್ತಾನೆ.

ಚೂಪಾದ ಕ್ಷಿಪಣಿ ತಿಮಿಂಗಿಲದ ಬೆನ್ನಿಗೋ ಕುತ್ತಿಗೆಗೋ ಹೊಕ್ಕಾಗ ಬಾಂಬ್ ಸ್ಫೋಟಿಸುತ್ತದೆ. ಈಟಿಗೆ ಕಟ್ಟಿದ್ದ ನೈಲಾನ್ ಹಗ್ಗವನ್ನು ಯಂತ್ರದ ಮೂಲಕ ಹಡಗಿನ ಮೇಲೆ ಎಳೆದು ತರಲಾಗುತ್ತದೆ. ತಿಮಿಂಗಿಲವನ್ನು ಅಲ್ಲೇ ಕತ್ತರಿಸಿ ಸಂಸ್ಕರಣ ಕಾರ್ಖಾನೆಗೆ ಒಯ್ಯಲಾಗುತ್ತದೆ.

ತಿಮಿಂಗಿಲ ಬೇಟೆಯಲ್ಲಿ ಜಪಾನನ್ನು ಅತಿ ದೊಡ್ಡ ಖಳ ನಾಯಕನೆಂದು ಪರಿಗಣಿಸಲಾಗುತ್ತದೆ. ಎರಡನೆ ಸ್ಥಾನ ನಾರ್ವೆ ಮತ್ತು ಕೊರಿಯಾ ದೇಶದ್ದು. ನಂತರ ಐಸ್‌ಲ್ಯಾಂಡ್, ರಷ್ಯ, ಗ್ರೆನಾಡಾ ಬರುತ್ತವೆ. 1950ರಿಂದ 70ರವರೆಗೆ ಸರಾಸರಿ ಪ್ರತಿವರ್ಷ 60,000 ತಿಮಿಂಗಿಲಗಳ ಹತ್ಯೆ ನಡೆಯುತ್ತಿತ್ತು. ನೂರು ವರ್ಷಗಳ ಹಿಂದೆ ಅನೇಕ ಲಕ್ಷಗಳಷ್ಟಿದ್ದ ಹಂಪ್‌ಬ್ಯಾಕ್ ಮತ್ತು ಫಿನ್ ತಿಮಿಂಗಿಲಗಳು ಈಗ ಕೆಲವೇ ಸಾವಿರಕ್ಕಿಳಿದಿವೆ. ಸ್ಪರ್ಮ್‌ವೇಲ್ ಸಂಖ್ಯೆ ಶೇಕಡಾ 1ಕ್ಕೆ ಇಳಿದಿದೆ. ಈ ಕಗ್ಗೊಲೆಗೆ ಭಾರೀ ವಿರೋಧ ಬಂದಮೇಲೆ 1963ರಲ್ಲಿ 'ಅಂತಾರಾಷ್ಟ್ರೀಯ ವ್ಹೇಲಿಂಗ್ ಆಯೋಗ' ಅಸ್ತಿತ್ವಕ್ಕೆ ಬಂತು. ವರ್ಷಕ್ಕೆ 10,000 ತಿಮಿಂಗಿಲಗಳ ಹತ್ಯೆಯ ಮಿತಿ ಹೇರಲಾಯಿತು. ಅದು ವಿಫಲವಾದಾಗ, 1986ರಲ್ಲಿ ಪೂರ್ಣ ನಿಷೇಧ ಜಾರಿಗೆ ಬಂತು. ಈಗಲೂ 'ವೈಜ್ಞಾನಿಕ ಸಂಶೋಧನೆ'ಯ ಹೆಸರಿನಲ್ಲಿ ಬೇಟೆ ನಡೆಯುತ್ತಲೇ ಇದೆ. ಕಳೆದ ಏಳು ವರ್ಷಗಳಲ್ಲಿ 17,000 ಮಿಂಕ್ ತಿಮಿಂಗಿಲಗಳು ಬಲಿಯಾಗಿವೆ; ಇತರ ಜಾತಿಯವು ಇನ್ನೆಷ್ಟು ಸಹಸ್ರವೊ?

ಮಾಂಸವೊಂದನ್ನು ಬಿಟ್ಟರೆ, ತಿಮಿಂಗಿಲಗಳ ಇತರೆಲ್ಲ ಉತ್ಪತ್ತಿಗಳಿಗೂ ಬದಲೀ ವಸ್ತುಗಳು ಬಂದಿವೆ. ತಾಸಿಗೆ ನೂರು ಜನರನ್ನು ಹೊಟ್ಟೆಗೆ ಇಳಿಸುವ ಸಾಮರ್ಥ್ಯವಿರುವ ಈ ಸಭ್ಯಪ್ರಾಣಿಯನ್ನು ಸಾವಿರ ಸಂಖ್ಯೆಯಲ್ಲಿ ಹೊಟ್ಟೆಗೆ ಇಳಿಸುವ ಜನರಿದ್ದಾರಲ್ಲ!

ಜಲಜೀವನ

ಹೊರಕ್ಕೆ ಯಾಕೋ ದೃಷ್ಟಿ ಹರಿಸಿದರು. ಭಾರೀ ಗಾತ್ರದ ಕಪ್ಪು ದಿಮ್ಮಿಯೊಂದು ಕಡಲ ತೀರದ ಕಡೆ ತೇಲಿ ಬರುವಂತೆ ಕಂಡಿತು. ಕಾಕತಿ ಸಮುದ್ರ ತೀರಕ್ಕೆ ಓಡಿದರು. ಆವರು ಕಂಡಿದ್ದು ದಿಮ್ಮಿಯಾಗಿರದೆ, ಹೆಣ್ಣು ಸ್ಪರ್ಮ್ ತಿಮಿಂಗಿಲಾಗಿತ್ತು. ಐದಾರು ಶಾರ್ಕ್‌ಗಳು ಅದರ ಬೆನ್ನಟ್ಟಿ ಬಂದು ಮೈಮೇಲೆಲ್ಲ ಗಾಯ ಮಾಡಿದ್ದವು. ಕೆಲವೇ ಹೊತ್ತಿನಲ್ಲಿ ತಿಮಿಂಗಿಲ ಪ್ರಾಣ ಬಿಟ್ಟಿತು. ಶಾರ್ಕ್‌ಗಳು ಅಲ್ಲೇ ಸುತ್ತುತ್ತಿದ್ದವು.

ಹಾಗಿದ್ದರೆ ಅವು ಸಾಯಲಿಕ್ಕೆಂದೇ ದಡಕ್ಕೆ ಬರುತ್ತವೆಯೆ? ಅಥವಾ ಬದುಕುಳಿಯಲೆಂದು ಬರುತ್ತವೆಯೆ? ಸಾಗರ ವಿಜ್ಞಾನ ಕೇಂದ್ರದ ಮುಖ್ಯಸ್ಥ ನೀಲಕಂಠನ್ ಹೇಳುವ ಪ್ರಕಾರ, ಕೆಲವೊಮ್ಮೆ ಆಳ ಸಮುದ್ರದಲ್ಲಿ ಸಾಕಷ್ಟು ಆಹಾರ ಸಿಕ್ಕದಿದ್ದಾಗ ಅವು ದಂಡೆಗೆ ಬರುವುದುಂಟು. ತೀರದ ಬಳಿ ಅವಕ್ಕೆ ಆಹಾರ ಕೊಂಚ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತವೆ. ಆದರೆ ಹೀಗೆ ಬಂದಾಗ ಕೆಲವೊಮ್ಮೆ ಯಾವುದೋ ಬಗೆಯ ವಿಕಿರಣು ಜೀವಿಗಳು ಆಂಥ ತಿಮಿಂಗಿಲಗಳ ಶರೀರ ಹೊಕ್ಕು, ಮಿದುಳನ್ನು ಆಕ್ರಮಿಸಿ ಅಲ್ಲಿನ ಧ್ವನಿಗ್ರಹಣ ಶಕ್ತಿಯನ್ನು ಕೆಡಿಸಿಬಿಡುತ್ತವೆ. ಧ್ವನಿ ಹೊಮ್ಮಿಸಿದರೂ ಅದು ದಂಡೆಗೆ ಅಪ್ಪಳಿಸಿ ಪ್ರತಿಧ್ವನಿಯಾಗಿ ಬಂದಾಗ, ಅದನ್ನು ಗುರುತಿಸುವ ಶಕ್ತಿ ಇಲ್ಲವಾದ 'ಕಿವುಡು' ತಿಮಿಂಗಿಲು ದಿಕ್ಕು ತಪ್ಪಿ, ಮರಳಿ ಹೋಗಲಾರದೆ ದಡದ ಬಳಿಯೇ ಸುತ್ತುತ್ತದೆ.

ಇನ್ನೊಂದು ಕುತೂಹಲಕಾರಿ ತರ್ಕದ ಪ್ರಕಾರ, ಇವುಗಳ ಮಿದುಳಿನಲ್ಲಿರುವ ಅಯಸ್ಕಾಂತೀಯ ನರಮಂಡಲ ಆಗಾಗ (ಪ್ರಾಯಶಃ ರೋಗಾಣು ದಾಳಿಯಿಂದಾಗಿ) ಯದ್ವಾ ತದ್ವಾ ಕೆಲಸ ಮಾಡುತ್ತದೆ. ಈ ದಿಕ್ಕಾಚಿಗೆ ತಕ್ಕಂತೆ ಅವು ಉತ್ತರ ದಿಕ್ಕಿನತ್ತ ಧಾವಿಸುವಾಗ ಎದುರಿಗೆ ನೆಲ ಇದೆಯೆಂಬುದೇ ಗಮನಕ್ಕೆ ಬರುವುದಿಲ್ಲ. ಕಡಲ ದಂಡೆಯ ಇಳಜಾರು ಕಡಿದಾಗಿಲ್ಲದಿದ್ದರೆ ಅವು ಹೊಟ್ಟೆ ಹೊಸೆಯುತ್ತ ಬರುತ್ತವೆ. ನೀರಿನಿಂದ ಹೊರಕ್ಕೆ ಬಂದಾಗ, ತಮ್ಮ ಶರೀರದ ತೂಕವನ್ನು ತಾವೇ ಹೊರಲಾರದೆ ಸಂಕಟ ಅನುಭವಿಸಿ ಅಸು ನೀಗುತ್ತವೆ. ಅಟ್ಲಾಂಟಿಕ್ ಸಾಗರದಲ್ಲಿ ಹೀಗೇ ಒಮ್ಮೊಮ್ಮೆ ನೂರಿನ್ನೂರು ತಿಮಿಂಗಿಲಗಳು ಏಕಕಾಲಕ್ಕೆ ದಡಕ್ಕೆ ಬಂದು ಪ್ರಾಣ ಬಿಡುವುದೂ ಇದೆ.

ನಮ್ಮಲ್ಲಿ ಅವು ಕಾರವಾರದ ಬಳಿಯೇ ಹೆಚ್ಚಾಗಿ ದಡ ಸೇರುತ್ತವೆ ಯಾಕೆ? ಅರಬ್ಬೀ ಸಮುದ್ರದ ದಕ್ಷಿಣಕ್ಕೆ ಹಿಂದೂ ಮಹಾ ಸಾಗರದಲ್ಲಿ ಅಂಟಾರ್ಕ್ಟಿಕ ವರೆಗೂ ತಿಮಿಂಗಿಲಗಳ ಆಶ್ರಯ ತಾಣವಿದೆ. ಗರ್ಭಧಾರಣೆಗೆ ಮುನ್ನ ಬೆಚ್ಚಗಿನ ಜಾಗ ಹುಡುಕುತ್ತ ಅವು ಶ್ರೀಲಂಕಾ ಮತ್ತು ಭಾರತದ ಕರಾವಳಿಯ ಬಳಿ ಬರುತ್ತವೆ. ಭಟ್ಕಳದ ಬಳಿ ನೇತ್ರಾಣಿ ಗುಡ್ಡದ ತೀರದ ಪ್ರದೇಶ ಇವುಗಳ ರತಿಕ್ರೀಡೆಯ ತಾಣವಾಗಿದೆ. ಇತ್ತ ಬಂದಾಗ ಏಕೆ ಕೆಲವು ತಿಮಿಂಗಿಲಗಳಿಗೆ ಎಂಥ ರೋಗ ಬರುತ್ತೊ, ಅವು ಏಕೆ ದಾರಿ ತಪ್ಪುತ್ತವೆಯೊ, ನಮ್ಮ ಸಾಗರ ತಜ್ಞರು ಅಧ್ಯಯನ ಮಾಡಿ ಹೇಳಬೇಕಷ್ಟೆ.

ಭೂಮಿಯ ಮೇಲಿದ್ದಿದ್ದರೆ ಈ ವಿಸ್ಮಯ ಜೀವಿಗಳ ಬಗ್ಗೆ ಇಂಥ ಎಷ್ಟೋ ಅಧ್ಯಯನ ನಡೆಯಲುಸಾಧ್ಯವಿತ್ತು. ಎಷ್ಟೋ ಕಡೆ ಮೃಗಾಲಯಗಳಲ್ಲಿ ಬಂದಿಯಾಗಿ ಅವು ಮಕ್ಕಳಿಗೆ ಮುದ ನೀಡಬಹುದಿತ್ತು. ಜತೆಗೇ ನಮ್ಮವರ ಬಂದೂಕುಗಳಿಗೆ ಗುರಿಯಾಗಿ ಇನ್ನೆಷ್ಟೋ ಸಾವು ಸಂಭವಿಸುತ್ತಿತ್ತು. ನಮ್ಮಲ್ಲಿ ಈ ಯಾವುದೂ ಆಗುತ್ತಿಲ್ಲ; ತಿಮಿಂಗಿಲಗಳನ್ನು ಬೇಟೆಯಾಡಿ ಅವುಗಳನ್ನು ನಿರ್ವಂಶ ಮಾಡುವ ಸಾಮರ್ಥ್ಯ ಕೇವಲ ಸುಧಾರಿತ ರಾಷ್ಟ್ರಗಳಿಗೆ ಬಂದಿದೆ. ಅವುಗಳ ರಕ್ಷಣೆಗೆ ಧಾವಿಸುವ ಸಾಮರ್ಥ್ಯವೂ ಅಲ್ಲಿನ 'ಗ್ರೀನ್‌ಪೀಸ್' ನಂಥ ಸಂಘಟನೆಗಳಿಗೆ ಬಂದಿದೆ. ನಮ್ಮಲ್ಲಿ ತಿಮಿಂಗಿಲ ಬೇಟೆ ಅಪರೂಪ. ಅದು ಅವುಗಳ ಅದೃಷ್ಟ ಎಂದೇ ಹೇಳಬಹುದು. ಆದರೆ ನಾವು ಬಳಸುವ ಕಳಪೆ ತಂತ್ರಜ್ಞಾನದಿಂದಾಗಿ ಸಮುದ್ರವೂ ಮಲಿನವಾಗುತ್ತಿದೆ. ನಮಗೆ ಆ ಸಾಮರ್ಥ್ಯ ಬಂದಿದೆ. ನಮ್ಮ 'ವನ್ಯಜೀವಿ'ಗಳ ಪಟ್ಟಿಗೆ ಸೇರದಿದ್ದ ಪ್ರಾಣಿಗಳೂ ನಮಗೆ ಅರಿವಿಲ್ಲದಂತೆ ಶಿಕ್ಷೆ ಅನುಭವಿಸುತ್ತಿವೆಯೋ ಏನೋ. ತಿಮಿಂಗಿಲಗಳಿಗೆ ಚಿಕಿತ್ಸೆ ನೀಡುವ ಸೌಲಭ್ಯ ನಮ್ಮಲ್ಲಿ ಇಲ್ಲವೆಂದರೆ, ಅವುಗಳ ವಾಸದ ಪರಿಸರಕ್ಕೆ ನಮ್ಮ ಕೊಳೆ-ಕಸ ಸೇರದಂತೆ ತಡೆಯುವ ಸಾಮರ್ಥ್ಯ ನಮಗಿಲ್ಲವೆ?

[ರಮಜಾನ ದರ್ಗಾ, ಡಾ. ವಿಷ್ಣುದಾಸ ಗುನಗ ಮತ್ತು ಎನ್. ಆರ್. ಸೇರ್ವೆಗಾರ್ ಕಳುಹಿಸಿದ ಮಾಹಿತಿಗಳನ್ನು 'ವಿಶ್ವ ವನ್ಯನಿಧಿ'(WWF)ಸಂಸ್ಥೆಯ ವರದಿಯ ಜತೆ ಕ್ರೋಢೀಕರಿಸಿ ಸಿದ್ಧಪಡಿಸಿದ 'ಸುಧಾ' ಲೇಖನ]

ನಿಮ್ಮ ಭವಿಷ್ಯ ತಿಳಿದುಕೊಳ್ಳಿ

☎ 0011 222 222 8+ ☐☐

ಮೇಲೆ ಕೊಟ್ಟಿರುವ ಎಲ್ಲ ಸಂಖ್ಯೆ ಮತ್ತು ಅದರ ಜೊತೆಗೆ ನಿಮ್ಮ ನಿಮ್ಮ ಸೂರ್ಯ ಚಿಹ್ನೆಯ ಎದುರಿಗಿರುವ ಸಂಖ್ಯೆಗೆ ಡಯಲ್ ಮಾಡಿ

01 ಮೇಷ
02 ವೃಷಭ
03 ಮಿಥುನ
04 ಕರ್ಕಾಟಕ
05 ಸಿಂಹ
06 ಕನ್ಯಾ
07 ತುಲಾ
08 ವೃಶ್ಚಿಕ
09 ಧನು
10 ಮಕರ
11 ಕುಂಭ
12 ಮೀನ

ಜ್ಯೋತಿಷ್ಯದ ಪೂಸ ಫೋನ್


ವಾರ ಭವಿಷ್ಯ

ಮನೋ ಭವಿಷ್ಯವಾಣಿ
ಮನೋ ಭವಿಷ್ಯವಾಣಿ ಮೂಲಕ ಭವಿಷ್ಯ ತಿಳಿದುಕೊಳ್ಳಿ
☎ 0011 222 222 820

ರಾಶಿಗಳ ಹೊಂದಾಣಿಕೆ
ನೀವು ಮತ್ತು ಜೀವನ ಸಂಗಾತಿ ಒಬ್ಬರಿಗೊಬ್ಬರು ಅನುರೂಪವಾಗಿದ್ದೀರಾ ಕಂಡುಕೊಳ್ಳಿ
☎ 0011 222 222 817

ಪಕ್ಷಿ ಶಾಸ್ತ್ರ
ನಿಮ್ಮ ಭವಿಷ್ಯ ಹಾಗೂ ಭಾಗ್ಯವನ್ನು ಕಾರ್ಡ್‌ಗಳಿಂದ ತಿಳಿದುಕೊಳ್ಳಿ
☎ 0011 222 222 822

ಇದೊಂದು ಅಂತರರಾಷ್ಟ್ರೀಯ ಕರೆ. ಸ್ಟಾಂಡರ್ಡ್ ದರಗಳು ಅನ್ವಯಿಸುತ್ತವೆ. ಎಂ. & ಎ., ಯು.ಎಸ್.ಎ.



ಪರಿಸರ ಮಾಲಿನ್ಯ ನಿಯಂತ್ರಣವೆಂಬ ಪ್ರಹಸನ

● ಡಾ. ರವೀಂದ್ರನಾಥ ಶಾನುಭಾಗ

ವಿಳಾಸ: ಟ್ರಸ್ಟಿ,
ಬಳಕೆದಾರರ ವೇದಿಕೆ,
ಬಸ್ಸೂರು – 576 211.

ಫೋಟೋ — ರಿಗೈಟ್ ಅಯ್ಯರ್

ದಿವಂಗತ ಬಸವಲಿಂಗಪ್ಪನವರು ಪರಿಸರ ಖಾತೆಯ ಸಚಿವರಾಗಿದ್ದಾಗ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವ್ಯಕ್ತಿ– ಕೈಗಾರಿಕೆಗಳ ವಿರುದ್ಧ ಸಿಡಿದೆದ್ದು ಕೈಗೊಂಡ ಕಾನೂನು ಕಾಯಿದೆಗಳು ಈಗ ಏನಾದವು? ಈ ಕಾನೂನು ಎಷ್ಟು ಕೈಗಾರಿಕೆಗಳನ್ನು ಮುಚ್ಚಿಸಿತು? ಯಾರ್ಯಾರ ಮೇಲೆ ಕ್ರಮಗಳನ್ನು ಕೈಗೊಂಡಿತು ನಿಮಗೇನಾದರೂ ಗೊತ್ತಿದೆಯೆ?

ಈಗ ನೋಡಿ, ಪರಿಸರ ಮಾಲಿನ್ಯದ ಕುರಿತಾಗಿ ಪ್ರಾತಿನಿಧಿಕ ನಾಟಕವೊಂದನ್ನು ಸಾದರ ಪಡಿಸುತ್ತಿದ್ದೇವೆ. ಈ ಒಂದು ನಾಟಕದಿಂದ ಉಳಿದ ಕೈಗಾರಿಕಾ ನೆಲೆಗಳಲ್ಲಿ ಏನೇನು ನಡೆದಿರಬಹುದೆಂದು ನೀವೇ ಊಹಿಸಬಹುದು.

1992ರ ಜನವರಿ ತಿಂಗಳಲ್ಲಿ ಕರ್ನಾಟಕ ಸರ್ಕಾರದ ಪರಿಸರ ಖಾತೆಯ ಆಗಿನ ಸಚಿವರಾದ ಬಸವಲಿಂಗಪ್ಪನವರು ಪರಿಸರ ಮಾಲಿನ್ಯಕ್ಕೆ ಕಾರಣವಾದ ಕೈಗಾರಿಕೆಗಳ ವಿರುದ್ಧ ಸಮರ ಸಾರಿದ್ದು ನೆನಪಿದೆಯೇ? ಪತ್ರಿಕಾಗೋಷ್ಠಿಗಳ ಸರಮಾಲೆಯನ್ನೇ ನಡೆಸಿದ ಸಚಿವರು "ಕೈಗಾರಿಕೋದ್ದಮಿಗಳು ಎಷ್ಟೇ ಬಲಾಢ್ಯರಾದರೂ ಪರಿಸರ ಮಾಲಿನ್ಯಕ್ಕೆ ಕಾರಣರಾಗುತ್ತಿರುವ ಯಾರನ್ನೂ ಬಿಡುವುದಿಲ್ಲ. ಪರಿಸರ ಸಂರಕ್ಷಣೆಗೆ ಅಗತ್ಯವಿರುವ ಕಲ್ಮಷ ನಿಯಂತ್ರಣ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ವಿಫಲರಾದ ಕೈಗಾರಿಕೆಗಳಿಗೆ ಬೀಗ ಜಡಿಯಲೂ ಸರ್ಕಾರ ಹಿಂಜರಿಯುವುದಿಲ್ಲ" ಎಂದಿದ್ದರು.

ಸಚಿವರ ಪತ್ರಿಕಾಗೋಷ್ಠಿಗಳ ಬೆನ್ನಲ್ಲೇ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಎನ್. ಜೆ. ಸುರೇಂದ್ರ ಕುಮಾರರೂ ಪತ್ರಿಕಾ ಹೇಳಿಕೆಗಳನ್ನಿತ್ತು ರಾಜ್ಯದಲ್ಲಿ ಪರಿಸರಕ್ಕೆ ಧಕ್ಕೆ ಉಂಟುಮಾಡುತ್ತಿರುವ 138 ಉದ್ದಿಮೆಗಳನ್ನು ಗುರುತಿಸಲಾಗಿದ್ದು ಅವುಗಳಲ್ಲಿ 24 ಕೈಗಾರಿಕೆಗಳ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳುವುದಾಗಿ ಸ್ಪಷ್ಟಪಡಿಸಿದ್ದರು. ಅವುಗಳಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ; ಒಂದು ಸಿಮೆಂಟ್ ಕಾರ್ಖಾನೆ, ಎರಡು ಕಬ್ಬಿಣದ ಅದಿರು ಮತ್ತು ಉಕ್ಕು ಕಾರ್ಖಾನೆ... ಇತ್ಯಾದಿಗಳಿವೆ ಎಂಬ ವಿವರಗಳನ್ನೂ ನೀಡಿದ್ದರು. (ಕನ್ನಡಪ್ರಭ, 26-1-92)

ಪರಿಸರವಾದಿಗಳೆಲ್ಲ ಸಚಿವರ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ದೃಢ ನಿಲುವನ್ನು ಕೊಂಡಾಡಿ ಅಭಿನಂದಿಸಿದ್ದರು. ಇನ್ನು ಮುಂದಾದರೂ ರಾಜ್ಯದ ಜನತೆಗೆ ಉಸಿರಾಡಲು ಸ್ವಚ್ಛಗಾಳಿ, ಕುಡಿಯಲು ಶುದ್ಧನೀರು ಸಿಗಬಹುದು. ಕರ್ನಾಟಕದ ಪುಣ್ಯನದಿಗಳೆಲ್ಲಾ ಕೊಳಚೆ ನೀರಿನಿಂದ ಮುಕ್ತವಾಗಿ ಪಾವನವಾದಾವು ಎಂದು ನಿಟ್ಟುಸಿರು ಬಿಟ್ಟರು.

ಆದರೆ ಮುಂದೇನಾಯಿತು. ಎಷ್ಟು ಕೈಗಾರಿಕೆಗಳನ್ನು ಮುಚ್ಚಲಾಯಿತು. ಯಾರ್ಯಾರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸಲಾಯಿತು ಎಂದು ನಿಮಗೇನಾದರೂ ತಿಳಿದಿದೆಯೇ?—ನಿಮಗೆ ತಿಳಿಯಲು ಸಾಧ್ಯವೇ ಇಲ್ಲ. ಏಕೆಂದರೆ ಮುಂದಿನ ಕಾರ್ಯಾಚರಣೆಗಳೆಲ್ಲಿ ಯಾವ ಪತ್ರಿಕೆಯಲ್ಲೂ ವರದಿಯಾದದ್ದು ನಮಗೆ ಗೊತ್ತಿಲ್ಲ. ಪರಿಸರ ಮಾಲಿನ್ಯ ಮಂಡಳಿಯ ಸದಸ್ಯರನ್ನು ಬಿಟ್ಟು ಬೇರಾರಿಗೂ ಈ ನಾಟಕದ ಕೊನೆಯ ಅಂಕಗಳನ್ನು ನೋಡುವ ಭಾಗ್ಯ ಖಂಡಿತ ಸಾಧ್ಯವಾಗಿಲ್ಲ.

ಪರಿಸರ ಮಾಲಿನ್ಯಕ್ಕೆ ಕಾರಣವಾದ 138 ಕೈಗಾರಿಕೆಗಳಲ್ಲಿ ಒಂದಾದ ಹರಿಹರ ಪಾಲಿಫೈಬರ್ಸ್ ಹಾಗೂ ಅದರ ಸಹಸಂಸ್ಥೆಯಾದ ಕುಮಾರ ಪಟ್ಟಣದಲ್ಲಿರುವ ಮೆ. ಗ್ಯಾಸಿಮ್ ಇಂಡಸ್ಟ್ರೀಸ್‌ನ ವಿಚಾರದಲ್ಲಿ ಏನಾಯಿತು ಎಂಬ ಕುರಿತು ವಿವರಗಳನ್ನು ನೀಡುವ ಆಮೂಲ್ಯ ದಾಖಲೆಗಳು ನಮ್ಮಲ್ಲಿವೆ. ಪರಿಸರ ಮಾಲಿನ್ಯದ ಈ ನಾಟಕವೊಂದನ್ನು ನೀವು ನೋಡಿದರೆ ಉಳಿದ ಕೈಗಾರಿಕೆಗಳಲ್ಲಿ ಏನೇನು ನಡೆದಿರಬಹುದು ಎಂಬುದರ ಕುರಿತು ನೀವೇ ಊಹಿಸಬಹುದು.

ನಾಟಕ: ಪರಿಸರ ಮಾಲಿನ್ಯ ನಿಯಂತ್ರಣ


ಸೂತ್ರಧಾರರು; ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನ ಆಡಳಿತ ವರ್ಗ.

ಆಡಿತೋರಿಸುವವರು; ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ (ನಾಟಕ) ಮಂಡಳಿ.

ಅಂಕ ಒಂದು

ಸ್ಥಳ: ಮೈಸೂರಿನ ಪತ್ರಿಕಾಗೋಷ್ಠಿ.
ದಿನಾಂಕ: 8-2-1992.

ಬಸವಲಿಂಗಪ್ಪ ಉವಾಚ: "ಹರಿಹರ ಪಾಲಿಫೈಬರ್ಸ್‌ನವರು ನೀರು, ಗಾಳಿ ಹಾಗೂ ಪರಿಸರ ಮಾಲಿನ್ಯ ನಿಷೇಧ ಕಾಯಿದೆಯಂತೆ ಅನುಮತಿ ಪಡೆಯದೇ ಕಾರ್ಖಾನೆ ನಡೆಸುತ್ತಿದ್ದಾರೆ. ತುಂಗಭದ್ರಾ ನದಿಯ ನೀರನ್ನು ಬಳಸುವುದಕ್ಕೆ ನಿಯಮದ ರೀತ್ಯಾ ಅನುಮತಿಯನ್ನೂ ಪಡೆದಿಲ್ಲ. ಗಾಳಿ ಮಾಲಿನ್ಯ ನಿಯಂತ್ರಿಸುವ ಬಗ್ಗೆ ಕಾನೂನು ರೀತ್ಯಾ ಸರ್ಕಾರದ ಪರವಾನಗಿಯನ್ನೂ ಪಡೆದಿಲ್ಲ. ಇದು ಕಾನೂನಿಗೆ ವಿರುದ್ಧ



ಕೊಳೆಗೇರಿಯ ಕರುನೋಟ.

ವಾಗಿದೆ. ಪರಿಹರ ಪಾಲಿಫೈಬರ್ಸ್‌ನವರು ಕಶ್ಮಲ ನೀರನ್ನು ಹೊಂಡಗಳಿಗೆ ಬಿಟ್ಟು, ಕಶ್ಮಲವೆಲ್ಲ ನೆಲದಲ್ಲಿ ನಿಲ್ಲುವಂತೆ ಮಾಡಿ ಅನಂತರ ನೀರನ್ನು ತುಂಗಭದ್ರಾ ನದಿಗೆ ಬಿಟ್ಟಿದ್ದಾರೆ... ಈ ಕಾರ್ಖಾನೆ ಪ್ರತಿ ವರ್ಷ 500 ಕೋಟಿ ರೂಪಾಯಿಗಳ ವಹಿವಾಟು ನಡೆಸುತ್ತಿದೆ... ಹಿಂದೆ ಹೊಕದ್ದಮೆಯೊಂದನ್ನು ಈ ಕಾರ್ಖಾನೆಯ ಮೇಲೆ ಹಾಕಿದಾಗ ಆಡಳಿತ ವರ್ಗದವರಿಗೆ ಒಂದು ಅವಕಾಶ ನೀಡಲು ಸೂಚಿಸಿದ್ದರಿಂದ ಕ್ರಮ ಕೈಗೊಳ್ಳುವುದು ವಿಳಂಬವಾಗಿದೆ... ಈಗ ಈ ಕಾರ್ಖಾನೆಯ ಆಡಳಿತದವರ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಎರಡು ಮಾತಿಲ್ಲ. (ಆಧಾರ–ಕನ್ನಡಪ್ರಭ, ದಿನಾಂಕ: 10-2-92).

ಅಂಕ ಎರಡು

ಸ್ಥಳ: ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿಯ ಚೇರಿ, ಬೆಂಗಳೂರು.

ದಿನಾಂಕ: 10-3-92.

(ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯವರು ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನ ಅಧ್ಯಕ್ಷರಿಗೆ ಶೋಕಾಸ್ ನೋಟೀಸು ಬರೆಯುತ್ತಿದ್ದಾರೆ.)

ಮಾನ್ಯರೇ,

ವಾಯು ಮಾಲಿನ್ಯ ನಿಯಂತ್ರಣ ಕಾಯಿದೆಯ ಪ್ರಕಾರ ಕಾರ್ಖಾನೆ ನಡೆಸಲು ನಿಮಗೆ ನೀಡಿರುವ ಅನುಮತಿಯನ್ನು ಪುನರ್ ಊರ್ಜಿತಗೊಳಿಸುವಂತೆ ನೀವು ಕೇಳಿರುವಿರಿ. ಆದರೆ ನಿಮ್ಮ ಕಾರ್ಖಾನೆಯಿಂದ ಹೊಗೆ ಕಾರುವ ಚಿಮಿಣಿಯನ್ನು 75 ಮೀಟರ್‌ಗಳಷ್ಟು ಎತ್ತರಕ್ಕೆ ಏರಿಸಬೇಕೆಂದು ನಾವು ವಿಧಿಸಿದ ಷರತ್ತಿನ ಬಗ್ಗೆ ನಿಮ್ಮ ಪ್ರಸ್ತಾಪ ಇನ್ನೂ ಬಂದಿಲ್ಲ... ನಿಮ್ಮ ಕಾರ್ಖಾನೆಯಿಂದ ಹೊರಕ್ಕೆ ಬಿಡುವ ಹೈಡ್ರೋಜನ್ ಸಲ್ಫೈಡ್ ಪ್ರಮಾಣ ನಾವು ವಿಧಿಸಿದ ಪ್ರಮಾಣಕ್ಕಿಂತ ಗಣನೀಯ ಪ್ರಮಾಣದಲ್ಲಿ ಅಧಿಕವಾಗಿದೆ... ಕಾರ್ಬನ್ ಡೈ ಸಲ್ಫೈಡ್ ಪ್ರಮಾಣ ಎಷ್ಟೆಂಬುದರ ಕುರಿತು ನೀವು ಸರಿಯಾದ ಮಾಹಿತಿ ನೀಡಿಲ್ಲ... ನಿಮ್ಮ ಕಾರ್ಖಾನೆಯ ಸಲ್ಫೂರಿಕ್ ಆಸಿಡ್ ಹಾಗೂ ಕಾರ್ಬನ್ ಡೈಸಲ್ಫೈಡ್ ಕಾರ್ಯಾಗಾರಗಳಲ್ಲಿ ಹಾಗೂ ಬಾಯ್ಲರುಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿಲ್ಲ. ನಿಮ್ಮ ಕಾರ್ಖಾನೆಯಿಂದ ಹೊರಕ್ಕೆ ಹೋಗುವ ಕಶ್ಮಲಗಳು ನಾವು ವಿಧಿಸಿದ ಪ್ರಮಾಣಕ್ಕಿಂತ ಒಂದೂಮರೆ ಪಾಲಷ್ಟು ಅಧಿಕವಿದೆ... ಆದುದರಿಂದ ನಿಮ್ಮ ಮೇಲೆ ಏಕೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬಾರದೆಂದು ಕಾರಣ ಕೇಳಿ ಈ ನೋಟೀಸು ನೀಡಲಾಗಿದೆ. ಇನ್ನು 15 ದಿನಗಳೊಳಗೆ ಸೂಕ್ತ ಉತ್ತರ ಬಾರದಿದ್ದಲ್ಲಿ ನಿಮ್ಮ ಮೇಲೆ ಕ್ರಮ ಜರುಗಿಸಲಾಗುವುದು.

ಮೂಲ: ಪತ್ರಸಂಖ್ಯೆ ಎಸ್‌ಪಿಸಿಬಿ/ಡಿವಿಜಿ/ಸಿಡಿ/ಎಪಿಸಿ/ಟಿಎ-6/ಎಇ-2/91/7343 ದಿನಾಂಕ 10-3-92.

ಅಂಕ ಮೂರು

ಸ್ಥಳ: ಪರಿಸರ ಖಾತೆಯ ಸಚಿವಾಲಯ, ಬೆಂಗಳೂರು.

ದಿನಾಂಕ: 25-6-92

(ಪರಿಸರ ಖಾತೆಯ ಕಾರ್ಯದರ್ಶಿಯವರು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಿಗೆ ಪತ್ರ ಬರೆಯುತ್ತಿದ್ದಾರೆ.)


ಮಾನ್ಯರೇ,

ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನವರಿಗೆ ಹಾಗೂ ಮೆ। ಹರಿಹರ ಪಾಲಿಫೈಬರ್ಸ್‌ನವರಿಗೆ ಈ ಕೆಳಗಿನ ಆದೇಶಗಳನ್ನು ನೀಡಲು ನಿರ್ದೇಶಿಸಲಾಗಿದೆ.

1. ತುಂಗಭದ್ರಾ ನದಿಗೆ ಯಾವುದೇ ರೀತಿಯ ನೀರನ್ನು ಬಿಡಬಾರದು.
2. ಕೈಗಾರಿಕೆಯ ನೀರನ್ನು ಶುದ್ಧೀಕರಿಸಿ ಬೇಸಾಯಕ್ಕೆ ಉಪಯೋಗಿಸಬೇಕು.
3. ಕೈಗಾರಿಕೆಯಿಂದ ಹೊರ ಬರುವ ದುರ್ನಾತವನ್ನು ತಡೆಯಬೇಕು.

ಧಾರವಾಡದ ಸಮಾಜ ಪರಿವರ್ತನ ಸಮುದಾಯದವರಿಂದ ಬಂದ ದೂರುಪತ್ರ ಇದರೊಂದಿಗೆ ಲಗ್ತೀಕರಿಸಲಾಗಿದೆ... ಮೆ। ಗ್ಯಾಸಿಮ್ ಇಂಡಸ್ಟ್ರೀಸ್ ಹಾಗೂ ಹರಿಹರ ಪಾಲಿಫೈಬರ್ಸ್‌ನ ಮೇಲೆ ಕಾನೂನು ಕ್ರಮ ಕೈಗೊಳ್ಳುವರೇ ಈ ಪತ್ರವನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಚರ್ಚಿಸಿ ಈ ಕುರಿತ ವರದಿಯನ್ನು ಶೀಘ್ರವಾಗಿ

ಕೊಳೆಯ ಕೂಪದ ಮಧ್ಯೆ ಭಾರದ ಬದುಕು.



ಇದು ಪರಿಸರ ಮಾಲಿನ್ಯ ನಿಯಂತ್ರಣವೆ?

1972ರಿಂದ ರಾಣೆಬೆನ್ನೂರು ತಾಲೂಕಿನ ಕುಮಾರ ಪಟ್ಟಣದಲ್ಲಿರುವ ಮೆ. ಗ್ಯಾಸಿಮ್ ಇಂಡಸ್ಟ್ರೀಸ್ ಹಾಗೂ ಹರಿಹರ ಪಾಲಿಫೈಬರ್ಸ್‌ನವರು ದಿನಕ್ಕೆ ಸುಮಾರು 36,000 ಕ್ಯೂ. ಮೀಟರ್‌ಗಳಷ್ಟು ಕೊಳಚೆಯನ್ನು ಹೊರಬಿಟ್ಟರೆ ಮೆ. ಗ್ಯಾಸಿಮ್ ಇಂಡಸ್ಟ್ರೀಸ್‌ನವರು 9,300,000 ಲೀಟರ್ ಕೊಳಚೆ ನೀರನ್ನು ಹೊರಬಿಡುತ್ತಾರೆ. ಇವೆಲ್ಲವೂ ತುಂಗಭದ್ರಾ ನದಿಗೆ ಸೇರಿ ಜಲಮಾಲಿನ್ಯ ಉಂಟಾಗುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅಂತೆಯೇ ಕಾರ್ಬನ್ ಡೈ ಸಲ್ಫೈಡ್ ಮತ್ತು ಹೈಡ್ರೋಜನ್ ಸಲ್ಫೈಡ್ ಎಂಬೆರಡು ಅಸಹನೀಯ ಅನಿಲಗಳನ್ನು ಸಾಕಷ್ಟು ನಿಯಂತ್ರಣವಿಲ್ಲದೇ ವಾತಾವರಣಕ್ಕೆ ಬಿಟ್ಟು ವಾಯುಮಾಲಿನ್ಯಕ್ಕೆ ಕಾರಣವಾಗಿರುವುದು ನಡೆದೇ ಇದೆ.

ಈ ಕೈಗಾರಿಕೆಗಳನ್ನು ನಡೆಸಲು ನಿಗದಿತ ಅವಧಿಗೆ ನೀಡಿದ ಅನುಮತಿಯನ್ನು ನವೀಕರಿಸುವ ಮೊದಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಮಾಲಿನ್ಯ ತಡೆಯಲು ಕೈಗಾರಿಕೆಗಳು ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಬೇಕಾಗಿದೆ. ಮಂಡಳಿಯು ಈಗಾಗಲೇ ಸೂಚಿಸಿದ ಕ್ರಮಗಳನ್ನು ಕೈಗಾರಿಕೆಯವರು ತೆಗೆದುಕೊಂಡಿಲ್ಲವಾದರೆ ಸದ್ರಿ ಕೈಗಾರಿಕೆಗೆ ಶೋಕಾಸ್ ನೋಟೀಸು ನೀಡಿ ಅದರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಹಾಗೂ ಮುಂದೆ ಕೈಗಾರಿಕೆ ನಡೆಸಲು ಅನುಮತಿ ನೀಡದಿರಲು ಮಂಡಳಿಗೆ ಅಧಿಕಾರವಿದೆ.

ಆದರೆ ದಿನಾಂಕ 21-10-1992ರಂದು ನಡೆದ ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿಯ 90ನೆಯ ಸಭೆಯಲ್ಲಿ ತಾನೇ ಬರೆದ ಹಿಂದಿನ ಎಲ್ಲಾ ಪತ್ರಗಳನ್ನೂ, ಸರಕಾರಿ ನಿರ್ದೇಶನಗಳನ್ನೂ, ಮಂಡಳಿಯ ನಿರ್ಣಯಗಳನ್ನೂ ಬದಿಗೊತ್ತಿ ಸದ್ರಿ ಗ್ಯಾಸಿಮ್ ಇಂಡಸ್ಟ್ರೀಸ್‌ನವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ನಿರ್ಧಾರವನ್ನು ಮಂಡಳಿಯು ಕೈಬಿಟ್ಟಿದೆ ಎಂದು ತಿಳಿದುಬಂದಿದೆ. ಮಾತ್ರವಲ್ಲದೆ 1993ರ ಜೂನ್ ತಿಂಗಳವರೆಗೆ ಕೈಗಾರಿಕೆ ನಡೆಸಲು ಈ ಎರಡು ಸಂಸ್ಥೆಗಳಿಗೆ ಅನುಮತಿ ಪತ್ರ ನೀಡುವ ನಿರ್ಣಯವನ್ನೂ ತೆಗೆದುಕೊಂಡಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಈ ನಿರ್ಣಯಗಳಿಂದ ಈ ಕೆಳಗಿನ ಪ್ರಶ್ನೆಗಳು ಉದ್ಭವಿಸಿವೆ.

1. ಸದ್ರಿ ಕೈಗಾರಿಕೆಯು ಯಾವುದೇ ತರಹದ ನೀರನ್ನು ತುಂಗಭದ್ರಾ ನದಿಗೆ ಬಿಡದಿರುವಂತೆ ಆದೇಶ ನೀಡಲು ಕರ್ನಾಟಕ ಸರಕಾರವು ಸ್ಪಷ್ಟ ನಿರ್ದೇಶನ ನೀಡಿದ ಮೇಲೂ 1993ರ ತನಕ ಕೈಗಾರಿಕೆ ನಡೆಸಲು ಗ್ಯಾಸಿಮ್ ಇಂಡಸ್ಟ್ರೀಸ್‌ನವರಿಗೆ ಅನುಮತಿ ಪತ್ರ ನೀಡಲು ಆವಸರಿಸಿದ ಕಾರಣಗಳೇನು?

2. ದಿನಾಂಕ 3-8-1992ರಂದು ನಡೆದ ವಿಚಾರಣೆಯಲ್ಲಿ ಮಂಡಳಿಯು ನೀಡಿದ ಶೋಕಾಸ್ ನೋಟೀಸಿಗೆ ಉತ್ತರ ನೀಡಲು ಹಾಗೂ ವಾದಗಳನ್ನು ಮಂಡಿಸಲು ಮೆ. ಗ್ಯಾಸಿಮ್ ಇಂಡಸ್ಟ್ರೀಸ್‌ನವರ ವಕೀಲರಿಗೆ ಅವಕಾಶ ನೀಡಲಾಗಿತ್ತು. ಆದರೆ ಈ ಸಭೆಯಲ್ಲಿ ಮಂಡಳಿಯ ವಕೀಲರು ಭಾಗವಹಿಸದಿರಲು ಕಾರಣಗಳೇನು?

3. 1993ರ ತನಕ ಕೈಗಾರಿಕೆಯನ್ನು ಮುಂದುವರಿಸಲು ಅನುಮತಿ ಪತ್ರ ನೀಡುವ ಮೊದಲಾದರೂ ಮಂಡಳಿಯ ವಕೀಲರ ಅಭಿಪ್ರಾಯ ತಿಳಿಮುಕೊಳ್ಳಬಹುದಾಗಿತ್ತು. ಆದೂ ನಡೆಯಲಿಲ್ಲ. ಮಂಡಳಿಯ ಅಧಿಕಾರಿಗಳ ಈ ಗಂಭೀರ ಚ್ಯುತಿಗಳಿಗೆ ಕಾರಣಗಳೇನು?

4. ತುಂಗಭದ್ರಾ ನದಿಯ ನೀರು ನಿರಂತರವಾಗಿ ಮಲಿನವಾಗುತ್ತಿರುವುದನ್ನು ಮಂಡಳಿಯೂ, ಸರಕಾರವೂ ಗಮನಿಸಿರುವುದಾಗಿ ದಾಖಲೆಗಳಿಂದ ತಿಳಿದುಬರುತ್ತದೆ. ನದಿಯ ದಡದಲ್ಲಿರುವ ಐರಾಣಿ ಹಾಗೂ ನಡಿಯಾರಳ ಹಳ್ಳಿಗಳಲ್ಲಿ 1992ರ ಮಾರ್ಚ್ ತಿಂಗಳ 18ರಿಂದ 25 ದಿನಾಂಕಗಳವರೆಗಿನ ಅವಧಿಯಲ್ಲಿ ಅಸಂಖ್ಯ ಮೀನುಗಳು ನಾಶವಾಗಿರುವುದೂ ಮಂಡಳಿಗೆ ಗೊತ್ತಿದೆ. ಇದಾಗಿಯೂ ಮಂಡಳಿಯು ಈ ಕೈಗಾರಿಕೆಗಳಿಗೆ ಅನುಮತಿ ಪತ್ರ ನೀಡಿದ್ದು ಯಾವ ಆಧಾರದಲ್ಲಿ?

5. ಈ ಪರಿಸರದಲ್ಲಿರುವ ನಾಗರಿಕರು ಈಗಾಗಲೇ ಕೈಗಾರಿಕೆಯಿಂದ ಹೊರಬರುತ್ತಿರುವ ಹೈಡ್ರೋಜನ್ ಸಲ್ಫೈಡ್ ಹಾಗೂ ಕಾರ್ಬನ್ ಡೈ ಸಲ್ಫೈಡ್‌ನಂತಹ ಅಸಹನೀಯ ಅನಿಲಗಳಿಂದ ತೊಳಲುತ್ತಿದ್ದಾರೆ. ಅಹಮದಾಬಾದಿನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಒಕ್ಯುಪೇಶನಲ್ ಹೆಲ್ತ್‌ನಂತಹ ಸಂಸ್ಥೆಗಳು ನಡೆಸಿದ ವೈಜ್ಞಾನಿಕ ಸಮೀಕ್ಷೆಯಲ್ಲಿ ಇಂತಹ ಅನಿಲಗಳು ಮಾನವರ ಆದರಲ್ಲೂ ಹೆಂಗಸರ ಆರೋಗ್ಯಕ್ಕೆ ಸಂಪೂರ್ಣ ಹಾನಿಕಾರಕ ಎಂದು ಸಾರಿವೆ. ಇಷ್ಟೆಲ್ಲಾ ಗೊತ್ತಿದ್ದೂ ಮಂಡಳಿಯ ಸದಸ್ಯರು ಕೈಗಾರಿಕೆಗಳು ಬಿಡುವ ಈ ಅನಿಲಗಳ ಗರಿಷ್ಠ ಪ್ರಮಾಣವನ್ನು ರದ್ದುಗೊಳಿಸಿದುದು ವಾತಾವರಣ ಮಾಲಿನ್ಯಗೊಳಿಸಲು ಈ ಕೈಗಾರಿಕೆಗಳಿಗೆ ಮುಕ್ತ ಪರವಾನಿಗೆ ನೀಡಿದಂತಾಗಲಿಲ್ಲವೇ?

6. ಹೈಡ್ರೋಜನ್ ಸಲ್ಫೈಡ್ ಮತ್ತು ಕಾರ್ಬನ್ ಸಲ್ಫೈಡ್ ಅನಿಲಗಳನ್ನು ಕೈಗಾರಿಕೆಗಳ ವಾತಾವರಣಕ್ಕೆ ಬಿಡಲು ಇರುವ ಗರಿಷ್ಠ ಪ್ರಮಾಣವನ್ನು ರದ್ದುಗೊಳಿಸಲು ಮಂಡಳಿಯು ನೀಡಿರುವ ಕಾರಣವು ಇನ್ನೂ ಗೊಂದಲಕ್ಕೆ ಕಾರಣವೆನಿಸಿದೆ. ರಾಷ್ಟ್ರೀಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಂಡಳಿಗೆ ದಿನಾಂಕ 28-8-1992ರಂದು ಬರೆದ ಪತ್ರವನ್ನು ಗಮನದಲ್ಲಿರಿಸಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಸಮರ್ಥನೆ ನೀಡಿದೆ. ಆದರೆ ಈ ಪತ್ರದಲ್ಲಿ ಕೈಗಾರಿಕೆಗಳು ಹೊರಬಿಡುವ ಈ ಎರಡು ಅನಿಲಗಳ ಗರಿಷ್ಠ ಪ್ರಮಾಣವನ್ನು ರಾಷ್ಟ್ರೀಯ ಮಂಡಳಿಯು ಇನ್ನೂ ನಿರ್ಧರಿಸಿಲ್ಲ ಎಂದಿದೆಯೇ ವಿನಾ ಕರ್ನಾಟಕ ರಾಜ್ಯ ಮಂಡಳಿಯು ಈಗಾಗಲೇ ನಿಗದಿಗೊಳಿಸಿರುವ ಗರಿಷ್ಠ ಪ್ರಮಾಣವನ್ನು ರದ್ದುಪಡಿಸುವಂತೆ ಯಾವ ಆದೇಶವೂ ಇಲ್ಲ. ಬದಲಾಗಿ ದಿನಾಂಕ 22-8-1988ರಂದು ರಾಷ್ಟ್ರೀಯ ಮಂಡಳಿಯು ಬರೆದ ಪತ್ರದಲ್ಲಿ ಈ ಕೆಳಗಿನ ಸ್ಪಷ್ಟ ಆದೇಶವಿದೆ.

"ಸ್ಟೇಟ್ ಬೋರ್ಡ್ ಮೇ ಅಡಾಪ್ಟ್ ಸ್ಯುಟೇಬಲ್ ಸ್ಟ್ಯಾಂಡರ್ಡ್ಸ್ ಫಾರ್ ಎಮಿಶನ್ ಫ್ರಂ ಇಂಡಸ್ಟ್ರೀಸ್ ಫಾರ್ ವಿಚ್ ಸೆಂಟ್ರಲ್ ಬೋರ್ಡ್ಸ್ ಹ್ಯಾಸ್ ಸೊ ಫಾರ್ ನಾಟ್ ಇವಾಲ್ವ್ಡ್ ಸ್ಟ್ಯಾಂಡರ್ಡ್ಸ್ ಆ್ಯಂಡ್ ದ್ಯಾಟ್ ಇನ್ ದಿ ಇವೆಂಟ್ ಆಫ್ ಸೆಂಟ್ರಲ್ ಬೋರ್ಡ್ ಕಮಿಂಗ್ ಟಿಟ್ ವಿತ್ ರಿಲೆವೆಂಟ್ ಸ್ಟ್ಯಾಂಡರ್ಡ್ಸ್, ದಿ ಸ್ಟ್ರಿಕ್ಟರ್ ಆಫ್ ದಿ ಟೂ ಶಲ್ ಪ್ರಿವೇಲ್"

ಪಸ್ತುಸ್ಥಿತಿ ಹೀಗಿದ್ದರೂ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಅವಸರಿಸಿ ಪರಿಸರ ವಿರೋಧಿ ನಿಲುವನ್ನು ತಳೆದಿದೆ. ಮಂಡಳಿಯ ಮುಂದಿನ ಸಭೆಯಲ್ಲಾದರೂ ಈ ಕುರಿತು ಚರ್ಚೆ ನಡೆದು ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಹಿಂತೆಗೆದುಕೊಳ್ಳುವಂತೆ ನಮ್ಮ ಸಂಘಟನೆಯು ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯರನ್ನು ಈ ಮೂಲಕ ಆಗ್ರಹಿಸುತ್ತದೆ.

ರಂಜನ್ ರಾವ್ ಎರ್ದೂರ್,
ಎಸ್. ಆರ್. ಹಿರೇಮಠ,
ಸಂಚಾಲಕರು,
ಸಮಾಜ ಪರಿವರ್ತನ ಸಮುದಾಯ,
ಧಾರವಾಡ – 580 001.
ಡಾ. ಆರ್. ಆರ್. ಕೊಂಗೋವಿ,
ಪರಿಸರ ಮಾಲಿನ್ಯ ಸಂಶೋಧಕ, ಧಾರವಾಡ.

[ಸೂಚನೆ: ಈ ನಾಟಕವನ್ನು ಯಾರು ಬೇಕಾದರೂ ಆಭಿನಯಿಸಬಹುದು ಆಥವಾ ಭಾಷಾಂತರಿಸಬಹುದು. ನಮ್ಮ ಅನುಮತಿ ಬೇಕಾಗಿಲ್ಲ. ರಾಯಲ್ಟಿ ಕೊಡಬೇಕಾಗಿಲ್ಲ]

ಕಳುಹಿಸಬೇಕೆಂದು ನಿಮ್ಮನ್ನು ವಿನಂತಿಸಲಾಗಿದೆ.

ಮೂಲ: ಪತ್ರಸಂಖ್ಯೆ ದೀಇಇ/133/ಇಎನ್‌ವಿ-92. ದಿನಾಂಕ: 25-6-92.

ಅಂಕ ನಾಲ್ಕು

ಸ್ಥಳ: ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿಯ ಕಚೇರಿ, ಬೆಂಗಳೂರು.


ದಿನಾಂಕ: 31-7-92.

(ಪರಿಸರ ಖಾತೆಯ ಕಾರ್ಯದರ್ಶಿಯವರಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯವರಿಂದ ಪತ್ರ ಬರೆಯಲಾಗುತ್ತಿದೆ.)

ಮಾನ್ಯರೇ,

ಮೆ| ಹರಿಹರ ಪಾಲಿಫೈಬರ್ಸ್‌ನವರು ಕೈಗಾರಿಕೆಯ ನೀರನ್ನು ಶುದ್ಧೀಕರಿಸಲು ಯಂತ್ರಾಗಾರವೊಂದನ್ನು ಸ್ಥಾಪಿಸಿದ್ದು ಶುದ್ಧೀಕರಿಸಿದ ನೀರನ್ನೇ ತುಂಗಭದ್ರಾ ನದಿಗೆ ಬಿಡಲಾಗುತ್ತಿದೆ. ಸಾಮಾನ್ಯವಾಗಿ ಈ ನೀರಿನಲ್ಲಿ ಸರಕಾರವು ನಿಗದಿಪಡಿಸಿದುದಕ್ಕಿಂತ ಕಡಿಮೆ ಪ್ರಮಾಣದ ಕೊಳಚೆ ಇರುತ್ತದೆ.

ಮೆ| ಗ್ಯಾಸಿಮ್ ಇಂಡಸ್ಟ್ರೀಸ್‌ನಲ್ಲಿ ಕಶ್ಮಲ ಶುದ್ಧೀಕರಣ ಯಂತ್ರೋಪಕರಣಗಳಿವೆ. ತುಂಗಭದ್ರಾ ನದಿಗೆ ಈ ಕೈಗಾರಿಕೆಯಿಂದ ಬಿಡುವ ನೀರಿನಲ್ಲಿ ಕರಗುವ ಘನ ಪದಾರ್ಥ (Dissolved Solids) ಹಾಗೂ ಸಲ್ಫೇಟ್‌ಗಳನ್ನು ಬಿಟ್ಟು ಉಳಿದೆಲ್ಲಾ ವಿಚಾರಗಳಲ್ಲಿ ನಿರ್ಧರಿತ ಪ್ರಮಾಣಕ್ಕಿಂತ ಕಡಿಮೆಯಾಗಿದೆ... ನಮ್ಮ ಮಂಡಳಿಯ 85,86 ಹಾಗೂ 87ನೆಯ ಮೀಟಿಂಗ್‌ಗಳಲ್ಲಿ ಈ ಕುರಿತು ವಿವರವಾದ ಚರ್ಚೆ ನಡೆಸಲಾಗಿದೆ. ಈ ಸಭೆಗಳಲ್ಲಿ ಹೈಕೋರ್ಟಿನ ಹಾಗೂ ಮೇಲ್ಮನವಿ ಪ್ರಾಧಿಕಾರದ ಆದೇಶಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ... ಈ ಮಂಡಳಿಯು ಈಗಾಗಲೇ ತೆಗೆದುಕೊಂಡ ತೀರ್ಮಾನಗಳನ್ನು ಗಮನದಲ್ಲಿರಿಸಿದಾಗ, ಈ ಕೈಗಾರಿಕೆಗೆ ಹೊಸ ನಿರ್ದೇಶನಗಳನ್ನು ನೀಡುವುದು ನ್ಯಾಯಾಲಯದಲ್ಲಿ ಈ ಕೈಗಾರಿಕೆಯವರು ಸಲ್ಲಿಸಬಹುದಾದ ಮುಂದಿನ ದೂರುಗಳಿಗೆ ಕಾರಣವಾಗುವ ಸಂಭವವಿದೆ. ಆದುದರಿಂದ ಮುಂದಿನ ಕ್ರಮ ಕೈಗೊಳ್ಳುವ ಮೊದಲು ಈ ಕೈಗಾರಿಕೆಯ ಆಡಳಿತದವರಿಗೆ ಸಮರ್ಥನೆ ಹೇಳಲು ಅವಕಾಶ ನೀಡಲಾಗಿದೆ... ಈ



ಮಾಲಿನ್ಯ ನಾಟಕ ಮಂಡಳಿ

ಭಾರತ ಭಾಗ್ಯವಿಧಾತನಿಗೆ ಜಯಕಾರ
ಹಾಕುತ್ತಾ
ನಾಟಕ ಮುಗಿದಿಲ್ಲ ಇನ್ನೂ ನಡೆಯುತ್ತಿದೆ
ಮಾಲಿನ್ಯ ನಿಯಂತ್ರಣ ಮಂಡಳಿಯೊಳಗೆ
ತುಂಬಿರುವ ಮಾಲಿನ್ಯ ಮೂಗಿಗೆ
ಪೊಡೆಯುತ್ತದೆ
ಮಂತ್ರಿಗಳನ್ನೂ ನಿಯಂತ್ರಣ
ಮಂಡಳಿಯನ್ನು
ನಿಯಂತ್ರಿಸುವ ಕಲೆ ಕೈಗಾರಿಕೋದ್ಯಮಿಗಳಿಗೆ
ಗೊತ್ತಿದೆ
ಎಂಬುದನ್ನು ನಾಟಕ ಧ್ವನಿಸುತ್ತದೆ
ನಾವೆಲ್ಲ ನೋಡುತ್ತಾ ಕೂತರೆ-ನಾಟಕಕ್ಕೆ
ಬೀಳುವುದಿಲ್ಲ ತೆರೆ!

● ಎಚ್. ಡುಂಡಿರಾಜ್

ಕುರಿತು ದಿನಾಂಕ 3-8-1992ರಂದು ದಿನ ನಿಗದಿಯಾಗಿದ್ದು, ಅಂದಿನ ಸಭೆಯ ನಡವಳಿಕೆಯ ಆಧಾರದಲ್ಲಿ ಮುಂದಿನ ಕಾರ್ಯಾಚರಣೆಯನ್ನು ನಿರ್ಧರಿಸಲಾಗುವುದು.

ಮೂಲ: ಪತ್ರ ಸಂಖ್ಯೆ ಡಿಡಬ್ಲ್ಯುಆರ್/ಡಬ್ಲ್ಯುಪಿಸಿ/3/ಐಎನ್‌ಡಿ/ಟಿಎ-6/ಎಇ/92. ದಿನಾಂಕ: 31-7-92.

ಅಂಕ ಐದು

ಸ್ಥಳ: ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿಯ ಕಚೇರಿ, ಬೆಂಗಳೂರು.

ದಿನಾಂಕ: 2-9-92

(ಮಾಲಿನ್ಯ ನಿಯಂತ್ರಣ ಮಂಡಳಿಯ 89ನೆಯ ಬೋರ್ಡ್ ಮೀಟಿಂಗ್ ನಡೆಯುತ್ತಲಿದೆ. ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನವರು ಪರಿಸರ ಮಾಲಿನ್ಯ ತಡೆಗಟ್ಟಲು ವಿಫಲರಾದ ಕುರಿತು ಚರ್ಚೆ ನಡೆದು ನಿರ್ಣಯ ತೆಗೆದುಕೊಳ್ಳಲಾಗುತ್ತಿದೆ.)

ನಿರ್ಣಯ ನಂಬ್ರ 89-41: ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನ ಗ್ಯಾಸಿಲೀನ್ ವಿಭಾಗವು ವಾಯು ಮಾಲಿನ್ಯ ಉಂಟು ಮಾಡುತ್ತಿರುವ ಬಗ್ಗೆ ಚರ್ಚಿಸಿ ಸದ್ರಿ ಕೈಗಾರಿಕೆಯು ವಾಯು ಮಾಲಿನ್ಯ ತಡೆ ಕಾಯಿದೆಯಲ್ಲಿ ಸೂಚಿಸಿದಂತಹ ಪ್ರಮಾಣಕ್ಕಿಂತ ಹೆಚ್ಚಿನ ಮಾಲಿನ್ಯ ಉಂಟುಮಾಡುತ್ತಿರುವುದರಿಂದ ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.

(Source: Proceedings of 89th Board Meeting of Karnataka State Pollution Control Board held on 2-9-92.)

ಅಂಕ ಆರು

ಸ್ಥಳ: ಪರಿಸರ ಖಾತೆಯ ಸಚಿವಾಲಯ, ಬೆಂಗಳೂರು.

ದಿನಾಂಕ: 16-9-92

(ಪರಿಸರ ಖಾತೆಯ ಸಚಿವ ಬಸವಲಿಂಗಪ್ಪನವರಿಂದ ಖಾತೆಯ ಕಾರ್ಯದರ್ಶಿಯವರಿಗೂ ಪರಿಸರ ನಿಯಂತ್ರಣ ಮಂಡಳಿಯ ಅಧ್ಯಕ್ಷರಿಗೂ ಕಳುಹಿಸಿದ ಟಿಪ್ಪಣಿ.)

ಬಸವಲಿಂಗಪ್ಪ; ದಿನಾಂಕ 14-10-1991ರಂದು ನಾನೇ ಖುದ್ದಾಗಿ ಮೆ। ಹರಿಹರ ಪಾಲಿಫೈಬರ್ಸ್ ಹಾಗೂ ಮೆ। ಗ್ಯಾಸಿಮ್ ಇಂಡಸ್ಟ್ರೀಸ್ ಕಾರ್ಖಾನೆಗಳನ್ನು ಸಂದರ್ಶಿಸಿ ಕೆಲವು ಅಂಶಗಳನ್ನು ಗಮನಿಸಿದ್ದೆ. ಈ ಅಂಶಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯವರೇ ಗಮನಿಸಬೇಕಾಗಿತ್ತು. ಮಂಡಳಿಯ ನಡವಳಿಕೆಗಳು 1972ರಿಂದಲೂ ಸದ್ರಿ ಕಂಪೆನಿಯವರು ನಡೆಸಿಕೊಂಡು ಬರುತ್ತಿರುವುದನ್ನು (ಪರಿಸರ ಮಾಲಿನ್ಯವನ್ನು) ಮುಂದುವರಿಸಲು ಸಹಾಯಕವಾಗುವಂತಿದೆ... ಸರ್ಕಾರದ ನಿರ್ದೇಶನದ ಹಾಗೂ ಕಾನೂನಿನ ವಿಧಿಗಳ ಪ್ರಕಾರ ಈ ಕೈಗಾರಿಕೆಗಳಿಂದ ಆಗುವ ಮಾಲಿನ್ಯ ನಿಯಂತ್ರಿಸಲು ಮಂಡಳಿಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕಾಗಿದೆ.

(ಮೂಲ: MINUTE, by Minister for Ecology and Environment dated 16-9-92.)

ಅಂಕ ಏಳು

ಸ್ಥಳ: ಕ.ರಾ. ಮಾಲಿನ್ಯ ನಿಯಂತ್ರಣ ಮಂಡಳಿಯ ಕಚೇರಿ, ಬೆಂಗಳೂರು.

ದಿನಾಂಕ: 21-10-92

(ಮಾಲಿನ್ಯ ನಿಯಂತ್ರಣ ಮಂಡಳಿಯ 90ನೆಯ ಬೋರ್ಡ್ ಮೀಟಿಂಗ್ ನಡೆಯುತ್ತಿದೆ. ಮೆ। ಗ್ಯಾಸಿಮ್ ಇಂಡಸ್ಟ್ರೀಸ್‌ನವರಿಗೆ ಹಾಗೂ ಹರಿಹರದ ಪಾಲಿಫೈಬರ್ಸ್ ಕಾರ್ಖಾನೆಯವರಿಗೆ ಈಗಾಗಲೇ ನೀಡಿರುವ ಅನುಮತಿ ಪತ್ರ (Consent Letter)ವನ್ನು ಊರ್ಜಿತಗೊಳಿಸುವ ಬಗ್ಗೆ ಹಾಗೂ ವಾಯು ಮತ್ತು ಜಲ ಮಾಲಿನ್ಯ ನಡೆಸಿರುವುದಕ್ಕಾಗಿ ಕಾರ್ಖಾನೆಯ ಮೇಲೆ ಕ್ರಮ ತೆಗೆದುಕೊಳ್ಳಲು ಈಗಾಗಲೇ ತೆಗೆದುಕೊಂಡ ನಿರ್ಣಯದ ಪುನರ್ ವಿಮರ್ಶೆಯ ಬಗ್ಗೆ ಚರ್ಚೆ ನಡೆದಿದೆ.)

ನಿರ್ಣಯ ನಂಬ್ರ 90-10: ಪರಿಸರ ಖಾತೆಯ ಕಾರ್ಯದರ್ಶಿಯವರು ದಿನಾಂಕ 25-6-92ರಂದು ಬರೆದ ಪತ್ರವನ್ನು ವಿಶ್ಲೇಷಿಸಲಾಯಿತು. ಹರಿಹರ ಪಾಲಿಫೈಬರ್ಸ್‌ಗೆ ಹಿಂದೆ ನೀಡಿದ್ದ ಅನುಮತಿ ಪತ್ರದ ಷರತ್ತುಗಳನ್ನೂ ಪರಿಶೀಲಿಸಲಾಯಿತು. ಕಾರ್ಖಾನೆಯು ಬಿಡುವ ನೀರಿನಲ್ಲಿರುವ ಕಶ್ಮಲಗಳು ಮಂಡಳಿಯು ವಿಧಿಸಿದ್ದ ಕಶ್ಮಲಗಳ ಪ್ರಮಾಣಕ್ಕಿಂತ ಕಡಿಮೆಯಾಗಿರುವುದನ್ನು ಗಮನಿಸಿ 1993ರ ಜೂನ್ ತಿಂಗಳ ತನಕ ಈ ಕಾರ್ಖಾನೆಯನ್ನು ನಡೆಸಲು ಅನುಮತಿ ಪತ್ರ ನೀಡಬೇಕೆಂದು ನಿರ್ಣಯಿಸಲಾಯಿತು.

ನಿರ್ಣಯ ನಂಬ್ರ 90-11: ಮೆ. ಗ್ಯಾಸಿಮ್ ಇಂಡಸ್ಟ್ರೀಸ್‌ರವರಿಗೆ ಈ ಹಿಂದೆ ವಿಧಿಸಿದ್ದ ಶರತ್ತುಗಳನ್ನೇ ವಿಧಿಸಿ 1993ರ ಜೂನ್ ತಿಂಗಳ ತನಕ ಅನುಮತಿ ಪತ್ರವನ್ನೂ ನೀಡಬೇಕೆಂದು ನಿರ್ಧರಿಸಲಾಯಿತು.


ನಿರ್ಣಯ ನಂಬ್ರ 90-12: ಮಂಡಳಿಯ ಸದಸ್ಯರುಗಳಾದ ಫಿಲಿಪ್ ಲೂಯಿಸ್ ಹಾಗೂ ಎ. ಪಾಪಾರೆಡ್ಡಿಯವರು ಬರೆದ ಪತ್ರಗಳನ್ನೂ ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ 28-8-1992ರಂದು ಬರೆದ ಪತ್ರವನ್ನು ಗಮನದಲ್ಲಿರಿಸಿ ಗಣನೀಯವಾಗಿ ಚರ್ಚೆ ನಡೆದು 89ನೆಯ ಬೋರ್ಡ್ ಮೀಟಿಂಗ್‌ನಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಹಿಂತೆಗೆದುಕೊಳ್ಳಲು, ನಿರ್ಧರಿಸಿತು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

1. 89ನೆಯ ಬೋರ್ಡ್ ಮೀಟಿಂಗಿನಲ್ಲಿ ಮೆ. ಗ್ಯಾಸಿಮ್ ಇಂಡಸ್ಟ್ರೀಸ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂಬ ನಿರ್ಣಯವನ್ನು ವಜಾಮಾಡಲಾಗಿದೆ.

2. ಕೈಗಾರಿಕೆಗಳು ಬಿಡುವ ಹೊಗೆಯಲ್ಲಿ ಹೈಡ್ರೋಜನ್ ಸಲ್ಫೈಡ್ ಹಾಗೂ ಕಾರ್ಬನ್ ಡೈಸಲ್ಫೈಡ್ ಪ್ರಮಾಣಗಳು ಸೂಚಿತ ಪ್ರಮಾಣಕ್ಕಿಂತ ಕಡಿಮೆ ಇರಬೇಕೆಂಬ ಷರತ್ತನ್ನು ತೆಗೆದುಹಾಕಲಾಗಿದೆ. ಈ ಬಗ್ಗೆ ರಾಷ್ಟ್ರೀಯ ಮಂಡಳಿಯು ನಿರ್ಣಯ ತೆಗೆದುಕೊಂಡ ಅನಂತರವೇ ನಿರ್ಧರಿಸಲಾಗುವುದು.


(Source: Proceedings of 90th Board Meeting of K.S.P.C.B. held on 21-10-1992.)

ಭಾರತದ ಭಾಗ್ಯವಿಧಾತನಿಗೆ ಜಯಕಾರ ಹಾಕುತ್ತಾ ನಾಟಕ ಮುಗಿಯುತ್ತದೆ. ●




ಗಿಡಮರ ರಕ್ಷಣೆಗೆ ಕಾಂಕ್ರೀಟ್ ಹಲಗೆ

■ ಡಾ. ಚಂದ್ರಶೇಖರ ದಾಮ್ಲೆ




ತುಳಿಯು ಸ್ಥಳದಲ್ಲಿ ಕಾಂಕ್ರೀಟ್ ದಳಗಳು




ಎಲ್ಲಂದರಲ್ಲಿ ವಿಸ್ತ್ರಯಬಹುದಾದ ಕಾಂಕೂಡ್ ಏಣಿ

ಮರದ ದಿಮ್ಮಿಗಳನ್ನು ಮರೆತುಬಿಡಿ; ಈ ಹೊಸ ಕೃತಕ 'ಕಟ್ಟಿಗೆ'ಗಳು ಬಿರುಕು ಬಿಡುವುದಿಲ್ಲ; ಬಾಗುವುದಿಲ್ಲ, ಹೆಚ್ಚು ಹಣ ಬೇಡುವುದಿಲ್ಲ. ಇದಕ್ಕೆ ಗೆದ್ದಲೂ ಹತ್ತುವುದಿಲ್ಲ.



ಮರ ಬಳಸದ ಅಂಗಡಿ ಮಳಿಗೆ



ಪ್ಲಾಸ್ಟಿಕ್‌ನಂಥ ಪೀಠೋಪಕರಣ


ಮರದ ಒಂದೇ ಒಂದು ತುಂಡನ್ನು ಕೂಡಾ ಬಳಸದೆ ಹೆಂಚಿನ ಮನೆ ಕಟ್ಟಲು ಸಾಧ್ಯವೆ?

'ಸಾಧ್ಯ' ಎಂದು ತೋರಿಸಿದ್ದಾರೆ, ಪುತ್ತೂರಿನ ಯುವ ಎಂಜಿನಿಯರ್ ಎಸ್.ಕೆ. ಆನಂದ ಕುಮಾರ್.


ಇವರು ಕಟ್ಟುವ ಮನೆಗಳ ಕಂಬ, ತೊಲೆ, ಜಂತಿ, ಬಾಗಿಲು, ಕಿಟಕಿ ಹಾಗಿರಲಿ; ರೀಪು, ಪಕ್ಕಾಸು, ಕೊನೆಗೆ ಕುರ್ಚಿ, ಮೇಜು, ಮಣೆಗಳೂ ಆರ್‌ಸಿಸಿ ಕಾಂಕ್ರೀಟಿನದು. ಮನೆಯವರು ಮೀನುಗಾರಿಕೆ ಮಾಡುವುದಾದರೆ ಅವರಿಗೆ ಕಾಂಕ್ರೀಟಿನ ಹಗುರು ದೋಣಿಯನ್ನೂ ಇವರು ನಿರ್ಮಿಸಿಕೊಟ್ಟಾರು.

ಹಾಗೆಂದು ಈ ಕಾಂಕ್ರೀಟ್ ಪೀಠೋಪಕರಣಗಳು ಪಾರ್ಕಿನ ಬೆಂಚ್‌ಗಳ ಹಾಗೆ ಒರಟಲ್ಲ. ಅಂಚು ಸೊಟ್ಟಗಾಗಿ, ಮೂಲೆಗಳ ಚೂರು ಕಿತ್ತು ಬಂದು ಮೈಕೈ ತರಚುವ ಸಂಭವ ಇಲ್ಲ. ಇವು ಅಪ್ಪಟ ಮರದ ಹಲಗೆಗಳ ಹಾಗೆ ನುಣುಪು. ಪ್ಲಾಸ್ಟಿಕ್‌ನ ಹಾಗೆ ಸಪಾಟು.

ಮರಗಳಿಗೆ ಬದಲಿಯಾಗಿ ತಾವು ನಿರ್ಮಿಸಿದ ಈ ಕಾಂಕ್ರೀಟ್ ಮೋಪುಗಳಿಗೆ ಆನಂದ ಕುಮಾರ್ 'ಕಾಂಕೂಡ್' (Cancood) ಎಂದು ಹೆಸರಿಸಿದ್ದಾರೆ. ಬಹುಕಾಲ ಬಾಳ್ವಿಕೆಯ ಕಡಿಮೆ ವೆಚ್ಚದ ಈ ಕಾಂಕೂಡ್ ಮೋಪುಗಳ ಆಗ್ಗಳಿಕೆಯನ್ನು ಬಣ್ಣಿಸಲು ಅವರು ನೀಡುವ ಒಂದು




ಪುಟ 38 ಕುಕ್ಕಿ ಓಡಿಯದ ಕಪಾಟು




ಅಲ್ಲಿ ಶಿಥಿಲ ಶಾಲೆಯ

ಸುಪ್ತಾ ಜ



ಸಾಗಾಟಕ್ಕೆ ಸಿದ್ಧವಾದ ಕಿಟಕಿ




ಚೂರೂ ಮರ ಬಳಸದ ಸೂರು

ಒಳ್ಳೆಯ ಮಾವಿನ ಮರವನ್ನು ಬಲಿಕೊಡಬೇಕಾಗಿಲ್ಲವೆಂಬುದು ಇಲ್ಲಿ ಗಮನಾರ್ಹ. ಇದಲ್ಲದೆ ಮರದ ದೋಣಿಗೆ ಪದೇ ಪದೇ ಎಣ್ಣೆ ತಿಕ್ಕಿ ರಕ್ಷಿಸಿಡಬೇಕಾದ ಶ್ರಮವೂ ಇಲ್ಲಿ ಬೇಕಾಗಿಲ್ಲ. ಆಕಸ್ಮಾತ್ ಬಿರುಕು ಕಂಡುಬಂದರೂ ಅದನ್ನು ಪೂರ್ತಿಯಾಗಿ ದುರಸ್ತಿಮಾಡಲು ಸಾಧ್ಯವಿದೆ.


ಎಸ್.ಕೆ. ಆನಂದ ಕುಮಾರ್ ಒಬ್ಬ ಮಾಸ್ತರರ ಮಗನಾಗಿ ಸ್ವಂತ ಪರಿಶ್ರಮದಿಂದ ಉನ್ನತಿಗೇರಿದವರು. ಇವರ ತಂದೆ ದಿ. ಈಶ್ವರ ಭಟ್ಟರು ಉದ್ಯೋಗದಲ್ಲಿ ಮಾಸ್ತರರಾಗಿದ್ದರೂ ಆಗಲೇ ಕಾಂಕ್ರೀಟ್ ಕಟ್ಟಡಗಳ ಹಾಗೂ ವಿಶಿಷ್ಟವಾದ ತುಳಸಿ ಕಟ್ಟೆಗಳ ರಚನೆಯಲ್ಲಿ ಹೆಸರು ಗಳಿಸಿದ್ದರು. ಕೊನೆಯ ಮಗ ಆನಂದ, ತಾಯಿಯ ಉತ್ತೇಜನದಿಂದ ಸುರತ್ಕಲ್‌ನ ಕೆ.ಆರ್.ಇ.ಸಿ. ಮಹಾವಿದ್ಯಾಲಯದಲ್ಲಿ ಇಂಡಸ್ಟ್ರಿಯಲ್ ಸ್ಟ್ರಕ್ಚರ್ಸ್‌ನಲ್ಲಿ ಎಂ.ಟೆಕ್. ಪದವಿ ಪಡೆದು ಕಟ್ಟಡ ನಿರ್ಮಾಣ ಘಟಕವನ್ನು ಸ್ಥಾಪಿಸಿದರು. ತಾನು ಕಟ್ಟಿದ ಪ್ರತಿ ವಿನ್ಯಾಸದಲ್ಲೂ ಹೊಸತನದ ಛಾಪು ಮೂಡಿಸುವ ಹುಮ್ಮಸ್ಸು ಅವರದು. ಕಾಂಕ್ರೀಟ್ ಹಲಗೆ ಕಿಟಕಿಗಳ ಘಟಕ ಸ್ಥಾಪಿಸಿ ಈಗ ಪ್ರತ್ಯಕ್ಷ-ಪರೋಕ್ಷವಾಗಿ ಸುಮಾರು ಐನೂರು ಮಂದಿಗೆ ಜೀವನೋಪಾಯ ಒದಗಿಸಿದ್ದಾರೆ.

ಸದ್ಯ ತರಬೇತಿ ನೀಡುವ ವ್ಯವಸ್ಥೆ ಇವರಲ್ಲಿ ಇಲ್ಲದಿದ್ದರೂ ಆನಂದಕುಮಾರ್ ತಮ್ಮ ಪರಿಣತಿಯನ್ನು ಆಸಕ್ತ ತಜ್ಞರೊಡನೆ ಹಂಚಿಕೊಳ್ಳಲು ಸಿದ್ಧರಿದ್ದಾರೆ. ಅವರ ಉದ್ಯಮದಲ್ಲಿ ಕೆಲಸ ಮಾಡುವುದರ ಮೂಲಕ ನಿಜವಾದ ತರಬೇತಿಯನ್ನು ಪಡೆಯಬಹುದಾಗಿದೆ.

ವಿಳಾಸ: ಎಸ್.ಕೆ. ಆನಂದ ಕುಮಾರ್,
'ಮಾಸ್ಟರ್ ಪ್ಲೆನರಿ', ನೆಹರುನಗರ,
ಪುತ್ತೂರು–574203.



ಮರಮುಟ್ಟು ಬಳಸದ ಗಟ್ಟಿಮುಟ್ಟು ಮನೆ



ನಿರ್ಮಾಣ ಹಂತದಲ್ಲಿ ಕಪಾಟು, ರೀಪರ್‌ಗಳು

ಇನ್ನೀ ಕರ್ನಾಟಕವನ್ನೇ ಚಿನ್ನಕ್ಕಾಗಿ ಜಾಲಾಡಲೆಂದು ಮುನ್ನೂರಕ್ಕೂ ಹೆಚ್ಚು ಖಾಸಗೀ ಕಂಪನಿಗಳಿಗೆ ಸರಕಾರ

ಫಸಲು ಬೆಳೆಯುತ್ತಿದ್ದವರಿಗೆ ಈಗ ದಿಗಿಲಾಗಿದೆ. ಬಂಜರು ಭೂಮಿಯಲ್ಲಿ ಗಣಗಾರಿಕೆ ಪ್ರಶ್ನೆ ಬೇರೆ. ಆದರೆ ಚಿನ್ನದಂಥ

ವ್ಯಾಪಕ ಗಣಗಾರಿಕೆ ನಡೆಸುವ ಕೆಲಸ ಅವಿವೇಕದ್ದಲ್ಲವೆ ಎಂಬ ಪ್ರಶ್ನೆಯನ್ನು



ಹಸಿರು ಚಿನ್ನದ ಮಧ್ಯೆ


■ ಸತೀಶ್ ಚಪ್ಪರಿಕೆ

"ಸಾಗರ ಹೋಗತ್ತಂತಲ್ರೀ!?"

-ಸಭೆಗೆ ಹೊರಟಿದ್ದ ಹಳ್ಳಿಯ ಜನರೆಲ್ಲರ ಬಾಯಲ್ಲಿ ಇದೇ ಆತಂಕದ ಪ್ರಶ್ನೆ. ಅಲ್ಲಲ್ಲಿ ಸಿಕ್ಕ ಕರಪತ್ರಗಳ ಅಕ್ಷರಗಳನ್ನು ಹೆಕ್ಕಿ ಹೆಕ್ಕಿ ಜನ ಕಾತರದಿಂದ ಓದುತ್ತಿದ್ದರು. ಯಾವಾಗಂತೆ ಗಣಿ ಆರಂಭ? ಡೈನಾಮೈಟ್ ಹಾಕ್ತಾರಂತಾ? ಇದನ್ನು ನಿಲ್ಲಿಸೋಕೆ ಆಗುತ್ತಾ? ಸಭೆಗೆ ಯಾರು ಯಾರು ಬರ್ತಾರಂತೆ? ಸಾಹಿತಿ ನಾ. ಡಿಸೋಜ, ಪ್ರೊಫೆಸರ್ ಕುಮಾರ ಸ್ವಾಮಿ? ಅಶೀಸರ ಅನಂತ, ಕೆ ವಿ ಸುಬ್ಬಣ್ಣ? ರಾಜಕಾರಣಿಗಳು ಯಾರೂ ಬರೊಲ್ವಾ...?

ಸಾಗರದಲ್ಲಿ ನಡೆಯಲಿದ್ದ ಸಭೆಗೆ ಹೊರಟ ಎಲ್ಲರ ತಲೆಯಲ್ಲಿ ಈ ಪ್ರಶ್ನೆಗಳೇ ತುಂಬಿದ್ದವು. ಕಾರಣ ಏನೆಂದರೆ, ಈ ತಾಲ್ಲೂಕನ್ನು ಒಳಗೊಂಡು ಶೃಂಗೇರಿ, ಹೊಸನಗರ, ಶಿವಮೊಗ್ಗ, ಭದ್ರಾವತಿ, ಶಿರಸಿ, ಸಿದ್ದಾಪುರ, ಸೊರಬ, ಹೊನ್ನಾಳಿ, ಚೆನ್ನಗಿರಿ, ಹೊನ್ನಾವರ ತಾಲ್ಲೂಕಿನ ದ್ದಕ್ಕೂ ಮಲೆನಾಡಿನ ಸುಮಾರು ಇಪ್ಪತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಕೇಳಿ ಖಾಸಗೀ ಕಂಪೆನಿಗಳು ಅರ್ಜಿಗಳ ಮಳೆ ಸುರಿಸಿದ್ದು ಇವರೆಲ್ಲರ ಆತಂಕಕ್ಕೆ ಕಾರಣವಾಗಿತ್ತು. ಏನೇನೋ ಗಾಳಿ ಸುದ್ದಿ; ಎಂತೆಂಥದೋ ಊಹಾಪೋಹ. ಸರಕಾರ ಸರಿಯಾದ ಸಂಗತಿ ಏನೆಂದು ಯಾರಿಗೂ ಹೇಳುತ್ತಿಲ್ಲ.

ಆದರೆ ಸರಕಾರಿ ದಾಖಲೆಗಳನ್ನು ಹೇಗೊ ಸಂಗ್ರಹಿಸಬಲ್ಲ ನಿಷ್ಣಾತರು ಯಾವುದೋ ಮೂಲದಿಂದ ಪಡೆದ ಮಾಹಿತಿ ಇವಿಷ್ಟು: 'ಜಿಯೋ ಮೈಸೂರು ಸರ್ವೀಸಸ್' ಕಂಪೆನಿ, 'ಪಾನ್ ಏಶಿಯನ್ ಮೈನಿಂಗ್ ಕಂಪೆನಿ,' ಹಟ್ಟಿ ಚಿನ್ನದ ಗಣಿ ಕಂಪೆನಿ, ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ, ವೆಸ್ಟರ್ನ್ ಮೈನಿಂಗ್ ಕಾರ್ಪೋರೇಶನ್ ಹೀಗೆ ಸುಮಾರು 35 (ದೇಶಿ ಹಾಗೂ ವಿದೇಶಿ) ಗಣಿ ಕಂಪೆನಿಗಳು ಸಹ್ಯಾದ್ರಿಯ ಈ ಹಸಿರು ತಪ್ಪಲಿನಲ್ಲಿ ಅದಿರಿನ ಶೋಧ ಮಾಡಲು ಅರ್ಜಿ ಹಾಕಿವೆ. ಈ ಪ್ರದೇಶದಲ್ಲಿ ಅಳಿದುಳಿದ ಸದಾ ಹಸಿರಿನ ಅರಣ್ಯ ಪ್ರದೇಶ, ಕೃಷಿಕರ ಪಾಲಿಗೆ 'ಚಿನ್ನ'ವಾಗಿರುವ ಅಡಿಕೆಯ ತೋಟ ಹಾಗೂ ಹಸಿರುಕ್ಕಿಸುವ ಭತ್ತದ ಗದ್ದೆ, ತೆಂಗಿನ ತೋಟಗಳಿವೆ. ಈ ನೆಲದಲ್ಲಿ ಪ್ಲಾಟಿನಂ, ಚಿನ್ನ, ಬೆಳ್ಳಿ, ನಿಕ್ಕಲ್ ಹಾಗೂ ವಜ್ರದ ನಿಕ್ಷೇಪಗಳೂ ಇವೆಯಂತೆ. ಎಷ್ಟಿವೆ ಎಂದು ಶೋಧಿಸುವ ಅವಕಾಶ ಬಯಸಿ ವಿವಿಧ ಕಂಪೆನಿಗಳು 270ಕ್ಕೂ ಹೆಚ್ಚು ಅರ್ಜಿಗಳನ್ನು ಗುಜರಾಯಿಸಿ ಸಾಲುಗಟ್ಟಿ ನಿಂತಿವೆ. ಇತ್ತೀಚಿನ ಲೆಕ್ಕದ ಪ್ರಕಾರ ಈ ಅರ್ಜಿಗಳ ಸಂಖ್ಯೆ 330 ದಾಟಿದೆ. ಸದ್ಯಕ್ಕೆ 'ಪರಿಶೋಧನಾ ಗಣಿಗಾರಿಕೆ'ಗೆ ನಮಗೆ ಅವಕಾಶ ನೀಡಿ ಎಂಬುದು ಈ ಕಂಪೆನಿಗಳ ಬೇಡಿಕೆಯಾಗಿದೆ.



ಸಾಗರದಲ್ಲಿ ದುಗುಡಗೊಂಡ ಜನರ ಪ್ರತಿಭಟನೆ

ಜನಮನ ತಲ್ಲಣ

ಸಾಗರದ ತಾಲ್ಲೂಕಿನ ಹಳೆ ಇಕ್ಕೇರಿ ಹಾಗೂ ಜಂಬಾನಿಯ ಸುತ್ತಲಿನ ಸುಮಾರು 30 ಹಳ್ಳಿಗಳನ್ನು ಒಳಗೊಂಡ 3,700 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಇನ್ನೇನು ಸಿಗುವ ಹಂತದಲ್ಲಿದೆ. 'ಜಿಯೋ ಮೈಸೂರು ಸರ್ವೀಸಸ್' ಕಂಪೆನಿಗೆ ಈ ಪ್ರದೇಶದ ವಿವರವಾದ ನಕಾಶೆ ನೀಡುವಂತೆ ಸರಕಾರ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಆದೇಶ ನೀಡಿದೆ. ಅಂದಮೇಲೆ ಸರಕಾರ ಅನುಮತಿ ಕೊಟ್ಟ ಹಾಗೇ ತಾನೆ?

'ಜಿಯೋ ಮೈಸೂರು ಸರ್ವೀಸಸ್' ಕಂಪೆನಿ ತನ್ನ ಗಣಿ ಯೋಜನೆಗೆ ಬಯಸಿದ ಈ ವಿಶಾಲ ಪ್ರದೇಶದಲ್ಲಿ ಅಡಿಕೆಯ ತೋಟ ಹಾಗೂ ಫಲವತ್ತಾದ ಭತ್ತದ ಗದ್ದೆಗಳಿವೆ. ಇದೇ ಮುಖ್ಯವಾಗಿ ಇಲ್ಲಿನ ಸುಮಾರು 26 ಸಾವಿರ ಜನರ ದಿಗಿಲಿಗೆ ಕಾರಣವಾಗಿದೆ. ಅಕಸ್ಮಾತ್ ಗಣಿ ಯೋಜನೆ ಕಾರ್ಯಗತವಾದರೆ ಸಾಗರ ಪಟ್ಟಣದ ಅರ್ಧ ಭಾಗ ನೇರವಾಗಿ ಗಣಿ

ಭೂಮಿಯನ್ನು ಲೀಸ್ ಮೇಲೆ ಕೊಡುವ ತರಾತುರಿಯಲ್ಲಿದೆ. ಸಹಜವಾಗಿಯೇ ಮಲೆನಾಡಿನ ಗದ್ದ ತೋಟಗಳಲ್ಲಿ ಹಸನಾದ ಅಮೂಲ್ಯ ಫಸಲು ಕೊಡುತ್ತ, ನಾಡಿನ ನೆಲ ಜಲ ಮೃಗಪಕ್ಷಿಗಳ ಸಮೃದ್ಧ ಖಜಾನೆಯಾಗಿರುವ ಪಶ್ಚಿಮ ಘಟ್ಟಗಳಲ್ಲಿ ಹಳ್ಳಿಯ ಮುಗ್ಧರೂ ಕೇಳುತ್ತಿದ್ದಾರೆ. ಸರಕಾರ ಮಾತ್ರ ಮೌನವಾಗಿದೆ.



ಚಿನ್ನಕ್ಕಾಗಿ ಗಣಿಗಾರಿಕೆ?

ಹೊಂಡವೇ ಆದೀತೆಂದೂ, ಇತಿಹಾಸ ಪ್ರಸಿದ್ಧ ಇಕ್ಕೇರಿಯ ಅಘೋರೇಶ್ವರ ದೇಗುಲ ನೆಲಸಮವಾಗಿಬಿಡುತ್ತದೆಂದೂ ಜನಸ್ತೋಮ ಕಂಗಾಲಾಗಿದೆ.


*

ವಾಸ್ತವ ಸಂಗತಿ ಏನು? ಯಾರು ಹೇಳಿದರು ಇಲ್ಲಿ ಚಿನ್ನ-ಬೆಳ್ಳಿ ಸಿಗುತ್ತೆಂದು? ಎಂದಿನಿಂದ ಈ ಗಣಿಗಾರಿಕೆ ಯೋಜನೆ ತಯಾರಾಯಿತು?

ಇದನ್ನು ಅರಿಯಲೆಂದು ನಾವು ಕೊಂಚ ಹಿಂದಿನ ಇತಿಹಾಸ ಕೆದಕಬೇಕು ('ಕೊಂಚ ಹಿಂದಿನ' ಅಂದರೆ ಸುಮಾರು 22 ಕೋಟಿ ವರ್ಷಗಳ ಹಿಂದೆಯೂ ಹೋಗಬೇಕು. ಆ ಮಾತು ಆ ಮೇಲೆ ಇರಲಿ).

ಭಾರತದಲ್ಲಿ ಚಿನ್ನಕ್ಕೆ ಭಾರೀ ಬೇಡಿಕೆ ಇದೆ. ಕಳೆದ ವರ್ಷ 560 ಟನ್ ಚಿನ್ನವನ್ನು ಭಾರತೀಯರು ಖರೀದಿಸಿದ್ದರು. ಆದರೆ ನಮ್ಮ ದೇಶದಲ್ಲಿ ಹೆಚ್ಚೆಂದರೆ ಎರಡು ಟನ್ ಚಿನ್ನ ಮಾತ್ರ ಉತ್ಪಾದನೆಯಾಗುತ್ತಿದೆ (ಶ್ರೀಮಂತರು ತಮ್ಮ ಹುಳುಕು ಹಲ್ಲುಗಳಿಗೆ ಚಿನ್ನ ತುಂಬಿಸಲು ಕೂಡ ಇದು ಸಾಕಾಗುವುದಿಲ್ಲ). ಕೋಲಾರದ ಚಿನ್ನದ ಗಣಿ ಎಂದೋ ಖಾಲಿಯಾಗಿದೆ. ಹಟ್ಟಿಯ ಚಿನ್ನದ ಗಣಿಯಲ್ಲಿ ವರ್ಷಕ್ಕೆ 1.2 ಟನ್ ಅಂದರೆ 1200 ಕಿಲೊ ಚಿನ್ನ ಸಿಗುತ್ತಿದೆ. ಆಂಧ್ರದ ರಾಮಗಿರಿಯಲ್ಲಿ 250 ಕಿಲೊ.

ಇಕ್ಕೇರಿಯ ಅಘೋರೇಶ್ವರ ದೇಗುಲ- ಚಿನ್ನದ ಆದುರಿನ ಮೇಲಿದೆಯೆ?



ಬಿಹಾರದ ಘಾಟಶಿಲಾದಲ್ಲಿ 25 ಕಿಲೊ ಹೀಗೆ ಅಲ್ಲಿ ಇಲ್ಲಿ ಸಿಗುವ ಚಿಲ್ಲರೆ ಚಿನ್ನ ಯಾತಕ್ಕೂ ಸಾಲದು. ಅದರ ಉತ್ಪಾದನೆ ಯನ್ನು ಹೇಗಾದರೂ ಮಾಡಿ ಹೆಚ್ಚಿಸಬೇಕು.

ಹೇಗೆ ಹೆಚ್ಚಿಸುವುದು? ನಮ್ಮ ಗಣಿ ತಂತ್ರಜ್ಞಾನ ತುಂಬ ಹಳೇ ಕಾಲದ್ದು. ಮೇಲಾಗಿ ಸರಕಾರಿ ಉದ್ಯಮ ಎಂದರೆ ದಕ್ಷತೆ ಇನ್ನೂ ಕಳಪೆ. ಆದ್ದರಿಂದ ಚಿನ್ನದ ಗಣಿಗಾರಿಕೆಯನ್ನು ಖಾಸಗಿ ಕಂಪನಿಗಳಿಗೆ ಕೊಡಬೇಕು. ವಿದೇಶೀ ಕಂಪನಿಗಳು ಬಂದರೆ ಇನ್ನೂ ಒಳ್ಳೆಯದೇ. ನೆಲದಲ್ಲಿರುವ ಅಲ್ಪ ಪ್ರಮಾಣದ ಚಿನ್ನವನ್ನೂ ಲಾಭದಾಯಕವಾಗಿ ಎತ್ತುತ್ತಾರೆ. ಹಿಂದೆ ಕೋಲಾರದಲ್ಲಿ ಪ್ರತಿ ಟನ್ ಶಿಲೆಯಲ್ಲಿ 50 ಗ್ರಾಮ್ ಚಿನ್ನ ಇತ್ತು. ಅದನ್ನೆಲ್ಲ ಬ್ರಿಟಿಷರು ಸಲೀಸಾಗಿ ಎತ್ತಿದರು. ಈಗ ಹಟ್ಟಿಯಲ್ಲಿ ಪ್ರತಿ ಟನ್‌ಗೆ ನಾಲ್ಕು ಗ್ರಾಮ್ ಚಿನ್ನ ಸಿಕ್ಕರೂ ಎತ್ತುತ್ತಿದ್ದಾರೆ. ಸಂಸ್ಕರಣಾ ತಂತ್ರಜ್ಞಾನ ಚೆನ್ನಾಗಿದ್ದರೆ ಪ್ರತಿ ಟನ್‌ನಲ್ಲಿ ಒಂದು ಗ್ರಾಮ್‌ಗಿಂತ ಕಡಿಮೆ (ಕೇವಲ 0.6 ಗ್ರಾಮ್) ಚಿನ್ನ ಇದ್ದರೂ ಕೂಡ ಅಲ್ಲಿ ಲಾಭದಾಯಕವಾಗಿ ಗಣಿ ಆರಂಭಿಸಲು ಸಾಧ್ಯವೆಂದು ವಿದೇಶೀ ಜನ ಹೇಳುತ್ತಾರೆ. ಈ ಮಾತನ್ನು ನಂಬಿದ ಸರಕಾರ ಚಿನ್ನದ ಖಾಸಗಿ ಗಣಿಗಾರಿಕೆಗೆ ಅನುಮತಿ ನೀಡುತ್ತೇನೆಂದು ಘೋಷಿಸಿತು. 1993ರಲ್ಲೇ ದಿಲ್ಲಿಯಲ್ಲಿ 15 ರಾಷ್ಟ್ರಗಳ 70 ಪ್ರತಿನಿಧಿಗಳನ್ನೂ ನಮ್ಮದೇ ಇನ್ನೂರು ಉದ್ಯಮಿಗಳನ್ನೂ ಸೇರಿಸಿ ಉದಾರೀಕರಣದ ನೀಲ ನಕ್ಷೆಯನ್ನು ಬಿಚ್ಚಿ ತೋರಿಸಿತು.

ಆದರೆ ಯಾಕೆ ಪಶ್ಚಿಮ ಘಟ್ಟಗಳು? ಇಲ್ಲೇ ಚಿನ್ನ ಇರಬಹುದೆಂಬ ಶಂಕೆ ಯಾಕೆ ಬಂತು?

ಇಲ್ಲೊಂದೇ ಅಲ್ಲ, ಕರ್ನಾಟಕದ 102 ಊರುಗಳಲ್ಲಿ ಹಿಂದಿನವರು (ಅಂದರೆ ನಾಲ್ಕಾರು ನೂರು ವರ್ಷಗಳ ಹಿಂದಿನ ನಮ್ಮವರು) ಅಲ್ಲಲ್ಲಿ ಚಿನ್ನಕ್ಕಾಗಿ ಗಣಿಗಾರಿಕೆ ಮಾಡಿದ ಕುರುಹುಗಳು ನಮ್ಮಲ್ಲಿವೆ. ಗದಗದ ಬಳಿಯ ಚಿನ್ನ ಮುಳಗುಂದ, ಹಾಸನದ ಕೆಂಪಿನ ಕೋಟೆ, ಶಿರಾ ಬಳಿಯ ಅಜ್ಜನ ಹಳ್ಳಿ, ಸಾಗರದ ಸಮೀಪದ ಇಕ್ಕೇರಿ ಇಲ್ಲೆಲ್ಲ ಈಗ ಹೆಚ್ಚಿನ ಶ್ರಮವಿಲ್ಲದೆ ಶೋಧ ನಡೆಸಿ ಲಾಭ ಸಿಗುವಂತೆ ಗಣಿಗಾರಿಕೆ ಮಾಡಲು ಸಾಧ್ಯವೆಂದು ಸರಕಾರಿ ಭೂವಿಜ್ಞಾನಿಗಳು ಹೇಳಿದ್ದಾರೆ.

ಅದು ಇರಬಹುದು. ಆದರೆ ಯಾಕೆ ಆ ವಿದೇಶೀಯರಿಗೆ ನಮ್ಮ ನೆಲದ ಚಿನ್ನದ ಮೇಲೆ ಅಷ್ಟೊಂದು ಮೋಹ? ಮೊಝಾಂಬಿಕ್‌ನಲ್ಲೊ, ಘಾನಾದಲ್ಲೊ, ಪಾಕಿಸ್ತಾನದಲ್ಲೊ ಅವರು ಯಾಕೆ ಅಷ್ಟು ಉತ್ಸಾಹ ತೋರಿಸುತ್ತಿಲ್ಲ?

'ಯಾಕೆಂದರೆ 225 ಮಿಲಿಯ ವರ್ಷಗಳ ಹಿಂದೆ ಈ ಭಾರತ ಖಂಡ ಆಸ್ಟ್ರೇಲಿಯಾ

ಖಂಡದ ಜತೆ ಬೆಸೆದುಕೊಂಡಿತ್ತು. ಈ ಎರಡೂ ದೇಶಗಳ ಭೂ ರಚನೆ, ಶಿಲಾ ಸ್ವರೂಪ ಎಲ್ಲ ಒಂದೇ ಆಗಿವೆ. ಆದ್ದರಿಂದ ಆಸ್ಟ್ರೇಲಿಯಾದಲ್ಲಿ ಸಿಗುವಷ್ಟೇ ಚಿನ್ನ ಇಲ್ಲೂ ಸಿಗಬಹುದೆಂದು ವಿದೇಶೀಯರು ಅಂದಾಜು ಮಾಡಿದ್ದಾರೆ. ಅದಕ್ಕೇ ಚಿನ್ನಶೋಧ ನಡೆಸಬಯಸುವವರಲ್ಲಿ ಹೆಚ್ಚಿನವರು ಆಸ್ಟ್ರೇಲಿಯಾದವರೇ ಆಗಿದ್ದಾರೆ' ಎನ್ನುತ್ತಾರೆ, ಭೂವಿಜ್ಞಾನಿ ಟಿ. ಆರ್. ಅನಂತರಾಮು (ನೋಡಿ: ಸುಧಾ 1 ಅಕ್ಟೋಬರ್, 1995).

ಆದರೆ ಕೋಲಾರ, ಹಟ್ಟಿಯಲ್ಲಿರುವಂಥ 'ಶಿಸ್ಟ್ ಬೆಲ್ಟ್' ಎಂಬ ಶಿಲಾಪಟ್ಟಿಯಗುಂಟ ಮಾತ್ರ ಚಿನ್ನ ಇರಲು ಸಾಧ್ಯವೆಂದು ಭೂ ವಿಜ್ಞಾನಿಗಳು ಹೇಳುತ್ತಾರಲ್ಲವೆ? ಆ ಬಗೆಯ ಶಿಸ್ಟ್ ಶಿಲಾಪಟ್ಟಿ ಪಶ್ಚಿಮ ಘಟ್ಟಗಳಲ್ಲಿ ಇವೆಯೆ?

ಇಲ್ಲ. ಆದರೆ ಇತ್ತೀಚಿನ ಶೋಧಗಳ ಪ್ರಕಾರ, ಕಬ್ಬಿಣದ ಅಂಶ ಇರುವ (ಬ್ಯಾಂಡೆಡ್ ಐರನ್ ಫಾರ್ಮೇಶನ್) ಶಿಲಾ ಸಮುಚ್ಚಯ ಇರುವಲ್ಲೂ ವಿಶಾಲ ವ್ಯಾಪ್ತಿಯಲ್ಲಿ, ಆದರೆ ಅಲ್ಪ ಪ್ರಮಾಣದಲ್ಲಿ ಚಿನ್ನ ಸಿಗುತ್ತದೆಂದು ಕೆಲವು ತಜ್ಞರು ಹೇಳಿದ್ದಾರೆ. ಪಶ್ಚಿಮ ಘಟ್ಟಗಳಲ್ಲಿ ಕಬ್ಬಿಣದ ಅದುರು ಇರುವ ಹೆಮೆಟೈಟ್ ಎಂಬ ಖನಿಜ ಎಲ್ಲೆಂದರಲ್ಲಿ ನೋಡ ಸಿಗುತ್ತದೆ. ಸಂಡೂರಿನಲ್ಲಂತೂ ಅದರದ್ದೇ ಗುಡ್ಡಗಟ್ಟಲೆ ಇದೆ. ಸುಧಾರಿತ ತಂತ್ರಜ್ಞಾನದಿಂದ ಅದನ್ನು ಅಗೆದು ನೋಡುವ ತವಕ ಇವರದ್ದು.


ಮತ್ತೆ ಚಿನ್ನದ ಜತೆ ಪ್ಲಾಟಿನಂ, ಬೆಳ್ಳಿ, ವಜ್ರ ಎಲ್ಲ ಸಿಗುತ್ತದಂತೆ?

ವಜ್ರ ಸಿಗುವ ವಿಷಯ ಬರೀ ಬುರುಡೆ ಇದ್ದೀತು. ಹೆಚ್ಚೆಂದರೆ ಆಂಧ್ರದ ಗಡಿಗೆ ಸಮೀಪ ಇರುವ ಸ್ಥಳಗಳಲ್ಲಿ ವಜ್ರ ಸಿಗಬಹುದು. ಪಶ್ಚಿಮ ಘಟ್ಟದಲ್ಲಿ ವಜ್ರ ಸಿಗುವ ಸಾಧ್ಯತೆ ಇಲ್ಲ. ಇನ್ನು ಎಲ್ಲೆಲ್ಲಿ ಚಿನ್ನ ಸಿಗುತ್ತದೋ ಅಲ್ಲೆಲ್ಲ ಅತ್ಯಲ್ಪ ಪ್ರಮಾಣದಲ್ಲಿ ಪ್ಲಾಟಿನಂ ಮತ್ತು ಬೆಳ್ಳಿ ಸಿಕ್ಕೇ ಸಿಗುತ್ತದೆ. ಆದರೆ ಅವು ಕೇವಲ ಉಪ ಉತ್ಪನ್ನಗಳಷ್ಟೆ. ಅವುಗಳಿಗಾಗಿ ಪ್ರತ್ಯೇಕ ಗಣಿಗಾರಿಕೆ ನಡೆಸಲು ಸಾಧ್ಯವಿಲ್ಲ.

ದೊಡ್ಡದಿದ್ದಷ್ಟೂ ದೊಡ್ಡ ಲಾಭ

ಆದರೆ ಯಾಕೆ ಇಷ್ಟಿಷ್ಟು ವಿಶಾಲ ಸ್ಥಳ ಇವರಿಗೆ ಬೇಕು? ಕುದುರೆ ಮುಖದ ನೂರಾರು ಪಟ್ಟು ಸ್ಥಳ ಯಾಕೆ ಇವರಿಗೆ ಬೇಕು? ಚಿನ್ನ ಇದ್ದೀತೆಂಬ ಅನುಮಾನ ಬಂದ ಸ್ಥಳದಲ್ಲಿ ಮಾತ್ರ ಜಮೀನನ್ನು ಲೀಸ್ ಪಡೆದರೆ ಸಾಲದೆ?

ಸಾಲದು. ಹೊಸದಾಗಿ ಚಿನ್ನಕ್ಕೆ ಶೋಧ ನಡೆಯುವುದರಿಂದ ಪ್ರತಿ ಚದರ ಕಿಲೊ ಮೀಟರ್ ಕ್ಷೇತ್ರದಿಂದಲೂ ಕಡೇ ಪಕ್ಷ ಒಂದೊಂದು ಬುಟ್ಟಿ ಸ್ಯಾಂಪಲ್ ಎತ್ತಿ ತಂದು ಪರೀಕ್ಷೆ ಮಾಡಬೇಕಾಗುತ್ತದೆ. ನಮ್ಮ ಭೂ ನಿಯಮ ಹೇಗಿದೆಯೆಂದರೆ, ಕೇವಲ ಒಂದು ಬುಟ್ಟಿ ಮಣ್ಣನ್ನು ಎತ್ತುತ್ತೇನೆಂದರೂ ಅದಕ್ಕೆಂದು ಗ್ರಾಮ ಲೆಕ್ಕಿಗರಿಂದ ಸರ್ವೆ ನಂಬರು, ಹಾಫ್ ನಕಾಶೆ ಲಗತ್ತಿಸಿ, ಅರ್ಜಿ ಬರೆದು ತಹಶೀಲ್ದಾರರ ಅವರ ಇವರ



ಹಳೇ ಅಧ್ವಾನಗಳ ಪಳೆಯುಳಿಕೆಗಳು: ಅರಣ್ಯ ನುಂಗಿ ನೀರು ಕುಡಿದ ಲಿಂಗನಮಕ್ಕಿ

ಶಿಫಾರಸು ಮಾಡಿ... ಅದಕ್ಕೆ ಕೊನೆಯೇ ಇಲ್ಲ. ವಿದೇಶೀಯರು ಈ ರಗಳೆಗಳ ಬಗ್ಗೆ ತಕರಾರು ಎತ್ತಿದಾಗ ನಮ್ಮ ಸರಕಾರ ಗಣಿ ಕಾಯ್ದೆಗೆ ತಿದ್ದುಪಡಿ ತಂದು ವಿಶಾಲ ವ್ಯಾಪ್ತಿಯ ಸರ್ವೆಗೆ ಅನುಮತಿ ನೀಡಿದೆ. ಅದರ ಅರ್ಥ ಅಲ್ಲೆಲ್ಲ ಭಾರೀ ಹೊಂಡಗಳೇ ಆಗುತ್ತವೆಂದಲ್ಲ. ಚಿನ್ನ ಸಿಗುತ್ತದೆಂಬುದು ಸ್ಯಾಂಪಲ್‌ಗಳಿಂದ ಖಾತ್ರಿಯಾದರೆ ಮುಂದಿನ ಯೋಜನೆ.

> **'ಕೃಷಿ ಶಾಶ್ವತ. ಅದು ಇದ್ದಷ್ಟು ಕಾಲ ಅದರ ಜತೆ ಅರಣ್ಯ, ಮೃಗ ಪಕ್ಷಿ, ನೆಲ ಜಲ ಎಲ್ಲವೂ ಶಾಶ್ವತ. ಆದರೆ ಗಣಿಗಾರಿಕೆ ನಡೆಸಿದರೆ ಕೆಲವೇ ದಿನಗಳಲ್ಲಿ ಮೃಗ ಪಕ್ಷಿ ಹೋಗುತ್ತವೆ; ನಂತರ ಅರಣ್ಯ ಹೋಗುತ್ತದೆ. ನಂತರ ಮಳೆ, ವಾಯುಗುಣ, ಅಂತರ್ಜಲ ಹೋಗುತ್ತದೆ. ನಂತರ ಕೆಲ ವರ್ಷಗಳಲ್ಲಿ ಚಿನ್ನ ಬೆಳ್ಳಿಯ ಅದಿರುಗಳೂ ಹೋಗುತ್ತವೆ. ಈಗ ಹೇಳಿ ಕೃಷಿ ಬೇಕೊ, ಚಿನ್ನ ಬೇಕೊ?'**

ಅಕಸ್ಮಾತ್ ಚಿನ್ನ ಸಿಗುವುದೇ ನಿಜವಾದರೆ (ಅದರ ಜತೆ ಪ್ಲಾಟಿನಂ-ಬೆಳ್ಳಿಯಂತಹ ಅಮೂಲ್ಯ ವಸ್ತು ಸಿಗುವಾಗ) ಇಕ್ಕೇರಿ, ಜಂಬಾನಿಗಳಲ್ಲಿ ಗಣಿ ಯೋಜನೆ ನಡೆಸಿದರೆ ತಪ್ಪೇನು? ಇದರಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲವೇ?

'ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಕಂಪೆನಿ ಮಾಲೀಕರುಗಳಿಗೆ ಹೇರಳ ಸಂಪತ್ತು ಸಿಗಲು ಸಾಧ್ಯ. ಇಲ್ಲಿನ ನೆಲದಲ್ಲಿರುವ ಅಡಿಕೆ-ಏಲಕ್ಕಿ-ಭತ್ತದ ಬೆಳೆಗಳು, ದಟ್ಟವಾದ ಅರಣ್ಯ ಪ್ರದೇಶ ನಮ್ಮ ದೇಶದ ಆರ್ಥಿಕತೆಗೆ ನಿರಂತರವಾಗಿ ಕಾಣಿಕೆ ನೀಡುತ್ತಿರುವುದು ಇವರೆಲ್ಲರ ಗಮನಕ್ಕೇ ಏಕೆ ಬರುತ್ತಿಲ್ಲ?' ಎಂದು ಹಳೆ ಇಕ್ಕೇರಿಯ ರೈತ ನಾರಾಯಣ ಶರ್ಮ ಕೇಳುತ್ತಾರೆ.

'ಕೃಷಿ ಶಾಶ್ವತ ಹಾಗೂ ಅದರ ಜತೆ, ಅರಣ್ಯ, ಮೃಗ ಪಕ್ಷಿ, ನೆಲ ಜಲ ಎಲ್ಲವೂ ಶಾಶ್ವತ. ಇಲ್ಲಿ ಬೆವರಿಳಿಸಿ ದುಡಿದಷ್ಟೂ ನೆಲದ ಶ್ರೀಮಂತಿಕೆ ಹೆಚ್ಚುತ್ತದೆ. ಆದರೆ ಗಣಿಗಾರಿಕೆ ನಡೆಸಿದರೆ ಕೆಲವೇ ತಿಂಗಳುಗಳಲ್ಲಿ ಮೃಗ ಪಕ್ಷಿ ಹೋಗುತ್ತವೆ; ಅರಣ್ಯ ಹೋಗುತ್ತದೆ. ಮಳೆ, ವಾಯುಗುಣ, ಅಂತರ್ಜಲ ಹೋಗುತ್ತದೆ. ನಂತರ ಕೆಲ ವರ್ಷಗಳಲ್ಲಿ ಚಿನ್ನ ಬೆಳ್ಳಿಯ ಅದಿರುಗಳೂ ಹೋಗುತ್ತವೆ. ಈಗ ಹೇಳಿ ಕೃಷಿ ಬೇಕೊ, ಚಿನ್ನ ಬೇಕೊ?' ಎಂದು ಕೇಳುತ್ತಾರೆ, ಶಿವಮೊಗ್ಗದ ಅರ್ಥಶಾಸ್ತ್ರ ಉಪನ್ಯಾಸಕ ಕುಮಾರ ಸ್ವಾಮಿ.

ಮಸಣ ಸದೃಶ ಗಣಿ ಪರಿಸರ

ಗಣಿಗಾರಿಕೆ ಸಂದರ್ಭದಲ್ಲೇ ನಿಸರ್ಗದ ಇತರ ಆಸ್ತಿಗಳನ್ನು ರಕ್ಷಿಸಲು ಸಾಧ್ಯ ಇಲ್ಲವೆ?

'ಇದುವರೆಗೆ ಭಾರತದ ಯಾವುದೇ ಗಣಿ ಯೋಜನಾ ಪ್ರದೇಶದಲ್ಲಿ ಇಂತಹ ಒಂದೇ ಒಂದು ಪ್ರಯತ್ನವಾದರೂ ನಡೆದಿದೆಯೇ?' ಕೇಳುತ್ತಾರೆ, ಸಾಗರದ ತಾಂತ್ರಿಕ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ರಾಜಶೇಖರ ಚಪ್ಪಳಿ. ಕುದುರೆಮುಖ, ಬಸಗೋಡು, ದಾಂಡೇಲಿ, ಕಾರೆಕುಚಿಯ ಮತ್ತು ಸಂಡೂರು ಗಣಿಗಳ ಚಿತ್ರಗಳು ಕಣ್ಣೆದುರು ನಿಲ್ಲುವಂತೆ ಮಾಡುತ್ತಾರೆ.

ಕುದುರೆಮುಖ ಗಣಿ ಪ್ರದೇಶದ ಕೆಲವೆಡೆ ಅಕೇಶಿಯಾ ನೆಟ್ಟು ಅರಣ್ಯೀಕರಣ ಪ್ರಯತ್ನ ನಡೆದಿರುವುದನ್ನು ಬಿಟ್ಟರೆ ಉಳಿದೆಲ್ಲ ಕಡೆ ಗಣಿಗಾರಿಕಾ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಹಾಗೆ ತೂರಿದ್ದು ಭಾರೀ ದಟ್ಟ ದೂಳಿನ ಪದರವಾಗಿ ಹತ್ತಾರು ಕಿಲೊಮೀಟರ್

ವರೆಗೆ ಪಸರಿಸಿರುವುದನ್ನು ಸಂಡೂರಿನಲ್ಲಿ ನೋಡಬಹುದು! ಇಷ್ಟಬಂದಂತೆ ಭೂಮಿಯನ್ನು ಅಗೆದು ಆದಿರಿನ ಖಿಜಾನೆ ಖಾಲಿಯಾದ ಮೇಲೆ ಕಂಪೆನಿಗಳು ಹೊರಟು ಹೋಗುತ್ತವೆ. ನಿಸರ್ಗದ ಈ ಧ್ವಂಸಕ್ಕೆ ಪರಿಹಾರ ಇದೆಯೆ?

ನಮ್ಮ ದೇಶದಲ್ಲಿ ಎಲ್ಲೂ ಇಲ್ಲ. ಆದರೆ ಶಾಂತ ಸಾಗರದ ಪಾಪುವಾ ನ್ಯೂಗಿನಿಯಲ್ಲಿ ಆಸ್ಟ್ರೇಲಿಯಾದ ಬಿಹೆಚ್‌ಪಿ ಎಂಬ ಬೃಹತ್ ಗಣಿಗಾರಿಕಾ ಕಂಪೆನಿ ಹೊಣೆಗೇಡಿ ಗಣಿಗಾರಿಕೆ ನಡೆಸಿದ ಹೂಳನ್ನು ಒಕ್ಪೆಡಿ ನದಿಗೆ ಹರಿಸಿದಾಗ ನದಿ ಮಲಿನವಾಯಿತು. ಸಂಸ್ಕರಣ ಕಶ್ಮಲದಿಂದ ನದಿಯಲ್ಲಿನ ಮೀನುಗಳು ಸತ್ತವು. ಕಂಪೆನಿಯ ವಿರುದ್ಧ ಜನರು ಆಸ್ಟ್ರೇಲಿಯಾದಲ್ಲೇ ದಾವೆ ಹೂಡಿದರು. ಪರಿಣಾಮವಾಗಿ ಬಿಹೆಚ್‌ಪಿ 200 ಮಿಲಿಯನ್ ಡಾಲರ್ ದಂಡ ತೆರಬೇಕಾಯಿತು. ಇಂಥ ಘಟನೆ ನಮ್ಮ ದೇಶದಲ್ಲಿ ಸಂಭವಿಸೀತೆ?

ಆಕಸ್ಮಾತ್ ಉದ್ದೇಶಿತ ಗಣಿ ಯೋಜನೆಗೆ ಜಿಯೋ ಮೈಸೂರು ಸರ್ವೀಸಸ್ ಕಂಪೆನಿಗೆ ಸರ್ಕಾರ ಪರವಾನಗಿ ನೀಡಿದರೆ ಹಳೆ ಇಕ್ಕೇರಿ-ಜಂಬಾನಿ ಪ್ರದೇಶದಲ್ಲಿ ತೆರೆದ ಗಣಿಗಾರಿಕೆ (ಓಪನ್ ಕಾಸ್ಟ್ ಮೈನಿಂಗ್) ನಡೆಯುತ್ತೊ ಅಥವಾ ಆಳಕ್ಕೆ ಸುರಂಗ ತೋಡಿ 'ಅಂಡರ್ ಗ್ರೌಂಡ್' ಗಣಿಗಾರಿಕೆಯೊ?

ಅದೂ ಹಾನಿ ಇದೂ ಹಾನಿ

ಕಬ್ಬಿಣದ ಅದುರಿನಲ್ಲಿ ಹುದುಗಿರುವ ಚಿನ್ನ ತೆಗೆಯುವುದಾದರೆ 'ಓಪನ್ ಕಾಸ್ಟ್' ಅಂದರೆ ವಿಶಾಲ ಹೊಂಡ ತೋಡುತ್ತ ಅದಿರು ತೆಗೆಯ ಬೇಕಾಗುತ್ತದೆ. 'ದಟ್ಟ ನಿಸರ್ಗದಲ್ಲಿ ಹೇಗೆ ಗಣಿ ತೋಡಿದರೂ ಅಪಾಯವೇ!' ಎನ್ನುತ್ತಾರೆ ಪರಿಸರ ತಜ್ಞ ಅ.ನ. ಯಲ್ಲಪ್ಪ ರೆಡ್ಡಿ. ಇಲ್ಲಿ ಗಣಿಗಾರಿಕೆ ನಡೆದರೆ ಸ್ಫೋಟದಿಂದ ಲಿಂಗನಮಕ್ಕಿ ಅಣೆಕಟ್ಟಿಗೆ ಅಪಾಯ ತಟ್ಟುವ ಸಾಧ್ಯತೆಯಿದೆ. ಅದೂ ಅಲ್ಲದೆ, ಗಣಿಯಿಂದ ಹೊರತೆಗೆಯುವ ಕಲ್ಲುಮಣ್ಣಿನ ಶೇಕಡಾ 96 ಭಾಗವನ್ನು ಅಲ್ಲೇ ಚೆಲ್ಲಾಡಿ ಹೋಗುತ್ತಾರೆ. ರಾಸಾಯನಿಕ ದ್ರವ್ಯಗಳೊಂದಿಗೆ ಸಂಸ್ಕರಿಸಿ ಉಳಿದ ಮಾಲಿನ್ಯವೆಲ್ಲ ಅಲ್ಲೇ ಹಳ್ಳಕೊಳ್ಳಗಳಲ್ಲಿ ಮಡುಗಟ್ಟುತ್ತದೆ; ಕ್ರಮೇಣ ಲಿಂಗನ ಮಕ್ಕಿ ಜಲಾಶಯದಲ್ಲಿ ಹೂಳು ತುಂಬುತ್ತದೆ, ಎಂದು ಅವರು ವಿವರಿಸುತ್ತಾರೆ.

ಆದರೆ ಪೂರ್ಣ ಪ್ರಮಾಣದ್ದಲ್ಲದ, ಕೇವಲ ಪರಿಶೋಧನಾತ್ಮಕ (ಪ್ರಾಸ್ಪೆಕ್ಟಿಂಗ್) ಗಣಿಗಾರಿಕೆ ನಡೆಸಿದರೆ?

ಅದೇ ಶಾಶ್ವತ ಗಣಿಗಾರಿಕೆಯಾಗುತ್ತದೆ. ಶಿರಾ ಬಳಿ ಅಜ್ಜನಹಳ್ಳಿಯಲ್ಲಿ ಅದೆಷ್ಟೋ ವರ್ಷಗಳ ಹಿಂದೆ ಇದೇ ರೀತಿ ಪರಿಶೋಧನಾ ಗಣಿಗಾರಿಕೆಗೆ ಲೈಸನ್ಸ್ ಕೊಡಲಾಗಿತ್ತು. ಕೊನೆಗೆ ಅದೇ ಶಾಶ್ವತವಾಗಿದೆ. ಅಲ್ಲಿಂದ ದಿನವೂ ನೂರಾರು ಲಾರಿಗಳು ಆದಿರಿನ ಪುಡಿ ಹೊತ್ತು ಹಟ್ಟಿಗೆ ಸಾಗುತ್ತವೆ. ಸರಕಾರಕ್ಕೂ ಶುಲ್ಕ ವಂಚನೆ.

ಗಣಿ ಕಾರ್ಮಿಕರಿಗಾಗಿ ಕಾಲೊನಿ, ಗಡಂಗು, ಜೂಜುಕಟ್ಟೆ, ಮೃಗಬೇಟೆ, ಕಳ್ಳಸಾಗಣೆ, ಸೂಳೆಗಾರಿಕೆ, ಎಲ್ಲ ಸೌಲಭ್ಯಗಳೂ ತಂತಾವೇ ಬರುತ್ತವೆ. ಅವುಗಳ ಮೇಲೆ ಪ್ರಭುತ್ವ ಸ್ಥಾಪಿಸಲು 'ಮೈನಿಂಗ್ ಮಾಫಿಯಾ' ಸಂಸ್ಕೃತಿ ಬರುತ್ತದೆ. ಮಲೆನಾಡಿನ ಸಂಸ್ಕೃತಿಯ ಮೇಲೆ ಮಾಯಲಾಗದ ಗಾಯ ಉಂಟಾಗುತ್ತದೆ.

ಕೂಲಿಕಾರರದ್ದೂ ನಿತ್ಯ ಶೋಷಣೆ. ಗಣಿಯಷ್ಟೇ ಅಲ್ಲ, ಇಡೀ ಮಾರ್ಗದುದ್ದಕ್ಕೂ, ಅದರ ಪಕ್ಕದ ಹಳ್ಳಿಗಳಲ್ಲೂ ದೂಳಿನ ರಾಶಿ ರಾಶಿ.

ಇದಕ್ಕಿಂತ ಕರಾಳ ಇನ್ನೊಂದು ಸಾಧ್ಯತೆ ಏನೆಂದರೆ, ಮಲೆನಾಡಿನ ವಿಶಾಲ ಭೂಮಿಯ ದೀರ್ಘ ಕಾಲೀನ ಗುತ್ತಿಗೆ ಪಡೆದು, ಗಣಿಗಾರಿಕೆ ನೆಪದಲ್ಲಿ 'ಅಲ್ಲಿನ ನೈಸರ್ಗಿಕ ಗಿಡ ಮರಗಳನ್ನು ಕಡಿದು ಸಾಗಿಸಿ, ಬದಲಿಗೆ ಔದ್ಯಮಿಕ ಸಸ್ಯ-ಗಳನ್ನು ನೆಟ್ಟು ಹಣ ಸಂಪಾದಿಸಬಹುದು. ಬೆತ್ತ, ಬಿದಿರು, ಈಚಲು ಹುಲ್ಲು, ಗಿಡ ಮೂಲಿಕೆಗಳು ಹಳ್ಳಿಯ ಜನಕ್ಕೆ ಲಭ್ಯವಿಲ್ಲದಂತೆ ಬೇಲಿ ಹಾಕಿಕೊಳ್ಳಬಹುದು.


ವಿದೇಶೀ ಕಂಪನಿಗಳು ಸುಧಾರಿತ ವಿಧಾನದ ಗಣಿಗಾರಿಕೆ ನಡೆಸಿ, ಸ್ಥಳೀಯ ಜಾತಿಯದ್ದೇ ಗಿಡಮರಗಳನ್ನು ಹೊಸದಾಗಿ ನೆಟ್ಟು ಪರಿಸರಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಟ್ಟರೆ?

ಸಾಂಸ್ಕೃತಿಕ ಮಾಲಿನ್ಯ

ಹೆಗ್ಗೋಡಿನ ಸುಬ್ಬಣ್ಣನವರಿಗೆ ಆಗಲೂ ಆತಂಕ ತಪ್ಪುವುದಿಲ್ಲ. ಗಣಿಗಾರಿಕೆ ಎಂದ ಮೇಲೆ ಕೂಲಿಕಾರರು ವಿದೇಶದಿಂದ ಬರುವುದಿಲ್ಲ. ಆಚೀಚಿನ ರಾಜ್ಯಗಳಿಂದ, ವಿಶೇಷತಃ ಒರಿಸ್ಸಾ, ಬಿಹಾರ ರಾಜ್ಯಗಳಿಂದ ಬರುತ್ತಾರೆ. ಅವರಿಗಾಗಿ ಕಾಲೊನಿ, ಗಡಂಗು, ಜೂಜುಕಟ್ಟೆ, ಮೃಗಬೇಟೆ, ಕಳ್ಳಸಾಗಣೆ, ಸೂಳೆಗಾರಿಕೆ, ಎಲ್ಲ ಸೌಲಭ್ಯಗಳೂ ತಂತಾನೇ ಬರುತ್ತವೆ. ಅವುಗಳ ಮೇಲೆ ಪ್ರಭುತ್ವ ಸ್ಥಾಪಿಸಲು 'ಮೈನಿಂಗ್ ಮಾಫಿಯಾ' ಸಂಸ್ಕೃತಿ ಬರುತ್ತದೆ. ಅವೆಲ್ಲ ಪರಿಶೋಧನ ಗಣಿಗಾರಿಕೆಯ ಹಂತದಲ್ಲೇ ಬರುತ್ತವೆ. ಜತೆ ಜತೆಗೆ ಡಕಾಯಿತಿ, ಬಾಲ ವೇಶ್ಯಾಟಿಕೆ, ಕಳ್ಳಬಟ್ಟಿ ಎಲ್ಲವೂ ಬರುತ್ತವೆ. ಮಲೆನಾಡಿನ ಸ್ವಚ್ಛಸುಂದರ ಸಾಂಸ್ಕೃತಿಕ ಪರಿಸರ ನೋಡ ನೋಡುತ್ತ ಗುರುತಿಸಲಾಗದಷ್ಟು ಬದಲಾಗುತ್ತದೆ. ಅಲ್ಲಿನ ಹೆಣ್ಣುಮಕ್ಕಳು ಕರಡ, ಪುರುಳೆ ತರಲಿಕ್ಕೂ ಕಾಡಿನತ್ತ ಬರುವುದು ಕಠಿಣವಾಗುತ್ತದೆ. ಗಣಿಯ ಡೈನ್‌ಮೈಟ್‌ಗೆ ಬೆದರಿದ ಚಿರತೆ, ಕಾಡು ಹಂದಿಗಳು, ಅಡಿಕೆ ತೋಟಕ್ಕಿಳಿಯುತ್ತವೆ. ಕೂಲಿ ಕೆಲಸ ಮಾಡದ ಕ್ರಿಮಿನಲ್ಲುಗಳೂ ಫಲ ಬಂದ ತೋಟಗಳಿಗೆ ಇಳಿಯುತ್ತಾರೆ. ಹಿಂದೆ ಜವಾನೀ ಔದ್ಯಮಿಕ ನಗರವೊಂದು ಬೆಂಗಳೂರಿನ ಬಳಿ ಸ್ಥಾಪನೆಯಾಗಲಿದ್ದಾಗ ಎದುರಾಗಿದ್ದ ಸಾಂಸ್ಕೃತಿಕ ಮಾಲಿನ್ಯದ ಪ್ರಶ್ನೆಯನ್ನೇ ಕೆ ವಿ ಸುಬ್ಬಣ್ಣ ಈಗಲೂ ಮುಂದಿಡುತ್ತಾರೆ. ಕೆಜಿಎಫ್‌ನ ದಿನನಿತ್ಯದ ಕೊಲೆ, ದರೋಡೆ ಪ್ರಕರಣಗಳು ನೆನಪಿಗೆ ಬರುತ್ತವೆ.

ಅವುಗಳನ್ನೆಲ್ಲ ಮಲೆನಾಡಿನ ಜನರಿಗೆ ತಿಳಿಸಿ ಹೇಳಬೇಕಾದ ಅಗತ್ಯವೇ ಇಲ್ಲ. ಹಿಂದೆ ಲಿಂಗನ ಮಕ್ಕಿ ಜಲಾಶಯದ ನಿರ್ಮಾಣದ ಕಾಲದಲ್ಲಿ ಕಾರ್ಗಲ್ಲಿನ ಸುತ್ತ ಮುತ್ತಲಿನ ಮಾಲಿನ್ಯದ ನೆನಪು ಈಗಲೂ ಹಳಬರಲ್ಲಿ ಮಾಸಿಲ್ಲ. ದೂರದ ಊರಿನವರ ಕಲ್ಯಾಣಕ್ಕೆಂದು ಸ್ಥಳೀಯರು ಮಾಡಿದ ತ್ಯಾಗಗಳನ್ನು, ಎದುರಿಸಿದ ಕಷ್ಟನಷ್ಟಗಳನ್ನು ಅವರು ಮರೆತಿಲ್ಲ. ಆದ್ದರಿಂದಲೇ ಗಣಿಯೋಜನೆಗಾಗಿ 'ಜಿಯೋ ಮೈಸೂರು ಸರ್ವೀಸಸ್ ಕಂಪೆನಿ'ಯವರಿಗೆ ಯೋಜನಾ ಪ್ರದೇಶದ ವಿವರವಾದ ನಕ್ಷೆ ನೀಡಲು ಸರಕಾರ ಸಿದ್ಧವಾದ ಮರುದಿನವೇ ಸಾಗರದಲ್ಲಿ 'ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ' ಅಸ್ತಿತ್ವಕ್ಕೆ ಬಂದಿದೆ. ಕಳೆದ ಅಕ್ಟೋಬರ್ 28ರಂದು ಆನಂದಪುರಂನ ಶ್ರೀ ಮುರುಘ ರಾಜೇಂದ್ರ ಸ್ವಾಮೀಜಿಗಳು ಇಕ್ಕೇರಿಯ ಅಘೋರೇಶ್ವರ ದೇವಾಲಯದ

ಗಣಿಗಾರಿಕೆಗೆ ಆಯ್ಕೆಯಾದ ಪ್ರದೇಶ (ಸಾಗರ ತಾಲ್ಲೂಕು)



ಆವರಣದಲ್ಲಿ. ವೇದಿಕೆಯು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಮ್ಮಿಕೊಂಡ ಗಣಿವಿರೋಧಿ ಜನಸಂಪರ್ಕ ಸಭೆಯನ್ನು ಉದ್ಘಾಟಿಸಿದರು. ವೇದಿಕೆಯ ಸಂಚಾಲಕರಾದ ರಾಜಶೇಖರ ಚಿಪ್ಪಳಿ, ಸೀತಾರಾಮ್, ಪ್ರಕಾಶ್, ಕೊಲ್ಲೂರಯ್ಯ, 'ಪ್ರಕೃತಿ ಲಕ್ಷ ಆಂದೋಲನ'ದ ಅನಂತ ಹೆಗಡೆ, ಸ್ಥಳೀಯ ಪತ್ರಕರ್ತರಾದ ಕೆ.ಎನ್. ಭಟ್, ಗಣಪತಿ ಶಿರಳಗಿ, ತಿರುಮಲ ಮಾವಿನಕುಳಿ ಮುಂತಾದವರು ಸುತ್ತಲಿನ ಸುಮಾರು ಮುವ್ವತ್ತು ಹಳ್ಳಿಗಳಲ್ಲಿ ಸಂಚರಿಸಿ ಗಣಿಗಾರಿಕೆಯಿಂದಾಗಬಹುದಾದ ಅನಾಹುತದ ಬಗ್ಗೆ ಜನರಿಗೆ ತಿಳುವಳಿಕೆ ನೀಡಿದರು.

ಸಂಗ್ರಾಮ ಸಿದ್ಧ ಜನಸ್ತೋಮ

ಕರ್ನಾಟಕ ರಾಜ್ಯದ ಪರಿಸರ ಚಳುವಳಿ ಅದೆಷ್ಟೇ ಜೋರಾಗಿ ನಡೆದಿದ್ದರೂ ಅಂತ್ಯದಲ್ಲಿ ಸರ್ಕಾರ ಮತ್ತು ಬಂಡವಾಳಶಾಹಿಗಳ ಕೈ ಮೇಲಾಗಿದೆ. ಅದನ್ನು ನೆನಪಿಸಿದಾಗ ಈಗಿನ ಈ ಹೊಸ 'ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ'ಯ ಅಧ್ಯಕ್ಷ ಸೀತಾರಾಮ ಕುಂಟಗೋಡ ವಿಚಲಿತರಾಗುವುದಿಲ್ಲ. "ನಮ್ಮ ಈ ಚಳುವಳಿಗೆ ರಾಜಕೀಯ ರಹಿತವಾದ ಜನ ಬೆಂಬಲವಿದೆ. ಎಷ್ಟೇ ತೊಂದರೆಯಾದರೂ ನಾವು ಮಾತ್ರ ನಮ್ಮ ಕಾಲನ್ನು ಹಿಂತೆಗೆಯುವುದಿಲ್ಲ. ಸಾಗರದ ಸುತ್ತಮುತ್ತ ಮಾತ್ರವಲ್ಲ, ಸಹ್ಯಾದ್ರಿಯ ತಪ್ಪಲಿನ ಯಾವುದೇ ಭಾಗದಲ್ಲಿ ಗಣಿಗಾರಿಕೆ ನಡೆಸಲು ನಾವು ಅವಕಾಶ ನೀಡುವುದಿಲ್ಲ" ಎನ್ನುತ್ತಾರೆ.

ಜನ ಬೆಂಬಲವಂತೂ ಎಲ್ಲೆಡೆ ವ್ಯಕ್ತವಾಗಿದೆ. 1996ರ ನವೆಂಬರ್ ಒಂದರಂದು ನಡೆದ ಶಿವಮೊಗ್ಗ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಈ ಕುರಿತು ವಿಷಯ ಪ್ರಸ್ತಾಪವಾಗಿ ಜಿಲ್ಲೆಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬೇಡಿ ಎಂದು ಸರ್ಕಾರದ ಗಮನ ಸೆಳೆಯುವ ನಿರ್ಣಯ ಮೂಡಿದೆ. ನವೆಂಬರ್ 21ರಂದು ಸಾಗರದಲ್ಲಿ 'ಗಣಿ ವಿರೋಧಿ ಸಮ್ಮೇಳನ'ಕ್ಕೆ ಸುಮಾರು ಹನ್ನೆರಡು ಸಾವಿರ ಜನ ಭಾಗವಹಿಸಿದ್ದರು.

ಕಳೆದ ಡಿಸೆಂಬರ್ 23ರಂದು ರಾಜ್ಯ ವಿಧಾನ ಸಭಾ ಅಧ್ಯಕ್ಷ ರಮೇಶ ಕುಮಾರ ಅವರ ಸಮ್ಮುಖದಲ್ಲಿ ರಾಜ್ಯದ ಗಣಿ ಸಚಿವ ಎಸ್.ಡಿ. ಜಯರಾಂ ಹಾಗೂ ಸಾಗರದಿಂದ ಬಂದ ನಿಯೋಗದ ನಡುವೆಯೊಂದು ಮಾತುಕತೆ ಏರ್ಪಾಡಾಗಿತ್ತು.

ಈ ಸಭೆಯಲ್ಲಿ ಸರ್ಕಾರದ ಪರವಾಗಿ ಗಣಿ ಸಚಿವರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕ ರಮಣ ರೆಡ್ಡಿ, ಬಸಪ್ಪ ರೆಡ್ಡಿ; ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ವಿಶೇಷ ಕಾರ್ಯದರ್ಶಿ ಡಾ. ದಿಲೀಪ್ ಕುಮಾರ್ ಭಾಗವಹಿಸಿದ್ದರು. ನಿಯೋಗದಲ್ಲಿ 'ಗಣಿ ವಿರೋಧಿ ವೇದಿಕೆ'ಯ ಅಧ್ಯಕ್ಷ ಸೀತಾರಾಮ ಕುಂಟಗೋಡು, ಕೊಲ್ಲೂರಯ್ಯ, ಉಳಿದ ಸದಸ್ಯರು; ಅಲ್ಲಿನ ಜನತಾದಳದ ಮುಖಂಡರಾದ ಪ್ರಫುಲ್ಲ ಮಧುಕರ್, ಜಯಂತ್, ಅಜಿತ್‌ಪಾಲ್ ಇದ್ದರು.

'ಹಾಗೆ ಹೇಳಿದ್ರೆ ಹೇಗೆ?'

ಗಣಿ ಸಚಿವ ಎಸ್.ಡಿ. ಜಯರಾಂರವರಿಂದ ಸರ್ಕಾರದ ಪರವಾಗಿ ಸಹ್ಯಾದ್ರಿ ತಪ್ಪಲಿನಲ್ಲಿ ಗಣಿಗಾರಿಕಾ ಯೋಜನೆಗೆ ಸರ್ಕಾರ ಅನುಮತಿ ನೀಡುತ್ತದೆಯೋ? ಇಲ್ಲವೋ? ಎಂಬ ಪ್ರಶ್ನೆಗೆ ನಿಯೋಗ ಸ್ಪಷ್ಟ ಉತ್ತರ ಬಯಸಿತು. 'ಪ್ರಾಸ್ಪೆಕ್ಟಿಂಗ್ ಮೈನಿಂಗ್‌ಗೆ ಅವಕಾಶ ನೀಡಿದರೆ ಪರಿಸರದ ಮೇಲೆ ಅಂತಹ ಹಾನಿಯೇನೂ ಆಗುವುದಿಲ್ಲ. ಅದೂ ಅಲ್ಲದೆ ಅಷ್ಟು ವಿಸ್ತಾರವಾದ ಪ್ರದೇಶದಲ್ಲಿ ಮೈನಿಂಗ್‌ಗೆ ಅನುಮತಿ ನೀಡುವ ಹಕ್ಕು ನಮಗಿಲ್ಲ. ನಾವೇನಿದ್ದೂ ಕೇಂದ್ರ ಸರ್ಕಾರಕ್ಕೆ ಅಪ್ಲಿಕೇಶನ್ ಫಾರ್ವರ್ಡ್ ಮಾಡ್ತೇವೆ' ಎಂದು ಒಮ್ಮೆ ಹೇಳಿದ ಸಚಿವರು, 'ಅಕಸ್ಮಾತ್ ಅಲ್ಲಿ ಚಿನ್ನ ಸಿಗುತ್ತದೆ ಅಂದ್ರೆ ಕೂಡ ಮೈನಿಂಗ್ ಮಾಡೋದು ಬೇಡ್ವೆ?' ಎಂದು ನಿಯೋಗದ ಸದಸ್ಯರನ್ನೇ ಪ್ರಶ್ನಿಸಿದರು.

'ಚಿನ್ನವಲ್ಲ ಅದಕ್ಕಿಂತ ಹೆಚ್ಚಿನ ಯಾವುದೇ ಅಮೂಲ್ಯ ಆದಿರು ಸಿಗುತ್ತದೆಯೆಂದಾದರೂ ಸಹ್ಯಾದ್ರಿಯ ತಪ್ಪಲಲ್ಲಿ ಗಣಿಗಾರಿಕೆ ಘಾತ್ರವಲ್ಲ ಪರಿಶೋಧನ ಗಣಿಗಾರಿಕೆಗೆ ಕೂಡ ಅವಕಾಶ ನೀಡಬೇಡಿ' ಎಂದು ಕುಂಟಗೋಡ್ ಕೇಳಿದರು.

'ಹಾಗೆ ಹೇಳಿದ್ರೆ ಹೇಗೆ? ನಮ್ಮರಾಜ್ಯದ ಭೂಗರ್ಭದಲ್ಲಿ ಏನೇನು ಅಡಗಿದೆ ಎಂದು ತಿಳಿಯುವ ಹಕ್ಕು ಸರ್ಕಾರಕ್ಕಿಲ್ಲವೇ? ಅದಕ್ಕೋಸ್ಕರ ಪ್ರಾಸ್ಪೆಕ್ಟಿಂಗ್ ಮೈನಿಂಗ್ ಮಾಡಿದರೆ ಏನು ತಪ್ಪು? ಪ್ರಾಸ್ಪೆಕ್ಟಿಂಗ್ ಮೈನಿಂಗ್‌ಗೆ ಅವಕಾಶ ನೀಡಿ ನಂತರ ನಿಮ್ಮಲ್ಲಿ ಯಾವ್ಯಾವ ಪ್ರದೇಶದಲ್ಲಿ ಗಣಿಗಾರಿಕೆ ನಡೆಯಲಿದೆಯೆಂದು ನಿಮಗೆ ತಿಳಿಸಿಯೇ ಸರ್ಕಾರ ಮುಂದಿನ ಹೆಜ್ಜೆಯಿಡುತ್ತದೆ' ಎಂದು ಸಚಿವ ಎಸ್.ಡಿ. ಜಯರಾಂ ಸಭೆಗೆ ತಿಳಿಸಿದರು.

ಇದು ಎಂದಾದರೂ ಸಾಧ್ಯವಾದೀತೆ? ಖಾಸಗಿ ಕಂಪನಿಗಳು 'ಪ್ರಾಸ್ಪೆಕ್ಟಿಂಗ್ ಮೈನಿಂಗ್' ಮಾಡಲಿಕ್ಕೆಂದು ಕೋಟಿಗಟ್ಟಲೆ ಖರ್ಚು ಮಾಡಿರುತ್ತಾರೆ. ಚಿನ್ನ ಸಿಕ್ಕಿತೆಂದರೆ, ಆಲ್ಲಿ ಗಣಿಗಾರಿಕೆ ಮಾಡಬೇಕೆ ಬೇಡವೆ ಎಂಬ ಮುಂದಿನ ನಿರ್ಧಾರವನ್ನು ಸರಕಾರಕ್ಕೆ ಬಿಟ್ಟುಬಿಡುತ್ತವೆಯೆ? ಅವರಿಗೆ ತಮ್ಮ ಖರ್ಚಿಗೆ ಪ್ರತಿಫಲ ಬೇಡವೆ? ಕೇವಲ ಸರ್ಕಾರಕ್ಕೆ ಮಾಹಿತಿ ಸಂಗ್ರಹಿಸಿಕೊಡಲು ತಮ್ಮ ಹಣ ಖರ್ಚು ಮಾಡಿ ಅವು ಪರಿಶೋಧನಾ ಗಣಿಗಾರಿಕೆ ನಡೆಸಲು ಏಕೆ ಮುಂದೆ ಬರುತ್ತವೆ?

ಈ ಪ್ರಶ್ನೆಗೆ ಸಚಿವರ ಬಳಿ ಉತ್ತರ ಇರಲಿಲ್ಲ. ಸರಕಾರದ ನಿಷ್ಠುರ ನಿಲುವು ಏನೆಂದು ಪ್ರಕಟಗೊಳ್ಳಲಿಲ್ಲ. ಅಂತ್ಯದಲ್ಲಿ 'ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ಅವಕಾಶ ನೀಡಬೇಡಿಯೆಂದು ಕೇಂದ್ರ ಸರ್ಕಾರವನ್ನು ನಿಮ್ಮ ಪರವಾಗಿ ನಾವು ಕೇಳಿಕೊಳ್ಳುತ್ತೇವೆ' ಎಂಬ ಭರವಸೆ ಮಾತ್ರ ಸಚಿವರಿಂದ ಬಂತು.

ಆ ಭರವಸೆಯನ್ನು ನಂಬಲು ಯಾರೂ ಸಿದ್ಧರಿಲ್ಲ. ಬದಲಿಗೆ ಸಂಗ್ರಾಮಕ್ಕೆ ಸಿದ್ಧತೆ ನಡೆಯಲಿಕ್ಕಿದೆ. ಅದು ಸುಲಭದ ಸಂಗ್ರಾಮ ಆಗಲಾರದು. ಕೇವಲ ಭಾಷಣ, ಬಾವುಟ ಪ್ರದರ್ಶನ, ಜನ ಜಾಥಾಗಳಿಂದ ಈವರೆಗೆ ಯಾವ ಅನಿಷ್ಟಕಾರಿ ಯೋಜನೆಗಳನ್ನೂ ತಡೆಗಟ್ಟಲು ಸಾಧ್ಯವಾಗಿಲ್ಲ. ಆದರಲ್ಲೂ ಹೊರ ದೇಶದವರು, ಹೊರ ರಾಜ್ಯದವರು ಶಸ್ತ್ರಾಸ್ತ್ರ ಹೊತ್ತು ಗಣಿಗಾರಿಕೆಗೆ ಬರುವುದಾದರೆ ಅವರನ್ನು ಸಮರ್ಥವಾಗಿ ಎದುರಿಸಲು ವಿದೇಶದ, ಹೊರ ರಾಜ್ಯಗಳ ತಂತ್ರಗಳನ್ನೇ ರೂಪಿಸಬೇಕಾಗುತ್ತದೆ. ಆಸ್ಟ್ರೇಲಿಯಾದ ಮಳೆಕಾಡುಗಳಲ್ಲಿ ಬುಲ್‌ಡೋಝರ್‌ಗಳ ಚಲನೆಯನ್ನು ತಡೆಯಲಿಕ್ಕೆ ಸತ್ಯಾಗ್ರಹಿಗಳು ರಸ್ತೆಯಲ್ಲಿ ಹೊಂಡ ತೋಡಿ, ಕಾಂಕ್ರೀಟ್ ಹಾಕಿ ಆನೆ ಸರಪಳಿಯನ್ನು ತಮಗೇ ಬಿಗಿದುಕೊಂಡು ಕೂರುತ್ತಾರೆ. ಮಲೆನಾಡಿನ ರಸ್ತೆಗಳಲ್ಲಿ ಹೊಸದಾಗಿ ಹೊಂಡ ತೋಡಬೇಕಾಗಿಲ್ಲ. ಆದರೂ ಆ ಬಗೆಯ ಸತ್ಯಾಗ್ರಹ ಸದ್ಯಕ್ಕೇನೂ ಬೇಕಾಗಿಲ್ಲ.

ಮಾಹಿತಿ ಹಕ್ಕಿಗೆ ಹೋರಾಟ

ಅದಕ್ಕಿಂತ ಮೊದಲು, ಮಾಹಿತಿ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮ ನಡೆಸಬೇಕಾಗಿದೆ. ಯಾವ ಭೂಮಿಯನ್ನು ಗುತ್ತಿಗೆಗೆ ನೀಡುತ್ತಾರೆ ಎಂಬ ಅಧಿಕೃತ ಮಾಹಿತಿ, ವಿವರ ನಕ್ಷೆ ಹಾಗೂ ಗುತ್ತಿಗೆಯ ಕರಾರು ಪತ್ರಗಳ ಪ್ರತಿಗಳು ಪಂಚಾಯಿತಿ ಮಟ್ಟದಲ್ಲಿ ಸಿಗುವಂತೆ ಹೋರಾಟ ನಡೆಸಬೇಕಾಗಿದೆ. ಅದಕ್ಕಾಗಿ ರಾಜಸ್ತಾನದ ಹಳ್ಳಿಗಳಲ್ಲಿ ನಡೆದಂಥ 'ಮಾಹಿತಿ ಹಕ್ಕು'ಗಳ ಹೋರಾಟ ಮೊದಲು ನಡೆಸಬೇಕಾಗಿದೆ.

ಗಿಡಮರಗಳ ಅಕ್ಷಯ ಸಂಪತ್ತನ್ನು ಕಡೆಗಣಿಸಿ, ಕ್ಷಯಿಸುವ ಸಂಪತ್ತಿಗೆ ಕೈಹಾಕುವುದು ಬೇಡ ಎಂಬ ವಿವೇಕದ ನಾಲ್ಕು ಮಾತನಾಡಬಲ್ಲ ಯಾರಾದರೂ ಇಂದಿನ ಸರಕಾರದ ಸಚಿವ ಸಂಪುಟದಲ್ಲಿ ಇದ್ದಾರೆಯೇ ಎಂಬ ಬಗ್ಗೆ ಶೋಧ ನಡೆಯಬೇಕಾಗಿದೆ. ಅವರು ಸಿಕ್ಕಮೇಲೆ, ಪಶ್ಚಿಮ ಘಟ್ಟಗಳಲ್ಲಿ ಈ ಅನರ್ಥಕಾರಿ ಅದಿರುಶೋಧ ಯೋಜನೆಗೆ ಅವರೇ ತಡೆ ಒಡ್ಡುವಂತೆ ಮಾಡಬೇಕಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಈ ಬಗೆಯ 'ಲಾಬಿಯಿಂಗ್' (ಮನವೊಲಿಕೆ) ಮಾಡಲಿಕ್ಕೆಂದೇ ಪರಿಣತರ ತಂಡಗಳಿರುತ್ತವೆ. ಆಗಲೂ ಗಣಿ ಗುತ್ತಿಗೆ ಯೋಜನೆ ನಿಲ್ಲದಿದ್ದರೆ, ಈಗಿರುವ ಪರಿಸರ ಕಾನೂನುಗಳನ್ನೇ ಸಮಗ್ರ ಅಧ್ಯಯನ ನಡೆಸಿ, ಸಮರ್ಥ ವಕೀಲರನ್ನು ಹುಡುಕಿ ನ್ಯಾಯದ ಕಟ್ಟೆಗಳಲ್ಲಿ ಹೋರಾಡಬೇಕಾಗಿದೆ. ಇದಕ್ಕೆಲ್ಲ ಧನ ಸಂಗ್ರಹ ಮಾಡಬೇಕಾಗಿದೆ.

ಧನ ಸಂಗ್ರಹಣೆ, ಜನ ಸಂಘಟನೆ ಎಲ್ಲ ಆದ ಮೇಲೆ ಅದನ್ನು ಪಟ್ಟಭದ್ರರು ಹೈಜಾಕ್ ಮಾಡದಂತೆ ನೋಡಿಕೊಳ್ಳಬೇಕಾಗಿದೆ.

ಆಮೇಲೆ ತಾನೆ ಚಳವಳಿಗಳ ಮಾತು? ✤

['ಸುಧಾ' ಸಂಪಾದಕ ವರ್ಗದ ಸಹಯೋಗದೊಂದಿಗೆ]